ಮಂಗಳೂರು
ಸೋಮವಾರ, 13 ಏಪ್ರಿಲ್ 2026
ಸಂಪುಟ 48, ಸಂಚಿಕೆ 25, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಧನಿಷ್ಠೆ

ದಿನದ ಮಾತು

ಗರ್ವವನ್ನು ಬಿಟ್ಟಾಗ ಸಹನೆ ಮನುಷ್ಯನಲ್ಲಿ ಮನೆ ಮಾಡುತ್ತದೆ.
▲ಮಹಾವೀರ

ಪ್ರಾಣದೀವಿಗೆಯಾದರು ಕವಿ ಶಿವರಾಮು

ನೇರ ನೋಟ
• ದು.ಗು.ಲಕ್ಷ್ಮಣ
• ಪುಟ ೬

ಕಿರುಸುದ್ದಿ

5 ಕೆಜಿ ಎಲ್‌ಪಿಜಿ ಸಿಲಿಂಡರ್ ಪಿಎನ್‌ಜಿ ಪೂರೈಕೆಗೆ ವೇಗ

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದಲ್ಲಿನ ಇಂಧನ ವ್ಯತ್ಯಯದ ನಡುವೆ ದೇಶೀಯ ಇಂಧನ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಭಾರತ 5 ಕೆಜಿ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯನ್ನು ಹೆಚ್ಚಿಸಿದೆ ಮತ್ತು ಪೈಪ್ಡ್ ನೈಸರ್ಗಿಕ ಅನಿಲ(ಪಿಎನ್‌ಜಿ) ಸರಬರಾಜನ್ನು ವೇಗಗೊಳಿಸಿದೆ.

• ಪುಟ ೨

ಸಾಮಾಜಿಕ ಜಾಲತಾಣದಲ್ಲಿ ನಾರೀಶಕ್ತಿ ವಿಧೇಯಕ ಅರಿವು

• **ಬೆಂಗಳೂರು:** ಪ್ರಧಾನಿ ಮೋದಿ ನೇತೃತ್ವದ ಸರ್ಕಾರವು ಮಹಿಳೆಯರ ದಶಕಗಳ ಕಾಲದ ಕನಸನ್ನು ನನಸು ಮಾಡಲು ಹೊರಟಿದ್ದು, ನಾರೀಶಕ್ತಿ ವಂದನಾ ಅಧಿನಿಯಮವನ್ನು ಬೆಂಬಲಿಸಿ ರಾಜ್ಯ ಬಿಜೆಪಿ ವಿವಿಧ ಅಭಿಯಾನ ನಡೆಸುತ್ತಿದೆ.

• ಪುಟ ೪

ತುಷ್ಟೀಕರಣ ನೀತಿಗಳನ್ನು ಅನುಸರಿಸುತ್ತಿರುವ ಟಿಎಂಸಿ

• **ಕೋಲ್ಕತ್ತಾ:** ಪಶ್ಚಿಮಬಂಗಾಳದಲ್ಲಿ ಟಿಎಂಸಿ ತುಷ್ಟೀಕರಣ ನೀತಿಗಳನ್ನು ಅನುಸರಿಸುತ್ತಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಆರೋಪಿಸಿದ್ದಾರೆ. ಬಂಗಾಳವನ್ನು ದೇಶದ ಆಧ್ಯಾತ್ಮಿಕ ಅನ್ವೇಷಣೆಯನ್ನು ಶ್ರೀಮಂತಗೊಳಿಸಿದ ಸ್ವಾಮಿ ವಿವೇಕಾನಂದ ಮತ್ತು ರಾಮಕೃಷ್ಣರ ಭೂಮಿ ಎಂದು ಕರೆಯಲಾಗುತ್ತದೆ ಎಂದರು.

• ಪುಟ ೨

ಪಾಕ್‌ನಲ್ಲಿ ನಡೆದ ಅಮೆರಿಕ–ಇರಾನ್ ಮಾತುಕತೆ ವಿಫಲ

ಹಾರ್ಮುಜ್ ದಿಗ್ಬಂಧನ



» ಎರಡು ವಾರಗಳ ಕದನ ವಿರಾಮ ಅತಂತ್ರ
» ಹಾರ್ಮುಜ್ ಜಲಸಂಧಿ ಮೇಲೆ ಅಮೆರಿಕ ನೌಕಾ ದಿಗ್ಬಂಧನ

• **ಇಸ್ಲಾಮಾಬಾದ್/ವಾಷಿಂಗ್ಟನ್:** ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆದ ಐತಿಹಾಸಿಕ ಅಮೆರಿಕ–ಇರಾನ್ ಶಾಂತಿ ಮಾತುಕತೆ 21 ಗಂಟೆ ಸತತ ಚರ್ಚೆಯ ನಂತರ ಭಾನುವಾರ ವಿಫಲವಾಗಿದೆ. 1979ರ ಇಸ್ಲಾಮಿಕ್ ಕ್ರಾಂತಿಯ ನಂತರ ಎರಡೂ ದೇಶಗಳ ನಡುವಿನ ಮೊದಲ ನೇರ ಉನ್ನತ ಮಟ್ಟದ ಮಾತುಕತೆ ಯಾವುದೇ ಒಪ್ಪಂದವಿಲ್ಲದೆ ಮುಗಿದಿದ್ದು, ಏಪ್ರಿಲ್ 22ರಂದು ಅವಧಿ ಮುಗಿಯಲಿರುವ ಎರಡು ವಾರಗಳ



ಯುದ್ಧವಿರಾಮದ ಭವಿಷ್ಯ ಅತಂತ್ರಕ್ಕೆ ಬಿದ್ದಿದೆ. ಮಾತುಕತೆ ವಿಫಲವಾದ ತಕ್ಷಣ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾರ್ಮುಜ್ ಜಲಸಂಧಿ ಮೇಲೆ ನೌಕಾ ದಿಗ್ಬಂಧನ ಹೇರುವ ಆದೇಶ ನೀಡಿದ್ದಾರೆ. ಈ ಮೂಲಕ ಜಾಗತಿಕ ತೈಲ ಸಾಗಾಟಕ್ಕೆ ಬ್ರೇಕ್ ಹಾಕುವ ಪ್ರಯತ್ನ ನಡೆಸಿದ್ದಾರೆ.

ಅಣ್ವಸ್ತ್ರ ಕಾರ್ಯಕ್ರಮವೇ ತಿಕ್ಕಾಟದ ಮೂಲ: ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ನೇತೃತ್ವದ ಅಮೆರಿಕ ತಂಡ ಮತ್ತು ಇರಾನ್ ಸಂಸತ್ ಸ್ಪೀಕರ್ ಮೊಹಮ್ಮದ್ ಬಾಘ್ರ್ ಘಾಲಿಬಾಫ್ ನೇತೃತ್ವದ ಇರಾನ್ ತಂಡದ ನಡುವಿನ ಚರ್ಚೆ ಮುಖ್ಯವಾಗಿ ಮೂರು ವಿಷಯಗಳಲ್ಲಿ ಮುರಿದು ಬಿದ್ದಿದೆ. ಇರಾನಿನ ಅಣ್ವಸ್ತ್ರ ಕಾರ್ಯಕ್ರಮ, ಹಾರ್ಮುಜ್ ಜಲಸಂಧಿ ನಿಯಂತ್ರಣ ಮತ್ತು ಜಪ್ತಿ ಮಾಡಿದ ಇರಾನ್ ಆಸ್ತಿಗಳ ಬಿಡುಗಡೆ. ➡ಪುಟ ೪

10 ಮತ್ತು 15 ಅಂಶಗಳ ಪ್ರಸ್ತಾಪ

ಇರಾನ್ ತನ್ನ 10 ಅಂಶಗಳ ಯೋಜನೆಯಲ್ಲಿ ಪಶ್ಚಿಮ ಏಷ್ಯಾದಿಂದ ಅಮೆರಿಕ ಪಡೆಗಳ ವಾಪಸಾತಿ, ಎಲ್ಲ ನಿರ್ಬಂಧಗಳ ತೆರವು, ಯುರೇನಿಯಂ ಸಂವರ್ಧನದ ಹಕ್ಕು ಮತ್ತು ಹಾರ್ಮುಜ್ ಮೇಲೆ ತನ್ನ ನಿಯಂತ್ರಣ ಮುಂದುವರಿಸಲು ಬೇಡಿಕೆ ಇಟ್ಟಿತ್ತು. ಅಮೆರಿಕ ತನ್ನ 15 ಅಂಶಗಳ ಪ್ರಸ್ತಾಪದಲ್ಲಿ ಇರಾನ್ ಅಣ್ವಸ್ತ್ರ ಕಾರ್ಯಕ್ರಮ ಸಂಪೂರ್ಣ ನಿಲ್ಲಿಸಲು, ಹಾರ್ಮುಜ್ ಮುಕ್ತ ಸಮುದ್ರ ವಲಯವಾಗಿ ಘೋಷಿಸಲು ಮತ್ತು ಹೆಜ್ಬೊಲ್ಲಾ ಸೇರಿದಂತೆ ಪ್ರಾದೇಶಿಕ ಪ್ರಾಕ್ಸಿ ತಂಡಗಳಿಗೆ ಹಣ ಮತ್ತು ಶಸ್ತ್ರ ನೀಡುವುದನ್ನು ನಿಲ್ಲಿಸಲು ಒತ್ತಾಯಿಸಿತ್ತು.

ಇರಾನ್ ನಂಬಿಕೆ ಗಳಿಸಲು ಅಮೆರಿಕ ವಿಫಲ

ಇರಾನ್ ಮುಖ್ಯ ಮಾತುಕಾರ ಘಾಲಿಬಾಫ್, ಮಾತುಕತೆ ವಿಫಲಕ್ಕೆ ಅಮೆರಿಕವನ್ನೇ ಹೊಣೆ ಮಾಡಿದರು. ಇರಾನ್ ತಂಡ ಭವಿಷ್ಯಮುಖಿ ಪ್ರಸ್ತಾಪಗಳನ್ನು ಮಂಡಿಸಿತು. ಆದರೆ ಎದುರು ತಂಡ ಇರಾನ್ ಪ್ರತಿನಿಧಿ ತಂಡದ ವಿಶ್ವಾಸ ಗಳಿಸಲು ವಿಫಲವಾಯಿತು ಎಂದು ಅವರು ಎಕ್ಸ್ ನಲ್ಲಿ ಬರೆದಿದ್ದಾರೆ. ಅಮೆರಿಕ ಈಗ ನಮ್ಮ ತಾರ್ಕಿಕತೆ ಅರ್ಥ ಮಾಡಿಕೊಂಡಿದೆ. ಅದು ನಮ್ಮ ನಂಬಿಕೆ ಗಳಿಸಬಲ್ಲದೇ ಎಂಬುದನ್ನು ನಿರ್ಧರಿಸಲಿ ಎಂದರು. ಇರಾನ್ ವಿದೇಶಾಂಗ ಸಚಿವಾಲಯ ಅಮೆರಿಕ ಅತಿಯಾದ ಮತ್ತು ಕಾನೂನುಬಾಹಿರ ಬೇಡಿಕೆಗಳನ್ನು ಮಂಡಿಸಿತು ಎಂದು ಆರೋಪಿಸಿ, ಯಶಸ್ಸಿನ ಹೊಣೆ ಅಮೆರಿಕದ ಪ್ರಾಮಾಣಿಕ ಇಚ್ಛಾಶಕ್ತಿಯ ಮೇಲಿದೆ ಎಂದಿತು. ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಾಘೈ, 40 ದಿನಗಳ ಯುದ್ಧದ ಹಿನ್ನೆಲೆಯಲ್ಲಿ ಅಪನಂಬಿಕೆ ಮತ್ತು ಅನುಮಾನದ ವಾತಾವರಣದಲ್ಲಿ ನಡೆದ ಮಾತುಕತೆಯಲ್ಲಿ ಒಂದೇ ಸಭೆಯಲ್ಲಿ ಒಪ್ಪಂದ ನಿರೀಕ್ಷಿಸಲಾಗದು; ಎರಡೂ ದೇಶಗಳ ನಿಲುವು ಸಮೀಕರಿಸುವ ಪ್ರಯತ್ನ ಮುಂದುವರಿಯಲಿದೆ ಎಂದರು.

ಟೆಹರಾನ್‌ನಲ್ಲಿ ನಿರಾಶೆ, ಧಿಕ್ಕಾರ

ಟೆಹರಾನ್ ಬೀದಿಗಳಲ್ಲಿ ಜಲಸಂಧಿ ಮುಚ್ಚಿದ್ದೇ ಇರಲಿ ಎಂಬ ಭಾರೀ ಬಿಲ್‌ಬೋರ್ಡ್‌ಗಳ ನಡುವೆ ಸಾಮಾನ್ಯ ಇರಾನಿಯರು ಮಾತುಕತೆ ವಿಫಲಕ್ಕೆ ಬೇಸರ ವ್ಯಕ್ತಪಡಿಸಿದರೂ ನಿರ್ಧಾರದ ಬಗ್ಗೆ ಧಿಕ್ಕಾರ ತೋರಿದರು. ನಾನು ಯುದ್ಧ ವಿರೋಧಿ. ಮಾತುಕತೆ ಉತ್ತಮ ಮಾರ್ಗ. ಆದರೆ, ಅಮೆರಿಕದ ಅನುಚಿತ ಬೇಡಿಕೆಗಳು ವ್ಯರ್ಥಗೊಳಿಸಿದವು ಎಂದು ಫರ್ಹಾದ್ ಸಿಮಿಯಾ(43) ಹೇಳಿದರು. ಯುದ್ಧಭೂಮಿಯಲ್ಲಿ ಗಳಿಸಿದ್ದನ್ನು ಮಾತುಕತೆ ಮೇಜಿನ ಮೇಲೆ ಕಳೆದುಕೊಳ್ಳಬಾರದೆಂಬ ಕಾಳಜಿ ಇತ್ತು ಎಂದು ಮೆಹ್ದಿ ಹೊಸೈನ(43) ಹೇಳಿದರು. ಫೆಬ್ರವರಿ 28ರಂದು ಶುರುವಾದ ಸಂಘರ್ಷದಲ್ಲಿ ಇರಾನ್‌ನಲ್ಲಿ ಕನಿಷ್ಠ 3,000, ಲೆಬನಾನ್‌ನಲ್ಲಿ 2,020, ಇಸ್ರೇಲ್‌ನಲ್ಲಿ 23 ಮತ್ತು ಗಲ್ಫ್ ದೇಶಗಳಲ್ಲಿ ಡಜನ್‌ಗೂ ಹೆಚ್ಚು ಜನರು ಸಾವಿಗೀಡಾಗಿದ್ದಾರೆ.

ಮೈನ್ ತೆರವು ಕಾರ್ಯಾಚರಣೆ • ಪುಟ ೪

ಖ್ಯಾತ ಗಾಯಕಿ ಆಶಾ ಭೋಸ್ಲೆ ವಿಧಿವಶ

ಆಶಾಗಾನ ಅನಂತಯಾನ

• **ಮುಂಬೈ:** ಯಾವುದೇ ಒಂದು ಸಂಗೀತ ಶೈಲಿಗೆ ಸೀಮಿತವಾಗದೆ, ಹಿಂದಿ ಹಿನ್ನೆಲೆ ಗಾನದಲ್ಲಿ ತಮ್ಮದೇ ಆದ ವಿಶಿಷ್ಟ ಗುರುತು ಮೂಡಿಸಿದ್ದ ಖ್ಯಾತ ಗಾಯಕಿ ಆಶಾ ಭೋಸ್ಲೆ ಅವರು ಭಾನುವಾರ ಮುಂಬೈ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 92 ವರ್ಷ ವಯಸ್ಸಾಗಿತ್ತು.

ಎದೆ ಸೋಂಕು ಮತ್ತು ಆಯಾಸದ ಕಾರಣದಿಂದ ಶನಿವಾರ ಸಂಜೆ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಾಗಿದ್ದ ಅವರು ಚಿಕಿತ್ಸೆ ಫಲಕಾರಿ ಯಾಗದೆ ಕೊನೆಯುಸಿರೆಳೆದರು ಎಂದು ಅವರ ಮೊಮ್ಮಗಳು ಝುನಾಯಿ ಭೋಸ್ಲೆ ತಿಳಿಸಿದ್ದಾರೆ.

ಮಂಗೇಶ್ಕರ್ ಮಕ್ಕಳಲ್ಲಿ ಒಬ್ಬರಾದ ಆಶಾ ಭೋಸ್ಲೆ, ತಮ್ಮ ಅಕ್ಕ ಲತಾ ಮಂಗೇಶ್ಕರ್ ಅವರ ಜತೆಗೆ ಹಲವು ದಶಕಗಳ ಕಾಲ ಹಿಂದಿ ಚಿತ್ರರಂಗದ ಹಿನ್ನೆಲೆ ಗಾನವನ್ನು ಆಳಿದರು. ವಿಭಿನ್ನ ಶೈಲಿಗಳಲ್ಲಿ ಹಾಡುವ ಸಾಮರ್ಥ್ಯದಿಂದ ಅವರು ಅಪಾರ ಜನಪ್ರಿಯತೆ ಗಳಿಸಿದ್ದರು.ಹಮ್ ಇಂತೇಜಾರ್ ಕರೇಂಗೇ ಹಾಡಿನಲ್ಲಿ ಮೀನಾಕುಮಾರಿ ಅವರ ದುಃಖಭರಿತ ಭಾವನೆಗಳಿಗೂ, ಪಿಯಾ ತು ಅಬ್ ತೋ ಆಜಾದಲ್ಲಿ ಹೆಲೆನ್ ಅವರ ಆಕರ್ಷಕ ಶೈಲಿಗೂ ಧ್ವನಿ ನೀಡಿದ ಅವರು, ಸಿನಿರಂಗದಲ್ಲಿ ಮಹಿಳಾ ಧ್ವನಿಗೆ ಹೊಸ ಅರ್ಥ ನೀಡಿದರು. ಆಜಾ, ಆಜಾ ಮತ್ತು ಚೈನ್ ಸೆ ಹಮ್ ಕೋ ಕಭಿ ಮೊದಲಾದ ಹಾಡುಗಳ ಮೂಲಕ ಅನೇಕ ಪೀಳಿಗೆಯ ಜನರನ್ನು ಮನರಂಜಿಸಿದ ಅವರ ಧ್ವನಿ ಇಂದು ಲಕ್ಷಾಂತರ ಅಭಿಮಾನಿಗಳನ್ನು ಶೋಕಸಾಗರದಲ್ಲಿ ಮುಳುಗಿಸಿದೆ. ➡ಪುಟ ೪



1933-2026

ಇಂದು ಅಂತ್ಯಸಂಸ್ಕಾರ

ಆಶಾ ಭೋಸ್ಲೆ ಅವರ ಅಂತ್ಯಸಂಸ್ಕಾರವು ಸೋಮವಾರ ಸಂಜೆ 4 ಗಂಟೆಗೆ ಮುಂಬೈನ ಶಿವಾಜಿ ಪಾರ್ಕ್‌ನಲ್ಲಿ ಸರ್ಕಾರಿ ಗೌರವಗಳೊಂದಿಗೆ ನಡೆಯಲಿದೆ. ➡ಪುಟ ೪

ಆಶಾ ಭೋಸ್ಲೆ ಧ್ವನಿಯಲ್ಲಿ ಅಮರವಾದ ಆತ್ಮ

ಆಶಾ ಭೋಸ್ಲೆ ಬೆಂಗಳೂರಿಗೆ ಬಂದಾಗ...

• ಮಂಜುಳಾ ಗುರುರಾಜ್
• ವಿಶೇಷ ಪುಟ ೨

ಆಶಾ ಭೋಸ್ಲೆ ಅವರ ನಿಧನದಿಂದ ತೀವ್ರ ದುಃಖಿತನಾಗಿದ್ದೇನೆ. ಅವರು ಭಾರತದ ಅತ್ಯಂತ ಪ್ರಸಿದ್ಧ ಮತ್ತು ಬಹುಮುಖ ಧ್ವನಿಗಳಲ್ಲಿ ಒಬ್ಬರು. ದಶಕಗಳ ಅವರ ವಿಶಿಷ್ಟ ಸಂಗೀತ ಪ್ರಯಾಣವು ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸಿದೆ. ವಿಶ್ವದಾದ್ಯಂತ ಅಸಂಖ್ಯಾತ ಜನರ ಹೃದಯವನ್ನು ಮುಟ್ಟಿದೆ. ಭಾವಪೂರ್ಣ ರಾಗಗಳಿಂದ ಹಿಡಿದು ಉತ್ಸಾಹಭರಿತ ಸಂಯೋಜನೆಗಳವರೆಗೆ, ಧ್ವನಿಯು ಕಾಲಾತೀತ ಪ್ರತಿಭೆಯನ್ನು ಹೊಂದಿತ್ತು.
■ ನರೇಂದ್ರ ಮೋದಿ, ಪ್ರಧಾನಿ

ಲೋಕಸಭೆ, ರಾಜ್ಯಸಭೆಯ ಸದನ ನಾಯಕರಿಗೆ ಮೋದಿ ಪತ್ರ

ಮಹಿಳಾ ಮೀಸಲು ಜಾರಿಗೆ ಸಕಾಲ



• **ಹೊಸದಿಲ್ಲಿ:** ಅಸ್ತಿತ್ವದಲ್ಲಿರುವ ಕಾನೂನಿಗೆ ತಿದ್ದುಪಡಿ ತರುವ ಮೂಲಕ 2029ರ ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಮಹಿಳಾ ಮೀಸಲಾತಿ ಜಾರಿಗೊಳಿಸುವಂತೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಏ.11ರಂದು ಲೋಕಸಭೆ ಮತ್ತು ರಾಜ್ಯಸಭೆಯ ಸದನ ನಾಯಕರಿಗೆ ಬರೆದ ಪತ್ರದಲ್ಲಿ, ನಾರಿ ಶಕ್ತಿ ವಂದನ್ ಅಧಿನಿಯಮಕ್ಕೆ ತಿದ್ದುಪಡಿಗಳನ್ನು ಅಂಗೀಕರಿಸಲು ಎಲ್ಲಾ ರಾಜಕೀಯ ಪಕ್ಷಗಳು ಒಂದಾಗಬೇಕು ಎಂದು ಮೋದಿ ಒತ್ತಾಯಿಸಿದ್ದಾರೆ.

ಆಡಳಿತ ಮತ್ತು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು 2029ರಲ್ಲಿ ಈ ಕಾನೂನು ಜಾರಿಗೆ ತರುವುದು ಅವಶ್ಯಕ ಎಂದು ಹೇಳಿದ್ದಾರೆ. ➡ಪುಟ ೪

ಮುಖ್ಯಾಂಶಗಳು

- ಏ.16ರಿಂದ 18ರವರೆಗೆ ಸಂಸತ್ತಿನ ವಿಶೇಷ ಅಧಿವೇಶನ
- 2029ರ ವೇಳೆಗೆ ಮಹಿಳಾ ಮೀಸಲಾತಿ ಜಾರಿಗೆ ಪ್ರಸ್ತಾವನೆ
- ಲೋಕಸಭೆ ಸ್ಥಾನಗಳ ಸಂಖ್ಯೆ 81ಕ್ಕೆ ಏರಿಕೆ; 273 ಸ್ಥಾನಗಳು ಮಹಿಳೆಯರಿಗೆ ಮೀಸಲು
- 2027ರ ನಂತರದ ಜನಗಣತಿಯ ಕ್ಷೇತ್ರ ಮರು ವಿಂಗಡಣೆವರೆಗೆ ಕಾಯಬೇಕಾಗಿಲ್ಲ

ಇಂದು ಮೋದಿ ಭಾಷಣ • ಪುಟ ೪

ನಾಸಿಕ್: ಲೈಂಗಿಕ ಕಿರುಕುಳ, ಮತಾಂತರ | ಎಸ್‌ಐಟಿ ತನಿಖೆ

ಟಿಸಿಎಸ್‌ನ ಸಿಬ್ಬಂದಿ ಅಮಾನತು

• **ಮುಂಬೈ:** ನಾಸಿಕ್‌ನ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್) ಕಚೇರಿಯಲ್ಲಿ ಲೈಂಗಿಕ ಕಿರುಕುಳ ಹಾಗೂ ಮತಾಂತರ ಪ್ರಕರಣಗಳು ಬೆಳಕಿಗೆ ಬಂದ ಹಿನ್ನೆಲೆಯಲ್ಲಿ, ದೇಶದ ಪ್ರಮುಖ ಐಟಿ ಕಂಪನಿ ಟಿಸಿಎಸ್ ಭಾನುವಾರ ತನ್ನ ಸಿಬ್ಬಂದಿ ವಿರುದ್ಧ ಕ್ರಮ ತೆಗೆದುಕೊಂಡಿದ್ದು, ಆರೋಪಿಗಳನ್ನು ಅಮಾನತು ಮಾಡಿದೆ.

ಕಂಪನಿ ಹೇಳಿಕೆ ಹೊರಡಿಸಿದ್ದು, ನಾಸಿಕ್ ಪ್ರಕರಣದ ಬಗ್ಗೆ ನಮಗೆ ತಿಳಿದ ತಕ್ಷಣ ನಾವು ತ್ವರಿತ ಕ್ರಮ ಕೈಗೊಂಡಿದ್ದೇವೆ. ತನಿಖೆ ನಡೆಯುತ್ತಿರುವ ಉದ್ಯೋಗಿಗಳನ್ನು ತನಿಖೆ ಮುಗಿಯುವವರೆಗೆ ಅಮಾನತಿನಲ್ಲಿ ಇಡಲಾಗಿದೆ. ನಾವು ಸ್ಥಳೀಯ ಪೊಲೀಸರೊಂದಿಗೆ ಸಹಕರಿಸುತ್ತಿದ್ದೇವೆ ಎಂದು ತಿಳಿಸಿದೆ. ಟಿಸಿಎಸ್ ಯಾವುದೇ ರೀತಿಯ ಕಿರುಕುಳ ಮತ್ತು ಬಲವಂತಕ್ಕೆ ಶೂನ್ಯ–ಸಹಿಷ್ಣುತೆ ನೀತಿ ಹೊಂದಿದೆ. ಕಾರ್ಯಸ್ಥಳದಲ್ಲಿ ನಮ್ಮ ಉದ್ಯೋಗಿಗಳ ಸುರಕ್ಷತೆ ಮತ್ತು ಯೋಗಕ್ಷೇಮವನ್ನು ಯಾವಾಗಲೂ ಖಾತರಿಪಡಿಸುತ್ತಿದ್ದೇವೆ ಎಂದು ಮುಂಬೈ ಮೂಲದ ಕಂಪನಿ ಹೇಳಿದೆ. ➡ಪುಟ ೪



ನಾಸಿಕ್‌ನಲ್ಲಿ ಮತಾಂತರ, ಲೈಂಗಿಕ ಕಿರುಕುಳ ಸಂಚು • ಪುಟ ೧೧

9 ಎಫ್‌ಐಆರ್ ದಾಖಲು

2022 ರಿಂದ 2026ರ ನಡುವೆ ನಡೆದ ಘಟನೆಗಳಿಗೆ ಸಂಬಂಧಿಸಿ ಇಲ್ಲಿಯವರೆಗೆ ಒಟ್ಟು ಒಂಬತ್ತು ಎಫ್‌ಐಆರ್‌ಗಳು ದಾಖಲಾಗಿವೆ. ದಾನಿಶ್ ಶೇಖ್, ತಾಉಸಿಫ್ ಅತ್ತಾರ್, ರಝಾ ಮೆಮನ್, ಶಾಹ್‌ರುಖ್ ಖುರೇಶಿ, ಶಫಿ ಶೇಖ್, ಆಸಿಫ್ ಮತ್ತು ಅನ್ಸಾರಿ ಆರೋಪಿಗಳಾಗಿದ್ದಾರೆ.

ಅಲ್ಪಸಂಖ್ಯಾತರ ಸಮಿತಿ ರದ್ದು

• **ಬೆಂಗಳೂರು:** ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ ಸ್ಥಾನಕ್ಕೆ ಅಬ್ದುಲ್ ಜಬ್ಬಾರ್ ರಾಜೀನಾಮೆ ನೀಡಿದ ಬೆನ್ನಲ್ಲೇ, ಅಲ್ಪಸಂಖ್ಯಾತರ ವಿಭಾಗ ಸಮಿತಿಯನ್ನು ವಿಸರ್ಜಿಸಲಾಗಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಸೇರಿದಂತೆ ಹಲವು ಅಲ್ಪಸಂಖ್ಯಾತ ನಾಯಕರು ಪಕ್ಷದ ಅಭ್ಯರ್ಥಿ ಪರವಾಗಿ ಸರಿಯಾಗಿ ಕಾರ್ಯನಿರ್ವಹಿಸಿಲ್ಲ ಎನ್ನುವ ಆರೋಪವನ್ನು ಸ್ವಪಕ್ಷೀಯರೇ ಮಾಡಿದ್ದರು. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ಅಬ್ದುಲ್ ಜಬ್ಬಾರ್ ಶನಿವಾರ ರಾಜೀನಾಮೆ ನೀಡಿದ್ದರು. ರಾಜೀನಾಮೆಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಂಗೀಕಾರ ಮಾಡಿದ್ದಾರೆ. ➡ಪುಟ ೪

ಆನೆ ದಾಳಿಗೆ ವ್ಯಕ್ತಿ ಬಲಿ

• **ಬೇಲೂರು:** ಕಾಡಾನೆ ದಾಳಿಗೆ ಮತ್ತೋರ್ವ ರೈತ ಬಲಿಯಾಗಿರುವ ಘಟನೆ ಬೇಲೂರು ತಾಲೂಕಿನ ಅರೆಹಳ್ಳಿ ಹೋಬಳಿಯಲ್ಲಿ ನಡೆದಿದೆ. ರಾಜಶೇಖರ್ (65)ಕಾಡಾನೆ ದಾಳಿಗೆ ಮೃತಪಟ್ಟ ರೈತನಾಗಿದ್ದು, ತಾಲೂಕಿನ ಕಣಗುಪ್ಪೆ ಗ್ರಾಮದಲ್ಲಿ ಘಟನೆ ಸಂಭವಿಸಿದೆ. ಎಂದಿನಂತೆ ರಾಜಶೆಟ್ಟಿ ತೋಟಕ್ಕೆ ತೆರಳಿದ್ದ ವೇಳೆ ಈ ದುರ್ಘಟನೆ ಜರುಗಿದೆ.ಬೇಲೂರು ತಾಲೂಕಿನ ಮೃತ ರಾಜಶೇಖರ್ ಎಂದಿನಂತೆ ಭಾನುವಾರ ಮುಂಜಾನೆ ತೋಟದ ಕೆಲಸಕ್ಕೆಂದು ಮನೆಯಿಂದ ತೆರಳಿದ್ದರು. ➡ಪುಟ ೪

ಭಾರತೀಯ ಸಂಗೀತ ಲೋಕದ ದಿಗ್ಗಜ ಗಾಯಕಿ ಆಶಾ ಭೋಸ್ಲೆ ಅವರು 92ನೇ ವಯಸ್ಸಿನಲ್ಲಿ ಮುಂಬೈನಲ್ಲಿ ನಿಧನರಾದರು. ಎಂಟು ದಶಕಗಳಿಗಿಂತಲೂ ಹೆಚ್ಚು ಕಾಲ ತಮ್ಮ ಧ್ವನಿಯಿಂದ ಅನೇಕ ಪೀಳಿಗೆಗಳನ್ನು ರಂಜಿಸಿದ್ದ ಅವರು, ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಿಂದ ಪಾಪ್ ಸಂಗೀತದವರೆಗೆ ಅಪಾರ ವೈವಿಧ್ಯತೆಯನ್ನು ತೋರಿಸಿದ್ದರು. ಸಹೋದರಿ ಲತಾ ಮಂಗೇಶ್ಕರ್ ಅವರೊಂದಿಗೆ ಭಾರತೀಯ ಚಿತ್ರರಂಗದ ಸುವರ್ಣಯುಗವನ್ನು ನಿರ್ಮಿಸಿದ ಆಶಾ, ತಮ್ಮದೇ ಆದ ಶೈಲಿ ಮತ್ತು ಚೈತನ್ಯದಿಂದ ಪ್ರತ್ಯೇಕ ಸ್ಥಾನ ಗಳಿಸಿದರು. ಪಿಯಾ ತು ಅಬ್ ತೋ ಆಜಾ, ದಮ್ ಮಾರೋ ದಮ್ ಮೊದಲಾದ ಹಾಡುಗಳ ಮೂಲಕ ಜನಮನ ಗೆದ್ದ ಅವರು, 12,000ಕ್ಕೂ ಹೆಚ್ಚು ಹಾಡುಗಳನ್ನು ಹಲವು ಭಾಷೆಗಳಲ್ಲಿ ಹಾಡಿದ್ದಾರೆ. ಅನೇಕ ರಾಷ್ಟ್ರೀಯ ಪ್ರಶಸ್ತಿಗಳು, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಮತ್ತು ಪದ್ಮ ವಿಭೂಷಣ ಪುರಸ್ಕಾರಗಳು ಅವರ ಸಾಧನೆಗೆ ಸಾಕ್ಷಿ. ಜೀವನದ ಸಂಕಷ್ಟಗಳನ್ನು ಜಯಿಸಿ ಸಂಗೀತವನ್ನೇ ಉಸಿರೆಂದಿದ್ದ ಆಶಾ ಭೋಸ್ಲೆ, ಸದಾ ನೆನಪಿನಲ್ಲಿ ಉಳಿಯುವ ಕಲಾವಿದೆ.



2008ರ ಮೇ 5ರಂದು ದಿಲ್ಲಿ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಗಾಯಕಿ ಆಶಾ ಭೋಸ್ಲೆಗೆ ಪದ್ಮವಿಭೂಷಣ ಪ್ರಶಸ್ತಿಯನ್ನು ಪ್ರದಾನ ಮಾಡಿದ ಕ್ಷಣ.

ಜೀವನವೇ ಒಂದು ಮಹಾಕಾವ್ಯ

ಆಶಾ ಅವರ ಜೀವನವೇ ಒಂದು ಮಹಾಕಾವ್ಯ. 16 ವಯಸ್ಸಿನಲ್ಲಿ ಗಣಪತ್‌ರಾವ್ ಭೋಸ್ಲೆ ಅವರನ್ನು ಕುಟುಂಬದ ವಿರೋಧದ ನಡುವೆ ಮದುವೆಯಾದರು. ಆದರೆ ಈ ಮದುವೆ ವಿಫಲವಾಯಿತು. ಮೂವರು ಮಕ್ಕಳೊಂದಿಗೆ ಕುಟುಂಬಕ್ಕೆ ಮರಳಿದರು. ನಂತರ ಆರ್.ಡಿ. ಬರ್ಮನ್ ಅವರನ್ನು ಮದುವೆಯಾದರು (1980). ಆದರೆ ಆ ಸಂಬಂಧವೂ ಸುಖವನ್ನು ನೀಡಲಿಲ್ಲ. ಮಗ ಹೇಮಂತ್ 2015ರಲ್ಲಿ ಕ್ಯಾನ್ಸರ್‌ನಿಂದ ನಿಧನರಾದರು. ಮಗಳು ವರ್ಷಾ (ಪತ್ರಕರ್ತೆ) 2012ರಲ್ಲಿ ಇನ್ನಿಲ್ಲವಾದರು. ಈ ನಷ್ಟಗಳು ಹೃದಯವನ್ನು ಕತ್ತರಿಸಿದವು. ಆದರೆ ಆಶಾ ಅವರು ಮುಂದುವರಿದರು. 2023ರಲ್ಲಿ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಅವರು ಹೇಳಿದ್ದರು: "ನಾನು ಕಷ್ಟಗಳನ್ನು ಎದುರಿಸಿದ್ದೇನೆ, ಅನೇಕ ಬಾರಿ ನಾನು ಬದುಕಲಾರೆ ಎಂದು ಭಾವಿಸಿದ್ದೇನೆ. ಆದರೆ ಇಂದು ಹಿಂತಿರುಗಿ ನೋಡಿದಾಗ ಅದೆಲ್ಲಾ ಮಜೇದಾರ್ ಎನಿಸುತ್ತದೆ."ಅವರು ಎಂದಿಗೂ ಸ್ಥಿರರಾಗಲಿಲ್ಲ. ಬ್ಲ್ಯಾಕ್ ಅಂಡ್ ವೈಟ್ ಸಿನಿಮಾದಿಂದ ಗ್ಲೋಬಲ್ ಸ್ಟೇಜ್‌ಗಳಿಗೆ, ವಿನೈಲ್‌ನಿಂದ ಸ್ಟ್ರೀಮಿಂಗ್ ಯುಗಕ್ಕೆ ಅವರು ನಿರಂತರವಾಗಿ ತಮ್ಮನ್ನು ಪುನರುಜ್ಜೀವನಗೊಳಿಸುತ್ತಾ ಬಂದರು. 1990ರಲ್ಲಿ ಬಾಯ್ ಜಾರ್ಜ್‌ನೊಂದಿಗೆ 'ಬೋ ಡೌನ್ ಮಿಸ್ಟರ್', ಕೋಡ್ ರೆಡ್ ಬಾಯ್ ಬ್ಯಾಂಡ್‌ನೊಂದಿಗೆ ಸಹಕಾರ. ಉಸ್ತಾದ್ ಅಲಿ ಅಕ್ಬರ್ ಖಾನ್ ಅವರೊಂದಿಗೆ 'ಲೆಗಸಿ' ಇದಕ್ಕೆ ಗ್ರ್ಯಾಮಿ ನಾಮನಿರ್ದೇಶನ. 2006ರಲ್ಲಿ ಕ್ರೋನೋಸ್ ಕ್ವಾರ್ಟೆಟ್‌ನೊಂದಿಗೆ "ಯುವ್ ಸ್ಟೋಲನ್ ಮೈ ಹಾರ್ಟ್" ಎರಡನೇ ಗ್ರ್ಯಾಮಿ ನಾಮನಿರ್ದೇಶನ. ಇಂಡಿಪಾಪ್‌ನಲ್ಲಿ "ಜಾನಮ್ ಸಮ್ಝಾ ಕರೋ" ('ರಾತ್ ಶಬ್ನಮಿ'), ಅದ್ನಾನ್ ಸಾಮಿ ಜೊತೆ 'ಕಭಿ ತೋ ನಜರ್ ಮಿಲಾವ್', ಬ್ರೆಟ್ ಲೀ ಜೊತೆ 'ಯು ಆರ್ ದಿ ವನ್ ಫಾರ್ ಮಿ' ಅವರು ಎಲ್ಲಾ ಗಡಿಗಳನ್ನು ದಾಟಿದರು.



2024 ಜೂ.8ರಂದು ಆಶಾ ಬೋಸ್ಲೆ ಅವರ ಪುಸ್ತಕ ಬಿಡುಗಡೆ ನೆರವೇರಿಸಿದ ಆರ್‌ಎಸ್‌ಎಸ್ ಸರಸಂಘಚಾಲಕ್ ಮೋಹನ್ ಭಾಗ್ವತ್.



ಆಶಾ ಭೋಸ್ಲೆ ಧ್ವನಿಯಲ್ಲಿ ಅಮರವಾದ ಆತ್ಮ

ಏಪ್ರಿಲ್ 12, 2026. ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಯಲ್ಲಿ, ಆಶಾ ಭೋಸ್ಲೆ ಅವರ ಧ್ವನಿ ನಿಶ್ಶಬ್ದವಾಯಿತು. 92 ವರ್ಷಗಳ ಆಯುಷ್ಯದಲ್ಲಿ, ಸುಮಾರು ಎಂಬತ್ತು ವರ್ಷಗಳ ಕಾಲ ಅವರು ಭಾರತದ ಹೃದಯದಲ್ಲಿ ಉಸಿರಾಡುತ್ತಿದ್ದರು. ಸಂಗೀತವೇ ಅವರ ಉಸಿರು ಎಂದು ಅವರು ಹೇಳುತ್ತಿದ್ದರು "ಹಮಾರಿ ಸಾಂಸ್ ನಹೀಂ ಹೋತಿ ತೋ ಆದ್ಮಿ ಮರ್ ಜಾತಾ ಹೈ, ಮೇರೇ ಲಿಯೇ ಮ್ಯೂಸಿಕ್ ಮೇರಿ ಸಾಂಸ್ ಹೈ." ಆ ಉಸಿರು ಇಂದು ನಿಂತಿದೆ, ಆದರೆ ಅದು ಬಿಟ್ಟುಹೋದ ಪ್ರತಿ ಸ್ವರವೂ ಇನ್ನೂ ಲಕ್ಷಾಂತರ ಹೃದಯಗಳಲ್ಲಿ, ಪ್ರತಿ ರೇಡಿಯೋಲ್ಲಿ, ಪ್ರತಿ ಸಿನಿಮಾ ಹಾಲ್‌ನಲ್ಲಿ, ಪ್ರತಿ ಮನೆಯಲ್ಲಿ ಮೊಳಗುತ್ತಿದೆ. ಅವರ ಧ್ವನಿ ಕೇವಲ ಹಾಡುಗಳಲ್ಲಿರಲಿಲ್ಲ; ಅದು ಭಾವನೆಗಳ ಸಾಗರವಾಗಿತ್ತು, ಜೀವನದ ಎಲ್ಲಾ ಬಣ್ಣಗಳನ್ನು ತುಂಬುವ ಜೀವಂತ ಮಾಧ್ಯಮವಾಗಿತ್ತು.

ಸಂಗೀತ ಜಗತ್ತಿನಲ್ಲಿ ಆಶಾ ಭೋಸ್ಲೆ ಅವರು ಒಂದು ಅಪರೂಪದ ಅಧ್ಯಾಯ. ಅವರ ಧ್ವನಿ ಒಂದು ಮಾತ್ರವಲ್ಲ ಅದು ಸಸ್ (sass) ಮತ್ತು ಸೋಲ್ (soul) ಎರಡನ್ನೂ ಒಟ್ಟಿಗೆ ಹೊಂದಿದ್ದು, ಪ್ಲೇಫುಲ್, ಪ್ಲೇಂಟಿವ್ ಅಥವಾ ಪಾಪ್ ಯಾವುದೇ ಮೂಡ್‌ಗೂ ತನ್ನದೇ ಆದ ಬಣ್ಣವನ್ನು ನೀಡುತ್ತಿತ್ತು. "ಆಜಾ ಆಜಾ" ಎಂದು ಕರೆಯುತ್ತಾ ನರ್ತಿಸುವ ಉತ್ಸಾಹ, "ಪಿಯಾ ತು ಅಬ್ ತೋ ಆಜಾ"ನಲ್ಲಿ ಕಾತರಿಸುವ ಪ್ರಣಯ, "ದಮ್ ಮಾರೋ ದಮ್"ನಲ್ಲಿ ದಣಿಯದ ಉತ್ಸಾಹ, "ಜುಸ್ತುಜು ಜಿಸ್ಕಿ ಹೈ" ಅಥವಾ "ಮೇರಾ ಕುಚ್ ಸಾಮಾನ್"ನಲ್ಲಿ ಹೃದಯವನ್ನು ಕರಗಿಸುವ ದುಃಖ ಎಲ್ಲವನ್ನೂ ಅವರ ಧ್ವನಿ ಸಮಾನ ಫೆಲಿಸಿಟಿಯಿಂದ ಹಾಡುತ್ತಿತ್ತು. ಅವರು ಕೇವಲ ಗಾಯಕಿಯಾಗಿರಲಿಲ್ಲ; ಅವರು ಭಾವನೆಗಳನ್ನು ಹಾಡುವ ಮಾಧ್ಯಮವಾಗಿದ್ದರು. ಪ್ರತಿ ಹಾಡಿನಲ್ಲಿ ಅವರ ಸ್ವರ ನಮ್ಮ ಪ್ರೀತಿ, ನಮ್ಮ ದುಃಖ, ನಮ್ಮ ನಗು, ನಮ್ಮ ಕನಸುಗಳನ್ನು ತುಂಬುತ್ತಿತ್ತು.



1933ರ ಸೆಪ್ಟೆಂಬರ್ 8ರಂದು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ದಿನಾನಾಥ್ ಮಂಗೇಶ್ಕರ್ ಅವರ ಮಗಳಾಗಿ ಜನಿಸಿದ ಆಶಾ ಮಂಗೇಶ್ಕರ್, ಸಂಗೀತದ ಮನೆಯಲ್ಲಿ ಬೆಳೆದರು. ತಂದೆ ದಿನಾನಾಥ್ ಒಬ್ಬ ಪ್ರಸಿದ್ಧ ಮರಾಠಿ ರಂಗಭೂಮಿ ಕಲಾವಿದ ಮತ್ತು ಶಾಸ್ತ್ರೀಯ ಗಾಯಕರಾಗಿದ್ದರು. ಅವರು ತಮ್ಮ ಮಕ್ಕಳಿಗೆಲ್ಲಾ ಸಂಗೀತದ ತರಬೇತಿ ನೀಡಿದರು. ಆದರೆ, ಆಶಾ ಅವರಿಗೆ ಒಂಬತ್ತು ವರ್ಷದ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡರು. ಕುಟುಂಬ ಆರ್ಥಿಕ ಕಷ್ಟದಲ್ಲಿತ್ತು. ಮುಂಬೈಗೆ(ಆಗಿನ ಬಾಂಬೆ) ಸ್ಥಳಾಂತರಗೊಂಡ ಅವರು, ತಂಗಿ ಲತಾ ಮಂಗೇಶ್ಕರ್ ಜೊತೆಗೆ ಸಂಗೀತದ ಮೂಲಕ ಕುಟುಂಬವನ್ನು ನಿಭಾಯಿಸಲು ಆರಂಭಿಸಿದರು.



ಇಂದು ಪ್ರತಿಯೊಬ್ಬ ಭಾರತೀಯನಿಗೂ, ವಿಶೇಷವಾಗಿ ನನ್ನಂತಹ ಪ್ರತಿಯೊಬ್ಬ ಸಂಗೀತ ಪ್ರೇಮಿಗೂ ದುಃಖದ ದಿನವಾಗಿದೆ. ಏಕೆಂದರೆ ನಮ್ಮ ಪ್ರೀತಿಯ ಆಶಾ ಭೋಸ್ಲೆ ಇನ್ನುಮುಂದೆ ನಮ್ಮ ನಡುವೆ ಇಲ್ಲ. ಸಂಗೀತದ ಪ್ರತಿಯೊಂದು ಪ್ರಕಾರಕ್ಕೂ ಹೊಂದಿಕೊಳ್ಳುವ ಅವರ ಅಸಾಧಾರಣ ಸಾಮರ್ಥ್ಯವು ಪ್ರತಿಯೊಬ್ಬರ ಹೃದಯವನ್ನೂ ಗೆದ್ದಿದೆ. ತಮ್ಮ ಧ್ವನಿಯಿಂದ ಲಕ್ಷಾಂತರ ಹೃದಯಗಳನ್ನು ಸ್ಪರ್ಶಿಸಿದ ಆಶಾ ಜೀ ಅವರು ಹಿಂದಿ, ಮರಾಠಿ, ಬಂಗಾಳಿ, ತಮಿಳು, ಗುಜರಾತಿ ಮತ್ತು ಇತರ ಅನೇಕ ಭಾಷೆಗಳಲ್ಲಿ ಮಾತ್ರವಲ್ಲದೆ ಜಾನಪದ ಗೀತೆಗಳಲ್ಲಿಯೂ ಅಳಿಸಲಾಗದ ಛಾಪು ಮೂಡಿಸಿದ್ದಾರೆ.

■ ಅಮಿತ್ ಶಾ, ಕೇಂದ್ರ ಗೃಹಸಚಿವ



ಪ್ರಸಿದ್ಧ ಗಾಯಕಿ ಆಶಾ ಬೋಸ್ಲೆ ಅವರ ಸಾವಿನಿಂದ ಬಹಳ ದುಃಖಿತನಾಗಿದ್ದೇನೆ. ಅವರ ಧ್ವನಿಯ ಮೂಲಕ, ಅವರ ಕಲೆ ನಮ್ಮ ನಡುವೆ ಶಾಶ್ವತವಾಗಿ ಉಳಿಯುತ್ತದೆ. ಈ ದುಃಖದ ಸಮಯದಲ್ಲಿ, ಅವರ ಅಗಲಿದ ಪ್ರೀತಿಪಾತ್ರರು ಮತ್ತು ಅಭಿಮಾನಿಗಳಿಗೆ ನನ್ನ ಆಳವಾದ ಸಂತಾಪಗಳು.

■ ರಾಹುಲ್ ಗಾಂಧಿ, ಲೋಕಸಭೆ ವಿಪಕ್ಷ ನಾಯಕ

ಸಂಗೀತ ಪಯಣ ಆರಂಭ

ಆಶಾ ಅವರ ಸಂಗೀತ ಪಯಣ 1943ರಲ್ಲಿ ಮರಾಠಿ ಚಿತ್ರ "ಮಝಾ ಬಾಲ್"ನಲ್ಲಿ "ಚಲಾ ಚಲಾ ನವ ಬಾಲಾ" ಹಾಡುತ್ತಾ ಪ್ರಾರಂಭವಾಯಿತು. ಹಿಂದಿ ಸಿನಿಮಾ ಪದಾರ್ಪಣೆ 1948ರಲ್ಲಿ "ಚುನರಿಯಾ" ಚಿತ್ರದಲ್ಲಿ "ಸಾವನ್ ಆಯಾ" ಹಾಡಿನ ಮೂಲಕ ಆಯಿತು. ಆರಂಭದ ದಿನಗಳು ಕಷ್ಟಕರವಾಗಿದ್ದವು. ಲತಾ ಅವರಂತಹ ತಂಗಿಯ ನೆರಳಿನಲ್ಲಿ, ಎರಡನೇ ದರ್ಜೆಯ ಚಿತ್ರಗಳಿಗೆ ಹಾಡುವಂತೆ ಟೈಪ್‌ಕಾಸ್ಟ್ ಆಗಿದ್ದರು. ವ್ಯಾಂಪ್ ಮತ್ತು ಡ್ಯಾನ್ಸರ್ ಪಾತ್ರಗಳಿಗೆ ಹಾಡುವುದು ಸಾಮಾನ್ಯವಾಗಿತ್ತು. ಆದರೆ ಆಶಾ ಅವರು ತಮ್ಮದೇ ಆದ ಮಾರ್ಗವನ್ನು ಸೃಷ್ಟಿಸಿದರು. ಅವರು ಪ್ಲೇಬ್ಯಾಕ್ ಸಿಂಗರ್‌ನ ಪರಿಕಲ್ಪನೆಯನ್ನೇ ಮರುನಿರ್ಮಾಣ ಮಾಡಿದರು.

1950ರ ದಶಕದಲ್ಲಿ ಓ.ಪಿ. ನಯ್ಯರ್ ಅವರೊಂದಿಗಿನ ಸಹಕಾರವು ಅವರ ಬ್ರೇಕ್‌ಥ್ರೂ ಆಯಿತು. ಆಗ ಸಂಗೀತವು ಶಾಸ್ತ್ರೀಯ ಶುದ್ಧತೆಯತ್ತ ಒಲವು ತೋರುತ್ತಿತ್ತು. ಆದರೆ ಆಶಾ ಅವರು ಬೋಲ್ಡ್, ಪೆಪ್ಪಿ, ಆಧುನಿಕ ಎಡ್ಜ್‌ನೊಂದಿಗೆ ಕ್ಲಬ್ ಸಾಂಗ್‌ಗಳು, ಕ್ಯಾಬರೇ ನಂಬರ್‌ಗಳು, ಯುವ ಪ್ರಣಯದ ಹಾಡುಗಳನ್ನು ಪರಿಚಯಿಸಿದರು. "ಮಾಂಗ್ ಕೇ ಸಾಥ್ ತುಮ್ಹಾರಾ" ("ನಯಾ ದೌರ್") ಅವರಿಗೆ ಹೊಸ ಬಾಗಿಲುಗಳನ್ನು ತೆರೆಯಿತು. "ವಕ್ತ್", "ಗುಮ್ರಾಹ್" ಮುಂತಾದ ಚಿತ್ರಗಳಲ್ಲಿ ಅವರ ಧ್ವನಿ ಜನಪ್ರಿಯವಾಯಿತು.

1960 ಮತ್ತು 70ರ ದಶಕಗಳಲ್ಲಿ ಆರ್.ಡಿ. ಬರ್ಮನ್ ಅವರೊಂದಿಗಿನ ಜೋಡಿಯು ಹಿಂದಿ ಸಂಗೀತವನ್ನೇ ಬದಲಾಯಿಸಿತು. "ಪಿಯಾ ತು ಅಬ್ ತೋ ಆಜಾ" ("ಕಾರವಾನ್"), "ದಮ್ ಮಾರೋ ದಮ್" ("ಹರೇ ರಾಮ ಹರೇ ಕೃಷ್ಣ"), "ಯೆ ಮೇರಾ ದಿಲ್" ('ಡಾನ್') ಈ ಹಾಡುಗಳು ಅವರ ಅಸದೃಶ ಬಹುಮುಖತೆಯನ್ನು ಪ್ರದರ್ಶಿಸಿದವು. ಅವರ ಧ್ವನಿ ಸೆನ್ಸುಯಸ್, ಪ್ಲೇಫುಲ್, ರೆಬೆಲಿಯಸ್, ರೊಮಾಂಟಿಕ್, ಪ್ಲೇಂಟಿವ್ ಎಲ್ಲಾ ರೀತಿಯದ್ದಾಗಿತ್ತು. ಆದರೆ ಅವರನ್ನು ಕೇವಲ "ವರ್ಸಟೈಲ್" ಎಂದು ಕರೆಯುವುದು ಅನ್ಯಾಯ. ಅವರು ಘಜಲ್‌ಗಳಲ್ಲಿ ('ದಿಲ್ ಚೀಜ್ ಕ್ಯಾ ಹೈ' 'ಉಮ್ರಾವ್ ಜಾನ್'), ಶಾಸ್ತ್ರೀಯ ರಚನೆಗಳಲ್ಲಿ, ಪಾಪ್‌ನಲ್ಲಿ, ಇಂಟರ್ನ್ಯಾಷನಲ್ ಕೊಲಾಬೊರೇಷನ್‌ಗಳಲ್ಲಿ ಪ್ರಾವೀಣ್ಯತೆ ತೋರಿದರು.

ಅವರ ಕೆಲವು ಅಮರ ಹಾಡುಗಳು: "ಅಭಿ ನಾ ಜಾವ್ ಛೋಡ್ ಕರ್", "ಚುರಾ ಲಿಯಾ ಹೈ ತುಮ್ನೇ", "ಇನ್ ಆಂಖೋಂ ಕಿ ಮಸ್ತಿ", 'ಜೂಮ್ಕಾ ಗಿರಾ ರೇ', 'ಶರಾರಾ ಶರಾರಾ', "ರಾಧಾ ಕೈಸಾ ನ ಜಲೇ"('ಲಗಾನ್') ಇವುಗಳು ತಲೆಮಾರುಗಳನ್ನು ದಾಟಿ ಜನಪ್ರಿಯವಾಗಿವೆ. ಸುಮಾರು 12,000 ಹಾಡುಗಳು, 20ಕ್ಕೂ ಹೆಚ್ಚು ಭಾಷೆಗಳು ಇದು ಕೇವಲ ಸಂಖ್ಯೆಯಲ್ಲ; ಇದು ಒಂದು ಅವಿರತ ಪಯಣ.





2022ರ ಏ.24ರಂದು ಮುಂಬೈನಲ್ಲಿ ನಡೆದ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಗಾಯಕರಾದ ಆಶಾ ಭೋಸ್ಲೆ, ಉಷಾ ಮಂಗೇಶ್ಕರ್, ಮೀನಾ ಖಾದಿಕರ್ ಮತ್ತು ಸಂಗೀತಗಾರ ಆದಿನಾಥ್ ಮಂಗೇಶ್ಕರ್ ಅವರಿಂದ ಮೊದಲ ಲತಾ ದೀನನಾಥ್ ಮಂಗೇಶ್ಕರ್ ಪ್ರಶಸ್ತಿಯನ್ನು ಸ್ವೀಕರಿಸಿದ ಕ್ಷಣ.



ಲತಾ ಮಂಗೇಶ್ಕರ್ ಅವರು ತಮ್ಮ ಸಹೋದರಿ ಆಶಾ ಬೋಸ್ಲೆ ಅವರಿಂದ ಜೀವಮಾನ ಪ್ರಶಸ್ತಿ ಪಡೆದ ಕ್ಷಣ. ಈ ವೇಳೆ ಜತೆಯಾದ ಗಾಯಕ ಎ.ಆರ್ ರೆಹಮಾನ್

ಆಶಾ ಭೋಸ್ಲೆ ಬೆಂಗಳೂರಿಗೆ ಬಂದಾಗ...

ಮಂಜುಳಾ ಗುರುರಾಜ್

1993ನೇ ಇಸವಿಯಲ್ಲಿ ಸಿಬಿಎಸ್ ಅಂತ ಆಡಿಯೋ ಕಂಪನಿ ಇತ್ತು, ಅವರು ಜಯಸಿಂಹ ಅಂತ, ಅವರು ಫೋನ್ ಮಾಡಿದ್ರು ಬೆಳಿಗ್ಗೆ ಏಳು ಗಂಟೆ ಹೊತ್ತಿಗೆ ಆಶಾ ಭೋಸ್ಲೆ ಅವರು ಮದ್ರಾಸ್‌ನಿಂದ ಬೆಂಗಳೂರು ಏರ್ಪೋರ್ಟ್‌ಗೆ ಬರ್ತಾರೆ. ಇಳಯರಾಜಾ ಅರ ಮ್ಯೂಸಿಕಲ್ ನೈಟ್ ಮುಗಿಸಿ ಬರ್ತಿದ್ದಾರೆ. ಆದರೆ ಬಾಂಬೆಗೆ ಹೋಗೋ ವಿಮಾನ ಮೂರ್ನಾಲ್ಕು ಗಂಟೆ ತಡವಾಗಬಹುದು. ನೀವು ಅವರನ್ನು ರಿಸೀವ್ ಮಾಡಿ ವಿಶ್ ಮಾಡ್ತೀರಾ ಅಂತ ಹೇಳಿದ್ದರು. ನಾನು ಖುಷಿಯಿಂದಲೇ ಒಪ್ಪಿ, ಗುರು, ನಮ್ಮ ಅಸಿಸ್ಟೆಂಟ್ ಮಾರುತಿ 800 ಕಾರಿನಲ್ಲಿ ಹೋಗಿ ಭೇಟಿ ಮಾಡಿದ್ವಿ. ಅಲ್ಲಿ ಅವರ ಕೊನೆ ತಂಗಿ ಕೂಡ ಇದ್ರು.

ನಾವಿಬ್ಬರು ಕಾರಿನಲ್ಲಿ ಅಕ್ಕಪಕ್ಕ ಕುಳಿತಿದ್ವಿ. ಮೊದಲಿಗೆ ಮಾತಾನಾಡಿರಲಿಲ್ಲ. ಆಮೇಲೆ ಸಿಂಪಲ್ ಆಗಿ, ಆತ್ಮೀಯವಾಗಿ ಮಾತಾನಾಡಿದ್ರು. ಅವರ ಕಾಲಿಗೆ ನಮಸ್ಕಾರ ಮಾಡಿದೆ, ಆಗ ನೀನು ಸಿಂಗರ್ ಅಂದ್ರು. ಬಳಿಕ ಬೆಂಗಳೂರಲ್ಲಿ ಎಲ್ಲೆಲ್ಲಿಗೆ ಕರೆದುಕೊಂಡು ಹೋಗ್ತಿಯಾ ಅಂತ ಕೇಳಿದ್ರು. ಅವರೇ ನಮ್ಮ ಸಂಗೀತ ಶಾಲೆ ಬಗ್ಗೆ ಕೇಳಿ ಅಲ್ಲಿಗೇ ಕರೆದುಕೊಂಡು ಹೋಗು, ಮಕ್ಕಳನ್ನು ಭೇಟಿ ಮಾಡಬಹುದು ಅಂದ್ರು.

ಆದರೆ, ಬೆಳಗ್ಗೆ ಏಳೂವರೆ ಗಂಟೆಗೆ ನಮ್ಮ ಸ್ಕೂಲ್ ಓಪನ್ ಆಗಿರ್ಲಿಲ್ಲ. ಅದಕ್ಕೆ ಬೆಂಗಳೂರು ರೌಂಡ್ ಹೊಡೆಸಿ, ಬಳಿಕ ರಾಮಕೃಷ್ಣ ಆಶ್ರಮದ ಪಕ್ಕ ಇದ್ದ ನಮ್ಮ ಸಾಧನಾ ಶಾಲೆಗೆ ಕರೆದುಕೊಂಡು ಹೋಗಿದ್ದೆ. ಅಲ್ಲಿಂದ ಕಬ್ಬನ್ ಪಾರ್ಕ್, ವಿಧಾನಸೌಧಕ್ಕೆ ಕರೆದುಕೊಂಡು ಹೋಗಿದ್ದೆ. ಮೆಟ್ಟಿಲುಗಳ ಮೇಲೆ ಓಡಾಡಿದ ಅವರು, ಅಲ್ಲೇ ಫೋಟೋ ತೆಗೆಸಿಕೊಂಡ್ರು. ದಾರಿಯಲ್ಲಿ ತಮ್ಮ ದೀದಿ ಬಗ್ಗೆ ಹೇಳಿದ್ರು. ಆಮೇಲೆ ನಾನು ವಾಯಿಸ್ ಕಲ್ಚರ್ ಬಗ್ಗೆ, ಏನು ಪ್ರ್ಯಾಕ್ಟೀಸ್ ಮಾಡಬೇಕು? ಅಂತೆಲ್ಲಾ ಸೂಕ್ಷ್ಮತೆಗಳನ್ನು ಕೇಳಿದೆ. ಇದಕ್ಕೆಲ್ಲಾ ಅವರು ತುಂಬಾ ಚೆನ್ನಾಗಿ ಉತ್ತರ ಕೊಟ್ಟು. ಆಮೇಲೆ ಸುನಿಯೋಜಿ ಅಂತ ಲೇಕಿನ್ ಫಿಲ್ಮ್‌ಗೆ ಆಗಷ್ಟೇ ಲತಾ ಅವರಿಗೆ ರಾಷ್ಟ್ರ ಪ್ರಶಸ್ತಿ ಬಂದಿತ್ತು. ಅದರ ಬಗ್ಗೆ ನಾನು ಹೆಮ್ಮೆಯಿಂದ ಹೇಳ್ಕೋತಾ ಇದ್ದೆ.

ಕಾರಿನಲ್ಲಿ ನಾನು ಹಾಡ್ತಾ ಇದ್ರೆ ಅವರು ಜೊತೆಯಲ್ಲಿ ಸೇರ್ಕೊಂಡ್ರು. ನಿನ್ನ ವಾಯಿಸ್ ತುಂಬಾ ಸ್ವೀಟ್ ಆಗಿದೆ. ನಿನಗೆ ಒಳ್ಳೆ ಭವಿಷ್ಯವಿದೆ ಅಂತ ಹೇಳಿದ್ರು. ನೀನು ಏನು ನಿರೀಕ್ಷೆ ಇಟ್ಕೋಬೇಡ. ನಿನ್ನ ಪಾಡಿಗೆ ನೀನು ಪ್ರ್ಯಾಕ್ಟೀಸ್ ಮಾಡ್ತಾ ಇರು. ಅವಕಾಶಗಳು ಬಂದೇ ಬರುತ್ತೆ ಅಂದ್ರು. ಮ್ಯೂಸಿಕ್ ಶಾಲೆ ಮಾಡಿದ್ದು ಒಳ್ಳೆಯದಾಯ್ತು ಅಂದ್ರು. ಆ ಸರಸ್ವತಿನೇ ನಿನಗೆ ದಾರಿ ತೋರಿಸ್ತಾಳೆ. ನೀನು ತುಂಬಾ ಸ್ವೀಟ್ ಪರ್ಸನ್



ಅಂತೆಲ್ಲ ಹೊಗಳಿ ನನ್ನ ಭುಜದ ಮೇಲೆ ಕೈ ಹಾಕ್ಕೊಂಡು, ನನ್ನ ಪಕ್ಕನೇ ಕೂತಿದ್ರಲ್ಲ, ಆ ಕ್ಷಣಗಳು ಮರಿಯೋಕ್ಕೆ ಆಗಲ್ಲ.

ಮೂರ್ನಾಲ್ಕು ವರ್ಷದ ಹಿಂದೆ ಬೆಂಗಳೂರಿಗೆ ಬಂದಿದ್ದಾಗ, ನಾವು ಸಿಂಗರ್‌ಗಳೆಲ್ಲ ಅವರನ್ನು ಭೇಟಿ ಮಾಡಿದ್ದೆವು. ಆಗ ನಾನು ಹಿಂದೆ ಭೇಟಿ ಮಾಡಿದ ವಿಷಯ ಹೇಳಿದೆ. ಕಬ್ಬನ್ ಪಾರ್ಕ್‌ಗೆ ಕರೆದುಕೊಂಡು ಹೋಗಿದ್ದನ್ನು ತಿಳಿಸಿದೆ. ಆಗ ಕಾಲಿಗೆ ನಮಸ್ಕಾರ ಮಾಡಿದಾಗ ಆಶೀರ್ವಾದ ಮಾಡಿದ್ರು.

ಅವರು ದೇವರು ಪ್ರತ್ಯಕ್ಷವಾಗಿ ಕಂಡಂಗೆ. ಅವರೆಂದ್ರೆ ನನಗೆ ಸ್ಫೂರ್ತಿ. ನನಗಷ್ಟೇ ಅಲ್ಲ, ಕೋಟ್ಯಂತರ ಸಿಂಗರ್ಸ್‌ಗೂ ಸ್ಫೂರ್ತಿ. ನಾನು ಹಾಡು ಹೇಳುವಾಗ ದಕ್ಷಿಣ ಭಾರತದ ಜಾನಕಿ, ಉತ್ತರ ಭಾರತದ ಆಶಾ ಭೋಸ್ಲೆ ಮತ್ತು ಪರ್ವೀನ್ ಸುಲ್ತಾನ ಅವರ ಮಾನಸಿಕ ಗುರುಗಳು. ಯಾವುದೇ ಹಾಡು ಹೇಳ್ಬೇಕು ಅಂದ್ರೆ ಒಂದು ಕ್ಷಣ ನೆನಸಿಕೊಂಡು ಅವರು ಸಪೋಸ್ ಈ ಹಾಡು ಹಾಡಿದ್ರೆ ಹೇಗೆ ಹಾಡ್ತಿದ್ದಿರಬಹುದು ಅಂತ ಇಮ್ಯಾಜಿನ್ ಮಾಡ್ಕೊಂಡು ನಾನು ಹಾಡ್ತಾ ಇದ್ದೆ. ಈಗಲೂ ಅಷ್ಟೇ. ಆ ತರ ಮಾಡ್ದಾಗ ನನಗೆ ಏನೋ ಒಂಥರಾ ಆತ್ಮವಿಶ್ವಾಸ ಜಾಸ್ತಿ ಬಂದಂಗೆ ಆಗುತ್ತೆ. ಇವರು ನೂರಾರು ವರ್ಷ ಇರ್ಬೇಕಿತ್ತು ಅಂತ ಅನ್ಸುತ್ತೆ. ಆದರೆ ಅವರ ಧ್ವನಿ ಜಗತ್ತು ಇರೋವರ್ಗೂ ಶಾಶ್ವತವಾಗಿ ಇರುತ್ತೆ. ಹೇಗೆ ಲತಾ ಮಂಗೇಶ್ಕರ್ ಅವರ ಧ್ವನಿ ಇನ್ನೂ ಎಷ್ಟೇ ವರ್ಷಗಳಾದರೂ ಇರುತ್ತೋ, ಅದೇ ತರ ಆಶಾ ಅವರೂ ಅಷ್ಟೇ. ಅವರನ್ನು ಹತ್ತಿರದಿಂದ ಮಾತಾಡಿಸಿದ್ದೇನೆ. ಒಂದೇ ಗಂಟೆಯಲ್ಲಿ ಆತ್ಮೀಯತೆ ಬಂದಿದೆ. ಅದು ನನ್ನ ಪುಣ್ಯ. ಆ ದೇವರ, ಕಲಾದೇವಿಯ ಅದೃಷ್ಟ ನನಗೆ ಸಿಕ್ಕಿತ್ತು ಅಂತ ಅಂದುಕೊಳ್ತೇನೆ. ಅವರು ಹೋಗಿದ್ದು ವೈಯಕ್ತಿಕವಾಗಿ ದುಃಖ ಆಗಿದೆ. ಆದರೆ ಏನ್ ಮಾಡೋದು? ಇವರೆಲ್ಲ ಗಂಧರ್ವ ವಂಶ ಇರೋರು. ಒಂದು ಸ್ಫೂರ್ತಿಯಾಗಿ ಇದ್ದೇ ಇರ್ತಾರೆ. ನಮ್ಮೆಲ್ಲರಲ್ಲೂ ಒಂದು ಚೇತನವಾಗಿ ಇದ್ದೇ ಇರ್ತಾರೆ.

ಸಾಧನೆಗಳು ಅಪಾರ

ಏಳು ಫಿಲ್ಮ್‌ಫೇರ್ ಬೆಸ್ಟ್ ಫೀಮೇಲ್ ಪ್ಲೇಬ್ಯಾಕ್ ಸಿಂಗರ್ ಪ್ರಶಸ್ತಿಗಳು, ಎರಡು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ (2000), ಪದ್ಮ ವಿಭೂಷಣ (2008), ಹಲವು ಮಹಾರಾಷ್ಟ್ರ ರಾಜ್ಯ ಪ್ರಶಸ್ತಿಗಳು. ಅವರು ಗಿನ್ನಿಸ್ ವರ್ಲ್ಡ್ ರೆಕಾರ್ಡ್‌ನಲ್ಲಿ ಅತ್ಯಂತ ಹೆಚ್ಚು ಸ್ಟುಡಿಯೋ ರೆಕಾರ್ಡಿಂಗ್‌ಗಳನ್ನು ಮಾಡಿದ ಕಲಾವಿದರಾಗಿ ಗುರುತಿಸಲ್ಪಟ್ಟಿದ್ದಾರೆ.

ವೈಯಕ್ತಿಕ ಜೀವನದಲ್ಲಿ ಅವರು ಬೋಲ್ಡ್ ಆಯ್ಕೆಗಳನ್ನು ಮಾಡಿದರು. ಸಾರಿ, ಬಿಂದಿ, ನಿಯಟ್ ಬನ್ ಇದು ಅವರ ಐಕಾನಿಕ್ ಇಮೇಜ್. ಎಂಬತ್ತು ವಯಸ್ಸಿನಲ್ಲೂ 'ತೌಬಾ ತೌಬಾ' ಹಾಡಿನ ಹುಕ್ ಸ್ಟೆಪ್ ನರ್ತಿಸುತ್ತಾ ದುಬೈ ಕನ್ಸರ್ಟ್‌ನಲ್ಲಿ ಯುವಕರನ್ನು ಆಕರ್ಷಿಸಿದರು. ಸೋಶಿಯಲ್ ಮೀಡಿಯಾದಲ್ಲಿ 7.5 ಲಕ್ಷಕ್ಕೂ ಹೆಚ್ಚು ಫಾಲೋವರ್‌ಗಳೊಂದಿಗೆ ಸಕ್ರಿಯರಾಗಿದ್ದರು.

ಆಶಾ ಅವರು ಕುಟುಂಬದಲ್ಲಿ ಲತಾ, ಉಷಾ, ಮೀನಾ, ಹೃದಯನಾಥ್ ಜೊತೆ ಸಂಗೀತದ ಧಾರೆಯನ್ನು ಮುಂದುವರಿಸಿದರು. ಲತಾ ಮತ್ತು ಆಶಾ ಇಬ್ಬರೂ ಸುಮಾರು ಏಳು ದಶಕಗಳ ಕಾಲ ಹಿಂದಿ ಪ್ಲೇಬ್ಯಾಕ್ ಸಂಗೀತದ ರಾಣಿಯರಾಗಿದ್ದರು. ಆದರೆ ಆಶಾ ಅವರು ತಮ್ಮದೇ ಆದ ಸ್ಥಳವನ್ನು ಸೃಷ್ಟಿಸಿದರು ವರ್ಸಟೈಲಿಟಿ ಮತ್ತು ರೀಇನ್ವೆಂಟ್‌ನ ಮೂಲಕ.

ಅವರ ಜೀವನದಲ್ಲಿ ಸಂಗೀತವು ಕೇವಲ ವೃತ್ತಿಯಾಗಿರಲಿಲ್ಲ; ಅದು ಜೀವನದ ತತ್ವವಾಗಿತ್ತು. ಕಷ್ಟಗಳನ್ನು ಎದುರಿಸುವಾಗ ಸಂಗೀತವು ಅವರಿಗೆ ಸಾಂತ್ವನ ನೀಡಿತು. "ಸಂಗೀತವು ಎಂದಿಗೂ ಮುಗಿಯುವುದಿಲ್ಲ, ಅದು ನದಿಯಂತೆ" ಎಂದು ಅವರು ಹೇಳುತ್ತಿದ್ದರು. ತಮ್ಮ 90ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರು ಹೇಳಿದ್ದರು: "ನಾನು ಸಂಗೀತಕ್ಕೆ ಬಹಳಷ್ಟು ನೀಡಿದ್ದೇನೆ. ನಾನು ವಿವಿಧ ಭಾರತೀಯ ಹಾಡುಗಳನ್ನು ಹಾಡಿದ್ದೇನೆ. ಕಷ್ಟದ ಸಮಯಗಳಿಂದ ಹೊರಬಂದಿದ್ದಕ್ಕೆ ನನಗೆ ತೃಪ್ತಿ ಇದೆ."

ಆಶಾ ಭೋಸ್ಲೆ ಅವರು ಮೀನಾ ಕುಮಾರಿ, ಮಧುಬಾಲಾ, ವ್ಯಾಜಯಂತಿಮಾಲಾ, ಕಾಜೋಲ್, ಊರ್ಮಿಳಾ ಮಾತೋಂಡ್ಕರ್ ತಲೆಮಾರುಗಳ ಹೀರೋಯಿನ್‌ಗಳಿಗೆ ಧ್ವನಿ ನೀಡಿದರು. ಅವರ ಹಾಡುಗಳು ಬೆಳಿಗ್ಗೆ ಎಚ್ಚರಗೊಳಿಸುತ್ತಿದ್ದವು, ರಾತ್ರಿ ಪ್ರಣಯ ಮಾಡಿಸುತ್ತಿದ್ದವು, ದುಃಖವನ್ನು ಹಂಚಿಕೊಳ್ಳುತ್ತಿದ್ದವು, ನರ್ತನಕ್ಕೆ ಪ್ರೇರೇಪಿಸುತ್ತಿದ್ದವು. ಅವರು ಭಾರತೀಯ ಸಂಗೀತಕ್ಕೆ ಪ್ಯಾನ್ ಐಡೆಂಟಿಟಿ ನೀಡಿದರು.

ಇಂದು ಅವರ ಧ್ವನಿ ಮೌನವಾದರೂ, ಅದು ಭಾರತೀಯ ಸಂಗೀತದ ಆಕಾಶದಲ್ಲಿ ಶಾಶ್ವತ ನಕ್ಷತ್ರವಾಗಿ ಮಿನುಗುತ್ತದೆ. ಅವರು ನಮಗೆ ಕಲಿಸಿದ್ದು ಒಂದೇ ಸಂದೇಶ ಜೀವನವನ್ನು ಎಲ್ಲಾ ಬಣ್ಣಗಳೊಂದಿಗೆ ಸ್ವೀಕರಿಸಿ, ಅದನ್ನು ಹಾಡುತ್ತಾ ಮುಂದುವರಿಯಿರಿ.

ಆಶಾ ಭೋಸ್ಲೆ ನೀವು ಹಾಡಿದ ಪ್ರತಿ ಸ್ವರವೂ ನಮ್ಮ ಜೀವನದ ಭಾಗವಾಗಿದೆ. ನಿಮ್ಮ ನೆನಪುಗಳಲ್ಲಿ ನಾವು ಇನ್ನೂ ಹಾಡುತ್ತಿದ್ದೇವೆ. ನಿಮ್ಮ ಧ್ವನಿ ನಮ್ಮಲ್ಲಿ ಶಾಶ್ವತವಾಗಿ ಉಳಿಯುತ್ತದೆ. ನಿಮ್ಮ ಅಮರ ಧ್ವನಿಗೆ ಶ್ರದ್ಧಾಂಜಲಿ.

ಕಿರುಸುದ್ದಿ

ಇಂದು ಪದಗ್ರಹಣ

• **ಮಂಗಳೂರು:** ಸೀನಿಯರ್ ಚೇಂಬರ್ ಇಂಟರ್ ನ್ಯಾಶನಲ್ ಮಂಗಳೂರು ಲೀಜನ್ ವಲಯ–ಸಿ ಇದರ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಏ.13ರಂದು ಸಂಜೆ 6ಕ್ಕೆ ನಗರದ ಲಾಲ್‌ಬಾಗ್ ಹ್ಯಾಟ್ ಹಿಲ್ ಆಫೀಸರ್ಸ್ ಕ್ಲಬ್‌ನಲ್ಲಿ ನಡೆಯಲಿದೆ. ಎಸ್‌ಸಿಐ ಮಂಗಳೂರು ಲೀಜನ್ ವಲಯ–ಸಿ ಅಧ್ಯಕ್ಷರಾಗಿ ಹರೀಶ ಎ. ಹಾಗೂ ಅವರ ತಂಡ 2026–27ನೇ ಸಾಲಿನ ಪದಾಧಿಕಾರಿಗಳಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ಎಸ್‌ಸಿಐ ಫೌಂಡೇಶನ್‌ನ ಸಂಸ್ಥಾಪಕ ಅಧ್ಯಕ್ಷ ಡಾ. ಕೇದಿಗೆ ಅರವಿಂದ ರಾವ್ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಎಸ್‌ಸಿಐ ವಲಯ–ಸಿ ಉಪಾಧ್ಯಕ್ಷ ಕುಮಾರ್ ಕೂರ್ಸೆ ಪದಗ್ರಹಣ ಅಧಿಕಾರಿಯಾಗಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ಪುತ್ರಿಗೆ ದೌರ್ಜನ್ಯಗೈದ ತಂದೆ ವಿರುದ್ಧ ಪೋಕ್ಸೋ ಕೇಸು

• **ಮಂಜೇಶ್ವರ:** ಪುತ್ರಿಗೆ ದೌರ್ಜನ್ಯಗೈದಿರುವುದಾಗಿ ನೀಡಿದ ದೂರಿನಂತೆ ತಂದೆಯ ವಿರುದ್ಧ ಮಂಜೇಶ್ವರ ಪೊಲೀಸರು ಪೋಕ್ಸೋ ಕೇಸು ದಾಖಲಿಸಿ ವಶಕ್ಕೆ ತೆಗೆದುಕೊಂಡಿದ್ದಾರೆ. 53ರ ಹರೆಯದ ವ್ಯಕ್ತಿಯನ್ನು ವಶಕ್ಕೆ ತೆಗೆಯಲಾಗಿದೆ. ಪ್ಲಸ್‌ಟುವಿನಲ್ಲಿ ಕಲಿಯುವ ವೇಳೆ ದೌರ್ಜನ್ಯಗೈದಿರುವುದಾಗಿ ಯುವತಿ ಹೇಳಿಕೆ ನೀಡಿದ್ದಾಳೆ. ಈಗ ಆಕೆಗೆ 20 ವರ್ಷ ವರ್ಷವಾಗಿದೆ. ವಿಷಯವನ್ನು ಯುವತಿಯು ತನ್ನ ತಾಯಿಗೆ ತಿಳಿಸಿದಳು. ಇದರಿಂದ ತಾಯಿ ಮಂಜೇಶ್ವರ ಪೊಲೀಸರಿಗೆ ದೂರು ನೀಡಿದ್ದು, ಪೊಲೀಸರು ಕೇಸು ದಾಖಲಿಸಿಕೊಂಡರು.



ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇಗುಲದಲ್ಲಿ ಉತ್ಸವಾಂಗ ಭಾನುವಾರ ಸಂಜೆ ತೋರಣ ಮುಹೂರ್ತ ನಡೆಯಿತು. ಇಂದು ಸಂಜೆ ಸಿತ್ಲ, ಗಿಡಿಗೆರೆ ಗಳಿಂದ ಹೊರೆಕಾಣಿಕೆ ಬಂದು ಬಳಿಕ ತರಕಾರಿ ಮುಹೂರ್ತ ನಡೆದು ಅಂಕುರರೋಪಣ ನಡೆಯಲಿದೆ. ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಧ್ವಜಾರೋಹಣದೊಂದಿಗೆ ವರ್ಷಾವಧಿ ಉತ್ಸವ ಆರಂಭಗೊಳ್ಳಲಿದೆ.




ಮುಲ್ಕಿ ಕರ್ನಿರೆ ಶ್ರೀ ಧರ್ಮ ಜಾರಂದಾಯ ದೈವಸ್ಥಾನದಲ್ಲಿ ನೇಮೋತ್ಸವ ವಿಜೃಂಭಣೆಯಿಂದ ನಡೆಯಿತು. ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಶುಕ್ರವಾರ ಮಧ್ಯಾಹ್ನ 12ಕ್ಕೆ ಧ್ವಜಾರೋಹಣ, ರಾತ್ರಿ 9.30ರಿಂದ ಶ್ರೀ ಧರ್ಮ ಜಾರಂದಾಯ ಹಾಗೂ ಬಂಟ ದೈವಗಳ ನೇಮೋತ್ಸವ ನಡೆಯಿತು. ಈ ಸಂದರ್ಭ ದೈವಸ್ಥಾನದ ಆಡಳಿತ ಮಂಡಳಿಯ ಸದಸ್ಯರು, ಭಕ್ತಾದಿಗಳು ಉಪಸ್ಥಿತರಿದ್ದರು.

ಕಟೀಲು: ಏ.14ರಿಂದ ಏ. 21ರ ವರೆಗೆ ವರ್ಷಾವಧಿ ಮಹೋತ್ಸವ

ದಿನವಿಡೀ ಸಾಂಸ್ಕೃತಿಕ ಕಾರ್ಯಕ್ರಮಗಳು

• **ಕಟೀಲು:** ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಏ.14ರಿಂದ ವರ್ಷಾವಧಿ ಮಹೋತ್ಸವ ನಡೆಯಲಿದ್ದು, ಏ. 21ರ ಆರಾಟದವರೆಗೆ ದಿನಪ್ರತಿ ಬೆಳಗ್ಗೆ ಗಂಟೆ 9ರಿಂದ ರಾತ್ರಿಯವರೆಗೆ ಭಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಸರಸ್ವತೀ ಸದನದಲ್ಲಿ ನಡೆಯಲಿವೆ.

ಏ. 14ರಂದು ಪೂಜಾಶ್ರೀ ಮುಕ್ತ ಹಾಗೂ ಸಂಜೀವಿನಿ ಕಲಾ ಟ್ರಸ್ಟ್ ಬೆಂಗಳೂರು ಇವರಿಂದ ಭರತನಾಟ್ಯ, ಏ. 15ರಂದು ವೈನವಿ ಮತ್ತು ಬಳಗ, ಬೆಂಗಳೂರು ಇವರಿಂದ ಕೊಳಲುವಾದನ, ಸುಮಲತಾ ಪ್ರಶಾಂತ್ ಉಡುಪ, ಮಣ್ಣೊಜ್ಜ ಎ. ಬೆಂಗಳೂರು ಇವರಿಂದ ಭರತನಾಟ್ಯ, ಏ.16ರಂದು ವಿ. ಡಿ. ನಾಗವೇಣಿ ಲಲಿತ ನೃತ್ಯ ಕಲಾ ಮಂದಿರ ಬೆಂಗಳೂರು, ವಿ. ಸೌಮ್ಯ ಪ್ರದೀಪ್ ಹೆಗಡೆ ಮೈತ್ರಿ ನೃತ್ಯ ಕಲಾ ಟ್ರಸ್ಟ್, ಶಿರಸಿ, ವಿ. ಅಮೃತ ನರೇಶ್‌ರಾವ್, ಬೆಂಗಳೂರು ಇವರಿಂದ ಭರತನಾಟ್ಯ, ರಾಧಿಕಾ ಎಸ್. ಕಾರಂತ್ ಬೆಂಗಳೂರು ಇವರಿಂದ ಸಂಗೀತ, ಏ.17ರಂದು



ವಿ. ನಂದಿನಿ ಕೆ. ವಿ ಕಲಾ ಸಂಗಮ ಬೆಂಗಳೂರು, ಶ್ರೀ ವಿದ್ಯಾ ಶಶಿಧರ್ ಶ್ರೀ ದುರ್ಗಾ ನೃತ್ಯ ಅಕಾಡೆಮಿ ಚಾರಿಟೇಬಲ್ ಟ್ರಸ್ಟ್ ಮೈಸೂರು ಇವರಿಂದ ಭರತನಾಟ್ಯ, ಗಣೇಶ್ ನವಗಿರಿ ಹೊಸಬೆಟ್ಟು ಮಂಗಳೂರು ಇವರಿಂದ ಸಂಗೀತ, ಏ.18ರಂದು ವೈಷ್ಣವಿ ನಾಟ್ಯಾಲಯ ಬಾನಸವಾಡಿ, ಬೆಂಗಳೂರು, ವಿ. ಸೌದಾಮಿನಿ ರಾವ್ ಬೆಂಗಳೂರು, ವಿ. ಧನ್ಯಶ್ರೀ ಪಿ.ಎಸ್. ಧನ್ಯಶ್ರೀ ನೃತ್ಯ ಕಲಾ ನಿಕೇತನ, ಬೆಂಗಳೂರು ಇವರಿಂದ ನಾಟ್ಯ, ಏ.19ರಂದು ವಿಶಾಲ ಯಕ್ಷಗಾನ ಮಂಡಳಿ, ನಂದಳಿಕೆ ಇವರಿಂದ ತಾಳಮದ್ದಳೆ, ಉಮಾರಾಮಚಂದ್ರನ್ ಬೆಂಗಳೂರು ಇವರಿಂದ ಸಂಗೀತ, ವಿ. ಶ್ರೇಯಾ ಶ್ರೀವತ್ಸ ನಾಟ್ಯಕ್ಷೇತ್ರ ನೃತ್ಯ ಸಂಸ್ಥೆ ಬೆಂಗಳೂರು ಇವರಿಂದ ಭರತನಾಟ್ಯ, ಶರತ್ ಹಳೆಯಂಗಡಿ ಇವರಿಂದ ಗಿಟಾರ್ ವಾದನ, ಏ.20ರಂದು ದುರ್ಗಾಮಕ್ಕಳ ಮೇಳದವರಿಂದ ಯಕ್ಷಗಾನ, ಏ.21ರಂದು ಸಂಜೆ ಕೀರ್ತನ್ ಹೊಳ್ಳ ಬಳಗದವರಿಂದ ಭಕ್ತಿ ಸಂಗೀತ ನಡೆಯಲಿದೆ ಎಂದು ಪ್ರಕಟನೆ ತಿಳಿಸಿದೆ.

ಏ. 19ರಂದು ಕಾರ್ಯಾಲಯ ಉದ್ಘಾಟನೆ : ಡಾ.ಎಂಎನ್ ಆರ್

ಕಾರ್ಕಳದಲ್ಲಿ ಮಹಾಮಸ್ತಕಾಭಿಷೇಕ

• **ಕಾರ್ಕಳ :** ಕಾರ್ಕಳದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕ ಮಹೋತ್ಸವ 2027ರ ಫೆಬ್ರವರಿ ತಿಂಗಳಲ್ಲಿ ನಡೆಯಲಿದ್ದು, ಆ ಹಿನ್ನೆಲೆಯಲ್ಲಿ ವಿವಿಧ ಸಮಿತಿಯನ್ನು ರಚಿಸಿದ್ದು, ಗುರು– ಹಿರಿಯರ ಮಾರ್ಗದರ್ಶನ ಸಮಾಜ ಬಾಂಧವರನ್ನೆಲ್ಲ ಒಗ್ಗೂಡಿಸಿ ಸರಕಾರ ಮತ್ತು ಸರ್ವರ ಸಹಕಾರದೊಂದಿಗೆ ಯಶಸ್ವಿಯಾಗಿ ನಡೆಸುವುದೆಂದು ನಿರ್ಣಯಿಸಿರುವುದಾಗಿ ಸಮಿತಿಯ ಕಾರ್ಯಾಧ್ಯಕ್ಷ ಡಾ.ಎಂ.ಎನ್.ರಾಜೇಂದ್ರ ಕುಮಾರ್ ಹೇಳಿದ್ದಾರೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ರಿ.ಶ.1432ರಲ್ಲಿ ಭೈರವಸರ ಮನೆತನದ ಪ್ರಸಿದ್ಧ ಅರಸನಾದ ಪಾಂಡ್ಯ ರಾಜನು ಪರಮಪೂಜ್ಯ ಲಲಿತಕೀರ್ತಿ ಯತಿಶ್ರೇಷ್ಠರ ಪ್ರೇರಣೆಯಂತೆ ಧಾರ್ಮಿಕ ವಿಧಿ– ವಿಧಾನದೊಂದಿಗೆ 42 ಅಡಿ ಎತ್ತರದ ಈ ಉತ್ತುಂಗ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದರು. 1954, 1990, 2002 ಮತ್ತು 2015ರಲ್ಲಿ ಮಹಾಮಸ್ತಕಾಭಿಷೇಕ ನಡೆದಿತ್ತು ಎಂದು ಮಾಹಿತಿ ನೀಡಿದರು.

ಈ ಮಹೋತ್ಸವ ಸಂದರ್ಭದಲ್ಲಿ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಯ ದಿವ್ಯ ಸಂದೇಶವಾದ ಅಹಿಂಸೆ, ತ್ಯಾಗ, ಸತ್ಯ, ಶಾಂತಿ, ಧರ್ಮದ ಸಂದೇಶವನ್ನು ತಿಳಿಸುವುದರ ಜತೆಗೆ ಸಂಸ್ಕೃತಿಯ ರಕ್ಷಣೆ, ಲೋಕಕಲ್ಯಾಣಾರ್ಥವಾಗಿ ಅನೇಕ ಜನಪರ ಯೋಜನೆಗಳನ್ನು ಸರ್ವಸಮಾಜದ ಶ್ರೇಯೋಭಿವೃದ್ಧಿಗಾಗಿ ಹಮ್ಮಿಕೊಳ್ಳುವುದು ಈ ಮಹೋತ್ಸವದ ಮಹತ್ವಪೂರ್ಣ ಅಂಗವಾಗಿದೆ ಎಂದರು.

ಏ.19ರಂದು ಕಾರ್ಯಾಲಯ ಉದ್ಘಾಟನೆ

ಮಹಾಮಸ್ತಕಾಭಿಷೇಕದ ದಿನಾಂಕ ಘೋಷಣೆ ಮತ್ತು ಕಾರ್ಯಾಲಯದ ಉದ್ಘಾಟನೆ ಕಾರ್ಕಳ ದಾನಶಾಲೆ ಭಗವಾನ್ ಶ್ರೀ ಬಾಹುಬಲಿ ಪ್ರವಚನ ಮಂದಿರದಲ್ಲಿ ಏ.19ರಂದು ಬೆಳಗ್ಗೆ 10.30ಕ್ಕೆ ನಡೆಯಲಿದೆ. ಕಾರ್ಕಳ ಜೈನಮಠದ ಪರಮಪೂಜ್ಯ ರಾಜಗುರು ಧ್ಯಾನಯೋಗಿ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ ಅವರ ಪಾವನ ಸಾನಿಧ್ಯ, ಸಮಿತಿಯ ಅಧ್ಯಕ್ಷ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ದಿನಾಂಕವನ್ನು ಘೋಷಿಸಲಿದ್ದಾರೆ ಎಂದರು.



ಅನುದಾನಕ್ಕಾಗಿ ಮನವಿ

ಈಗಾಗಲೆ ನಾನಾ ಇಲಾಖೆಗಳಡಿ ಅನುದಾನವನ್ನು ಒದಗಿಸಿ, ಮಸ್ತಕಾಭಿಷೇಕಕ್ಕೆ ಸೂಕ್ತ ಮೂಲ ಸೌಕರ್ಯಗಳನ್ನು ಒದಗಿಸುವ ಉದ್ದೇಶದಿಂದ 82.37 ಕೋಟಿ ರೂ. ವೆಚ್ಚದ ಅಂದಾಜು ಪಟ್ಟಿಯ ಪ್ರಸ್ತಾವನೆ ಸಿದ್ಧಪಡಿಸಿ ಸರಕಾರಕ್ಕೆ ಸಲ್ಲಿಸಲಾಗಿದೆ. ಅಟ್ಟಳಿಗೆ ನಿರ್ಮಾಣ, ಜೈನಮಠದ ಬಳಿಯಿರುವ ತ್ಯಾಗಿ ಭವನ ಮತ್ತು ಮಾತಾಜಿ ಭವನ ನವೀಕರಣ, ಸಭಾಂಗಣ ನವೀಕರಣ, ನೀರಿನ ಸರಬರಾಜಿಗೆ ಕೊಳವೆ ಬಾವಿ ನಿರ್ಮಾಣ ಸೇರಿದಂತೆ ಹಲವಾರು ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು ಎಂದು ಡಾ.ಎಂ.ಎನ್. ರಾಜೇಂದ್ರ ಕುಮಾರ್ ಹೇಳಿದರು.

ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಕಾರ್ಯಾಲಯ ಉದ್ಘಾಟಿಸಲಿದ್ದಾರೆ. ಸಮಿತಿಯ ಗೌರವ ಸಂರಕ್ಷಕ ಮತ್ತು ರಾಜ್ಯ ಸಚಿವ ಡಿ.ಸುಧಾಕರ್ ಸಭಾ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಮಿತಿಯ ಕಾರ್ಯಾಧ್ಯಕ್ಷ ಡಾ.ಎಂ.ಎನ್.ರಾಜೇಂದ್ರ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ವಿ.ಸುನಿಲ್ ಕುಮಾರ್, ಅದಾನಿ ಗ್ರೂಫ್ ದಕ್ಷಿಣ ಭಾರತದ ಅಧ್ಯಕ್ಷ ಕಿಶೋರ್ ಆಳ್ವ, ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ., ಸಮಿತಿ ಉಪಾಧ್ಯಕ್ಷ ಕೆ.ಅಭಯಚಂದ್ರ ಜೈನ್, ಉದಯ ಕೃಷ್ಣಯ್ಯ ಶೆಟ್ಟಿ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಉದಯ ಕುಮಾರ್ ಶೆಟ್ಟಿ ಮುನಿಯಾಲು ಉಪಸ್ಥಿತರಿರುವವರು ಎಂದು ಅವರು ಮಾಹಿತಿ ನೀಡಿದರು.

ಸಮಿತಿಯ ಪದಾಧಿಕಾರಿಗಳಾದ ಪುಷ್ಪರಾಜ್ ಜೈನ್ ಮಂಗಳೂರು, ಎ.ಮೋಹನ್ ಪಡಿವಾಳ್, ಸಿಎ ಪ್ರಭಾತ್ ಕುಮಾರ್, ಅನಂತರಾಜ ಪೂವಣಿ, ಸಂಪತ್ ಸಾಮ್ರಾಜ್ಯ, ಸುಧೀರ್ ಪಡಿವಾಳ್, ಕೆ.ಜಯಕೀರ್ತಿ ಕಡಂಬ, ಹೇಮಚಂದ್ರ ಜೈನ್, ಸುನಿಲ್ ಕುಮಾರ್ ಬಜಗೋಳಿ, ಮಹಾವೀರ ಹೆಗ್ಡೆ ಮುಡಾರು, ಭರತ್ ಕುಮಾರ್ ಜೈನ್ ಇರ್ವತ್ತೂರು, ಶೀತಲ್ ಜೈನ್ ಶಿರ್ಲಾಲು, ಸುಭಾಶ್ಚಂದ್ರ ಚೌಟ, ಶಾಂತಿರಾಜ್ ಜೈನ್, ಮಹೇಂದ್ರವರ್ಮ ಜೈನ್, ಶಿಶುಪಾಲ್ ಜೈನ್ ಕಾರ್ಕಳ, ಅರುಣಾ ರಾಜೇಂದ್ರ ಕುಮಾರ್, ಶಶಿಕಲಾ ಹೆಗ್ಡೆ, ಹರ್ಷಿಣಿ ವಿಜಯರಾಜ್, ಮೋಹಿನಿ ವರ್ಧಮಾನ, ನಿರಂಜನ್ ಜೈನ್, ಪೃಥ್ವಿರಾಜ್ ಹೆಗ್ಡೆ, ಆದಿರಾಜ ಅಜ್ರಿ, ಅಮೃತಮಲ್ಲ, ಸಿ.ಪ್ರಭಾಕರ ಅತಿಕಾರಿ, ದೀಪಕ್ ಜೈನ್ ಉಡುಪಿ, ಅಶೋಕ್ ಕುಮಾರ್ ಬಳ್ಳಾಲ್, ವಿನಯ ಆರಿಗ, ವಿನಯ ಉದಯ ಕುಮಾರ್, ವಿಖ್ಯಾತ್ ಜೈನ್, ಚಂದ್ರಕೀರ್ತಿ ಜೈನ್, ಧನಂಜಯ್ ಜೈನ್, ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನಿಂತಿದ್ದ ಲಾರಿಗೆ ಕಾರು ಡಿಕ್ಕಿ: ಚಿತ್ರ ನಟ ಸಾವು

• **ಮಡಿಕೇರಿ/ಕುಶಾಲನಗರ:** ರಸ್ತೆ ಬದಿ ದುರಸ್ತಿಯಾಗಿ ನಿಂತಿದ್ದ ಕ್ಯಾಂಟರ್ ಲಾರಿಗೆ ಕಾರು ಡಿಕ್ಕಿಯಾದ ಪರಿಣಾಮ ನಟರೊಬ್ಬರು ಸಾವಿಗೀಡಾದ ಘಟನೆ ಶನಿವಾರ ತಡರಾತ್ರಿ ಕುಶಾಲನಗರ–ಮಡಿಕೇರಿ ನಡುವಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ.

ಸುಂಟಿಕೊಪ್ಪ ಸಮೀಪದ ಏಳನೇ ಹೊಸಕೋಟೆಯ ಕಲ್ಲೂರು ನಿವಾಸಿ ಹರೀಶ್ (42) ಮೃತ ದುರ್ದೈವಿ. ಕುಶಾಲ ನಗರ– ಮಡಿಕೇರಿ ನಡುವಿನ ಕುಶಾಲನಗರ ಆನೆಕಾಡು ಬಳಿ ತಡರಾತ್ರಿ ದುರಸ್ತಿ ಗಾಗಿ ನಿಲ್ಲಿಸಿದ್ದ ಕ್ಯಾಂಟರ್ ಲಾರಿಗೆ ಹರೀಶ್ ಪ್ರಯಾಣಿಸುತ್ತಿದ್ದ ಕಾರು ಡಿಕ್ಕಿಯಾಗಿದೆ. ಪರಿಣಾಮವಾಗಿ ತೀವ್ರ ಗಾಯಗೊಂಡ ಹರೀಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.



ಕನ್ನಡ ಸೇರಿದಂತೆ ಹಲವು ಭಾಷೆಯ ಚಲನಚಿತ್ರ, ಕಿರು ಚಿತ್ರಗಳಲ್ಲಿ ನಟಿಸಿದ್ದ ಹರೀಶ್, ರಿಯಲ್ ಎಸ್ಟೇಟ್ ಉದ್ಯಮದಲ್ಲೂ ತೊಡಗಿಸಿಕೊಂಡಿದ್ದರು.

ಶನಿವಾರ ರಾತ್ರಿ ಕುಶಾಲನಗರದಿಂದ 7ನೇ ಹೊಸಕೋಟೆ ಬಳಿಯ ಕಲ್ಲೂರು ಗ್ರಾಮದಲ್ಲಿರುವ ತನ್ನ ಮನೆಗೆ ವ್ಯಾಗನಾರ್ ಕಾರಿನಲ್ಲಿ (ಕೆಎ03ಎಂ2570) ತೆರಳುತ್ತಿದ್ದಾಗ, ಹರೀಶ್ ಚಾಲಿಸುತ್ತಿದ್ದ ವ್ಯಾಗನರ್ ಕಾರು ಆನೆಕಾಡು ಬಳಿ ಹೆದ್ದಾರಿಯಲ್ಲಿ ರಿಪೇರಿಯಾಗಿ ನಿಂತಿದ್ದ ಗೊಬ್ಬರ ತುಂಬಿದ್ದ ಲಾರಿಗೆ ಹಿಂದಿನಿಂದ ಡಿಕ್ಕಿಯಾಗಿ ರುವುದಾಗಿ ಹೇಳಲಾಗಿದೆ..

ಅಪಘಾತದ ಮಾಹಿತಿ ತಿಳಿದ ಕೂಡಲೇ ಕುಶಾಲನಗರ ಸಂಚಾರಿ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕುಶಾಲನಗರ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆದಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಓಮ್ನಿ ಡಿಕ್ಕಿ: ಮಹಿಳೆ ಗಂಭೀರ

• **ಬೆಳ್ತಂಗಡಿ :** ತಾಲೂಕಿನ ಕೊಲ್ಪದಬೈಲು ಎಂಬಲ್ಲಿ ಭಾನುವಾರ ಮಧ್ಯಾಹ್ನ ಅತೀ ವೇಗವಾಗಿ ಚಲಾಯಿಸಿಕೊಂಡು ಬಂದ ಓಮ್ನಿ ಕಾರೊಂದು ಮಕ್ಕಳು ಸೇರಿದಂತೆ ನಾಲ್ವರ ಮೇಲೆರಗಿ ಮಹಿಳೆಯೊಬ್ಬರು ಗಂಭೀರವಾಗಿ ಗಾಯಗೊಂಡ ಘಟನೆ ನಡೆದಿದೆ.

ಬೊಲೆರೋ ಜೀಪ್‌ನಿಂದ ಇಳಿದ ಇಬ್ಬರು ಮಹಿಳೆಯರು ಹಾಗೂ ಇಬ್ಬರು ಮಕ್ಕಳು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಈ ವೇಳೆ ಅತೀ ವೇಗವಾಗಿ ಬಂದ ಓಮ್ನಿ ಕಾರು ಸಣ್ಣ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಮಗುಚಿ ಬಿದ್ದು ಏಕಾಏಕಿ ಈ ನಾಲ್ವರು ಪಾದಚಾರಿಗಳ ಮೇಲೆರಗಿದೆ. ಅದೃಷ್ಟವಶಾತ್ ಮಕ್ಕಳಿಬ್ಬರು ಹಾಗೂ ಮಹಿಳೆಯೊಬ್ಬರು ಯಾವುದೇ ಗಾಯಗಳಿಲ್ಲದೆ ಅಪಾಯದಿಂದ ಪಾರಾಗಿದ್ದಾರೆ. ಆದರೆ ಓರ್ವ ಮಹಿಳೆ ಓಮ್ನಿ ಕಾರಿನಡಿ ಸಿಲುಕಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರನ್ನು ತಕ್ಷಣ ಅಲ್ಲೇ ಇದ್ದ ರಿಕ್ಷಾದಲ್ಲಿ ಬೆಳ್ತಂಗಡಿ ಆಸ್ಪತ್ರೆಗೆ ಸಾಗಿಸಲಾಗಿದೆ. ಅಪಘಾತದ ಭೀಕರ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಹನುಮಗಿರಿ ಕ್ಷೇತ್ರ: ರಾಮ–ಹನುಮರಿಗೆ ಏಕಕಾಲದಲ್ಲಿ ಪ್ರತಿಷ್ಠೆ, ಬ್ರಹ್ಮಕಲಶಾಭಿಷೇಕ

• **ಪುತ್ತೂರು:** ಹಚ್ಚ ಹಸುರಿನ ಗಿರಿವನಗಳ ಮಧ್ಯೆ ಪ್ರಶಾಂತಮಯಪರಿಸರದಲ್ಲಿ ನೆಲೆಸಿರುವ ರಾಮಹನುಮರ ಪುಣ್ಯ ಕ್ಷೇತ್ರ ಹನುಮಗಿರಿಯ ಶ್ರೀ ಕೋದಂಡರಾಮ ಪಂಚಮುಖಿ ಆಂಜನೇಯ ಕ್ಷೇತ್ರದಲ್ಲಿ ಭಾನುವಾರ ಬೆಳಗ್ಗೆ ಏಕಕಾಲದಲ್ಲಿ ಶ್ರೀ ಕೋದಂಡರಾಮ ಹಾಗೂ ಹನುಮರಿಗೆ ಪುನ: ಪ್ರತಿಷ್ಠೆ ಹಾಗೂ ಬ್ರಹ್ಮಕಲಶಾಭಿಷೇಕ ನಡೆಯಿತು.

ಬ್ರಹ್ಮಶ್ರೀ ಕುಂಟಾರು ವಾಸುದೇವ ತಂತ್ರಿಗಳು ಹಾಗೂ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿಯವರ ಆಚಾರ್ಯತ್ವದಲ್ಲಿ ಯತಿಶ್ರೇಷ್ಠರಾದ ಕಂಚಿ ಕಾಮಕೋಟಿ ಪೀಠಾಧಿಪತಿ ಜಗದ್ಗುರು ಪರಮಪೂಜ್ಯ ಶ್ರೀ ಶಂಕರ ವಿಜೇಯೇಂದ್ರ ಸರಸ್ವತಿ ಸ್ವಾಮೀಜಿ ಶ್ರೀ ಸಂಸ್ಥಾನ ಗೋಕರ್ಣ ಶ್ರೀರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿಯವರ ಉಪಸ್ಥಿತಿಯೊಂದಿಗೆ, ಸಾವಿರಾರು ಮಂದಿ ಭಕ್ತ ಸಮೂಹದ ಮಧ್ಯೆ ಋತ್ವಿಜರಿಂದ ಮಂತ್ರೋಚ್ಛರಣೆಯಲ್ಲಿ ಬೆಳಗ್ಗೆ 8.20 ರಿಂದ 10.20 ರ ವೃಷಭ ಲಗ್ನ ಸುಮುಹೂರ್ತದಲ್ಲಿ ಕೋಡಂಡರಾಮ, ಅನಂತರ ಪಂಚಮುಖಿ ಆಂಜನೇಯ ದೇವರ ಪುನರ್ ಪ್ರತಿಷ್ಠೆ, ಬ್ರಹ್ಮಕಲಶಾಭಿಷೇಕ ನಡೆಯಿತು.

ಶನಿವಾರ ಸಂಜೆ ದೇವರು ಧ್ಯಾನಾಧಿವಾಸರಾದ ಬಳಿಕ ಅಧಿವಾಸ ಹೋಮ, ಕುಂಭೇಶಕರ್ಕರಿ ಪೂಜೆ, ಪರಿಕಲಶ ಪೂಜೆ, ಬ್ರಹ್ಮಕಲಶ ಪೂಜೆಗಳು ನಡೆದು ಭಾನುವಾರ ಬೆಳಗ್ಗೆ ದೇವರ ಪ್ರತಿಷ್ಠೆ ಮಾಡಲಾಯಿತು. ಅಭಿಮಂತ್ರಿಸಿದ ಕಲಶಗಳಿಂದ ದ್ರವ್ಯಗಳನ್ನು ಅಭಿಷೇಕ ಮಾಡಲಾಯಿತು.

ವೈದಿಕ ಕಾರ್ಯಕ್ರಮಗಳು

ಭಾನುವಾರ ಬೆಳಗ್ಗೆ 5 ಗಂಟೆಗೆ ಗಣಪತಿ ಹೋಮ, ಪ್ರತಿಷ್ಠಾಪಾಣಿ, ಬೆಳಗ್ಗೆ 8.20 ರಿಂದ 10.20ರ ವೃಷಭ ಲಗ್ನ ಸುಮುಹೂರ್ತದಲ್ಲಿ ಕೋದಂಡರಾಮ ಮತ್ತು ಪಂಚಮುಖಿ ಆಂಜನೇಯ ದೇವರ ಪ್ರತಿಷ್ಠೆ, ಪರಿವಾರ ದೇವರ ಪ್ರತಿಷ್ಠೆ, ಬ್ರಹ್ಮಕಲಶಾಭಿಷೇಕ, ಪ್ರತಿಷ್ಠಾಬಲಿ, ಮಹಾಪೂಜೆ, ಮಹಾ ಮಂತ್ರಾಕ್ಷತೆ, ಪ್ರಸಾದ ವಿತರಣೆ ನಡೆಯಿತು. ಸಂಜೆ 7 ರಿಂದ ಶ್ರೀ ಕೋದಂಡರಾಮ ದೇವರಿಗೆ ರಂಗಪೂಜೆ, ಪ್ರಸಾದ ವಿತರಣೆ, ಶ್ರೀ ದೇವರ ಉತ್ಸವ ಬಲಿ, ದರ್ಶನ ಬಲಿ, ಬಟ್ಟಲು ಕಾಣಿಕೆ, ಪ್ರಸಾದ ವಿತರಣೆ ನಡೆಯೊಂದಿಗೆ 4 ದಿನಗಳ ಬ್ರಹ್ಮಕಲಶ ಉತ್ಸವ ಸಂಪನ್ನಗೊಂಡಿತು.

ಇದೇ ಸಂದರ್ಭದಲ್ಲಿ ಕಂಚಿ ಕಾಮಕೋಟಿ ಪೀಠಾಧಿಪತಿ ಜಗದ್ಗುರು ಪರಮಪೂಜ್ಯ ಶ್ರೀ ಶಂಕರ ವಿಜೇಯೇಂದ್ರ ಸರಸ್ವತಿ ಸ್ವಾಮೀಜಿ, ಶ್ರೀ ಸಂಸ್ಥಾನ ಗೋಕರ್ಣ ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿಯವರು ಧಾರ್ಮಿಕ ಸಂದೇಶ ನೀಡಿದರು.

ಪಂದಳ ರಾಜಮನೆತನದ ಮಹಾರಾಜ ಹಾಗೂ ಕೇರಳ ರಾಜ್ಯ ಶಬರಿಮಲೆ ಅಯ್ಯಪ್ಪ ಸೇವಾ ಸಮಾಜದ ಅಧ್ಯಕ್ಷರಾಗಿರುವ ಪುಣರ್ತಂ ನಾರಾಯಣ ವರ್ಮ, ಆರೆಸ್ಸೆಸ್ ಹಿರಿಯ ಮುಖಂಡ ಡಾ. ಕಲ್ಲಡ್ಕ ಪ್ರಭಾಕರ ಭಟ್, ಹೈಕೋರ್ಟ್ ನ್ಯಾಯವಾದಿ ಅರುಣ್ ಶ್ಯಾಮ್, ಮೂಡಬಿದ್ರೆ ಶ್ರೀ ಚಾರುಕೀರ್ತಿ ಭಟ್ಟರಕ ಸ್ವಾಮೀಜಿ, ಮಾಣಿಲ ಶ್ರೀ ಮಹಾಲಕ್ಷ್ಮೀ ಕ್ಷೇತ್ರದ ಶ್ರೀಮೋಹನದಾಸ ಪರಮಹಂಸ ಸ್ವಾಮೀಜಿ, ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು, ಶ್ರೀ ಧರ್ಮಶ್ರೀ ಪ್ರತಿಷ್ಠಾನದ ಮಹಾಪೋಷಕರಾದ ಜಿ.ಕೆ. ಮಹಾಬಲೇಶ್ವರ ಭಟ್, ಕೆ.ಎಂ. ನಟರಾಜ್, ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ. ಶ್ಯಾಂ ಭಟ್, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸ್ವಾಗತ ಸಮಿತಿ ಅಧ್ಯಕ್ಷ ಡಾ. ರವೀಶ್ ಪಡುಮಲೆ, ಆಡಳಿತ ಧರ್ಮದರ್ಶಿ ನನ್ಯ ಅಚ್ಯುತ ಮೂಡೆತ್ತಾಯ, ಹೊರೆಕಾಣಿಕೆ ಸಮಿತಿ ಸಂಚಾಲಕ ಶಶಿಕುಮಾರ್ ರೈ ಬಾಲ್ಯೊಟ್ಟು, ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷರಾದ ಸೀತಾರಾಮ ರೈ ಕೆದಂಬಾಡಿಗುತ್ತು, ಬೂಡಿಯಾರು ರಾಧಾಕೃಷ್ಣ ರೈ, ಸಾಜ ರಾಧಾಕೃಷ್ಣ ಆಳ್ವ, ಶ್ರೀರಾಮ ಪಕ್ಕಳ, ಮುರಳೀಕೃಷ್ಣ ಹಸಂತಡ್ಕ, ರವಿಕಿರಣ ಶೆಟ್ಟಿ ಬೆದ್ರಾಡಿ, ಪ್ರಧಾನ ಕಾರ್ಯದರ್ಶಿಗಳಾದ ಆರ್.ಸಿ. ನಾರಾಯಣ ರೆಂಜ, ನಹುಷ ಪಿ.ವಿ., ಜೀವಂಧರ್ ಜೈನ್, ವಿದ್ಯಾ ಆರ್. ಗೌರಿ ಸೇರಿದಂತೆ ಸಮಿತಿಗಳ ಪದಾಧಿಕಾರಿಗಳು, ಸಾವಿರಾರು ಭಕ್ತರು ಪಾಲ್ಗೊಂಡರು.



ಯಶಸ್ವಿ ಸಂಪನ್ನ

ಹನುಮಗಿರಿ ಕ್ಷೇತ್ರದಲ್ಲಿ ಹಲವು ಜೀರ್ಣೋದ್ಧಾರ ಕಾರ್ಯಗಳೊಂದಿಗೆ ಪುನ: ಪ್ರತಿಷ್ಠಾ ಬ್ರಹ್ಮಕಲಶ ಉತ್ಸವವನ್ನು ನಾಲ್ಕು ದಿನಗಳ ಕಾರ್ಯಕ್ರಮಗಳೊಂದಿಗೆ ಆರಂಭಿಸಲಾಗಿತ್ತು. ವಿಶೇಷವಾಗಿ 'ಕೋಟಿ ಶ್ರೀರಾಮ ತಾರಕ ಮಂತ್ರ ಮಹಾಯಜ್ಞ' ರಾಮ ಜನ್ಮಭೂಮಿ ಅಯೋಧ್ಯೆ ಶ್ರೀರಾಮ ಮಂದಿರದಿಂದ ಮತ್ತು ಅಂಜನಾದ್ರಿಯ ಜ್ಯೋತಿ ಜೊತೆ 'ರಾಮ – ಹನುಮ ಜ್ಯೋತಿ' ರಥಯಾತ್ರೆಯು ಗ್ರಾಮ ದಿಂದ ಗ್ರಾಮಕ್ಕೆ ಸಂಚರಿಸಿ ಹನುಮಗಿರಿಗೆ ಆಗಮಿಸಿತ್ತು. ಕ್ಷೇತ್ರದಲ್ಲಿ ಲಕ್ಷೋತ್ತರ ನಾರಿ ಕೇಳ ಸಮರ್ಪಣಾ ಯಜ್ಞ ಮತ್ತು ಭಜನಾ ಸಂಕೀರ್ತನೆಗಳು ನಿರಂತರವಾಗಿ ನೆರವೇರಿದೆ. ಜತೆಗೆ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಭಾವಾರ ರಾಮ ಹನುಮರ ಪ್ರತಿಷ್ಠೆ, ಬ್ರಹ್ಮಕಲಶದೊಂದಿಗೆ ಯಶಸ್ವಿಯಾಗಿ ಸಂಪನ್ನಗೊಂಡಿದೆ.

ರೆಡ್‌ಬ್ರಿಕ್ಸ್ ಅಪಾರ್ಟ್‌ಮೆಂಟ್‌ನಲ್ಲಿ ನೀರಿನ ಸಮಸ್ಯೆ ವಿಪರೀತ | ಎತ್ತರದ ಪ್ರದೇಶಗಳಿಗೆ ಬರುತ್ತಿಲ್ಲ ನೀರು

ತೆರಿಗೆ ಪಾವತಿಸಿದರೂ ಟ್ಯಾಂಕರ್ ನೀರು ಅನಿವಾರ್ಯ

▸ ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ಗುಡ್ಡ ಹಾಗೂ ಇಳಿಜಾರು ಪ್ರದೇಶ ಒಳಗೊಂಡಿರುವ ಪದವು ಪೂರ್ವ ವಾರ್ಡ್‌ನ ಅಲ್ಲಲ್ಲಿ ನೀರಿನ ಸಮಸ್ಯೆ ಇದೆ.

ಕುಲಶೇಖರ, ಕುಡುಪು, ಕೆಲರಾಯ್ ಪರಿಸರದಲ್ಲಿ ವ್ಯಾಪಿಸಿರುವ ಪದವು ಪೂರ್ವ ವಾರ್ಡ್ ಅತಿಹೆಚ್ಚು ಎತ್ತರ ಹಾಗೂ ತಗ್ಗು ಪ್ರದೇಶಗಳನ್ನು ಒಳಗೊಂಡಿದೆ. ಹಾಗಾಗಿ ಸಹಜವಾಗಿ ಪ್ರೆಶರ್ ಇಲ್ಲದೆ ಎತ್ತರದ ಪ್ರದೇಶಗಳಿಗೆ ನೀರು ತಲುಪದೇ ಸಮಸ್ಯೆಯಾಗುತ್ತಿದೆ. ಕುಲಶೇಖರ ಡೈರಿ, ಕುಲಶೇಖರ ಚೌಕಿ ಪ್ರದೇಶಗಳಲ್ಲಿ ನೀರಿನ ಕೊರತೆ ಉಂಟಾಗಿದೆ. ಕುಲಶೇಖರ– ಸರಿಪಳ್ಳ ರೆಡ್‌ಬ್ರಿಕ್ಸ್ ಅಪಾರ್ಟ್‌ಮೆಂಟ್ ಫೇಸ್ 3ರಲ್ಲಿ ಕಳೆದ ಡಿಸೆಂಬರ್‌ನಿಂದ ನೀರಿನ ಸಮಸ್ಯೆ ಅಧಿಕಗೊಂಡಿದ್ದು, ಟ್ಯಾಂಕರ್ ನೀರು ಇಲ್ಲಿ ಅನಿವಾರ್ಯವಾಗಿದೆ.

ಈ ವಾರ್ಡ್‌ಗೆ ಸರಿಪಳ್ಳ, ಮಂಗಳಾನಗರ, ಭಟ್ರಕೋಡಿ ಈ ಮೂರು ಟ್ಯಾಂಕ್‌ಗಳಿಂದ ನೀರು ಪೂರೈಕೆ ಆಗುತ್ತಿದೆ. ಭಟ್ರಕೋಡಿ ಟ್ಯಾಂಕ್‌ನಿಂದ ಎರಡು ದಿನಕ್ಕೊಮ್ಮೆ ನೀರು ಪೂರೈಕೆಯಾಗುತ್ತಿದೆ. ಸರಿಪಳ್ಳ ಟ್ಯಾಂಕ್‌ನಿಂದ ಕುಲಶೇಖರದ ಹೆಚ್ಚಿನ ಪ್ರದೇಶಗಳಿಗೆ ನೀರು ಒದಗಿಸಲಾಗುತ್ತಿದೆ.

ಕುಲಶೇಖರ, ಕುಡುಪು, ಕೆಲರಾಯ್ ಪ್ರದೇಶಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಭಾರಿ ಸಂಖ್ಯೆಯಲ್ಲಿ ಮನೆ, ಫ್ಲ್ಯಾಟ್‌ಗಳು ನಿರ್ಮಾಣಗೊಂಡಿವೆ. ಜನಸಂಖ್ಯೆ ಹೆಚ್ಚಳವಾಗಿದೆ. ಅದಕ್ಕೆ ಅನುಗುಣವಾಗಿ ನೀರಿನ ಬೇಡಿಕೆಯೂ ಅಧಿಕಗೊಂಡಿದೆ. ಆದರೆ, ಈ ಹಿಂದೆ ಎಷ್ಟು ನೀರು ಪೂರೈಕೆಯಾಗುತ್ತಿತ್ತೋ ಅಷ್ಟೇ ಪ್ರಮಾಣದಲ್ಲಿ ಈಗಲೂ ನೀರು ಸರಬರಾಜು ಆಗುತ್ತಿದೆ. ಹಳೆಯ ಪೈಪ್‌ಲೈನ್ ಈಗಲೂ ಕಾರ್ಯನಿರ್ವಹಿಸುತ್ತಿದೆ. ಲಭ್ಯ ನೀರನ್ನು ಹಂಚಿಕೆ ಮಾಡಿ ಪೂರೈಸುವ ಕಾರಣ ವಾರ್ಡ್‌ನ ಜನತೆಗೆ ನೀರು ಸಾಕಾಗುತ್ತಿಲ್ಲ ಎಂಬುದು ಸ್ಥಳೀಯರ ಅಭಿಪ್ರಾಯ.

ಪದವು ಪೂರ್ವ ವಾರ್ಡ್‌ನ ಬಹುತೇಕ ಕಡೆ ಎರಡು ದಿನಕ್ಕೊಮ್ಮೆ ಒಂದೆರಡು ಗಂಟೆ ಮಾತ್ರ ನೀರು ಬರುತ್ತಿದೆ.

ಮನಪಾ ಪೈಪ್‌ಲೈನ್‌ನಲ್ಲಿ ಪೂರೈಕೆಯಾಗುವ ನೀರಿನ ಪ್ರಮಾಣ ಕಡಿಮೆಯಾಗಿದೆ. ಇದರಿಂದಾಗಿ ಪ್ರೆಶರ್ ಇಲ್ಲದೆ ಎಲ್ಲ ಪ್ರದೇಶಗಳಿಗೆ ನೀರು ತಲುಪುತ್ತಿಲ್ಲ. ಮನಪಾ ವತಿಯಿಂದ ತುಂಬೆಯಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಒದಗಿಸಿ ಜನರ ನೀರಿನ ಸಮಸ್ಯೆ ಬಗೆಹರಿಸಬೇಕು ಎಂಬುದು ಇಲ್ಲಿನ ನಿವಾಸಿಗಳ ಒತ್ತಾಯ.

ಸರಕಾರಿ ಬಾವಿ ನೀರು

ಕೆಲರಾಯ್, ಕುಡುಪು ಪ್ರದೇಶಗಳಿಗೆ ಎರಡು ಬೋರ್‌ವೆಲ್‌ಗಳ ಮೂಲಕ ನೀರು ನೀಡಲಾಗುತ್ತಿದೆ. ಕೆಎಚ್‌ಬಿ ಲೇಔಟ್, ಜ್ಯೋತಿನಗರದಲ್ಲಿ ಸರಕಾರಿ ಬಾವಿ ಇದ್ದು, ಈ ಬಾವಿಗೆ ಪಂಪ್ ಅಳವಡಿಸಿ ನೀರು ಒದಗಿಸಲಾಗುತ್ತಿದೆ. ಈ ವಾರ್ಡ್‌ನಲ್ಲಿ ಮನಪಾ ಟ್ಯಾಂಕರ್ ಮೂಲಕ ನೀರು ಪೂರೈಕೆ ಆಗುತ್ತಿಲ್ಲ. ಫ್ಲ್ಯಾಟ್ ನಿವಾಸಿಗಳು ಖಾಸಗಿ ಟ್ಯಾಂಕರ್‌ಗಳ ಮೂಲಕ ನೀರು ತರಿಸಿಕೊಳ್ಳುತ್ತಿದ್ದಾರೆ. ಪದವು ಪೂರ್ವ ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಕಾಮಗಾರಿ ಶೇ.60ರಷ್ಟು ಪೂರ್ಣಗೊಂಡಿದೆ.



'ರೆಡ್‌ಬ್ರಿಕ್ಸ್ ಫೇಸ್ 3 ಅಪಾರ್ಟ್‌ಮೆಂಟ್‌ಗೆ ಕಳೆದ ಡಿಸೆಂಬರ್‌ನಿಂದ ಟ್ಯಾಂಕರ್ ನೀರು ಪೂರೈಕೆ ಮಾಡಲಾಗುತ್ತಿದೆ.

ಕುಲಶೇಖರದ ಸರಿಪಳ್ಳ ರಸ್ತೆಯಲ್ಲಿರುವ 'ರೆಡ್‌ಬ್ರಿಕ್ಸ್ ಫೇಸ್ 3 ಅಪಾರ್ಟ್‌ಮೆಂಟ್'ನಲ್ಲಿ ನೀರಿನ ಭಾರಿ ತೊಂದರೆ ಇದೆ. ನಮ್ಮ ಅಪಾರ್ಟ್ ಮೆಂಟ್‌ನ ನಿವಾಸಿಗಳು ಕಳೆದ ಹತ್ತು ವರ್ಷಗಳಿಂದ ತೀವ್ರವಾದ ನೀರಿನ ಅಭಾವವನ್ನು ಎದುರಿಸುತ್ತಿದ್ದಾರೆ. ಈ ಹತ್ತು ವರ್ಷಗಳ ಸುದೀರ್ಘ ಹೋರಾಟದ ನಂತರವೂ ನಮಗೆ ಪಾಲಿಕೆಯಿಂದ ಯಾವುದೇ ಶಾಶ್ವತ ಪರಿಹಾರ ಸಿಕ್ಕಿಲ್ಲ. ಪ್ರತಿದಿನ ಬೆಳಗ್ಗೆ ಮೂರು ಗಂಟೆಗಳ ಕಾಲ ನೀರು ಬಂದರೂ ಪ್ರೆಶರ್ ಇಲ್ಲ. ನಮ್ಮ ಅಪಾರ್ಟ್‌ಮೆಂಟ್‌ನಲ್ಲಿ 110 ಮನೆಗಳಿದ್ದು, ಮನಪಾ ಪೂರೈಸುವ ನೀರು ಸಾಕಾಗುತ್ತಿಲ್ಲ. ಕಳೆದ ಡಿಸೆಂಬರ್‌ನಿಂದ ಪ್ರತಿದಿನ ಹಣ ಪಾವತಿಸಿ ಎರಡು ಟ್ಯಾಂಕರ್ ನೀರು ತರಿಸಿಕೊಳ್ಳುತ್ತಿದ್ದೇವೆ. ನೀರಿನ ಸಮಸ್ಯೆ ಬಗ್ಗೆ ಮಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ, ಇಂಜಿನಿಯರ್‌ಗಳಿಗೆ ಹಲವು ಬಾರಿ ಮನವಿ ನೀಡಿ ಸಾಕಾಗಿದೆ. ತುಂಬೆಯಿಂದ ಪೂರೈಕೆಯಾಗುವ ನೀರು ಕಡಿಮೆಯಾಗಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಇನ್ನಾದರೂ ಹೆಚ್ಚಿನ ಪ್ರಮಾಣದಲ್ಲಿ ನೀರು ಪೂರೈಸಿ, ಮನಪಾ ಅಧಿಕಾರಿಗಳು ನಮ್ಮ ನೀರಿನ ಸಮಸ್ಯೆ ಬಗೆಹರಿಸಬೇಕು.



■ **ನಿತಿನ್,** ಅಧ್ಯಕ್ಷರು 'ರೆಡ್‌ಬ್ರಿಕ್ಸ್ ಫೇಸ್ 3 ಅಪಾರ್ಟ್‌ಮೆಂಟ್' ಮ್ಯಾನೇಜ್‌ಮೆಂಟ್ ಕಮಿಟಿ ಕುಲಶೇಖರ

'ರೆಡ್‌ಬ್ರಿಕ್ಸ್ ಫೇಸ್ 3 ಅಪಾರ್ಟ್‌ಮೆಂಟ್'ನಲ್ಲಿ ನೀರಿಗಾಗಿ ನಾವು ಅಕ್ಷರಶ: ಪರದಾಡುತ್ತಿದ್ದೇವೆ. ಪ್ರತಿದಿನ ಖಾಸಗಿ ಟ್ಯಾಂಕರ್ ಮೂಲಕ ನೀರು ತರಲು ದುಡಿದ ಹಣ ವ್ಯಯಿಸುತ್ತಿದ್ದೇವೆ. ಪಾಲಿಕೆಗೆ ತೆರಿಗೆ, ನೀರಿನ ಬಿಲ್ ಪಾವತಿಸುವ ಹೊರತಾಗಿಯೂ ಟ್ಯಾಂಕರ್ ಮೂಲಕ ನೀರು ತರಿಸಲು ಮತ್ತೆ ಹಣ ನೀಡುತ್ತಿದ್ದೇವೆ. ನಮ್ಮ ನೀರಿನ ಸಮಸ್ಯೆ ಬಗ್ಗೆ ಸಂಬಂಧಿಸಿದ ಎಲ್ಲರಿಗೂ ಮನವಿ ನೀಡಿದರೂ ಯಾವುದೇ ಪ್ರಯೋಜನ ಆಗಿಲ್ಲ. ಅಪಾರ್ಟ್‌ಮೆಂಟ್‌ನ 110 ಮನೆಗಳ ಪೈಕಿ 25 ಮನೆಗಳಲ್ಲಿ ಹಿರಿಯ ನಾಗರಿಕರೇ ಇದ್ದಾರೆ. ಸಮರ್ಪಕ ನೀರು ಪೂರೈಸದ ವ್ಯವಸ್ಥೆ ಬಗ್ಗೆ ನಮಗೆ ಬೇಸರ ಬಂದುಹೋಗಿದೆ. ಇನ್ನಾದರೂ ಮನಸ್ಸು ಮಾಡಿ ಮಹಾನಗರ ಪಾಲಿಕೆ ಅಧಿಕಾರಿಗಳು ನಮ್ಮ ನೀರಿನ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು.



■ **ಚಂದ್ರ ಹೆಬ್ಬಾರ್,** ಕುಲಶೇಖರ ಸರಿಪಲ್ಲ ರಸ್ತೆ ರೆಡ್‌ಬ್ರಿಕ್ಸ್ ಫೇಸ್ 3 ಅಪಾರ್ಟ್‌ಮೆಂಟ್ ನಿವಾಸಿ

ಪದವು ಪೂರ್ವ ವಾರ್ಡ್ ದೊಡ್ಡ ವಾರ್ಡ್ ಆಗಿದ್ದು, ಮೂರು ಟ್ಯಾಂಕ್‌ನಿಂದ ಹಂಚಿಕೆ ಮಾಡಿ ನೀರು ನೀಡಲಾಗುತ್ತಿದೆ. ನಮ್ಮ ವಾರ್ಡ್ ಅತಿ ಹೆಚ್ಚು ಎತ್ತರ– ತಗ್ಗು ಪ್ರದೇಶ ಒಳಗೊಂಡಿದೆ. ಇದರಿಂದಾಗಿ ಕೆಲವೆಡೆ ನೀರು ಪೂರೈಕೆಯಲ್ಲಿ ವ್ಯತ್ಯಯ ಆಗುತ್ತಿದೆ. ಫ್ಲ್ಯಾಟ್ ನಿವಾಸಿಗಳು ಖಾಸಗಿ ಟ್ಯಾಂಕರ್ ಮೂಲಕ ನೀರು ತರಿಸಿಕೊಳ್ಳುತ್ತಿದ್ದಾರೆ. ಮನಪಾ ಟ್ಯಾಂಕರ್ ಮೂಲಕ ನೀರು ಒದಗಿಸುತ್ತಿಲ್ಲ. ಸರಿಪಳ್ಳ ಉಮಿಕಾನ ಬಳಿ ರೈಲ್ವೆ ಇಲಾಖೆ ಜಾಗದಲ್ಲಿ ನೀರಿನ ಪೈಪ್ ಅಳವಡಿಕೆಗೆ ರೈಲ್ವೆ ಇಲಾಖೆ ಸಹಕಾರ ನೀಡುತ್ತಿಲ್ಲ. ಇಲ್ಲಿ ರಸ್ತೆ ನಿರ್ಮಾಣಕ್ಕಾಗಿ 1.40 ಕೋಟಿ ರೂ., ಡ್ರೈನೇಜ್‌ಗೆ 30 ಲಕ್ಷ ರೂ. ಈಗಾಗಲೇ ರೈಲ್ವೆಗೆ ಪಾವತಿಸಲಾಗಿದೆ. ಈಗ ಮತ್ತೆ ನೀರಿನ ಪೈಪ್ ಲೈನ್ ಅಳವಡಿಸಲು ಹಣ ಕೇಳುತ್ತಿದ್ದಾರೆ. ರೈಲ್ವೆ ಮತ್ತು ಹೆದ್ದಾರಿ ಇಲಾಖೆ ದೇಶದಿಂದ ಹೊರಗೆ ಇರುವಂತೆ ವರ್ತಿಸುತ್ತಿವೆ.



■ **ಭಾಸ್ಕರ್ ಕೆ. ,** ಪದವು ಪೂರ್ವ ವಾರ್ಡ್ ನಿಕಟಪೂರ್ವ ಕಾರ್ಪೊರೇಟರ್

ಮುಂದಿನ ವಾರ್ಡ್ –37
ಮರೋಳಿ ಪರಿಸರದ ಸ್ಥಿತಿಗತಿ

ಸರ್ಕಾರದ ತೆರಿಗೆ ಸುಲಿಗೆಗೆ ಕೊನೆಯಿಲ್ಲವೇ?: ಛಲವಾದಿ



ಬೆಂಗಳೂರು: ಕರ್ನಾಟಕದಲ್ಲಿ ಎಲೆಕ್ಟ್ರಿಕ್ ವಾಹನಗಳಿಗೆ ರಸ್ತೆ ತೆರಿಗೆ ವಿನಾಯ್ತಿಯನ್ನು ಹಿಂಪಡೆದಿರುವುದನ್ನು ಖಂಡಿಸಿರುವ ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸರ್ಕಾರದ ತೆರಿಗೆ ಸುಲಿಗೆಗೆ ಕೊನೆಯಿಲ್ಲವೇ? ಎಂದು ಪ್ರಶ್ನಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಕರ್ನಾಟಕದ ಜನತೆಗೆ ಬೆಲೆ ಏರಿಕೆಯ ಮೇಲೆ ಬೆಲೆ ಏರಿಕೆಯ ಬರೆ ಎಳೆಯುತ್ತಾ ಸಂಕಷ್ಟದ ಗ್ಯಾರಂಟಿ ನೀಡುತ್ತಿರುವ ಕಾಂಗ್ರೆಸ್ ಸರ್ಕಾರ, ಈಗ ಪರಿಸರ ಸ್ನೇಹಿ ಎಲೆಕ್ಟ್ರಿಕ್ ವಾಹನ(ಇವಿ)ಗಳ ಮೇಲೂ ತನ್ನ ಬೆಲೆ ಏರಿಕೆಯ ಕಣ್ಣು ಹಾಕಿದೆ. ಕಳೆದ ಎಂಟು ವರ್ಷಗಳಿಂದ ಇದ್ದ ಶೇ.100 ರಸ್ತೆ ತೆರಿಗೆ ವಿನಾಯಿತಿಗೆ ರಾಜ್ಯ ಸರ್ಕಾರ ಈಗ ಅಧಿಕೃತವಾಗಿ ತಿಲಾಂಜಲಿ ಹಾಡಿದೆ! ಎಂದಿದ್ದಾರೆ.

ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ... ಎನ್ನುವಂತೆ, ಪರಿಸರ ಉಳಿಸುವ ಮಾತುಗಳನ್ನಾಡುವ ಸರ್ಕಾರ, ತನ್ನ ಬೊಕ್ಕಸ ತುಂಬಿಸಿಕೊಳ್ಳಲು ಪರಿಸರ ಸ್ನೇಹಿ ವಾಹನಗಳನ್ನೇ ದುಬಾರಿ ಮಾಡುತ್ತಿರುವುದು ವಿಪರ್ಯಾಸವೇ ಸರಿ ಎಂದು ಟೀಕಿಸಿದ್ದಾರೆ. ಕರ್ನಾಟಕದಲ್ಲಿ 2016 ರಿಂದ ಎಲೆಕ್ಟ್ರಿಕ್ ವಾಹನಗಳ ಬಳಕೆಯನ್ನು ಪ್ರೋತ್ಸಾಹಿಸಲು ಎಲ್ಲಾ ಇವಿಗಳಿಗೆ ರಸ್ತೆ ತೆರಿಗೆಯಿಂದ ಸಂಪೂರ್ಣ ವಿನಾಯಿತಿ ನೀಡಲಾಗಿತ್ತು. ಇದನ್ನು 2024 ರಲ್ಲಿ ಬದಲಾಯಿಸಿ, ಕೇವಲ 25 ಲಕ್ಷ ರೂ. ಮೇಲ್ಪಟ್ಟ ವಾಹನಗಳಿಗೆ ತೆರಿಗೆ ವಿಧಿಸಲು ಕಾಂಗ್ರೆಸ್ ಸರ್ಕಾರವೇ ಆರಂಭಿಸಿತು.

ರಾಮ ಬಾಣ



ಮಹಿಳಾ ಮೀಸಲು ಜಾರಿಗೆ ಸಕಾಲ

ಪುಟ ೧➡ **ಸಂಸತ್ತಿನ ವಿಶೇಷ ಅಧಿವೇಶನ:** ಬಜೆಟ್ ಅಧಿವೇಶನದ ವಿಸ್ತರಣೆಯ ಬೆನ್ನಲ್ಲೇ ಏ.16 ರಿಂದ 18ರವರೆಗೆ ಮೂರು ದಿನಗಳ ಸಂಸತ್ತಿನ ವಿಶೇಷ ಸಭೆಯನ್ನು ನಿಗದಿಪಡಿಸಲಾಗಿದೆ. ಉದ್ದೇಶಿತ ತಿದ್ದುಪಡಿಗಳು ಈ ಕಾನೂನಿನ ಜಾರಿ ಪ್ರಕ್ರಿಯೆಯನ್ನು ವೇಗಗೊಳಿಸುವ ಗುರಿ ಹೊಂದಿವೆ. ಈ ಪ್ರಸ್ತಾವನೆಯಲ್ಲಿ ಲೋಕಸಭೆಯ ಒಟ್ಟು ಸ್ಥಾನಗಳ ಸಂಖ್ಯೆ 816ಕ್ಕೆ ಏರಿಕೆಯಾಗಲಿದ್ದು, ಅದರಲ್ಲಿ 273 ಸ್ಥಾನಗಳು ಮಹಿಳೆಯರಿಗೆ ಮೀಸಲಿಡಲಾಗುವುದು. 2023ರ ಸಾಂವಿಧಾನಿಕ ತಿದ್ದುಪಡಿಯ ಮೂಲಕ ಜಾರಿಗೆ ಬಂದ ಮೂಲ ನಿಬಂಧನೆ ಶೇ.33ರಷ್ಟು ಮೀಸಲಾತಿಯನ್ನು ಕಡ್ಡಾಯಗೊಳಿಸುತ್ತದೆ.

ಇಂದು ಮೋದಿ ಭಾಷಣ

ಹೊಸದಿಲ್ಲಿಯ ವಿಜ್ಞಾನ ಭವನದಲ್ಲಿ ಸೋಮವಾರ ಆಯೋಜಿಸಿರುವ ರಾಷ್ಟ್ರ ಮಟ್ಟದ ನಾರೀಶಕ್ತಿ ವಂದನ ಸಮ್ಮೇಳನ ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಮಾತನಾಡಲಿದ್ದಾರೆ.

ಬದಲಾವಣೆಯ ಅಗತ್ಯತೆ

ಅಸ್ತಿತ್ವದಲ್ಲಿರುವ ಚೌಕಟ್ಟಿನ ಪ್ರಕಾರ, ಈ ಮೀಸಲಾತಿ 2034ಕ್ಕಿಂತ ಮೊದಲು ಜಾರಿಯಾಗುವ ಸಾಧ್ಯತೆ ಇರಲಿಲ್ಲ. ಆದ್ದರಿಂದ 2029ರ ಚುನಾವಣೆಯಿಂದಲೇ ಇದನ್ನು ಜಾರಿಗೆ ತರಲು ಸರ್ಕಾರ ಈಗ ತಿದ್ದುಪಡಿ ತರುತ್ತಿದೆ. ತಜ್ಞರು ಮತ್ತು ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಲಾಗಿದ್ದು, ಈ ಕಾನೂನನ್ನು ಆದಷ್ಟು ಬೇಗ ಜಾರಿಗೆ ತರಬೇಕು ಎಂಬ ಬಗ್ಗೆ ಒಮ್ಮತವಿದೆ ಎಂದು ಉಲ್ಲೇಖಿಸಿದ್ದಾರೆ.

ಟಿಸಿಎಸ್‌ನ ಸಿಬ್ಬಂದಿ ಅಮಾನತು

ಪುಟ ೧➡ **ಎಸ್‌ಐಟಿ ತನಿಖೆ:** ಕಳೆದ ವಾರ ನಾಸಿಕ್ ಪೊಲೀಸರು ಈ ಪ್ರಕರಣದ ತನಿಖೆಗಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದ್ದಾರೆ. ಮಹಾರಾಷ್ಟ್ರ ಮುಖ್ಯಮಂತ್ರಿ ಹಾಗೂ ಗೃಹ ಮಂತ್ರಿ ದೇವೇಂದ್ರ ಫಡ್ನವೀಸ್ ಈ ಘಟನೆಯನ್ನು ಅತ್ಯಂತ ಗಂಭೀರ ಎಂದು ಬಣ್ಣಿಸಿ, ಇದನ್ನು ಬಯಲು ಮಾಡಿದ ನಾಸಿಕ್ ಪೊಲೀಸರನ್ನು ಶ್ಲಾಘಿಸಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ನಾನು ಯುಗಾದಿ, ಶಿವರಾತ್ರಿಯಂದು ಮಾಂಸ ತಿನ್ನುತ್ತೇನೆ, ಅದರಲ್ಲಿ ಏನು ತಪ್ಪು?
– ಸಿದ್ದರಾಮಯ್ಯ

-ಯಾರಾದರೂ ನಾನು ಮದ್ಯಪಾನ ಮಾಡುತ್ತೇನೆ ಅಥವಾ ಧೂಮಪಾನ, ಗುಟ್ಕಾ ಸೇವನೆ ಮಾಡುತ್ತೇನೆ , ಅದರಲ್ಲಿ ಏನು ತಪ್ಪು ಅಂತ ವಾದಿಸಿದರೆ ಉತ್ತರಿಸುವ ಅಗತ್ಯವಿಲ್ಲ, ಮುಂದೆ ಅದರ –ಲವನ್ನು ಅನುಭವಿಸುವಾಗ ಉತ್ತರ ಅವರಿಗೇ ಸಿಗುತ್ತೆ!

ದಿನ ಭವಿಷ್ಯ

ಮೇಷ ನಿಮ್ಮ ವ್ಯವಹಾರದಲ್ಲಿ ದೊಡ್ಡ ಹೆಜ್ಜೆ ಇಡಲು ಸಕಾಲ. ಗ್ರಹಗತಿ ನಿಮಗೆ ಪೂರಕವಾಗಿದೆ. ಕೌಟುಂಬಿಕ ಸಹಕಾರ. ಆರ್ಥಿಕ ಉನ್ನತಿ ಸಾಧ್ಯ.

ವೃಷಭ ಶಾಂತ ಮನಸ್ಸು. ಹಾಗಾಗಿ ಸೂಕ್ತ ನಿರ್ಧಾರ ತಾಳಲು ಪೂರಕ ಪರಿಸ್ಥಿತಿ. ಹಣದ ವ್ಯವಹಾರ ಲಾಭ ತರಲಿದೆ. ಕೌಟುಂಬಿಕ ಸಮಸ್ಯೆ ಪರಿಹಾರ.

ಮಿಥುನ ಎಂದಿನಂತಲ್ಲದೆ ವಿಭಿನ್ನವಾದ ದಿನ. ಹೊಸತನಕ್ಕೆ ತುಡಿತ. ನಿಮ್ಮ ಯೋಜನೆ ಜಾರಿಗೆ ತರಲು ಅಡ್ಡಿಗಳು ಬರಲಾರವು. ಎಲ್ಲ ಸುಸೂತ್ರವಾಗಲಿದೆ.

ಕಟಕ ನಿಮಗೆ ಪೂರಕ ದಿನ. ತ್ವರಿತ ಕಾರ್ಯಸಿದ್ಧಿ. ವೈಯಕ್ತಿಕ ಬದುಕಲ್ಲಿ ಸಂತೋಷ, ನೆಮ್ಮದಿ. ವೃತ್ತಿಯಲ್ಲೂ ಬಯಸಿದ ಗುರಿ ನೆರವೇರುವುದು.

ಸಿಂಹ ನಿಮ್ಮ ಬದುಕಲ್ಲಿ ಕೆಲವಾರು ಬೆಳವಣಿಗೆ ಸಂಭವಿಸಬಹುದು. ಅನಿರೀಕ್ಷಿತ ಧನಲಾಭ. ಹಳೆ ಸ್ನೇಹಿತರ ಭೇಟಿ. ಏಕಾಂಗಿಗಳಿಗೆ ಸಂಗಾತಿ ಲಭ್ಯ.

ಕನ್ಯಾ ಎಂದಿಗಿಂತ ಕಡಿಮೆ ಕಾರ್ಯದೊತ್ತಡ. ನಿಮ್ಮ ನಿರ್ವಹಣೆಗೆ ಶ್ಲಾಘನೆ. ಆದರೆ ಖಾಸಗಿ ಚಿಂತೆ ಕಾಡಲಿದೆ. ಆರೋಗ್ಯ ಸಮಸ್ಯೆ ಕಡೆಗಣಿಸಬೇಡಿ.

ತುಲಾ ಮಹತ್ತರ ಕಾರ್ಯದ ಹೊಣೆ ಬೀಳಲಿದೆ. ಆರಂಭಿಕ ಅಡ್ಡಿ ಬಂದರೂ ಬಳಿಕ ಎಲ್ಲ ಸುಗಮ. ಆದರೂ ಮನದೊಳಗೆ ಏನೋ ಕೊರತೆ ಕಾಡಲಿದೆ.

ವೃಶ್ಚಿಕ ಸಾಧನೆಯಲ್ಲಿ ಸ್ವಂತ ಗುರುತು ಮೂಡಿಸಲು ಸೂಕ್ತ ಅವಕಾಶ ಸಿಗಲಿದೆ. ಇತರರ ಹಂಗಿಗೆ ಬೀಳದಂತೆ ವರ್ತಿಸಿ. ಎಲ್ಲರ ಸಹಕಾರ.

ಧನು ಇಂದು ಸುಗಮವಾಗಿ ಕಾರ್ಯ ಸಾಗದು. ಪದೇಪದೇ ಅಡ್ಡಿ. ಮುಖ್ಯ ಕಾರ್ಯಕ್ಕೆ ಕೈ ಹಾಕಬೇಡಿ. ದಂಪತಿಗಳ ಮಧ್ಯೆ ಭಿನ್ನಮತ ಸಾಧ್ಯತೆ.

ಮಕರ ನಿಮ್ಮ ಕಾರ್ಯದ ಮೇಲೆ ನಂಬಿಕೆ ಇರಲಿ. ಇತರರನ್ನು ಮೆಚ್ಚಿಸುವ ವ್ಯರ್ಥ ಪ್ರಯತ್ನ ಬಿಡಿ. ಮನೆಯಲ್ಲಿ ವಾಗ್ವಾದಕ್ಕೆ ಅವಕಾಶ ಕೊಡದಿರಿ.

ಕುಂಭ ಕೆಲವು ವಿಷಯ ಚಿಂತೆಗೆ ಕಾರಣವಾಗಲಿದೆ. ಸಣ್ಣ ವಿಷಯವನ್ನೂ ಅಧಿಕವಾಗಿ ಚಿಂತಿಸುವಿರಿ. ಗುರಿಯಿಂದ ಲಕ್ಷ್ಯ ವಿಚಲಿತವಾಗದಿರಲಿ.

ಮೀನ ಹಣದ ಕೊರತೆ ಎದುರಿಸುವಿರಿ. ಕೆಲಸ ವಿಳಂಬ. ಒತ್ತಡ ಅಧಿಕ. ಇದರಿಂದ ದೇಹಾಲಸ್ಯ. ಧ್ಯಾನ, ದೇವರ ಪ್ರಾರ್ಥನೆ ನೆಮ್ಮದಿ ತಂದೀತು.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 5,1,7,3

ಬಿಜೆಪಿಯಿಂದ ಮಿಸ್ಡ್ ಕಾಲ್ ಅಭಿಯಾನ | ಮಹಿಳೆಯರ ಸಹಿ ಸಂಗ್ರಹ

ಜಾಲತಾಣದಲ್ಲಿ ನಾರೀಶಕ್ತಿ ವಿಧೇಯಕದ ಬಗ್ಗೆ ಅರಿವು

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಮಹಿಳೆಯರ ದಶಕಗಳ ಕಾಲದ ಕನಸ್ಸನ್ನು ನನಸು ಮಾಡಲು ಹೊರಟಿದ್ದು, ನಾರಿ ಶಕ್ತಿ ವಂದನಾ ಅಧಿನಿಯಮವನ್ನು ಬೆಂಬಲಿಸಿ ರಾಜ್ಯ ಬಿಜೆಪಿ ವಿವಿಧ ಅಭಿಯಾನ ನಡೆಸುತ್ತಿದೆ. ಅಲ್ಲದೇ ಸಾಮಾಜಿಕ ಜಾಲತಾಣದಲ್ಲಿ ಮಸೂದೆಯ ಕುರಿತು ಮಾಹಿತಿ ಹಂಚುತ್ತಿದೆ.

ಮಹಿಳೆಯರಿಗೆ ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮೀಸಲಾತಿ ನೀಡಲು ಪ್ರಧಾನಿ ನರೇಂದ್ರ ಮೋದಿ ಸರ್ಕಾರವೇ ಬರಬೇಕಾಯಿತು. ದಶಕಗಳ ಕಾಲ ಧೂಳು ಹಿಡಿಯುತ್ತಿದ್ದ ಮಹಿಳಾ ಮೀಸಲಾತಿ ವಿಧೇಯಕಕ್ಕೆ ನಾರಿ ಶಕ್ತಿ ವಂದನ್ ಅಧಿನಿಯಮ ಮೂಲಕ ಜೀವ ತುಂಬುತ್ತಿದ್ದು ಪ್ರಧಾನಿ ಮೋದಿ ಸರ್ಕಾರದ ಬದ್ಧತೆಗೆ ಸಾಕ್ಷಿ. ನಾರಿ ಶಕ್ತಿ ವಂದನಾ ಅಧಿನಿಯಮ ಜಾರಿಗೆ ತರುವ ಮೂಲಕ ಇನ್ನು ಮುಂದೆ ಲೋಕಸಭೆ ಹಾಗೂ ವಿಧಾನಸಭೆಯಲ್ಲಿ ಶೇ.33 ರಷ್ಟು ಸ್ಥಾನಗಳು ಮಹಿಳೆಯರಿಗೆ ಮೀಸಲಾಗಲಿವೆ ಎಂದು ರಾಜ್ಯ ಬಿಜೆಪಿ ತಿಳಿಸಿದೆ. ಇತಿಹಾಸವು ಕೇವಲ ದಿನಾಂಕಗಳಿಂದಲ್ಲ, ದೃಢ ನಿರ್ಧಾರಗಳಿಂದ ಬರೆಯಲ್ಪಡುತ್ತದೆ. ದಶಕಗಳ ಕಾಲ ಮಹಿಳಾ ಮೀಸಲಾತಿ ಮಸೂದೆ ಕೇವಲ ಭರವಸೆ ಹಾಗೂ ಚರ್ಚೆಗಳಿಗೆ ಸೀಮಿತವಾಗಿತ್ತು. 1996ರಿಂದ 2014ರ ವರೆಗೆ ಎಷ್ಟೇ ಪ್ರಯತ್ನಗಳಾದರೂ ಮಂಡನೆಯಾದರೂ ಫಲಿತಾಂಶ ಮಾತ್ರ ಶೂನ್ಯವಾಗಿತ್ತು. ಆದರೆ, 2023ರಲ್ಲಿ ನಾರಿ ಶಕ್ತಿ ವಂದನ ಅಧಿನಿಯಮ ಜಾರಿಗೆ ತರುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ 30 ವರ್ಷಗಳ ಕಾಯುವಿಕೆಗೆ ಅಂತ್ಯ ಹಾಡಲಾಗುತ್ತಿದೆ. ಇದು ಕೇವಲ ಸಮಯ ಅಥವಾ ಬಹುಮತದ ಪ್ರಶ್ನೆಯಲ್ಲ, ಇದು ಬಲವಾದ ಸಂಕಲ್ಪದ ಪ್ರಶ್ನೆಯಾಗಿತ್ತು. ಇಂದು ಮಹಿಳೆಯರ ಕನಸು ನನಸಾಗುತ್ತಿದೆ ಎಂದು ಬಣ್ಣಿಸಿದೆ.

ದೇಶಕ್ಕೆ ಸ್ವಾತಂತ್ರ್ಯ ಬಂದ ಬಳಿಕ ಸಂಸತ್ತು ಮತ್ತು ವಿಧಾನಸಭೆಯಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ನಿಟ್ಟಿನಲ್ಲಿ ಯಾವುದೇ ಪ್ರಧಾನಿಯೂ ಗಮನಾರ್ಹವಾಗಿ ಕೆಲಸ ಮಾಡಿಲ್ಲ. ಆದರೆ, ಪ್ರಧಾನಿ ಮೋದಿ ಅವರು ಬೇಟಿ ಬಚಾವೋ ಬೇಟಿ ಪಢಾವೋನಿಂದ ಹಿಡಿದು ನಾರಿ ಶಕ್ತಿ ವಂದನಾ ಅಧಿನಿಯಮದ ತನಕ ಮಹಿಳಾ ಸಶಕ್ತೀಕರಣಕ್ಕಾಗಿ ಶ್ರಮಿಸಿದ್ದಾರೆ ಎಂದು ಬಿಜೆಪಿ ಹೇಳಿದೆ.

ಸಹಿ ಸಂಗ್ರಹ ಅಭಿಯಾನ

ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ಖಚಿತಪಡಿಸಲು ಮತ್ತು ಆಡಳಿತ ಮತ್ತು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಅವರ ಪಾತ್ರವನ್ನು ಬಲಪಡಿಸಲು ನಾರಿ ಶಕ್ತಿ ವಂದನಾ ಅಧಿನಿಯಮಕ್ಕೆ ಬೆಂಬಲ ವ್ಯಕ್ತಪಡಿಸಿ ಮಹಿಳಾ ಮೋರ್ಚಾದಿಂದ ಭಾನುವಾರ ಸಹಿ ಸಂಗ್ರಹ ಅಭಿಯಾನ ಪ್ರಾರಂಭವಾಯಿತು. ಬೆಂಗಳೂರಿನ ಕೆ.ಆರ್. ಪುರದಲ್ಲಿ ಕೇಂದ್ರ ಸಚಿವ ಶೋಭಾ ಕರಂದ್ಲಾಜೆ ಅವರ ನೇತೃತ್ವದಲ್ಲಿ ಈ ಸಹಿ ಸಂಗ್ರಹ ಅಭಿಯಾನ ಶುರುವಾಗಿದ್ದು, ರಾಜ್ಯಾದ್ಯಂತ ನಡೆಯಿತು.

> **ಪ್ರಧಾನಿ ಮೋದಿ ಅವರ ದೂರದೃಷ್ಟಿಯ ನಾಯಕತ್ವದಲ್ಲಿ ಈ ಸುಧಾರಣೆಯು, ವಿವಿಧ ಕ್ಷೇತ್ರಗಳಲ್ಲಿ ನಾಯಕತ್ವದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುತ್ತದೆ. ದೇಶಾದ್ಯಂತ ಮಹಿಳೆಯರು ಮುಂದೆ ಬಂದು ಈ ಐತಿಹಾಸಿಕ ಹೆಜ್ಜೆಯನ್ನು ಬೆಂಬಲಿಸಬೇಕೆಂದು ನಾನು ಒತ್ತಾಯಿಸುತ್ತೇನೆ.**
> ■ ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

> **ಪ್ರಧಾನಿ ನರೇಂದ್ರ ಮೋದಿ ಅವರು ವಿಕಸಿತ ಭಾರತದಲ್ಲಿ ಮಹಿಳೆಯರಿಗೂ ಅವಕಾಶ, ಅಧಿಕಾರ ಕಲ್ಪಿಸುವ ಸಂಕಲ್ಪ ಹೊಂದಿದ್ದಾರೆ. ಈ ನಿಟ್ಟಿನಲ್ಲಿ ನಾರಿ ಶಕ್ತಿ ವಂದನಾ ಅಧಿನಿಯಮ ಹೆಸರಿನಲ್ಲಿ ಮಹಿಳೆಯರಿಗೆ ವಿಶೇಷ ಆದ್ಯತೆ ನೀಡುತ್ತಿದ್ದಾರೆ. ಮಹಿಳಾ ಮೀಸಲಾತಿಗೆ ದಿಟ್ಟ ಹೆಜ್ಜೆ ಇಟ್ಟಿರುವ ಮೋದಿ ಸರ್ಕಾರಕ್ಕೆ ವಂದನೆಗಳು.**
> ■ ಸಿ. ಮಂಜುಳಾ, ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷೆ

2028ಕ್ಕೆ ಮೊದಲ ಅಂತರಿಕ್ಷ ನಿಲ್ದಾಣ

ಬೆಂಗಳೂರು: ಭಾರತೀಯ ಅಂತರಿಕ್ಷ ನಿಲ್ದಾಣದ ಮೊದಲ ಮಾಡ್ಯೂಲ್ 2028ಕ್ಕೆ ಸಿದ್ಧಗೊಳ್ಳಲಿದೆ ಎಂದು ಇಸ್ರೋ ಅಧ್ಯಕ್ಷ ಡಾ.ವಿ.ನಾರಾಯಣನ್ ವಿಶ್ವಾಸ ವ್ಯಕ್ತಪಡಿಸಿದರು.

ಅಂಚೆ ಇಲಾಖೆ ವತಿಯಿಂದ ಭಾನುವಾರ ಮೇಘದೂತ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ಭಾರತದ ಮಾನವ ಸಹಿತ ಬಾಹ್ಯಾಕಾಶ ಕಾರ್ಯಕ್ರಮದ ಅಂಗವಾಗಿ, ವಿಶೇಷ ಅಂಚೆ ಚೀಟಿ ಬಿಡುಗಡೆ ಮಾಡಿ ಬಳಿಕ ಮಾತನಾಡಿದ ಅವರು, ಭಾರತವು 2035ರ ವೇಳೆಗೆ ಭಾರತೀಯ ಅಂತರಿಕ್ಷ ನಿಲ್ದಾಣದ ಐದು ಮಾಡ್ಯೂಲ್‌ಗಳನ್ನು ಸ್ಥಾಪಿಸಲು ಯೋಜಿಸಿದೆ. ಸುಮಾರು 52 ಟನ್ ತೂಕದ ಭಾರತೀಯ ಬಾಹ್ಯಾಕಾಶ ನಿಲ್ದಾಣವಾಗಲಿದೆ. ಮೊದಲ ಮಾಡ್ಯೂಲ್ 2028ರ ವೇಳೆಗೆ ಸಿದ್ಧಗೊಳ್ಳಲಿದೆ ಎಂದು ಹೇಳಿದರು. ಪ್ರಧಾನಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ಬಹಳಷ್ಟು



ಚಟುವಟಿಕೆಗಳು ನಡೆಯುತ್ತಿವೆ. ಸದ್ಯ ನಾವು ಗಗನಯಾನ ಕಾರ್ಯಕ್ರಮದಲ್ಲಿ ಕೆಲಸ ಮಾಡುತ್ತಿದ್ದೇವೆ. ದಯವಿಟ್ಟು ದಿನಾಂಕ ಯಾವಾಗ ಎಂದು ನನ್ನನ್ನು ಕೇಳಬೇಡಿ. ಇದು ತಂತ್ರಜ್ಞಾನ-ತೀವ್ರ ಕಾರ್ಯಕ್ರಮವಾಗಿದೆ. ನಾವು ಸಮಸ್ಯೆಗಳನ್ನು ಪರಿಹರಿಸುತ್ತಿದ್ದೇವೆ, ಮುಂದುವರಿಯುತ್ತಿದ್ದೇವೆ ಮತ್ತು ಪ್ರತಿ ಹಂತದಲ್ಲೂ ಯಶಸ್ವಿಯಾಗುತ್ತಿದ್ದೇವೆ. ನಾವು ಮೊದಲು ಸಿಬ್ಬಂದಿ ಇಲ್ಲದ ಮೂರು ಕಾರ್ಯಾಚರಣೆಗಳನ್ನು ಪೂರ್ಣಗೊಳಿಸಿದ ನಂತರ, ಸಿಬ್ಬಂದಿ ಇರುವ ಕಾರ್ಯಾಚರಣೆಗೆ ಹೋಗಲು ಯೋಜಿಸಿದ್ದೇವೆ ಎಂದರು.

ಸಾಧನೆಗೆ ಮಿತಿಯಿಲ್ಲ: ಶುಭಾಂಶು ಶುಕ್ಲಾ

ಆಕಾಶಕ್ಕೆ ಮಿತಿ ಇಲ್ಲ. ನನಗೂ, ನಿಮಗೂ, ಭಾರತಕ್ಕೂ ಸಾಧನೆ ಮಾಡಲು ಮಿತಿಯಿಲ್ಲ. ಆದರಿಂದ ಮಕ್ಕಳೇ ನೀವೇ ಮಿತಿ ಹಾಕಿಕೊಳ್ಳದೇ, ವಿಶಾಲವಾಗಿ ಚಿಂತನೆಯನ್ನು ಇಟ್ಟುಕೊಂಡು ಸಾಧನೆ ಮಾಡಬೇಕು. ನಾನು ಬಾಹ್ಯಾಕಾಶಯಾನ ಮುಗಿಸಿ ಬಂದಾಗ ಬಹುತೇಕರ ಪ್ರಶ್ನೆ ಏನು ತಿಂದ್ರಿ? ಹೇಗೆ ನಿದ್ರೆ ಮಾಡಿದ್ದೀರಿ ಎಂಬುದೇ ಆಗಿತ್ತು. ಪ್ರಶ್ನೆ ತಪ್ಪಲ್ಲ. ಆದರ ಜೊತೆಗೆ ನಮ್ಮ ಯೋಚನೆಗಳು ಇನ್ನಷ್ಟು ವಿಸ್ತಾರ ಇರಬೇಕು. ಒಂದು ಹಳ್ಳಿಗಾಡಿನಿಂದ ಬಂದ ನಿಮಗೆ ಬಾಹ್ಯಾಕಾಶ ಯಾನ ಮಾಡಲು ಹೇಗೆ ಸಾಧ್ಯವಾಯಿತು ಎಂದು ಕೆಲವರು ಕೇಳಿದರು. ಮೊದಲ ಪ್ರಶ್ನೆಗಳಿಗಿಂತ ಇದುವೇ ಸ್ಫೂರ್ತಿಯಾಗಬಲ್ಲದು ಎಂದು ಗಗನಯಾನ ಯಾತ್ರಿ ಶುಭಾಂಶು ಶುಕ್ಲಾ ಹೇಳಿದರು.

ಆನೆ ದಾಳಿಗೆ ವ್ಯಕ್ತಿ ಬಲಿ

ಪುಟ ೧➡ ತೋಟದಲ್ಲಿ ಕೆಲಸ ಮಾಡಲು ಮುಂದಾ ದಾಗ, ಹಿಂದಿನಿಂದ ಬಂದ ಕಾಡಾನೆಯೊಂದು ದಾಳಿ ನಡೆಸಿದೆ. ದಾಳಿಯ ವೇಳೆ ಕಾಡಾನೆ ತನ್ನ ಸೊಂಡಿಲಿನಿಂದ ಎತ್ತಿ ಬಿಸಾಡಿ, ನಂತರ ತುಳಿದು ಹತ್ಯೆ ಮಾಡಿರುವುದಾಗಿ ತಿಳಿದುಬಂದಿದೆ

ಘಟನೆಯ ಬಳಿಕ ರಾಜಶೆಟ್ಟಿಯ ಮೃತದೇಹದ ಸ್ವಲ್ಪ ದೂರದಲ್ಲೇ ಕಾಡಾನೆ ನಿಂತಿರುವುದು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ. ಸುದ್ದಿ ತಿಳಿದು ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಘಟನೆ ಅರೇಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದು, ಬೇಲೂರು ವಲಯ ಅರಣ್ಯಾಧಿಕಾರಿಗಳು ಪ್ರಕರಣ ದಾಖಲಿಸಿಕೊಂಡಿದ್ದಾರೆ.

6 ತಿಂಗಳಲ್ಲಿ ಎರಡನೇ ಸಾವು: ಕಳೆದ 6 ತಿಂಗಳ ಹಿಂದೆ ಇದೇ ಗ್ರಾಮದಲ್ಲಿ ಕಾಡಾನೆ ದಾಳಿಗೆ ದ್ಯಾವಮ್ಮ ಎಂಬುವರು ಮೃತಪಟ್ಟಿದ್ದರು. ಈ ವೇಳೆ ಕಾಡಾನೆಗಳನ್ನು ಸ್ಥಳಾಂತರ ಮಾಡಬೇ ಕೆಂದು ಅರೆಹಳ್ಳಿ ರಸ್ತೆ ತಡೆ ಚಳವಳಿ ಮಾಡಿ ಪ್ರತಿಭಟನೆ ಮಾಡಿದ್ದೆವು. ಆದಾದ ಬಳಿಕ ರೈತರ ಕಣ್ಣೊರೆಸುವ ನಿಟ್ಟಿನಲ್ಲಿ 4 ಕಾಡಾನೆಗಳನ್ನು ಹಿಡಿಯವು ಮೂಲಕ ಸರ್ಕಾರ ಸುಮ್ಮನಾಗಿ ಬಿಟ್ಟಿತು. ಆದರೇ ಈ ಭಾಗದಲ್ಲಿ 40ಕ್ಕೂ ಹೆಚ್ಚು ಕಾಡಾನೆಗಳು ಹಿಂಡು ಹಿಂಡಾಗಿ ಸಂಚಾರ ಮಾಡುತ್ತವೆ. ಅರಣ್ಯ ಸಚಿವ ಈಶ್ವರ್ ಖಂಡ್ರೆ ಈ ಪ್ರಕರಣದಲ್ಲಿ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದು, ರೈತರು ಬದುಕಲು ಸಾಧ್ಯವಾಗುತ್ತಿಲ್ಲ ಎಂದು ಗಂಭೀರವಾಗಿ ಆರೋಪ ಮಾಡಿದ್ದಾರೆ

ಒಟ್ಟಿನಲ್ಲಿ ಕೊಡಗು ಭಾಗದಿಂದ ಸಕಲೇಶ ಪುರದ ಭಾಗದಲ್ಲಿ ಓಡಾಡುತ್ತಿದ್ದ ಕಾಡಾನೆ ಗಳು ಈಗ ಆಹಾರ ಹುಡುಕಿಕೊಂಡು, ಅಲೆಮಾರಿ ಜೀವನ ನಡೆಸುತ್ತಿರುವ ಕಾಡಾನೆಗಳು ಬೇಲೂರು ಭಾಗದಲ್ಲಿ ಬೀಡುಬಿಟ್ಟಿದ್ದು, ಬೇಲೂರು ತಾಲ್ಲೂಕಿನಲ್ಲಿ ಕಳೆದ 2 ವರ್ಷದ ಅಂತರದಲ್ಲಿ 4 ಮಂದಿಯನ್ನು ಬಲಿ ಪಡೆದಿರುವುದು ನಿಜಕ್ಕೂ ದುರ್ದೈವದ ಸಂಗತಿಯೇ ಸರಿ. ಏ.10ರಂದು ಜಿಲ್ಲಾ ಉಸ್ತುವಾರಿ ತಾಲ್ಲೂಕಿನಲ್ಲಿ ಜನಸ್ಪಂದನ ಕಾರ್ಯಕ್ರಮ ಮಾಡುವ ಮೂಲಕ ಕಾಡಾನೆ ಹಾವಳಿಗೆ ಶಾಶ್ವತ ಪರಿಹಾರ ಕಲ್ಪಿಸುವುದಾಗಿ ಹೇಳಿದ್ದರು. ಆದರೇ ಕೇವಲ ಒಂದು ದಿನದ ಅಂತರದಲ್ಲಿಯೇ ಕಾಡಾನೆಗೆ ಮತ್ತೊಂದು ಜೀವ ಬಲಿಯಾಗಿದೆ. ಸರ್ಕಾರ ಕೂಡಲೇ ಆನೆಗಳ ಸ್ಥಳಾಂತರಕ್ಕೆ ಮುಂದಾಗದಿದ್ದರೇ, ಮತ್ತಷ್ಟು ಜೀವಗಳು ಬಲಿಯಾಗುತ್ತವೆ. ಈ ನಿಟ್ಟಿನಲ್ಲಿ ಸರ್ಕಾರ ಯಾವ ನಿರ್ಧಾರ ಕೈಗೊಳ್ಳಲಿದೆ ಎಂಬುದನ್ನು ಕಾದುನೋಡಬೇಕಿದೆ.

> **ಬೇಲೂರು ಭಾಗದಲ್ಲಿ ಕಾಡಾನೆ ಹಾವಳಿ ಮಿತಿ ಮೀರಿದೆ. ಅರಣ್ಯಾಧಿಕಾರಿಗಳು ಆನೆಗಳು ಇವೆ ಎಚ್ಚರಿಕೆ ಎಚ್ಚರಿಕೆ ಎಂದು ಹೇಳಿಕೊಂಡು ತಿರುಗುವುದು ಬಿಟ್ಟರೇ, ಯಾವ ಜಾಗದಲ್ಲಿ ನಿಖರವಾಗಿ ಆನೆಗಳಿವೆ ಎಂಬುದನ್ನು ಹೇಳುವುದಿಲ್ಲ. ಕಾಡಾನೆಗೆ ಶಾಶ್ವತವಾದ ಪರಿಹಾರ ದೊರಕಿಸಿಕೊಡುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಜರುಗಿಸಬೇಕು. ಇಲ್ಲದಿದ್ದಲ್ಲಿ ಅಹೋರಾತ್ರಿ ಪ್ರತಿಭಟನೆ ಮಾಡುವ ಮೂಲಕ ಶವ ಎತ್ತಲು ಬಿಡುವುದಿಲ್ಲ,**
> ■ ಕೆ.ಜಿ.ಕುಮಾರ್, ಮಾಜಿ ಅಧ್ಯಕ್ಷ, ಟಿಎಪಿಸಿಎಂಎಸ್, ಬೇಲೂರು.

ಹಾರ್ಮುಜ್ ದಿಗ್ಬಂಧನ

ಪುಟ ೧➡ ಅಮೆರಿಕ ಅಧ್ಯಕ್ಷ ಟ್ರಂಪ್‌ರ ಮೂಲ ಗುರಿ ಇರಾನ್ ಅಣ್ವಸ್ತ್ರ ಹೊಂದದಂತೆ ತಡೆಯುವುದೇ ಆಗಿದೆ.

ಅದನ್ನು ಈ ಮಾತುಕತೆಯ ಮೂಲಕ ಸಾಧಿಸಲು ಪ್ರಯತ್ನಿಸಿದ್ದೆವು ಎಂದು ವ್ಯಾನ್ಸ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ನಾವು ನಮ್ಮ ಅಂತಿಮ ಮತ್ತು ಉತ್ತಮ ಪ್ರಸ್ತಾಪ ಮಂಡಿಸಿದ್ದೇವೆ. ಇರಾನ್ ಅದನ್ನು ಒಪ್ಪಲಿಲ್ಲ. ಇದು ಅಮೆರಿಕಕ್ಕಿಂತ ಇರಾನ್‌ಗೇ ಹೆಚ್ಚು ನಷ್ಟದ ಸುದ್ದಿ ಎಂದು ಅವರು ಇಸ್ಲಾಮಾಬಾದ್ ತೊರೆಯುವ ಮೊದಲು ಹೇಳಿದರು. ಅಮೆರಿಕ ವಿಶೇಷ ಅಧಿಕಾರಿ ಸ್ಟೀವ್ ವಿಟ್‌ಕಾಫ್ ಮತ್ತು ಟ್ರಂಪ್‌ರ ಅಳಿಯ ಜಾರೆಡ್ ಕುಶ್ನರ್ ಕೂಡ ಅಮೆರಿಕ ತಂಡದ ಭಾಗವಾಗಿದ್ದರು.

ಮೈನ್ ತೆರವು ಕಾರ್ಯಾಚರಣೆ

ಮಾತುಕತೆ ವಿಫಲವಾದ ತಕ್ಷಣ ಟ್ರಂಪ್, ಜಾಗತಿಕ ತೈಲ ಸರಬರಾಜಿನ ಶೇ.20ರಷ್ಟನ್ನು ನಿಯಂತ್ರಿಸುವ ಹಾರ್ಮುಜ್ ಜಲಸಂಧಿಯಲ್ಲಿ ಅಮೆರಿಕ ನೌಕಾಪಡೆ ತಕ್ಷಣ ದಿಗ್ಬಂಧನ ಹೇರಲಿದೆ ಎಂದು ಘೋಷಿಸಿದರು. ಇರಾನ್‌ಗೆ ಅಕ್ರಮ ಶುಲ್ಕ ನೀಡಿ ಸಂಚರಿಸುವ ಯಾವ ಹಡಗಿಗೂ ಸಮುದ್ರದಲ್ಲಿ ಸುರಕ್ಷಿತ ಹಾದಿ ಸಿಗದು ಎಂದು ಟ್ರಂಪ್ ಎಚ್ಚರಿಕೆ ನೀಡಿದರು. ಅಮೆರಿಕ ಸೇನೆ ಎರಡು ವಿಧ್ವಂಸಕ ಹಡಗುಗಳನ್ನು ಜಲಸಂಧಿಗೆ ಕಳಿಸಿ ಮೈನ್ ತೆರವು ಕಾರ್ಯಾಚರಣೆ ಶುರು ಮಾಡಿದ್ದು, ನೀರೊಳಗಿನ ಡ್ರೋನ್‌ಗಳ ಸೇರ್ಪಡೆ ಮುಂದಿನ ದಿನಗಳಲ್ಲಿ ಆಗಲಿದೆ ಎಂದು ಅಮೆರಿಕ ಕೇಂದ್ರ ತಂಡದ ಕಮಾಂಡರ್ ಅಡ್ಮಿರಲ್ ಬ್ರ್ಯಾಡ್ ಕೂಪರ್ ತಿಳಿಸಿದರು. ಆದಾಗ್ಯೂ, ಇರಾನ್‌ನ ಸರ್ಕಾರದ ಮಾಧ್ಯಮ ಮೈನ್ ತೆರವಿಗೆ ಒಪ್ಪಿಗೆ ನೀಡಿಲ್ಲ ಎಂದು ಸ್ಪಷ್ಟಪಡಿಸಿದೆ. ಯುದ್ಧವಿರಾಮ ಶುರುವಾದ ಬಳಿಕ ಜಲಸಂಧಿ ದಾಟಿದ ಹಡಗುಗಳ ಸಂಖ್ಯೆ ದಿನಕ್ಕೆ 100ರಿಂದ ಕೇವಲ 12ಕ್ಕೆ ಇಳಿದಿದ್ದು, ಜಾಗತಿಕ ಇಂಧನ ಬೆಲೆ ಗಗನಕ್ಕೇರಿದೆ.

ಆಶಾಗಾನ ಅನಂತಯಾನ

ಪುಟ ೧➡ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಆಶಾ ಭೋಸ್ಲೆ ಅವರ ನಿಧನಕ್ಕೆ ಸಂತಾಪ ಸೂಚಿಸಿ, ಅವರ ಸಂಗೀತಯಾತ್ರೆ ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸಿದೆ ಎಂದು ಹೇಳಿದ್ದಾರೆ. ಎಂಟು ದಶಕಗಳಿಗೂ ಹೆಚ್ಚು ಕಾಲ ಗಾನ ಸೇವೆ ಸಲ್ಲಿಸಿದ ಆಶಾ ಭೋಸ್ಲೆ ಸುಮಾರು 12,000ಕ್ಕೂ ಹೆಚ್ಚು ಹಾಡುಗಳನ್ನು ಹಾಡಿದ್ದಾರೆ. 1943ರಲ್ಲಿ ಮರಾಠಿ ಚಿತ್ರ ಮಾಜಾ ಬಾಲ ಮೂಲಕ ಬಾಲ್ಯದಲ್ಲೇ ಗಾಯನ ಪ್ರಾರಂಭಿಸಿದ ಅವರು 2010ರ ದಶಕದವರೆಗೂ ಸಕ್ರಿಯರಾಗಿದ್ದರು. ಕನ್ನಡಲ್ಲೂ ಕೂಡ ಮೂರು ಹಾಡುಗಳಿಗೆ ಧ್ವನಿಯಾಗಿದ್ದಾರೆ. ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ, ಪದ್ಮ ವಿಭೂಷಣ ಸೇರಿದಂತೆ ಅನೇಕ ಗೌರವಗಳನ್ನು ಆಶಾ ಬೋಸ್ಲೆ ಪಡೆದಿದ್ದಾರೆ. ಗಾಯಕಿ ಉಷಾ ಉತ್ತುಪ್, ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಹಾಗೂ ನಟಿ ಕಾಜೋಲ್ ಸೇರಿದಂತೆ ಅನೇಕ ಗಣ್ಯರು ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಇಂದು ಅಂತ್ಯಸಂಸ್ಕಾರ

ಪುಟ ೧➡ ಸೋಮವಾರ ಬೆಳಗ್ಗೆ 11 ಗಂಟೆಯಿಂದ ಲೋಯರ್ ಪರೇಲ್‌ನಲ್ಲಿರುವ ಕಾಸಾ ಗ್ರಾಂಡೆ ನಿವಾಸದಲ್ಲಿ ಅಮ್ಮನಿಗೆ ಅಂತಿಮ ನಮನ ಸಲ್ಲಿಸಬಹುದು ಎಂದು ಆಶಾ ಭೋಸ್ಲೆ ಅವರ ಪುತ್ರ ಆನಂದ್ ಹೇಳಿದ್ದಾರೆ.

ಅಲ್ಪಸಂಖ್ಯಾತರ ಸಮಿತಿ ರದ್ದು

ಪುಟ ೧➡ ಆದರ ಬೆನ್ನಲ್ಲೇ ಅಲ್ಪಸಂಖ್ಯಾತ ಘಟಕದ ಸಮಿತಿಯನ್ನೂ ವಿಸರ್ಜನೆ ಮಾಡಿದ್ದು, ಹೊಸ ಸಮಿತಿ ರಚನೆಗೆ ಚಾಲನೆ ನೀಡಿದ್ದಾರೆ.

ಹೊಸ ಸಮಿತಿ ರಚನೆ ಶೀಘ್ರ: ಅಬ್ದುಲ್ ಜಬ್ಬಾರ್ ಅವರ ನೇತೃತ್ವದಲ್ಲಿ ರಚಿಸಲಾಗಿದ್ದ ಅಲ್ಪಸಂಖ್ಯಾತ ವಿಭಾಗದ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ವಿಸರ್ಜಿಸಲಾಗಿದೆ. ನೂತನ ಸಮಿತಿ ಶೀಘ್ರ ರಚನೆಗೆ ಕ್ರಮ ವಹಿಸಲಾಗಿದೆ ಎಂದು ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆ.

ಬಂಡಾಯಕ್ಕೆ ತಲೆದಂಡ: ದಾವಣಗೆರೆ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಷಡ್ಯಂತ್ರದ ಆರೋಪಕ್ಕೆ ಮೊದಲ ತಲೆದಂಡವಾಗಿದೆ. ಈ ನಡುವೆ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆ ನೀಡುವಂತೆ ನಸೀರ್ ಅಹ್ಮದ್ ಅವರಿಗೂ ಎಐಸಿಸಿ ಹೈಕಮಾಂಡ್ ಸೂಚನೆ ನೀಡಿದ್ದು, ಮಂಗಳವಾರ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ ನಂತರ ಮುಂದಿನ ನಿರ್ಧಾರ ಕೈಗೊಳ್ಳಲಿದ್ದಾರೆ ಎನ್ನಲಾಗಿದೆ.

ಅಬ್ದುಲ್ ಜಬ್ಬಾರ್ ವಿರುದ್ಧ ರಿಜ್ವಾನ್ ಕಿಡಿ: ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ನೀಡಿರುವ ಹೇಳಿಕೆಗೆ ಶಾಸಕ ರಿಜ್ವಾನ್ ಅರ್ಷದ್ ಕಿಡಿಕಾರಿದ್ದಾರೆ. ಜಬ್ಬಾರ್ ಅವರ ರಾಜೀನಾಮೆ ಪತ್ರದಲ್ಲಿ ಮೂರನೇ ತಾರೀಕು ಅಂತ ಇದೆ. ಬಹುಶಃ ಕಾಗ್ರೆಸ್‌ಗೆ ಹಿನ್ನಡೆ ಆಗಲಿ ಅಂತ ಆಗಲೇ ರಾಜೀನಾಮೆ ಬರೆದಿಟ್ಟುಕೊಂಡಿದ್ದೇನೋ ಗೊತ್ತಿಲ್ಲ. ನಾವು ಹೈಕಮಾಂಡ್ ಬಳಿ ಅಬ್ದುಲ್ ಜಬ್ಬಾರ್‌ಗೆ ಟಿಕೆಟ್ ಕೊಡಿ ಅಂತ ಕೇಳಿದ್ದು ತಪ್ಪಾಗಿದೆ. ಅವರ ಹೆಸರು ಹೇಳಬಾರದಿತ್ತು. ಆ ಸಭೆಯಲ್ಲಿ ಅಲ್ಪಸಂಖ್ಯಾತರ ಚಾಂಪಿಯನ್ ಅಂತ ಅನಿಸಿಕೊಂಡವರು ಟಿಕೆಟ್ ಕೊಟ್ರೆ ಅಬ್ದುಲ್ ಜಬ್ಬಾರ್‌ಗೆ ಕೊಡಿ ಅಂದರು. ಇಲ್ಲಾ ಅಂದರೆ, ಯಾರಿಗಾದ್ರೂ ಕೊಡಿ ಅಂತ ಹೇಳಿದ್ದರು, ಇದಕ್ಕೆ ಎಲ್ಲರೂ ಸಾಕ್ಷಿ ಎಂದು ಹೇಳಿದರು.

> **ಉಪ ಚುನಾವಣೆಯಲ್ಲಿ ಯಾವ ಮುಸ್ಲಿಂ ನಾಯಕರು ಹೇಗೆ ಕೆಲಸ ಮಾಡಿದ್ರು ಅಂತ ಹೈಕಮಾಂಡ್‌ಗೆ ಗೊತ್ತಿದೆ. ಯಾರು ಮತ ವಿಭಜಿಸಿ ಬಿಜೆಪಿ ಗೆಲ್ಲಿಸಬೇಕು ಅಂತ ಪ್ರಯತ್ನಪಟ್ಟರು ಎನ್ನುವುದೂ ಗೊತ್ತಿದೆ. ಅವರ ಪ್ರಯತ್ನ ಯಾವುದೂ ಪರಿಣಾಮ ಬೀರಿಲ್ಲ.**
> ■ ರಿಜ್ವಾನ್ ಅರ್ಷದ್, ಶಾಸಕ

ಅಲ್ಪಸಂಖ್ಯಾತರ ಘಟಕದಲ್ಲಿ ಸಾಮೂಹಿಕ ರಾಜೀನಾಮೆ?

ದಾವಣಗೆರೆ: ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಸ್ಥಾನಕ್ಕೆ ವಿಧಾನ ಪರಿಷತ್ ಸದಸ್ಯ ಕೆ.ಅಬ್ದುಲ್‌ಜಬ್ಬಾರ್ ರಾಜೀನಾಮೆ ನೀಡಿದ ಬೆನ್ನಲ್ಲೇ ರಾಜ್ಯ ಘಟಕದ ಪದಾಧಿಕಾರಿಗಳು, ಜಿಲ್ಲಾ ಘಟಕದವರು ಸಾಮೂಹಿಕ ರಾಜೀನಾಮೆಗೆ ಮುಂದಾಗಿದ್ದಾರೆ.

ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ಉಪಾಧ್ಯಕ್ಷ ಮೊಹಮ್ಮದ್ ಸಿರಾಜ್, ಕಾರ್ಯದರ್ಶಿಗಳಾದ ಅಬ್ದುಲ್ ಗನಿ ತಾಹೀರ್, ಹುಸೇನ್ ಉಕ್ಕಡಗಾತ್ರಿ, ಉಬೇದುಲ್ಲಾ ಅತ್ತಾರ್, ಜಿಲ್ಲಾ ಕಾರ್ಯಾಧ್ಯಕ್ಷ ಎ.ಅಬ್ದುಲ್‌ಜಬ್ಬಾರ್, ಜಿಲ್ಲಾ ಕಾರ್ಯದರ್ಶಿ ಆಸಿಫ್ ಜುನ್ಯೆದಿ ಸೇರಿದಂತೆ ಅನೇಕರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ರಾಜೀನಾಮೆ ಪತ್ರ ರವಾನಿಸುವುದಾಗಿ ತಿಳಿಸಿದ್ದಾರೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮೊಹಮ್ಮದ್ ಸಿರಾಜ್ ಮಾತನಾಡಿ, ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಉಪ ಚುನಾವಣೆಯಲ್ಲಿ ಅಲ್ಪಸಂಖ್ಯಾತ ವಿಭಾಗದವರು ಕೆ.ಅಬ್ದುಲ್ ಜಬ್ಬಾರ್ ಸಾಹೇಬರ ಮಾರ್ಗದರ್ಶನದಲ್ಲಿ ಪಕ್ಷದ ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡಿದ್ದೇವೆ. ಆದರೂ ನಮ್ಮ ರಾಜ್ಯಾಧ್ಯಕ್ಷರ ವಿರುದ್ಧ ಕೆಲ ನಾಯಕರು ಆರೋಪ ಮಾಡುವ ಮೂಲಕ ಪಕ್ಷನಿಷ್ಠೆಗೆ ಮಸಿ ಬಳಿದಿದ್ದಾರೆ. ಇದರಿಂದ ಮನನೊಂದು ಅಲ್ಪಸಂಖ್ಯಾತ ವಿಭಾಗದ ನಾಲ್ವರು ರಾಜ್ಯ ಪದಾಧಿಕಾರಿಗಳು ಹಾಗೂ ಜಿಲ್ಲಾ ಘಟಕದ ಎಲ್ಲಾ ಪದಾಧಿಕಾರಿಗಳು ಸ್ವಯಂ ರಾಜಿನಾಮೆ ನೀಡುತ್ತಿದ್ದೇವೆ ಎಂದರು.

ಎಂಎಲ್ಸಿ ಅಬ್ದುಲ್ ಜಬ್ಬಾರ್ ಕಳೆದ ಏ.3ರಂದೇ ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದು,



ಆದಯ ಚುನಾವಣೆ ಮೇಲೆ ದುಷ್ಪರಿಣಾಮ ಬೀರಬಾರದೆಂಬ ಕಾರಣಕ್ಕೆ ಮತದಾನದ ನಂತರ ಬಹಿರಂಗಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಾವೆಲ್ಲರೂ ಸಾಮೂಹಿಕವಾಗಿ ರಾಜೀನಾಮೆ ಕೊಡಲು ನಿರ್ಧರಿಸಿದ್ದೇವೆ. ಪಕ್ಷದ ಸಾಮಾನ್ಯ ಕಾರ್ಯಕರ್ತ, ಶಿಸ್ತಿನ ಸಿಪಾಯಿಗಳಾಗಿ ಮುಂದುವರೆಯುತ್ತೇವೆ. ಜಿಲ್ಲಾ ಅಲ್ಪಸಂಖ್ಯಾತರ ಘಟಕದ ಎಲ್ಲಾ 50 ಜನ ರಾಜೀನಾಮೆ ಕೊಡುತ್ತಿದ್ದು, ಇದೇ ರೀತಿ ರಾಜ್ಯಾದ್ಯಂತ ರಾಜೀನಾಮೆ ಪರ್ವ ನಡೆಯುವ ಸಾಧ್ಯತೆ ಇದೆ ಎಂದು ಅವರು ತಿಳಿಸಿದರು.

ಜಿಲ್ಲಾ ಮಂತ್ರಿ ಎಸ್.ಎಸ್.ಮಲ್ಲಿಕಾರ್ಜುನ್ ಜೊತೆಗೆ 2013ರಿಂದಲೂ ಅಬ್ದುಲ್ ಜಬ್ಬಾರ್ ವೈಮನಸ್ಸು ಇದೆ. ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ದೊಡ್ಡ ಸಭೆ ಮಾಡಿದರೂ ಶಾಮನೂರು ಕುಟುಂಬದವರು ಬರಲಿಲ್ಲ. ಉಪಚುನಾವಣೆ ಪ್ರಚಾರಕ್ಕೂ ಕರೆಯಲಿಲ್ಲ. ಮುಸ್ಲಿಂ ಸಮಾಜವನ್ನು ಕಡೆಗಣಿಸಿದ್ದರಿಂದ ಅಬ್ದುಲ್ ಜಬ್ಬಾರ್ ರಾಜೀನಾಮೆ ನೀಡಿದ್ದಾರೆ. 20 ದಿನ ಇಲ್ಲೇ ಇದ್ದ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, ಶಾಸಕ ರಿಜ್ವಾನ್ ಅರ್ಷದ್ ಎಸ್.ಡಿ.ಪಿ.ಐ ಬೆಳೆಯಲು ಯಾಕೆ ಬಿಟ್ಟರು? ನಾವು ಪಕ್ಷವಿರೋಧಿ ಚಟುವಟಿಕೆ ನಡೆಸಿದ್ದನ್ನು ಸಾಬೀತು ಮಾಡಿ ಕ್ರಮ ಕೈಗೊಳ್ಳಲಿ ಎಂದು ಅವರು ಸವಾಲು ಹಾಕಿದರು.

ಅಬ್ದುಲ್ ಗನಿ ತಾಹೀರ್ ಮಾತನಾಡಿ, ಮೊದಲಿನಿಂದಲೂ ಶೇ.90ರಷ್ಟು ಮುಸ್ಲಿಮರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿಕೊಂಡು ಬಂದಿದ್ದಾರೆ. ಕಾಂಗ್ರೆಸ್ ಪಕ್ಷದ ಮೇಲೆ ಮುಸ್ಲಿಂ ಸಮಾಜದ ಋಣವಿದೆ. ಅದನ್ನು ತೀರಿಸಬೇಕಾದರೆ ಸಮುದಾಯಕ್ಕೆ ಟಿಕೆಟ್ ಕೊಡಬೇಕಿತ್ತು. ಮುಸ್ಲಿಂ ಸಮಾಜವು ಪಕ್ಷದ ಋಣವನ್ನು ಹೆಚ್ಚಾಗಿಯೇ ತೀರಿಸಿದೆ. ಕಳೆದ ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಯಲ್ಲಿ ಎಂಎಲ್ಸಿ ಅಬ್ದುಲ್ ಜಬ್ಬಾರ್ ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಪಕ್ಷ ಸಂಘಟನೆ ಮಾಡಿದ್ದಾರೆ. ಸಾಮಾಜಿಕ ನ್ಯಾಯದಡಿ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ಕೇಳಿದ್ದೇ ತಪ್ಪಾಗಿದೆ. ಸಲೀಂ ಅಹಮದ್, ರಿಜ್ವಾನ್ ಅರ್ಷದ್ ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ್ದು ಖಂಡನೀಯ. ರಾಜೀನಾಮೆ ಪರ್ವವು ಮುಂಬರುವ ಚುನಾವಣೆಗಳ ಮೇಲೆ ಪರಿಣಾಮ ಬೀರಲಿದೆ ಎಂದು ಎಚ್ಚರಿಸಿದರು.

ಪಕ್ಷದ ಮುಖಂಡರಾದ ಹುಸೇನ್ ಉಕ್ಕಡಗಾತ್ರಿ, ಉಬೇದುಲ್ಲಾ ಅತ್ತಾರ್, ಆಸಿಫ್ ಜುನ್ಯೆದಿ, ಎ.ಅಬ್ದುಲ್ ಜಬ್ಬಾರ್, ಎಸ್.ಕೆ.ಏಜಾಜ್ ಅಹಮದ್, ಪಿ.ಖಾಸಿಂಸಾಬ್, ನೂರುಲ್ಲಾ ಸುದ್ದಿಗೋಷ್ಠಿಯಲ್ಲಿದ್ದರು.

ಯುವಕನ ಲಿಂಗ ಬದಲಾವಣೆಗೆ ಯತ್ನ



ಕರಾಳ ದಂಧೆಯಿಂದ ತಪ್ಪಿಸಿಕೊಂಡು ಬಂದರೂ ನಿಲ್ಲದ ಕಿರುಕುಳ

ಮೈಸೂರು: ಯುವಕನೊಬ್ಬನನ್ನ ಕಿಡ್ನಾಪ್ ಮಾಡಿ ಬಲವಂತವಾಗಿ ಮಂಗಳಮುಖಿ ವೇಷ ಹಾಕಿಸಿ ಕಲೆಕ್ಷನ್ ಹಾಗೂ ಸೆಕ್ಸ್ ವರ್ಕ್, ರೀಲ್ಸ್ ಗಳಲ್ಲಿ ಬಳಸಿ, ಲಕ್ಷಾಂತರ ಹಣ ಗಳಿಸಿದಲ್ಲದೆ ಆತನಿಗೆ ಬಲವಂತವಾಗಿ ಲಿಂಗ ಬದಲಾವಣೆಗೆ ಹುನ್ನಾರ ನಡೆಸಿದ ಘಟನೆ ನಡೆದಿದೆ. ಇದರಿಂದ ಬೇಸತ್ತು ಖದೀಮರ ಕಪಿಮುಷ್ಠಿಯಿಂದ ಹೊರಬಂದ ಯುವಕನಿಗೆ ವಾಪಸ್ ದಂಧೆಗೆ ಬರುವಂತೆ ಮಾನಸಿಕವಾಗಿ ಕಿರುಕುಳ ನೀಡುತ್ತಿರುವ ಆಘಾತಕಾರಿ ಪ್ರಕರಣ ಬೆಳಕಿಗೆ ಬಂದಿದೆ.

ಮಂಗಳಮುಖಿಯ ಕಿರುಕುಳಕ್ಕೆ ಬೇಸತ್ತ ಯುವಕ ಇದೀಗ ನ್ಯಾಯಕ್ಕಾಗಿ ಮೈಸೂರು ಪೊಲೀಸರ ಮೊರೆ ಹೋಗಿದ್ದಾನೆ. ಮತ್ತೆ ಕರಾಳ ದಂಧೆಗೆ ತೊಡಗಿಸಲು ಹುನ್ನಾರ ನಡೆಸುತ್ತಿರುವ ಮಂಗಳಮುಖಿ ವಿರುದ್ಧ ಯುವಕ ಮೈಸೂರಿನ ಲಷ್ಕರ್ ಠಾಣೆಯ ಪೊಲೀಸರಿಗೆ ದೂರು ನೀಡಿದ್ದಾನೆ. ನಂಜನಗೂಡಿನ ತ್ಯಾಗರಾಜ ಕಾಲೋನಿಯ ಯುವಕ ಅನಿಲ್ ಕುಮಾರ್ ಅಕ್ಷತಾ ನೊಂದ ಯುವಕ. ಮಂಗಳೂರು ಮೂಲದ ಅನಿತಾ ಆರೋಪ ಹೊತ್ತ ಮಂಗಳಮುಖಿ.

ನಾಲ್ಕು ತಿಂಗಳ ಹಿಂದೆ ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಅನಿಲ್ ಕುಮಾರ್ ಬಸ್‌ಗಾಗಿ ಕಾಯುತ್ತಿದ್ದಾಗ ಮಂಗಳಮುಖಿ ಅನಿತಾ ಮತ್ತು ತಂಡ ಅನಿಲ್ ಕುಮಾರ್‌ಗೆ ಮುಸುಕು ಹಾಕಿ ಮತ್ತು ಬರುವಂತೆ ಮಾಡಿ, ಬಲವಂತವಾಗಿ ಕಿಡ್ನಾಪ್ ಮಾಡಿ, ಮಂಗಳೂರಿಗೆ ಕರೆದೊಯ್ದಿದ್ದಾರೆ. ಬಳಿಕ ಆತನಿಗೆ ಸೀರೆ, ನೈಟಿ, ಕಿವಿಗೆ ಓಲೆ, ಮೂಗಿಗೆ ಬಟ್ಟು ಹಾಕಿಸಿದ್ದಾರೆ. ಮಂಗಳಮುಖಿಯಾಗಿ ವೇಷ ಹಾಕಿಸಿ ಬಲವಂತವಾಗಿ ಬೀದಿಗಳಲ್ಲಿ ಅಂಗಡಿಗಳ ಮುಂದೆ ಕಲೆಕ್ಷನ್ ಮಾಡಿಸಿದ್ದಾರೆ. ಪ್ರತಿದಿನ 2 ರಿಂದ 3 ಸಾವಿರ ಕಲೆಕ್ಷನ್ ಮಾಡಿಸಿದ್ದಾರೆ.

ರೀಲ್ಸ್‌ಗಳನ್ನ ತಯಾರಿಸಿ ಸಾಮಾಜಿಕ ಜಾಲತಾಣದಲ್ಲೂ ಅಪ್ ಲೋಡ್ ಮಾಡಿದ್ದಾರೆ. ಅಲ್ಲದೆ ಮಂಗಳೂರು, ಕೇರಳಾ ಭಾಗಗಳಿಗೆ ಕಳಿಸಿ ಸೆಕ್ಸ್ ವರ್ಕ್ ಗೂ ಬಳಸಿದ್ದಾರೆ.ಇದರಲ್ಲೂ ಅನಿಲ್ ಕುಮಾರ್ ಅಕ್ಷತಾರಿಂದ ಸಾವಿರಾರು ರೂ. ಹಣ ವಸೂಲಿಯಾಗಿದೆ. ನಂತರ ಆಧಾರ್ ಕಾರ್ಡ್ ನಲ್ಲಿ ಟ್ರಾನ್ಸ್ಜೆಂಡರ್ ಎಂದು ನಮೂದಿಸಿ, ಸಮಾಜ ಕಲ್ಯಾಣ ಇಲಾಖೆಯಿಂದ ಸಹ ಅಧಿಕೃತ ಸರ್ಟಿಫಿಕೇಟ್ ಕೊಡಿಸಿದ್ದಾರೆ. ಮುಂದಿನ ತಿಂಗಳು ಬಾಂಬೆಗೆ ಕರೆದೊಯ್ದು ಶಸ್ತ್ರಚಿಕಿತ್ಸೆ ಮೂಲಕ ಶಾಶ್ವತವಾಗಿ ಮಂಗಳಮುಖಿಯಾಗಿ ಕನ್ವರ್ಟ್ ಮಾಡಲು ಸ್ಕೆಚ್ ಹಾಕುತ್ತಿದ್ದ ಮಾಹಿತಿ ಅರಿತ ಅನಿಲ್ ಕುಮಾರ್ ಕರಾಳ ದಂಧೆಯ ಕಪಿಮುಷ್ಠಿಯಿಂದ ಹೊರಬರಲು ನಿರ್ಧರಿಸಿ ತನ್ನ ಸಂಪಾದನೆಯಲ್ಲಿ 3 ಲಕ್ಷ ಕೊಡುವಂತೆ ಕೇಳಿದಾಗ ಅನಿತಾ ಉಲ್ಟಾ ಹೊಡೆದಿದ್ದಾರೆ. ತನ್ನ ಮನೆಯಿಂದ 5 ಲಕ್ಷ ನಗದು ಚಿನ್ನಾಭರಣ ಕಳ್ಳತನ ಮಾಡಿರುವುದಾಗಿ ಸುಳ್ಳು ಕಂಪ್ಲೇಂಟ್ ದಾಖಲಿಸಿ, ಜೈಲಿಗೆ ಹಾಕಿಸುತ್ತೇನೆಂದು ಅನಿತಾ ಬೆದರಿಸಿದ್ದಾರೆ. ಮನನೊಂದ ಅನಿಲ್ ಕುಮಾರ್ ದಾಖಲೆಗಳು ಸರ್ಟಿಫಿಕೇಟ್ ಸಮೇತ ಮಂಗಳೂರು ತೊರೆದು ನಂಜನಗೂಡು ಸೇರಿಕೊಂಡಿದ್ದಾನೆ. ಮತ್ತೆ ದಂಧೆ ಮಾಡಿಸಲು ಹವಣಿಸಿದ ಅನಿತಾ ಮಂಗಳಮುಖಿಯರನ್ನ ಅನಿಲ್ ಕುಮಾರ್ ಮನೆಗೆ ಕಳಿಸಿ ಗಲಾಟೆ ಮಾಡಿಸಿದ್ದಾರೆ. ಆಗಾಗ ಅನಿತಾ ತನಗೆ ಮಾನಸಿಕವಾಗಿ ಕಿರುಕುಳ ಕೊಡುತ್ತಿದ್ದಾರೆ. ದಂಧೆಗೆ ಹಿಂದಿರುಗುವಂತೆ ಒತ್ತಡ ಹೇರುತ್ತಿದ್ದಾರೆ ಎಂದು ಆರೋಪಿಸಿ ಅನಿಲ್ ಕುಮಾರ್ ಮೈಸೂರಿನ ಲಷ್ಕರ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ನಂಜನಗೂಡು ಪೊಲೀಸರು ತನ್ನ ಮನವಿಗೆ ಸ್ಪಂದಿಸುತ್ತಿಲ್ಲವೆಂದು ಸಹ ಆರೋಪಿಸಿದ್ದಾರೆ.

ಸ್ವಾಗತ



ಚಿಕ್ಕಮಗಳೂರಲ್ಲಿ ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಸ್ವಾಗತಿಸಿದರು.

ಕಿರುಸುದ್ದಿ

ಗರ್ಭದಲ್ಲೇ ನೀರಾನೆ ಮರಿ ಸಾವು

ಶಿವಮೊಗ್ಗ: ತ್ಯಾವರೆಕೊಪ್ಪ ಹುಲಿ ಮತ್ತು ಸಿಂಹಧಾಮದಲ್ಲಿ ನೀರಾನೆ ಹಂಸಿಣಿಯ ಗರ್ಭದಲ್ಲೇ ಮರಿ ಮೃತಪಟ್ಟಿರುವುದನ್ನು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಮರಾಕ್ಷರ ದೃಢಪಡಿಸಿದ್ದಾರೆ. ಹಂಸಿಣಿ ಹೆರಿಗೆ ಅವಧಿ ಮುಗಿದ್ದರೂ ಮರಿ ಹಾಕಿರಲಿಲ್ಲ. ಹಾಗಾಗಿ ಹಂಸಿಣಿ ಮೇಲೆ ತೀವ್ರ ನಿಗಾ ಇರಿಸಲಾಗಿತ್ತು.



ಮೈಸೂರು ಮತ್ತು ಬನ್ನೇರುಘಟ್ಟ ಝೂನಿಂದ ತಜ್ಞ ಪಶು ವೈದ್ಯರ ತಂಡ ಆಗಮಿಸಿ ತಪಾಸಣೆ ನಡೆಸಿತ್ತು. ಇದೀಗ ಹಂಸಿಣಿಯ ಮರಿ ಸೋಂಕಿನಿಂದಾಗಿ ಗರ್ಭದಲ್ಲೇ ಮೃತಪಟ್ಟಿರುವುದನ್ನು ದೃಢಪಡಿಸಲಾಗಿದೆ. ಮಾ.17ರಿಂದಲೇ ಆಹಾರ ಸೇವನೆ ಮಾಡುತ್ತಿರಲಿಲ್ಲ ಮತ್ತು ನೀರಿನಿಂದ ಮೇಲೆ ಬಂದಿರಲಿಲ್ಲ. ಹೀಗಾಗಿ ತರಬೇತಿ ವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಮಾ.19ರಂದು ರಾತ್ರಿ ತಪಾಸಣೆ ತೆರಳಿದ್ದಾಗ ನೀರಾನೆ ಏಕಾಏಕಿ ದಾಳಿ ಮಾಡಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಸಮೀಕ್ಷಾ ರೆಡ್ಡಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದರು. ಎರಡು ಮರಿಗಳು ಮೃತಪಟ್ಟಿದ್ದರಿಂದ 3ನೇ ಮರಿಯನ್ನು ಉಳಿಸುವ ಯತ್ನವನ್ನು ನಡೆಸಲಾಗಿತ್ತಾದರೂ ಅದು ಫಲಕಾರಿಯಾಗಲಿಲ್ಲ. ಈ ಬಾರಿಯಾದರೂ ಮರಿ ಉಳಿಯಬಹುದೆಂಬ ನಿರೀಕ್ಷೆಯಲ್ಲಿದ್ದ ಸಫಾರಿ ಸಿಬ್ಬಂದಿಗೆ ಮತ್ತೆ ನಿರಾಸೆಯಾಗಿದೆ.

ಶಿಕ್ಷಕನಿಂದ ವಿದ್ಯಾರ್ಥಿನಿ ಮೇಲೆ ಲೈಂಗಿಕ ದೌರ್ಜನ್ಯ

ಚಿತ್ರದುರ್ಗ: ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಜೀವನದ ಸರಿ ದಾರಿ ತೋರಿಸಬೇಕಾದ ಶಿಕ್ಷಕನೊಬ್ಬ ಅಪ್ರಾಪ್ತ ಬಾಲಕಿಯ ಮೇಲೆ ಕಾಮದ ದೃಷ್ಟಿ ಬೀರಿರುವ ಘಟನೆ ಚಳ್ಳಕೆರೆ ತಾಲೂಕಿನಲ್ಲಿ ಬೆಳಕಿಗೆ ಬಂದಿದೆ. ಗಣಿತ ಶಿಕ್ಷಕ ತನ್ನ ಶಾಲೆಯ 16 ವರ್ಷದ ಅಪ್ರಾಪ್ತ ಬಾಲಕಿಯನ್ನು ಪುಸಲಾಯಿಸಿ ತನ್ನ ಕಾಮ ತೃಷೆಗೆ ಬಳಸಿಕೊಂಡಿದ್ದಾನೆ. ಇದರಿಂದಾಗಿ ಬಾಲಕಿ ಗರ್ಭವತಿಯಾಗಿದ್ದು, ನಾಗರೀಕ ಸಮಾಜದಲ್ಲಿ ಹೆಣ್ಣುಮಕ್ಕಳ ಪೋಷಕರು ಬೆಚ್ಚಿ ಬೀಳುವಂತಾಗಿದೆ. ಬಂಗಾರು ದೇವರಹಟ್ಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಓ. ರಾಜಣ್ಣ ಶಾಲಾ ಆವರಣದಲ್ಲೇ ವಿದ್ಯಾರ್ಥಿಯ ಮೇಲೆ ನಿರಂತರ ಲೈಂಗಿಕ ದೌರ್ಜನ್ಯ ನಡೆಸಿದ್ದಾನೆ ಎಂಬ ಆರೋಪ ಕೇಳಿಬಂದಿದೆ. ಬಾಲಕಿಯ ಪೋಷಕರಿಗೆ ವಿಷಯ ತಿಳಿಯಬಾರದೆಂಬ ದುರುದ್ದೇಶದಿಂದ ಬಾಲಕಿಗೆ ಗರ್ಭಪಾತ ಮಾಡಿಸಿದ್ದಾನೆ ಎನ್ನಲಾಗಿದೆ. ಪ್ರಕರಣ ಮುಚ್ಚಿಹಾಕುವ ದುರುದ್ದೇಶದಿಂದ ಚಳ್ಳಕೆರೆ ನಗರದ ಖಾಸಗಿ ನರ್ಸಿಂಗ್ ಹೋಂನ ವೈದ್ಯೆಯ ನೆರವಿನಿಂದ ಬಾಲಕಿಗೆ ಗರ್ಭಪಾ ಮಾಡಿಸಲಾಗಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಈ ಕುರಿತು ಮಕ್ಕಳ ರಕ್ಷಣಾಧಿಕಾರಿ ರೇಖಾ ಎಂಬುವರು ನೀಡಿದ ದೂರಿನ ಪರಿಣಾಮ ತಳಕು ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಿಸಲಾಗಿದೆ. ಪ್ರಕರಣ ದಾಖಲಿಸಿದ ಪೊಲೀಸರು ಆರೋಪಿ ಶಿಕ್ಷಕ ಹಾಗೂ ನರ್ಸಿಂಗ್ ಹೋಂನ ವೈದ್ಯೆ ವಿರುದ್ಧ ತನಿಖೆ ಕೈಗೊಂಡಿದ್ದಾರೆ. ಘಟನೆ ಸಂಬಂಧಿಸಿದಂತೆ ಹೆಣ್ಣು ಮಕ್ಕಳ ಪೋಷಕರಿಗೆ ಆಘಾತ ಉಂಟು ಮಾಡಿದ್ದು. ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲು ಆತಂಕಪಡುವಂತಾಗಿದೆ. ಹಾಗಾಗಿ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಂಡು ಮತ್ತೆ ಇಂತಹ ಪ್ರಕರಣಗಳು ಮರುಕಳಿಸದಂತೆ ಎಚ್ಚರ ವಹಿಸಬೇಕೆಂದು ಕಾನೂನು ಕ್ರಮ ಜರುಗಿಸುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಕಾನಿಪ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ನಿರ್ಧಾರ

ರಾಯಚೂರಲ್ಲಿ ಸಮ್ಮೇಳನ

ಬೀದರ್: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 41ನೇ ಪತ್ರಕರ್ತರ ರಾಜ್ಯ ಸಮ್ಮೇಳನ ರಾಯಚೂರಿನಲ್ಲಿ ನಡೆಯಲಿದೆ.

ನಗರದ ಝೀರಾ ಕನ್ವೆನ್ಶನ್ ಹಾಲ್‌ನಲ್ಲಿ ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದ ಎರಡನೇ ದಿನವಾದ ಭಾನುವಾರ ನಡೆದ ಪ್ರತಿನಿಧಿಗಳ ಸಮಾವೇಶ, ಸರ್ವ ಸದಸ್ಯರ ಸಭೆಯಲ್ಲಿ ಈ ಕುರಿತು ಒಕ್ಕೊರಲಿನ ತೀರ್ಮಾನ ಕೈಗೊಳ್ಳಲಾಯಿತು.

ರಾಯಚೂರು, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲಾ ಘಟಕಗಳು ಮುಂದಿನ ರಾಜ್ಯ ಸಮ್ಮೇಳನ ಆಯೋಜನೆಗೆ ಮುಂದೆ ಬಂದಿದ್ದವು. ರಾಯಚೂರಿನಲ್ಲಿ ಸಮ್ಮೇಳನ ನಡೆಸಲು ನಿರ್ಣಯಿಸಲಾಗಿದೆ ಎಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಅಧ್ಯಕ್ಷ ಶಿವಾನಂದ ತಗಡೂರು ಘೋಷಿಸಿದರು. ಸಂಘದ ಬೈಲಾ ತಿದ್ದುಪಡಿಗೆ ಸಂಬಂಧಿಸಿದಂತೆ ಚರ್ಚೆ ನಡೆದಿದೆ. ಈ ಕುರಿತು ಜಿಲ್ಲಾ ಘಟಕಗಳಿಗೆ ಪತ್ರ ಬರೆದು ಅಭಿಪ್ರಾಯ ಪಡೆಯಲಾಗುವುದು. ಬಳಿಕ ರಾಜ್ಯ ಘಟಕದ ವಿಶೇಷ ಸಭೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಂಘದ ಬೈಲಾ ತಿದ್ದುಪಡಿ ಮಾಡಿ ಪದಾಧಿಕಾರಿಗಳ ಅವಧಿಯನ್ನು ಮೂರು ವರ್ಷದಿಂದ ಐದು ವರ್ಷಕ್ಕೆ ವಿಸ್ತರಿಸಬೇಕೇ ಅಥವಾ ಈಗಿರುವಂತೆ ಮೂರು ವರ್ಷಗಳಿಗೆ ಸೀಮಿತಗೊಳಿಸಬೇಕೇ ಎನ್ನುವ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು. ಬೈಲಾ ತಿದ್ದುಪಡಿ ಸಂಬಂಧಿಸಿದಂತೆ ಸದಸ್ಯರಿಂದ ಪರ-ವಿರೋಧದ ಅಭಿಪ್ರಾಯಗಳು ವ್ಯಕ್ತವಾದವು. ಸದಸ್ಯರ ಗುರುತಿನ ಚೀಟಿಯ ಅವಧಿಯನ್ನು ಮೂರು ವರ್ಷಕ್ಕೆ ವಿಸ್ತರಣೆ ಮಾಡಬೇಕು. ಗ್ರಾಮೀಣ ಪತ್ರಕರ್ತರ ಉಚಿತ ಬಸ್ ಪಾಸ್ ವಿತರಣೆಯಲ್ಲಿನ ಸಮಸ್ಯೆ ಬಗೆಹರಿಸಬೇಕು. ನಕಲಿ ಪತ್ರಕರ್ತರ ಹಾವಳಿ ತಪ್ಪಿಸಬೇಕು ಎಂಬ ಒತ್ತಾಯ ಕೇಳಿ ಬಂದವು.

ಸಂಘದ ರಾಜ್ಯ ಘಟಕದ ಉಪಾಧ್ಯಕ್ಷರಾದ ಮದನ್ ಪಾಟೀಲ, ಮತ್ತಿಕೆರೆ ಜೈರಾಮ್, ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್, ಕಾರ್ಯದರ್ಶಿಗಳಾದ ಪುಂಡಲೀಕ ಬಾಳೋಜಿ, ಸೋಮಶೇಖರ ಕೆರೆಗೋಡು, ಲಿಂಗಪ್ಪ ಚಾವಡಿ, ಖಜಾಂಚಿ ವಾಸುದೇವ ಹೊಳ್ಳ, ಜಿಲ್ಲಾ ಘಟಕದ ಅಧ್ಯಕ್ಷ ಆನಂದ ದೇವಪ್ಪ, ಅಡಾಕ್ ಸಮಿತಿ ಸದಸ್ಯರಾದ ಅಪ್ಪಾರಾವ್ ಸೌದಿ, ಶಿವಕುಮಾರ ಸ್ವಾಮಿ ಇದ್ದರು.

ಸಮ್ಮೇಳನಕ್ಕೆ ಮೆಚ್ಚುಗೆ

40ನೇ ಪತ್ರಕರ್ತರ ರಾಜ್ಯ ಸಮ್ಮೇಳನವನ್ನು ಅಚ್ಚುಕಟ್ಟಾಗಿ ಆಯೋಜಿಸಿದ್ದಕ್ಕೆ ಸರ್ವ ಸದಸ್ಯರ ಸಭೆಯಲ್ಲಿ ಮೆಚ್ಚುಗೆ ವ್ಯಕ್ತವಾಯಿತು. ಸಮ್ಮೇಳನವನ್ನು ಬಹಳ ವ್ಯವಸ್ಥಿತವಾಗಿ ಸಂಘಟಿಸಲಾಗಿದೆ. ಹೀಗಾಗಿ ಬೀದರ್ ಜಿಲ್ಲೆಯ ಸಂಘದ ಪ್ರಮುಖರು ಹಾಗೂ ಸದಸ್ಯರಿಗೆ ಧನ್ಯವಾದ ಅರ್ಪಿಸಲಾಗುವುದು ಎಂದು ಸಭೆಯಲ್ಲಿ ಮಾತನಾಡಿದ ಸದಸ್ಯರು ಹೇಳಿದರು.

ಕಳೆ ತಂದ ಸುಕನ್ಯಾ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 40ನೇ ಪತ್ರಕರ್ತರ ರಾಜ್ಯ ಸಮ್ಮೇಳನಕ್ಕೆ ಪತ್ರಕರ್ತೆ, ನಿರೂಪಕಿ ಸುಕನ್ಯಾ ಕಳೆ ತಂದರು. ಉದ್ಘಾಟನಾ ಸಮಾರಂಭ, ವಿವಿಧ ಗೋಷ್ಠಿ, ಸಮಾರೋಪ ಸಮಾರಂಭದ ಅತ್ಯುತ್ತಮ ನಿರೂಪಣೆ ಮೂಲಕ ಎಲ್ಲರ ಗಮನ ಸೆಳೆದರು.

ಬೀದರ್‌ನಲ್ಲಿ ನಡೆದ ಪತ್ರಕರ್ತರ ರಾಜ್ಯ ಸಮ್ಮೇಳನ ಅದ್ದೂರಿ ಯಶಸ್ಸು ಕಂಡಿದೆ. ಇದು ಸಂಘಟಿತ ಪ್ರಯತ್ನದ ಫಲ. ರಾಜ್ಯ ಪದಾಧಿಕಾರಿಗಳು, ಜಿಲ್ಲಾ ಅಡಾಕ್ ಸಮಿತಿ ಸದಸ್ಯರು, ಸ್ವಾಗತ ಸಮಿತಿ, ವಿವಿಧ ಉಪ ಸಮಿತಿಗಳು, ಸಂಘದ ಸದಸ್ಯರು ಹಾಗೂ ಜಿಲ್ಲೆಯ ಎಲ್ಲ ಪತ್ರಕರ್ತರ ಸಹಕಾರದಿಂದ ಅದು ಸಾಕಾರವಾಗಿದೆ.

■ ಆನಂದ ದೇವಪ್ಪ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ

ನಜೀರ್ ರಾಜೀನಾಮೆ ಕೊಟ್ಟಿಲ್ಲ: ಸಿದ್ದರಾಮಯ್ಯ



ಚಿಕ್ಕಮಗಳೂರು: ತಮ್ಮ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್ ಇನ್ನೂ ರಾಜೀನಾಮೆ ಕೊಟ್ಟಿಲ್ಲ. ಕೊಡಬಹುದು ಎಂದುಕೊಂಡಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಹೊನ್ನೆಕೊಡಿಗೆ ಸೇತುವೆ ಉದ್ಘಾಟನೆಗಾಗಿ ಭಾನುವಾರ ಸಂಜೆ ನರಸಿಂಹರಾಜಪುರಕ್ಕೆ ಆಗಮಿಸಿದ ಅವರು, ಸುದ್ದಿಗಾರರ ಜೊತೆ ಮಾತನಾಡಿದ ಸಂದರ್ಭ, ದಾವಣಗೆರೆ ಉಪಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದರೆಂಬ ಹಿನ್ನೆಲೆಯಲ್ಲಿ ನಿಮ್ಮ ರಾಜಕೀಯ ಕಾರ್ಯದರ್ಶಿ ರಾಜೀನಾಮೆ ನೀಡುತ್ತಾರೆಂಬ ಸುದ್ದಿ ಹರಡಿದೆ ಎಂಬ ಪ್ರಶ್ನೆಗೆ ಅವರು ಮೇಲಿನಂತೆ ಪ್ರತಿಕ್ರಿಯಿಸಿದರು. ಉಪ ಚುನಾವಣೆಗೆ ಸಂಬಂಧಿಸಿದಂತೆ ಹೈಕಮಾಂಡ್‌ನಿಂದ ಉಸ್ತುವಾರಿಯನ್ನು ನೇಮಿಸಲಾಗಿದ್ದು, ಅವರ ವರದಿ ಆಧರಿಸಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂದರು.

ಸೋಲೊಪ್ಪಿಕೊಂಡಿಲ್ಲ: ಉಪ ಚುನಾವಣೆಯಲ್ಲಿ ಫಲಿತಾಂಶಕ್ಕೆ ಮುನ್ನವೇ ಕಾಂಗ್ರೆಸ್ ಪಕ್ಷ ಸೋಲೊಪ್ಪಿಕೊಳ್ಳುತ್ತಿದೆಯಾ ಎನ್ನುವ ಪ್ರಶ್ನೆ ಉದ್ಭವವಾಗಿದೆ ಎಂದಾಗ, ಸೋಲನ್ನು ಎಲ್ಲಿ ಒಪ್ಪಿಕೊಂಡಿದ್ದೇವೆ? ಗೆಲ್ಲುವವರು ನಾವೇ. ತಲೆದಂಡ ಆದ ಕೂಡಲೇ ಸೋಲುತ್ತೇವೆ ಎಂದು ಕೊಳ್ಳಬೇಕಾ? ನಿಮ್ಮ ಪ್ರಕಾರ ಸೋಲುತ್ತೇವೆ ಎಂದು ಹೇಳಿದವರು ಯಾರು ಎಂದು ಮರುಪ್ರಶ್ನೆ ಹಾಕಿದರು. ನಮ್ಮವರೇ ಪಕ್ಷ ವಿರೋಧಿ ಕೆಲಸ ಮಾಡಿದ್ದಾರೆ ಎಂದರು.

ಆರೋಪ ಸತ್ಯಕ್ಕೆ ದೂರ

ಪ್ರವಾಸೋದ್ಯಮಕ್ಕೆ ಕರ್ನಾಟಕ ಸುರಕ್ಷಿತವಲ್ಲ ಎನ್ನುವುದು ಸರಿಯಲ್ಲ. ಅದು ಸತ್ಯಕ್ಕೆ ದೂರವಾದ ವಿಚಾರ ಎಂದು ಮುಖ್ಯಮಂತ್ರಿಗಳು ಹೇಳಿದರು. ನಾಪತ್ತೆಯಾಗಿದ್ದ ಕೇರಳದ ಬಾಲಕಿ ಶ್ರೀನಂದಾ ಮಾಣಿಕ್ಯಧಾರ ಬಳಿ ಶವವಾಗಿ ಪತ್ತೆಯಾದ ಹಿನ್ನೆಲೆಯಲ್ಲಿ ಕೇರಳದ ಮಾಧ್ಯಮವೊಂದರಲ್ಲಿ ಕರ್ನಾಟಕ ಪ್ರವಾಸೋದ್ಯಮಕ್ಕೆ ಸುರಕ್ಷಿತವಲ್ಲ ಎಂದು ಆರೋಪಿಸಿರುವ ಕುರಿತು ಅವರು ಮೇಲಿನಂತೆ ಪ್ರತಿಕ್ರಿಯಿಸಿದರು. ಬಾಲಕಿ ಯಾಕೆ ಸತ್ತಿದ್ದಾಳೆ ಎನ್ನುವುದು ಗೊತ್ತಿಲ್ಲ. ಆ ಬಗ್ಗೆ ತನಿಖೆ ಆಗಬೇಕು. ಆದರೆ ಕರ್ನಾಟಕ ಪ್ರವಾಸೋದ್ಯಮಕ್ಕೆ ಸುರಕ್ಷಿತವಲ್ಲ ಎನ್ನುವ ವಿಚಾರ ಸತ್ಯಕ್ಕೆ ದೂರ ಎಂದರಲ್ಲದೆ, ಪ್ರವಾಸೋದ್ಯಮ ಅಭಿವೃದ್ಧಿ ಕುರಿತು ಸಭೆ ನಡೆಸುವುದಾಗಿ ತಿಳಿಸಿದರು.

ಫೈರೋಜ್ ಹಂತಕರ ಬಂಧನ

ಧಾರವಾಡ: ಯೂತ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಫೈರೋಜ್ ಖಾನ್ ಪಠಾಣ ಹತ್ಯೆಯ ಪ್ರಕರಣದಡಿ 8 ಜನ ಆರೋಪಿಗಳನ್ನು ಉಪನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಧಾರವಾಡ ತಾಲೂಕಿನ ಉಪ್ಪಿನಬೆಟಗೇರಿ ಸಮೀಪದಲ್ಲಿ ಪ್ರಮುಖ ಆರೋಪಿಗಳಾದ ಮೊಹ್ಮದ್ ಶಾ, ಖೈಪ್, ಗೌಸ್, ಸಮೀರ್, ಸದ್ದಾಂ ಜತೆ ಹತ್ಯೆ ಸಂಚು ರೂಪಿಸಿದ ಮೂವರನ್ನು ಬಂಧಿಸಲಾಗಿದೆ. ಮೂಲಗಳ ಪ್ರಕಾರ ಒಂಭತ್ತು ಜನರ ಗ್ಯಾಂಗ್ ಫೈರೋಜ್ ಹತ್ಯೆ ಮಾಡಿದ್ದು, ಸಂಚು ರೂಪಿಸಿದ್ದ ಅರ್ಬಾಜ್ ಪಠಾಣ್ ಮತ್ತು ಗುಲಾಬ್ ಎಂಬುವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿತ್ತು. ಹತ್ಯೆಯಲ್ಲಿ ಭಾಗಿಯಾಗಿದ್ದ ಮೊಹ್ಮದ್ ಶಾ, ಖೈಪ್, ಗೌಸ್, ಸಮೀರ್, ಸದ್ದಾಂ ಉಪ್ಪಿನ ಬೆಟಗೇರಿ ಸಂಬಂಧಿಕರ ಮನೆಯಲ್ಲಿ ಇರುವ ಖಚಿತ ಮಾಹಿತಿ ಮೇರೆಗೆ ತೆರಳಿ ಪೊಲೀಸರು ಬಂಧಿಸಿದ್ದಾರೆ. ಧಾರವಾಡ-ಬೆಳಗಾವಿ ಗಡಿಯಲ್ಲಿ ಫೈರೋಜ್ ಮೊಬೈಲ್ ಬಿಸಾಕಿದ ಹಂತಕರ ಮೊಬೈಲ್ ಲೋಕೇಷನ್ ಆಧರಿಸಿ ಬಂಧಿಸಿದ್ದು, ಸಂಚು ರೂಪಿಸಿದ ಇನ್ನೊಬ್ಬ ಆರೋಪಿ ಬಂಧನಕ್ಕೆ ಬಲೆ ಬೀಸಲಾಗಿದೆ.

ಘಟನೆ ಹಿನ್ನೆಲೆ

ಶುಕ್ರವಾರ ರಾತ್ರಿ ಫೈರೋಜ್ ಖಾನ್ ಪಠಾಣ ಮನೆಗೆ ನುಗ್ಗಿದ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಮನ ಬಂದಂತೆ ದಾಳಿ ನಡೆಸಿತ್ತು. ತೀವ್ರ ರಕ್ತಸ್ರಾವದಿಂದಾಗಿ ಫೈರೋಜ್ ಸ್ಥಳದಲ್ಲೇ ಮೃತಪಟ್ಟಿದ್ದರು. ಮದುವೆಗೆ 15 ದಿನಗಳ ಬಾಕಿ ಇದ್ದಾಗಲೇ ನಡೆದ ಈ ಘಟನೆ ಅವಳಿನಗರ ಬೆಚ್ಚಿ ಬೀಳಿಸಿದೆ. ಹಾಗಾಗಿ ನಗರದಲ್ಲಿ ಬಿಗುವಿನ ವಾತಾವರಣವಿದ್ದು, ಮುಂಜಾಗ್ರತೆಗಾಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಿದೆ.

ಹತ್ಯೆಗೆ ಕಾರಣ

ಪ್ರಾಥಮಿಕ ತನಿಖೆಯ ಪ್ರಕಾರ, ಈ ಕೊಲೆಗೆ ಹಳೆಯ ವೈಯಕ್ತಿಕ ದ್ವೇಷ ಹಾಗೂ ರಾಜಕೀಯ ವೈಷಮ್ಯವೇ ಪ್ರಮುಖ ಕಾರಣ ಎಂದು ತಿಳಿದುಬಂದಿದೆ. ಫೈರೋಜ್ ಬೆಳವಣಿಗೆ ವಿರೋಧಿಗಳ ಕಣ್ಣು ಕೆಂಪಾಗಿಸಿತ್ತು.

ಪ್ರಕರಣ ಗಂಭೀರವಾಗಿ ಪರಿಗಣಿಸಿ, ಶೀಘ್ರ ಕಾರ್ಯಾಚರಣೆಯಿಂದ ಆರೋಪಿಗಳನ್ನು ಬಂಧಿಸಿ, ವಿಚಾರಣೆಗೊಳಪಡಿಸಿದೆ. ಹತ್ಯೆ ಹಿಂದಿನ ಸಂಪೂರ್ಣ ಸತ್ಯಾಸತ್ಯತೆ ಶೀಘ್ರವೇ ಹೊರಬರಲಿದೆ.

■ ಎನ್.ಶಶಿಕುಮಾರ, ಹು-ಧಾ ಪೊಲೀಸ್ ಆಯುಕ್ತರು

ಹೆದ್ದಾರಿ ಡಾಬಾ ಮಾಲೀಕರಿಗೆ ದಂಡ

ಬೆಂಗಳೂರು: ಹೆದ್ದಾರಿ ಬದಿಯ ಡಾಬಾಗಳಲ್ಲಿ ಗ್ರಾಹಕರಿಗೆ ಬಡಿಸುವ ಊಟದ ಗುಣಮಟ್ಟ ಹಾಗೂ ನೈರ್ಮಲ್ಯವನ್ನು ಪರಿಶೀಲಿಸಲು ಆರೋಗ್ಯ ಮತ್ತು ಆಹಾರ ತಪಾಸಣಾ ಅಧಿಕಾರಿಗಳು ದಿಢೀರ್ ಕಾರ್ಯಾಚರಣೆ ನಡೆಸಿದ್ದು, ಶುಚಿತ್ವ ಕಾಪಾಡದ ಡಾಬಾ ಮಾಲೀಕರಿಗೆ ಬರೋಬ್ಬರಿ 3.69 ಲಕ್ಷ ರೂಪಾಯಿ ದಂಡ ವಿಧಿಸಿದ್ದಾರೆ. ಏ. 10 ಹಾಗೂ 11ರಂದು ರಾಜ್ಯದ ವಿವಿಧ ಹೆದ್ದಾರಿ ಮಾರ್ಗಗಳಲ್ಲಿ ಆಹಾರ ಸುರಕ್ಷತಾ ಅಧಿಕಾರಿಗಳು ಎರಡು ದಿನಗಳ ಬೃಹತ್ ತಪಾಸಣಾ ಅಭಿಯಾನ ನಡೆಸಿದ್ದಾರೆ. ಈ ಕಾರ್ಯಾಚರಣೆಯ ವೇಳೆ ಒಟ್ಟು 99 ಡಾಬಾಗಳ ಮೇಲೆ ಅಧಿಕಾರಿಗಳು ದಿಢೀರ್ ದಾಳಿ ನಡೆಸಿದ್ದು, ಅಡುಗೆ ಮನೆಯ ನೈರ್ಮಲ್ಯ ಕೊರತೆ, ಕಳಪೆ ಗುಣಮಟ್ಟದ ಆಹಾರ ಮತ್ತು ನಿಯಮಗಳ ಉಲ್ಲಂಘನೆಯನ್ನು ಪತ್ತೆಹಚ್ಚಿರುವ ಅಧಿಕಾರಿಗಳು, ಒಟ್ಟಾರೆಯಾಗಿ 3,69,500 ರೂ.ಗಳ ದಂಡ ಸ್ಥಳದಲ್ಲೇ ವಸೂಲಿ ಮಾಡಿದ್ದಾರೆ. ಜತೆಗೆ ಕಳಪೆ ಗುಣಮಟ್ಟದ ಶಂಕೆ ಇರುವ ಒಟ್ಟು 41 ಆಹಾರದ ಮಾದರಿಗಳನ್ನು ಸಂಗ್ರಹಿಸಿ ಹೆಚ್ಚಿನ ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ರವಾನಿಸಿದ್ದಾರೆ. ಅಧಿಕಾರಿಗಳು 5 ಪ್ರಮುಖ ಹೆದ್ದಾರಿ ಮಾರ್ಗಗಳಲ್ಲಿ ಕಾರ್ಯಾಚರಣೆ ನಡೆಸಿದ್ದಾರೆ.

ಸಚಿವ ಸ್ಥಾನಕ್ಕಾಗಿ ಹೈಕಮಾಂಡ್ ಭೇಟಿಗೆ ಹೊರಟ 20 ಶಾಸಕರು

ಬೆಂಗಳೂರು: ಎರಡು ಕ್ಷೇತ್ರಗಳ ಉಪ ಚುನಾವಣೆ ಮುಗಿದ ಬೆನ್ನಲ್ಲೇ, ಸಂಪುಟ ಪುನಾರಚನೆ ವಿಚಾರ ಮತ್ತೆ ಗರಿಗೆದರಿದೆ. ಹಲವು ಶಾಸಕರು ಸಚಿವ ಸಂಪುಟ ಸೇರಿಕೊಳ್ಳಲು ಕಸರತ್ತು ನಡೆಸಿದ್ದು, ಹೈಕಮಾಂಡ್ ಭೇಟಿಗೆ ಹೊಸದಿಲ್ಲಿಗೆ ತೆರಳಿದ್ದಾರೆ.

ಈ ಕುರಿತು ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ, ಶಾಸಕ ಅಶೋಕ್ ಪಟ್ಟಣ್, ನಾವು ಮೂರ್ನಾಲ್ಕು ದಿನ ದೆಹಲಿಯಲ್ಲಿ ಉಳಿಯುತ್ತೇವೆ. ನಮ್ಮ ಹೈಕಮಾಂಡ್ ನಾಯಕರಾದ ವೇಣುಗೋಪಾಲ್, ಸುರ್ಜೇವಾಲಾ ಸೇರಿದಂತೆ ಹಲವು ಹೈಕಮಾಂಡ್ ನಾಯಕರನ್ನು ಭೇಟಿ ಆಗುತ್ತಿದ್ದೇವೆ. ಈ ವಿಚಾರವನ್ನು ಕಳೆದ ಅಧಿವೇಶನ ಸಮಯದಲ್ಲೇ ಸಿಎಂ, ಡಿಸಿಎಂ ಗಮನಕ್ಕೆ ತಂದಿದ್ದೇವೆ. ಈಗ ಒಂದೇ ಅಜೆಂಡಾ ಇಟ್ಟಕೊಂಡು ಹೋಗುತ್ತಿದ್ದೇವೆ ಎಂದು ಪಟ್ಟಣ್ ತಿಳಿಸಿದರು. ಅಲ್ಲದೇ, ನಾಯಕತ್ವ ನಮಗೆ ಸಂಬಂಧಿಸಿಲ್ಲ, ಕೂಡಲೇ ಸಂಪುಟ ಪುನಾರಚನೆಗೆ ಆಗಬೇಕು ಎನ್ನುವುದಷ್ಟೇ ನಮ್ಮ ಒತ್ತಾಯ. ನಾಲ್ಕೈದು ಬಾರಿ ಮಂತ್ರಿ ಆದವರೇ ಮತ್ತೆ ಆದರೆ ಹೇಗೆ ? ಹೀಗಾಗಿ ಉಳಿದ ಎರಡು ವರ್ಷದಲ್ಲಿ ನಮಗೆ ಅವಕಾಶ ಕೊಡಿ ಎಂದು ಕೇಳಿದ್ದೇವೆ. ಈ ವಿಚಾರವಾಗಿ ಹೈಕಮಾಂಡ್ ಮೇಲೆ ಒತ್ತಡ ಹಾಕಬೇಕಿದೆ ಎಂದರು.

ಹೊಸದಿಲ್ಲಿಗೆ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲು ಸಿಎಂ ಬೆಂಬಲಿಗರೂ ಹೋಗ್ತಿದಾರೆ, ಡಿಕೆಶಿ ಬೆಂಬಲಿಗರೂ ಹೋಗ್ತಿದಾರೆ, ಏನೇ ಆದರೂ ನಮ್ಮದು ಒನ್ ಲೈನ್ ಅಜೆಂಡಾ ಅಷ್ಟೇ.

■ ಅಶೋಕ್ ಪಟ್ಟಣ್, ವಿಧಾನಸಭೆ ಸರ್ಕಾರಿ ಮುಖ್ಯ ಸಚೇತಕ

ನಮಗೂ ಸಚಿವ ಸ್ಥಾನ ಬೇಕು: ಪುಟ್ಟರಂಗಶೆಟ್ಟಿ

ಇನ್ನು ಶಾಸಕ ಪುಟ್ಟರಂಗಶೆಟ್ಟಿ ಮಾತನಾಡಿ, ನಾವೆಲ್ಲ ಹಿರಿಯ ಶಾಸಕರು. ಎರಡು ವರ್ಷಗಳ ನಂತರ ನಾಯಕರು ಅನುಕೂಲ ಮಾಡಿ ಕೊಡುತ್ತೇವೆ ಎಂದಿದ್ದರು. ಎರಡು ವರ್ಷ ಕಳೆದರೂ ಇನ್ನೂ ಏನೂ ಆಗಿಲ್ಲ. ಹೀಗಾಗಿ ಹೈಕಮಾಂಡ್ ನಾಯಕರನ್ನ ಭೇಟಿ ಮಾಡುತ್ತಿದ್ದೇವೆ. ನನಗೆ ಒಂದು ವರ್ಷದ ಬಳಿಕ ಸಚಿವ ಸ್ಥಾನ ಕೊಡುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದರು. ನಮ್ಮಲ್ಲೂ ಕೆಲವು ವ್ಯತ್ಯಾಸಗಳು ಇವೆ, ಹೀಗಾಗಿ ದೆಹಲಿಗೆ ಹೋಗುತ್ತಿದ್ದೇವೆ. ಸಂಪುಟದಿಂದ ಯಾರನ್ನ ಬಿಡಬೇಕು, ಯಾರಿಗೆ ಕೊಡಬೇಕು ಅನ್ನೋದು ಹೈಕಮಾಂಡ್‌ಗೆ ಗೊತ್ತಿರುತ್ತದೆ ಎಂದು ಪುಯಟ್ಟರಂಗಶೆಟ್ಟಿ ಹೇಳಿದರು.

ಬದುಕಿನ ಹಾದಿಯಲ್ಲಿ ಪರಿಶ್ರಮದ ಚಿತ್ತಾರ

▸ ಸುಬ್ರಾಯ ನಂದೋಡಿ

ಸೇವಾಗಾಥ
ಕಥೆ-3



ಹೊಸ ಜೀವನದ ಕನಸುಗಳೊಂದಿಗೆ ಹಣೆಯಲ್ಲಿ ಸಿಂಧೂರ, ಕೈಗಳಲ್ಲಿ ಮೆಹಂದಿ ಮತ್ತು ಕೆಂಪು ಬಣ್ಣದ ಮದುವೆಯ ಉಡುಪಿನಲ್ಲಿ ಕಂಗೊಳಿಸುತ್ತಿದ್ದ ರಾಖಿ, ಉಷಾ ಮತ್ತು ಸೀಮಾರ ಮುಖದಲ್ಲಿ ಇಂದು ಸಂಭ್ರಮ ಮನೆ ಮಾಡಿತ್ತು. ಈ ಯುವತಿಯರುಅನೂಪಗಢದಸೇವಾ ಭಾರತಿಯು ಆಯೋಜಿಸಿದ್ದ ಸಾಮೂಹಿಕ ವಿವಾಹ ಕಾರ್ಯ ಕ್ರಮದಲ್ಲಿ ವಧುಗಳಾಗಿನಿಂತಿದ್ದರು.ಒಂದುಕಾಲದಲ್ಲಿಭಿಕ್ಷೆ ಬೇಡಲು ಹೋಗುತ್ತಿದ್ದ ಅದೇ ಗಲ್ಲಿಗಳಿಂದ ಈ ಯುವತಿಯರ ಮದುವೆಯ ಮೆರವಣಿಗೆಹೊರಟುಸಂಭ್ರಮಿಸಿದಾಗ ಅವರ ತಾಯಿತಂದೆಯರು ಮಾತ್ರವಲ್ಲದೆ ಆ ಮೊಹಲ್ಲಾದಲ್ಲಿರುವ ಎಲ್ಲರೂ ಸೇವಾಭಾರತಿಯ ಕಾರ್ಯಕರ್ತರಿಗೆ ಆಶೀರ್ವಾದದ ಸುರಿಮಳೆ ಗೈಯ್ದರು. ರಾಜಸ್ಥಾನದಅನೂಪಗಢದ ಸೇವಾ ಭಾರತಿಯ ಸ್ವಾವಲಂಬನಾ ಕೇಂದ್ರವು ಭಿಕ್ಷೆ ಬೇಡುತ್ತಿದ್ದ ಈ ಕುಟುಂಬದ ಯುವತಿಯರಿಗೆ ಹೊಲಿಗೆ, ಬ್ಯೂಟಿಷೀಯನ್ ಮತ್ತು ಇತರ ಉದ್ಯೋಗ ತರಬೇತಿಗಳನ್ನು ನೀಡಿ ಆತ್ಮನಿರ್ಭ ರತೆಯ ದಾರಿ ತೋರಿಸಿದೆ.

ಆಹಾರಕ್ಕಾಗಿ ಕೈ ಚಾಚುತ್ತಿದ್ದ ಸೀಮಾ ಯಾರ ಮನೆಯಲ್ಲಿ ಅಪಮಾನವನ್ನು ಸಹಿಸುತ್ತಿದ್ದಳೋ ಅದೇ ಮನೆಯ ವಧುವಿನ ಕೈಗಳನ್ನು ಮೆಹಂದಿಯಿಂದ ಸಿಂಗರಿಸಲು ಹೋಗುತ್ತಿದ್ದಾಳೆ. ಹಲವಾರು ವರ್ಷಗಳಿಂದ ಮನೆಮನೆಯಿಂದ ಧಾನ್ಯಗಳನ್ನು ಬೇಡುತ್ತಿದ್ದ ಪೂನಂಗೆ 'ಧಾನ್ಯ' ಎಂದೇ ಹೆಸರಾಗಿ ಹೋಗಿತ್ತು. ಇಂದು ಅದೇ ಪೂನಂ ಸ್ವಾವಲಂಬನಾ ಕೇಂದ್ರದಲ್ಲಿ ಹೊಲಿಗೆ ಕಲಿತ ನಂತರ ಪೂನಂ ಬೊಟಿಕ್ ತೆರೆಯಲು ತಯಾರಿ ನಡೆಸಿರುವಳು.

ಅನೂಪಗಢದಲ್ಲಿ ಸಾನ್ಸಿ, ಬಿಹಾರಿ, ಧೋಲಿ, ಬಾಜಿಗರ್ ವಸತಿಯ ಸುಮಾರು 110 ಕುಟುಂಬಗಳಿವೆ. ಈ ಕುಟುಂಬಗಳುಒಂದು ಕಾಲದಲ್ಲಿ ಶಿಕ್ಷಣ, ಉದ್ಯೋಗ ಮತ್ತು ಸಭ್ಯ ನಾಗರಿಕ ಸಮಾಜದಿಂದ ದೂರವಿದ್ದು, ಬೀದಿಬದಿಗಳಲ್ಲಿ ಅಕ್ಕಿದವಸಧಾನ್ಯಗಳನ್ನುಕಸದರಾಶಿಯಲ್ಲಿಹುಡುಕುತ್ತಾ, ಬರಿದಾದ ಜೀವನವನ್ನು ಸಾಗಿಸುತ್ತಿದ್ದರು. ಸೇವಾಭಾರತಿ ಜೋಧ್ಪುರ್ ಪ್ರಾಂತದ, ಸ್ವಾವಲಂಬನ್ ಪ್ರಮುಖರಾದ ದಿನಕರ್ ಪಾರೀಕ್ ಮತ್ತು ಕ್ಷೇತ್ರೀಯ ಪ್ರಶಿಕ್ಷಣ ಪ್ರಮುಖ ಗೋವಿಂದ್ ಕುಮಾರ್ ಜಿ ಅವರ ಏಳೆಂಟು ವರ್ಷಗಳ ಪ್ರಯತ್ನದಿಂದ, ಈ ಎಲ್ಲಾ ಕುಟುಂಬಗಳು ಜೀವನದಲ್ಲಿ ಶ್ರಮವಹಿಸಿ ಸ್ವಾಭಿಮಾನದಿಂದ ಬದುಕಲು ಕಲಿತಿದ್ದಾರೆ.

ಅಜ್ಞಾನದ ಅಂಧಕಾರದಲ್ಲಿ ಮದ್ಯದಅಮಲಿನಲ್ಲಿ ಮುಳುಗಿ, ಎರಡು ಹೊತ್ತಿನ ಊಟದ ಹುಡುಕಾಟದಲ್ಲಿದ್ದ ಈ ಸೇವಾಬಸ್ತಿಯ ಜನರುತಮ್ಮ ಮಕ್ಕಳಿಗೆ ಶಿಕ್ಷಣನೀಡುವ ಆಲೋಚನೆಯಿಂದ ದೂರವಾಗಿದ್ದರು ಎಂದು ಗೋವಿಂದಜೀ ನುಡಿಯುತ್ತಾರೆ. ಕಾರ್ಯಕರ್ತರ ನಿರಂತರ ಪ್ರಯತ್ನದಿಂದ, 250ಕ್ಕೂ ಹೆಚ್ಚು ಮಕ್ಕಳು ಈಗ ಹತ್ತಿರದ ಸರ್ಕಾರಿ ಶಾಲೆಗಳಲ್ಲಿ ಓದುತ್ತಿದ್ದಾರೆ. ಕಿಶೋರಿ ಕೇಂದ್ರಗಳಲ್ಲಿ ಹದಿಹರೆಯದ ಬಾಲಕಿಯರ ತರಬೇತಿಯ ಬಗ್ಗೆ ವಿಶೇಷ ಗಮನ ಹರಿಸುತ್ತಿರುವ ಅನೂಪಗಢ ತಾಲೂಕಿನ ಮಹಿಳಾ ಮಂಡಲಿಯ ಅಧ್ಯಕ್ಷೆಯಾದ ಜಯ ವಿಜಯ ಚೌಧರಿಯವರು ತಮ್ಮ ಸೇವಾಕಾರ್ಯದ ಓಡಾಟದಲ್ಲಿ ಅನೇಕ ಸೇವಾಬಸ್ತಿಯ ಮಹಿಳೆಯರಲ್ಲಿ ಉಂಟಾದ ಸುಧಾರಣೆಗೆ ಸಾಕ್ಷಿಯಾಗಿದ್ದಾರೆ. ಸೇವಾಭಾರತಿಯ ಸ್ವಾವಲಂಬನಾ ಕೇಂದ್ರದ ಮೂಲಕ ವರ್ಷಪೂರ್ತಿ 17 ಪ್ರಕಲ್ಪಗಳು ಇಲ್ಲಿ ನಡೆಯುತ್ತಿವೆ. ಇಲ್ಲಿ ಮಹಿಳೆಯರು ಹೊಲಿಗೆಯನ್ನು ಕಲಿಯುತ್ತಾ, ಬ್ಯಾಗ್, ಡೈಪರ್ಸ್, ಬಂಟಿಂಗ್ಸ್, ಧ್ವಜ ಮೊದಲಾದವುಗಳನ್ನು ತಯಾರಿಸುತ್ತಾರೆ. ಸೇವಾಬಸ್ತಿಯ ಮಹಿಳೆಯರು ಮಳೆಗಾಲದಲ್ಲಿ ರಕ್ಷೆಗಳನ್ನು, ದೀಪಾವಳಿಯ ಸಂದರ್ಭದಲ್ಲಿ ದೀಪ ಮತ್ತು ಲಕ್ಷ್ಮೀ, ಗಣೇಶರ ವಿಗ್ರಹಗಳನ್ನು ತಯಾರಿಸುತ್ತಾ ಕುಟುಂಬಕ್ಕೆ ಆರ್ಥಿಕ ಕೊಡುಗೆ ನೀಡುತ್ತಿದ್ದಾರೆ.

ಶ್ರೀಗಂಗಾನಗರ ವಿಭಾಗದ ಮಾತೃಮಂಡಳಿಯ ಸಹವಿಭಾಗ ಸಂಯೋಜಕಿ ಭಗವತೀಜೀ ಪಾರೀಕ್ ಅವರ ಉಪಕ್ರಮ ಮತ್ತು ಚಿಂತನೆಯಿಂದಾಗಿ ಇಂದು ಈ ಯುವಕರು ಸ್ವಾಭಿಮಾನದಿಂದ ಕೈಗಾಡಿಯನ್ನು ನಡೆಸುವ ಮೂಲಕ ತಮ್ಮ ಕುಟುಂಬಗಳಿಗೆ ಆಧಾರವಾಗಿದ್ದಾರೆ. ಕಬ್ಬಿಣದ ಕೆಲಸಗಳನ್ನು ಮಾಡಿ ಜೀವನ ಸಾಗಿಸುತ್ತಿದ್ದ ಲೋಹಾರ್ಸಮುದಾಯದಜನರಿಗೆ ಕಿಸಾನ್ ಕಾರ್ಡ್ ಮಾಡಿಸಿ ಕೊಡಲಾಯಿತು. ಈಗ ಅವರು ಕೃಷಿ ಯಂತ್ರೋಪಕರಣಗಳನ್ನು ತಯಾರಿಸುವ ಮೂಲಕ ಸ್ವಾಭಿಮಾನದ ಬದುಕು ಸಾಗಿಸುತ್ತಿದ್ದಾರೆ.

ಮನಸ್ಸಿನಲ್ಲಿ ಒಳ್ಳೆಯ ಸಂಕಲ್ಪ ಮತ್ತು ಪೂರ್ಣ ಪರಿಶ್ರಮ ಇದ್ದರೆ, ಸಂಕಲ್ಪ ಈಡೇರಲು ಹೆಚ್ಚು ಸಮಯ ಹಿಡಿಸುವುದಿಲ್ಲ. ಯಾರ ಪರಿಸ್ಥಿತಿಯನ್ನೇ ಆಗಲಿ ಬದಲಾಯಿಸಲು ಸಮಾಜದ ಸಹಭಾಗಿತ್ವ ಮತ್ತು ಉತ್ತಮ ಮಾರ್ಗದರ್ಶನ ಸಾಕು. 2019 ರ ಡಿಸೆಂಬರ್‌ನಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಥಮಿಕ ಶಿಕ್ಷಾವರ್ಗವನ್ನು ಅನೂಪಗಢದಲ್ಲಿ ನಡೆಸಿದಾಗ, ಇತರರ ಮುಂದೆ ಆಹಾರಕ್ಕಾಗಿ ಕೈ ಚಾಚುತ್ತಿದ್ದ ಅದೇ ಸ್ವಾವಲಂಬಿ ಕುಟುಂಬಗಳು 100 ಸ್ವಯಂಸೇವಕರಿಗೆ 7 ದಿನಗಳ ಕಾಲ ಬಹಳ ಉತ್ಸಾಹದಿಂದ ಭೋಜನ ತಯಾರಿಸಿದರು. ಈ ಸೇವಾಬಸ್ತಿಯು ಎಲ್ಲಾ ಭೇದಭಾವಗಳನ್ನು ಮರೆತು ಸಾಮರಸ್ಯ ಮತ್ತು ಸ್ವಾವಲಂಬನೆಯಲ್ಲಿ ಮುಂಚೂಣಿಯಲ್ಲಿದೆ.

ಸಂಪಾದಕೀಯ

ಮಾತುಕತೆಗೆ ವಿಶ್ವಾಸಾರ್ಹ ರಾಷ್ಟ್ರ ಮುಖ್ಯ

ಅಮೆರಿಕಾ-ಇರಾನ್ ಮಾತುಕತೆಗಳು ಇಸ್ಲಾಮಾಬಾದ್‌ನಲ್ಲಿ ಫಲಕಾರಿಯಾಗದೇ ಮುಕ್ತಾಯಗೊಂಡಿರುವುದು ಮಧ್ಯಪ್ರಾಚ್ಯದಲ್ಲಿ ಶಾಂತಿಯ ಸಾಧ್ಯತೆ ಇನ್ನೂ ದೂರದಲ್ಲಿದೆ ಎಂಬುದನ್ನು ಸ್ಪಷ್ಟಪಡಿಸಿದೆ. ಸುಮಾರು 21 ಗಂಟೆಗಳ ಕಾಲ ನಡೆದ ಈ ಉನ್ನತ ಮಟ್ಟದ ಮಾತುಕತೆಗಳು ಯಾವುದೇ ಒಪ್ಪಂದವಿಲ್ಲದೆ ಅಂತ್ಯಗೊಂಡಿದ್ದು, ಯುದ್ಧ ವಿರಾಮದ ಭವಿಷ್ಯವೂ ಅನುಮಾನಾಸ್ಪದವಾಗಿದೆ.

ಈ ಮಾತುಕತೆಗಳು ಸಾಮಾನ್ಯ ರಾಜತಾಂತ್ರಿಕ ಪ್ರಯತ್ನವಲ್ಲ. ಇವು 1979ರ ಬಳಿಕ ಅಮೆರಿಕಾ-ಇರಾನ್ ನಡುವೆ ನಡೆದ ಅತ್ಯಂತ ಮಹತ್ವದ ನೇರ ಸಂವಾದವೆಂದು ಪರಿಗಣಿಸಲಾಗಿದೆ. ಆದರೆ ಪರಸ್ಪರ ಅವಿಶ್ವಾಸ, ತಂತ್ರಜ್ಞಾನ ಹಾಗೂ ಪ್ರಾದೇಶಿಕ ಪ್ರಾಬಲ್ಯದ ಪ್ರಶ್ನೆಗಳು ಒಪ್ಪಂದಕ್ಕೆ ಅಡ್ಡಿಯಾದವು.

ಮುಖ್ಯವಾಗಿ, ಇರಾನ್ ತನ್ನ ಅಣು ಕಾರ್ಯಕ್ರಮವನ್ನು ಕೈಬಿಡಲು ಸಮ್ಮತಿಸದಿರುವುದು ಮತ್ತು ಅಮೆರಿಕಾ ತನ್ನ ನಿರ್ಬಂಧಗಳನ್ನು ಸಡಿಲಿಸಲು ಹಿಂಜರಿದಿರುವುದು ಸಂಘರ್ಷದ ಕೇಂದ್ರಬಿಂದುವಾಗಿದೆ. ಜೊತೆಗೆ, ಹಾರ್ಮುಝ್ ಜಲಸಂಧಿ ಮೇಲಿನ ನಿಯಂತ್ರಣ, ಲೆಬನಾನ್‌ನಲ್ಲಿ ಯುದ್ಧ ವಿರಾಮ ಮತ್ತು ಯುದ್ಧ ಪರಿಹಾರ ಮೊತ್ತದಂತಹ ವಿಷಯಗಳು ಮಾತುಕತೆಯನ್ನು ಇನ್ನಷ್ಟು ಸಂಕೀರ್ಣಗೊಳಿಸಿವೆ. ಇದಲ್ಲದೆ, ಇಸ್ರೇಲ್-ಇರಾನ್ ಸಂಘರ್ಷದ ಹಿನ್ನೆಲೆಯಲ್ಲಿ ಈ ಮಾತುಕತೆಗಳು ನಡೆದಿದ್ದು, ಮಧ್ಯಪ್ರಾಚ್ಯ ರಾಜಕೀಯದ ತೀವ್ರತೆ ಮತ್ತಷ್ಟು ಹೆಚ್ಚಿಸಿದೆ. ಯುದ್ಧದ ಪರಿಣಾಮವಾಗಿ ಜಾಗತಿಕ ತೈಲ ಸರಬರಾಜು ಅಸ್ಥಿರಗೊಂಡಿದ್ದು, ಆರ್ಥಿಕ ಅಲೆಮಾರಿ ಉಂಟಾಗಿದೆ.ಈ ಸ್ಥಿತಿಯಲ್ಲಿ ಪಾಕಿಸ್ತಾನದ ಮಧ್ಯಸ್ಥಿಕೆ ಬಗ್ಗೆಯೂ ಗಮನ ಹರಿಸಬೇಕಾದುದು ಮುಖ್ಯ. ಇಂಥ ಸಂದರ್ಭಗಳಲ್ಲಿ ಒಂದು ವಿಶ್ವಾಸಾರ್ಹ ಅಥವಾ ಜಾಗತಿಕವಾಗಿ ಉತ್ತಮ ಹೆಸರು ಇರಿಸಿಕೊಂಡಿರುವ ದೇಶದ ಮಧ್ಯಸ್ಥಿಕೆ ಬೇಕಾಗಿತ್ತು. ಆದರೆ, ತಾನು ಹೇಳಿದಂತೆ ಕೇಳುವ ಮತ್ತು ವಿಫಲವಾದರೆ ಅದೇ ದೇಶವನ್ನು ಹೊಣೆ ಮಾಡುವ ಟ್ರಂಪ್ ಅವರ ಆಲೋಚನೆಯಿಂದಾಗಿ ಈ ದೇಶವನ್ನು ಆರಿಸಿಕೊಳ್ಳಲಾಗಿದೆ ಎಂಬುದೂ ಸ್ಪಷ್ಟ. ಹೀಗಾಗಿ, ಶಾಶ್ವತ ಶಾಂತಿಗಾಗಿ ಸದೃಢ ಮತ್ತು ವಿಶ್ವಾಸಾರ್ಹ ದೇಶಗಳನ್ನು ಆರಿಸಿಕೊಳ್ಳಬೇಕು. ಜತೆಗೆ, ಮಧ್ಯಸ್ಥಿಕೆಗೆ ಬಂದವರಿಗೆ ಗೌರವ ಕೊಡುವುದನ್ನು ಟ್ರಂಪ್ ಕಲಿತರೆ ಮಾತ್ರ ಈ ಯುದ್ಧ ನಿಲ್ಲಬಹುದೇನೋ.

ಇದರ ನಡುವೆಯೇ, ಟ್ರಂಪ್ ಮತ್ತಷ್ಟು ದ್ವೇಷದ ಕ್ರಮಕ್ಕೆ ಮುಂದಾಗಿದ್ದಾರೆ. ಹಾರ್ಮುಝ್ ಜಲಸಂಧಿಯಿಂದ ಯಾವುದೇ ಹಡಗನ್ನು ಬಿಡುವುದಿಲ್ಲ. ನಮ್ಮ ನೌಕಾ ಪಡೆ ನಿರ್ಬಂಧ ಹಾಕಲಿದೆ ಎಂದಿದ್ದಾರೆ. ಈ ಮೂಲಕ ಇಡೀ ಜಗತ್ತಿನ ತೈಲ ಬೇಡಿಕೆಗೆ ದೊಡ್ಡ ಅಡ್ಡಿಯಾಗುವ ಎಲ್ಲ ಸಾಧ್ಯತೆಗಳನ್ನೂ ತೋರಿದ್ದಾರೆ. ಇದು ಬೇಕಿಲ್ಲದ ಯುದ್ಧಕ್ಕೆ ಕೈ ಹಾಕಿ, ಈಗ ತನಗೆ ತಿಳಿದ ಅತಿರೇಕದ ಹಾದಿ ತುಳಿಯುವ ನಿಟ್ಟಿನಲ್ಲಿ ಟ್ರಂಪ್ ಹೆಜ್ಜೆ ಇಟ್ಟಿದ್ದಾರೆ ಎಂದು ಹೇಳಬಹುದು. ಒಟ್ಟಿನಲ್ಲಿ, ಈ ಬೆಳವಣಿಗೆಗಳು ಜಾಗತಿಕ ರಾಜಕೀಯದಲ್ಲಿ ಶಾಂತಿ ಎನ್ನುವುದು ಕೇವಲ ಮಾತುಕತೆಗಳಿಂದ ಸಾಧ್ಯವಿಲ್ಲ ಎಂಬುದನ್ನು ತೋರಿಸುತ್ತವೆ. ಪರಸ್ಪರ ವಿಶ್ವಾಸ, ತ್ಯಾಗ ಮತ್ತು ದೀರ್ಘಕಾಲಿಕ ರಾಜತಾಂತ್ರಿಕ ದೃಷ್ಟಿಕೋನವೇ ಶಾಶ್ವತ ಪರಿಹಾರಕ್ಕೆ ದಾರಿ ಮಾಡಿಕೊಡಬಲ್ಲದು.

ಪ್ರಾಣದೀವಿಗೆಯಾದರು ಕವಿ ಶಿವರಾಮು

ನೇರ ನೋಟ

• ದು.ಗು. ಲಕ್ಷ್ಮಣ
dugulakshman@yahoo.com



ರಾಷ್ಟ್ರ ದೇವಗೆ ಪ್ರಾಣ ದೀವಿಗೆ, ಸೇವೆಯಾಗಲಿ ನಾಡಿಗೆ
ಮೃತ್ಯು ಭೃತ್ಯನು ಹಿಂದು ಭೂಮಿಗೆ
ಮರಣ ಕಾದಿದೆ ಸಾವಿಗೆ।

ಅದು 1962 ರಲ್ಲಿ ಭಾರತದ ಅರುಣಾಚಲ ಪ್ರದೇಶ ಗಡಿಯಲ್ಲಿ ಚೀನಾ ಕಾಲು ಕೆದರಿ ಆಕ್ರಮಣ ಮಾಡಿದ ಸಂದರ್ಭ. ಇಡೀ ದೇಶದಲ್ಲಿ ಯುದ್ಧದ ಪರಿಣಾಮ ಕಂಡುಬಂದಿತ್ತು. ಅದೇ ವರ್ಷ ಡಿಸೆಂಬರ್ 8, 9 ರಂದು ಬೆಂಗಳೂರಿನಲ್ಲಿ ಆರ್‌ಎಸ್‌ಎಸ್‌ನ ಪ್ರಾಂತ ತರುಣ ಶಿಬಿರ. ಆ ಶಿಬಿರದಲ್ಲಿ ಆಗಿನ ಸರಸಂಘಚಾಲಕರಾಗಿದ್ದ ಶ್ರೀ ಗುರೂಜಿಯವರು ಪಾಲ್ಗೊಂಡಿದ್ದರು. ಡಿ. 9ರಂದು ಸಂಜೆ ಸಾರ್ವಜನಿಕ ಸಮಾರಂಭದಲ್ಲಿ 'ರಾಷ್ಟ್ರ ದೇವಗೆ...' ಎಂಬ ದೇಶಭಕ್ತಿ ಗೀತೆ ಮೊಳಗಿತು. ಅದಕ್ಕೆ ರಾಗ ಹಾಕಿ ಸುಶ್ರಾವ್ಯವಾಗಿ ಹಾಡಿದವರು ಧಾರವಾಡ ಆಕಾಶವಾಣಿಯ ಕಲಾವಿದ ಕೇಶವ ಗುರ್ರಂ ಅವರು. ಸಮಾಜದಲ್ಲಿನ ಸುಪ್ತ ಪೌರುಷವನ್ನು ಬಡಿದೆಬ್ಬಿಸುವಂತಹ ಭಾವ ಗರ್ಭಿತ ಈ ಹಾಡು ಚೀನಾ ವಿರುದ್ಧ ನಡೆದ ಯುದ್ಧದ ಹಿನ್ನೆಲೆಯಲ್ಲಿ ಅತ್ಯಂತ ಸಮಯೋಚಿತವಾಗಿತ್ತು. ವೀರೋಚಿತ ವಿಚಾರ, ಪೌರುಷ ಆವಾಹಿಸುವ ರಾಗ ಸಂಯೋಜನೆ ಹಾಗೂ ಹಾಡುಗಾರರ ಕಂಠಸಿರಿ ಇವುಗಳ ತ್ರಿವೇಣಿ ಸಂಗಮದಿಂದಾಗಿ ಆ ಹಾಡು ಬಹುಬೇಗನೆ ಜನಪ್ರಿಯವಾಯಿತು.

ಅಷ್ಟಕ್ಕೂ ಆ ಗೀತೆ ರಚಿಸಿದ ಕವಿಯನ್ನೇ ಸ್ಮರಿಸದಿದ್ದರೆ ಹೇಗೆ ? ಪೌರುಷ ಉಕ್ಕಿಸುವ, ದೇಶದ ಬಗ್ಗೆ ಹೆಮ್ಮೆ ಮೂಡಿಸುವ ಆ ಗೀತೆ ರಚಿಸಿದವರು ತರುಣಕವಿ ಶಿವರಾಮು. ನಾಲ್ಕು ಚರಣಗಳ ಆ ಗೀತೆಯ ಕೊನೆಯ ಚರಣದ ಕೊನೆಯ ಎರಡು ಸಾಲುಗಳು "ಬಾಳಬಲ್ಲೆವು ಆಳಬಲ್ಲೆವು ಸೋಲನೊಲ್ಲೆವು ಒಲ್ಲೆವು। ವಿಶ್ವವೆಲ್ಲವು ಮುನಿದು ನಿಂತರು ನಾಡನುಳಿಸಲು ಬಲ್ಲೆವು" ಇಡೀ ಗೀತೆಯ ಸಂದೇಶದಂತಿತ್ತು. ಹಾಡಿನ ಪಲ್ಲವಿಯಲ್ಲಿ ಬರುವ 'ಮರಣ ಕಾದಿದೆ ಸಾವಿಗೆ' ಎಂಬ ಸಾಲನ್ನು ಗಮನಿಸಿದ ಪ್ರಖ್ಯಾತ ಕವಿ ದ.ರಾ. ಬೇಂದ್ರೆ ಅಜ್ಜ "ಅದೇನು ಕಲ್ಪನಾರೀ ಈ ಕವೀದು. ಸಾವಿಗೇ ಮರಣ ಕಾದಿದೆ ಎಂದು ಬರೆದಿದ್ದಾನಲ್ರೀ, ಶಭಾಷ್" ಎಂದು ಕೊಂಡಾಡಿದ್ದರಂತೆ (ಕೆಲವು ಉಗ್ರ ಹಿಂದು ದೇಶಭಕ್ತರು 'ಅದು ಮರಣ ಕಾದಿದೆ ಸಾಬಿಗೆ' ಎಂದಾಗಬೇಕು ಎಂದು ತಮ್ಮ ತಮ್ಮಲ್ಲಿ ಹೇಳಿಕೊಂಡಿದ್ದರಂತೆ! ಬಿಡಿ, ಆ ಮಾತು ಬೇರೆ)

ಈ ದೇಶಭಕ್ತಿ ಗೀತೆಯು ಅನಂತರ ಅದೆಷ್ಟು ಅಗಣಿತ ಮಂದಿ ಸ್ವಯಂಸೇವಕರ, ಸಾರ್ವಜನಿಕರ ಬಾಯಲ್ಲಿ ಮಾರ್ದನಿಸಿತೋ ಲೆಕ್ಕವಿಟ್ಟವರಾರು? ಈಗಲೂ ಸಂಘವಲಯದಲ್ಲಿ ಅದೊಂದು ಅತ್ಯಂತ ಜನಪ್ರಿಯ ಗೀತೆ. ಆ ಗೀತೆಯನ್ನು ಗುನುಗುತ್ತಾ ಮೈಮನಗಳಲ್ಲಿ ದೇಶ ಪ್ರೇಮದ ಕಾವು ತುಂಬಿಕೊಂಡವರು ಅದೆಷ್ಟೋ. ಶಿವರಾಮು ಅದೊಂದೇ ಗೀತೆ ಬರೆದುದಲ್ಲ. 'ತೆರೆದು ಬಿಡು ಹೃದಯ ದ್ವಾರ, ಬರಲಿ ಬಿಡು ಸಮಿರ ನೇರ', 'ರಣಮಂತ್ರದುಚ್ಚಾರ ಘನಶೌರ್ಯದೋಂಕಾರ', 'ಉಘೇ ವೀರಭೂಮಿಗೆ', 'ಓ ಏಳು ಮೈತಾಳು', 'ಐಕ್ಯತೆಯು ಮಣ್ಣಾಡಿ ಭಾರತಿಯು ಬಳಲಿರಲು' , 'ಓ ಬೆಳಗಲಿಹುದದೋ ಭಾರತದ ಬಾನಂಚು' ಮುಂತಾದ ಹಲವಾರು ದೇಶಭಕ್ತಿ ಗೀತೆಗಳನ್ನು ರಚಿಸಿದ್ದಾರೆ. ಅವುಗಳನ್ನು ಲಕ್ಷಾಂತರ ಕಂಠಗಳು ಭಕ್ತಿಯಿಂದ ಪಠಿಸಿವೆ. ತಮ್ಮ ಅದ್ಭುತ, ಮೈ ನವಿರೇಳಿಸುವ ಸಾಹಿತ್ಯ ಬಳಸಿ ಅವರು ಬರೆದ ದೇಶಭಕ್ತಿ ಗೀತೆಗಳು ಕನ್ನಡದ ದೇಶಭಕ್ತಿ ಗೀತೆಗಳ ಘನತೆ ಗೌರವ ಹೆಚ್ಚಿಸಿವೆ.

ಶಿವರಾಮು ಎಂದೆ ಪ್ರಸಿದ್ಧರಾಗಿದ್ದ ಎಂ.ಎಸ್. ಶಿವರಾಮಯ್ಯ ಜನಿಸಿದ್ದು ಮಳವಳ್ಳಿಯಲ್ಲಿ, 1936ರ ಜುಲೈ 8 ರಂದು. ತಂದೆ ಸೀತಾರಾಮಯ್ಯ, ತಾಯಿ ಸೀತಮ್ಮ. ಪ್ರಾರಂಭಿಕ ವಿದ್ಯಾಭ್ಯಾಸ ಮಳವಳ್ಳಿಯಲ್ಲಿ. ಇಂಜಿನಿಯರಿಂಗ್ ಓದಲು ಬೆಂಗಳೂರಿನ ಬಿಎಂಎಸ್ ಕಾಲೇಜಿಗೆ ಸೇರಿದರು. ಅನಾರೋಗ್ಯ, ಬಡತನ ಕಾರಣಗಳಿಂದ ಓದನ್ನು ಅರ್ಧಕ್ಕೆ ನಿಲ್ಲಿಸಬೇಕಾಯಿತು.

ನಂತರ ಶಿವರಾಮು ಅವರನ್ನು ಕೈಬೀಸಿ ಕರೆದದ್ದು ಆರ್‌ಎಸ್‌ಎಸ್. ಸಂಘದ ಕಾರ್ಯಕರ್ತರಾಗಿ, ಪ್ರಚಾರಕರಾಗಿ ಊರೂರು ಸುತ್ತಿದರು. ಅನಾರೋಗ್ಯ ಆರಂಭದಿಂದಲೂ ಕಾಡುತ್ತಿದ್ದುದರಿಂದ ಕೊನೆಗೆ ಬೆಂಗಳೂರಿನ ಕೇಶವ ಕೃಪಾದಲ್ಲಿ ನೆಲೆ ನಿಂತು ವಿಕ್ರಮ ಪತ್ರಿಕೆ, ರಾಷ್ಟ್ರೋತ್ಥಾನ ಸಾಹಿತ್ಯ ಮಾಲೆಗಳಿಗೆ ಬರೆದರು. 'ಉತ್ಥಾನ' ಮಾಸಪತ್ರಿಕೆಯ ಗೌರವ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದರು. ರಾಷ್ಟ್ರೋತ್ಥಾನ ಸಾಹಿತ್ಯ ಪ್ರಕಾಶನ ಕರ್ನಾಟಕದಲ್ಲಿ ತನ್ನದೇ ಛಾಪು ಮೂಡಿಸಿದರೆ ಅದಕ್ಕೆ ಶಿವರಾಮು ರಚಿಸಿದ 'ಆತ್ಮಾಹುತಿ', 'ನೆತ್ತರು ತಾವರೆ', 'ಒಂದು ಕಥೆ -ಒಂದು ವ್ಯಥೆ', ಭಾರತೀಯ ಸೈನಿಕರ ಹೋರಾಟದ ಕಥೆ 'ರಣವೀಳ್ಯ', ಸ್ವಧರ್ಮ, ಸ್ವದೇಶ ಸೇವೆಗಾಗಿ ಕೆಚ್ಚಿನಿಂದ ಹೋರಾಡಿದ ಅಮೋಘವರ್ಷ ನೃಪತುಂಗ, ಗಂಡುಗಲಿ ಕುಮಾರರಾಮ, ಕಿತ್ತೂರು ರಾಣಿ ಚೆನ್ನಮ್ಮ, ಮುಂಡರಗಿ ಭೀಮರಾಯ ಮುಂತಾದ 13 ಮಂದಿ ಕನ್ನಡ ವೀರಪುರುಷ, ಮಹಿಳೆಯರ ಸಂಸ್ಮರಣೆಯ ಕೃತಿ 'ಕನ್ನಡದ ಕಡುಗಲಿಗಳು' 'ಅಕ್ಕ ನಿವೇದಿತಾ' ಮೊದಲಾದ ಅದ್ಭುತ ಕೃತಿಗಳೇ ಕಾರಣ. ರಾಷ್ಟ್ರೋತ್ಥಾನ ಸಾಹಿತ್ಯಕ್ಕೆ ಬ್ರ್ಯಾಂಡ್ ವ್ಯಾಲ್ಯೂ ತಂದುಕೊಟ್ಟದ್ದು ಇದೇ ಕೃತಿಗಳು ಎಂದರೆ ಅದು ಉತ್ಪ್ರೇಕ್ಷೆಯಲ್ಲ.



ಅವರು ಆತ್ಮಾಹುತಿ (ಸಾವರ್ಕರ್ ಕುರಿತ ಅದ್ಭುತ ಕಾದಂಬರಿ) ಕೃತಿ ರಚಿಸುತ್ತಿದ್ದ ಸಂದರ್ಭ. ಮಲೆನಾಡು ಕೊಪ್ಪ ತಾಲೂಕಿನ ಜಯಪುರ ಸಮೀಪದ ಮಾಚಿಕೊಪ್ಪ ಎಂಬ ಸಣ್ಣ ಗ್ರಾಮದ ದಕ್ಷಿಣಾಮೂರ್ತಿ ಎಂಬ ಹಿರಿಯ ಕಾರ್ಯಕರ್ತರ ಮನೆಯಲ್ಲಿ ತಂಗಿದ್ದರು. ಒಂದು ಮಳೆಗಾಲದ ರಾತ್ರಿ. ಹೊರಗೆ ವಿಪರೀತ ಮಳೆ. ಶಿವಮೊಗ್ಗದ ಜಿಲ್ಲಾ ಪ್ರಚಾರಕರಾಗಿದ್ದ ಜಡೆ ಚಂದ್ರಶೇಖರ್ ವಿದ್ಯಾರ್ಥಿಯಾಗಿದ್ದ ನನ್ನನ್ನು ಜೊತೆಗೆ ಕರೆದುಕೊಂಡು ಶಿವರಾಮು ಇದ್ದ ಮಾಚಿಕೊಪ್ಪಕ್ಕೆ ಬಂದಿದ್ದರು. ಸಣಕಲು ಶರೀರದ ಕುಳ್ಳಗಿದ್ದ ಶಿವರಾಮು ಮೂಲೆಯಲ್ಲಿ ನೆಲದ ಮೇಲೆ ಕುಳಿತು ತಲೆತಗ್ಗಿಸಿ ಬರೆಯುತ್ತಿದ್ದರು. ಜಡೆಯವರು "ಏನ್ ಶಿವರಾಮು, ಎಲ್ಲಿವರೆಗೆ ಬಂತು ಬರವಣಿಗೆ?" ಎಂದು ಪ್ರಶ್ನಿಸಿದಾಗ, ಶಿವರಾಮು ಸಣ್ಣಗಿನ ಧ್ವನಿಯಲ್ಲಿ "ಸಾವರ್ಕರ್‌ರನ್ನು ಈಗ ಜೈಲಿಗೆ ಹಾಕಿದ್ದೇನೆ. ಇನ್ನೂ ಬರೆಯುವುದಿದೆ" ಅಂದಿದ್ದರು! ನನಗಾಗ ಆ ಕೃತಿಯ ತುದಿಬುಡ ಕೂಡ ತಿಳಿದಿರಲಿಲ್ಲ. ಆದರೆ ಅದು ಪ್ರಕಟವಾಗಿ ಅದ್ಭುತ ಜನಮೆಚ್ಚುಗೆ ಪಡೆದಾಗ ಶಿವರಾಮು ಇಂತಹ ಅದ್ಭುತ ಸಾಹಿತಿಯೆ ಎಂದು ಬೆರಗಾಗಿದ್ದೆ. ಆತ್ಮಹುತಿ ಓದಿ ರೋಮಾಂಚನಗೊಂಡಿದ್ದೆ. ಅದನ್ನೋದಿದ ಬಹುತೇಕರ ಅನುಭವವೂ ಇದಕ್ಕಿಂತ ಭಿನ್ನವಾಗಿರಲಿಲ್ಲ.

ಸಣಕಲು ಶರೀರ, ಸದಾ ಕಾಡುತ್ತಿದ್ದ ಅನಾರೋಗ್ಯ, ಬೆಂಗಳೂರಿನ ಹವೆ ಯಾಕೋ ಅವರಿಗೆ ಹೊಂದಿಕೆಯಾಗಲಿಲ್ಲ. ಆರೋಗ್ಯ ಮತ್ತಷ್ಟು ಹದಗೆಟ್ಟು 1996-97ರ ಹೊತ್ತಿಗೆ ವೈದ್ಯರ ಸಲಹೆಯಂತೆ ಶಿವರಾಮು ಬೆಂಗಳೂರು ಬಿಟ್ಟರು. ಅವರು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಇಂದಬೆಟ್ಟು ಗ್ರಾಮಕ್ಕೆ ಬಂದು ನೆಲೆಸಿದರು. ಆನಂತರ ಗೃಹಸ್ಥರೂ ಆದರು. ಕಾಸರಗೋಡು ತಾಲೂಕಿನಲ್ಲೂ ಕೆಲವು ಕಾಲ ನೆಲೆಸಿದ್ದರು.

1974 ರಲ್ಲಿ ನನ್ನ ಒಬ್ಬಳೇ ತಂಗಿಯ ವಿವಾಹ ಶೃಂಗೇರಿ ಸಮೀಪ ಮೇಗೂರಿನ ಗುಡ್ಡದ ಮೇಲಿರುವ ದುರ್ಗತೋಟ ಮನೆಯಲ್ಲಿ ಏರ್ಪಾಡಾಗಿತ್ತು. ನನ್ನ ಕೋರಿಕೆಯಂತೆ ಶಿವರಾಮು ಎಲ್ಲೆಲ್ಲೋ ಸುತ್ತಿ ,ಮೈಲುಗಟ್ಟಲೆ ನಡೆದು ಅಲ್ಲಿಗೆ ಬಂದಿದ್ದರು. ನನಗೋ ಶಿವರಾಮು ಬಂದಿದ್ದಾರೆಂದು ಖುಷಿ, ಸಂಭ್ರಮ. "ಶಿವರಾಮು ಅವರೇ ನಿಮಗೇನು ಕೊಡಲಿ?" ಎಂದೆ. ಗುಡ್ಡಹತ್ತಿ ಸುತ್ತಿ ಬಂದಿದ್ದ, ಏದುಸಿರು ಬಿಡುತ್ತಿದ್ದ ಶಿವರಾಮು "ನನಗೆ ಸ್ವಲ್ಪ ಉಸಿರು ಕೊಡು" ಎಂದರು. ನನಗೋ ಗಾಬರಿ. ತಕ್ಷಣ ತಣ್ಣಗಿನ ಜಾಗದಲ್ಲಿ ಹಾಸಿಗೆ ಹಾಸಿ ಅವರನ್ನು ಮಲಗಿಸಿ ಸುಧಾರಿಸಿಕೊಳ್ಳಲು ಹೇಳಿದ್ದೆ. ಅವರಿಗೆ ಪ್ರತಿ ಬಾರಿ ನಾನು ಪತ್ರ ಬರೆಯುತ್ತಿದ್ದಾಗಲೂ 'ನಿಮ್ಮ ಅನಾರೋಗ್ಯ ಈಗ ಹೇಗಿದೆ ? ' ಎಂದೇ ಕುಶಲೋಪರಿ ವಿಚಾರಿಸುತ್ತಿದ್ದೆ

'ಹಿಂದೂ ಬಂಡಾಯ', 'ಅರಳು- ಸುರಳಿ', 'ತಾಯೇ ವಂದಿಸುವೆ', 'ನನ್ನ ಜನ ನನ್ನ ಮನ' ಕವನ ಸಂಕಲನಗಳನ್ನು ಶಿವರಾಮು ರಚಿಸಿದ್ದಾರೆ. 'ಚಿನ್ನದ ಕತ್ತಿ' ಎಂಬ ಅವರ ವಿಡಂಬನಾ ಕೃತಿಯನ್ನು ಸಾಹಿತ್ಯ ದಿಗ್ಗಜ ಶಿವರಾಮ ಕಾರಂತರೂ ಮುಕ್ತವಾಗಿ ಪ್ರಶಂಸಿಸಿದ್ದರು. ರಾಷ್ಟ್ರೋತ್ಥಾನ ಸಾಹಿತ್ಯ ಪ್ರಕಟಿಸಿದ ಭಾರತ -ಭಾರತಿ ಮಕ್ಕಳ ಕೃತಿ ಮಾಲಿಕೆಗಾಗಿ ವಲ್ಲಭಭಾಯ್ ಪಟೇಲ್, ಭಕ್ತ ನಂದನಾರ್, ಬಾಜಿಪ್ರಭು ದೇಶಪಾಂಡೆ, ಸುಶೀಲಕುಮಾರ್ ಸೇನ್ ಮುಂತಾದವರ ಜೀವನ ಚರಿತ್ರೆಯನ್ನೂ ಶಿವರಾಮು ರಚಿಸಿದ್ದಾರೆ. ವೀರ ಸಾವರ್ಕರ್ ಕುರಿತ ಅವರ ಸ್ವತಂತ್ರ ಕೃತಿ 'ಆತ್ಮಾಹುತಿ'ಯನ್ನು ಓದಿದ ಬಂಡಾಯ ಸಾಹಿತಿ ಚಂಪಾ "ಎಂಥಾ ಅದ್ಭುತ ಕೃತಿ ಇದು. ಸಾವರ್ಕರ್ ಕುರಿತು ನನಗೆ ಭಿನ್ನಾಭಿಪ್ರಾಯವಿದೆ ನಿಜ. ಆದರೆ ಈ ಕೃತಿಯ ಶೈಲಿ ಅಮೋಘ" ಎಂದು ಕೊಂಡಾಡಿದ್ದರು.

ಇಂಥ ಒಬ್ಬ ಮೇರು ಸಾಹಿತಿ, ಕವಿಗೆ ಸರಕಾರ ಹಾಗೂ ಸಂಘ ಸಂಸ್ಥೆಗಳ ಹತ್ತು ಹಲವು ಪ್ರಶಸ್ತಿ ಪುರಸ್ಕಾರಗಳು ತಾನಾಗಿಯೇ ಒಲಿದು ಬಂದಿವೆ ಎಂದು ನೀವು ಭಾವಿಸಿದ್ದರೆ ಅದು ಶುದ್ಧ ತಪ್ಪು. ಉನ್ನತ ಪ್ರಶಸ್ತಿಗಳಿರಲಿ, ಸಾಧಾರಣ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ದೊರಕಲಿಲ್ಲ. ದೇಶಭಕ್ತಿಯ, ರಾಷ್ಟ್ರೀಯ ಸಾಹಿತ್ಯದ ಕವಿ, ಲೇಖಕ ಎಂಬುದೇ ಪ್ರಶಸ್ತಿ ವಿಷಯದಲ್ಲಿ ಅವರಿಗೆ 'ಮೈನಸ್ ಪಾಯಿಂಟ್' ಆಗಿ ಕಾಡಿದ್ದಿರಬಹುದು. ಪ್ರಶಸ್ತಿ, ಪುರಸ್ಕಾರಗಳೆಂದರೆ ಅದು ಎಡಪಂಥೀಯರಿಗೇ ಮೀಸಲು ಎಂಬ ಅಲಿಖಿತ ನಿಯಮ ಆಗಲೂ ಇತ್ತು. ಈಗಲೂ ಅದು ಬದಲಾಗಿಲ್ಲ. ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಈ ಅಲಿಖಿತ ನಿಯಮ ಬದಲಾಗುವುದಿಲ್ಲ. (ಎಡಪಂಥೀಯರ ಕಬಂಧ ಹಿಡಿತ ಆ ಮಟ್ಟಕ್ಕಿದೆ)

ಶಿವರಾಮು ಅವರ ಕೊನೆಯ ದಿನಗಳು ಏನೇನೂ ಚೆನ್ನಾಗಿರಲಿಲ್ಲ. ನಿಶ್ಚಿತ, ನಿಗದಿತ ಆದಾಯ ಎಂಬುದೇ ಅವರಿಗಿರಲಿಲ್ಲ. ತಾರುಣ್ಯದಲ್ಲಿ ರಾಷ್ಟ್ರ ಸೇವೆಗೆ ತಮ್ಮ ತನು, ಮನ, ಸಾಹಿತ್ಯ ಕೃಷಿ ಎಲ್ಲವನ್ನೂ ಮೀಸಲಾಗಿಟ್ಟ ಅವರನ್ನು ಬದುಕಿನ ಸಂಧ್ಯಾಕಾಲದಲ್ಲಿ ಆಧರಿಸುವವರೇ ಇರಲಿಲ್ಲ. ಅವರ ಸಾಹಿತ್ಯ, ಕವನಗಳಿಗೆ ಮನಸೋತಿದ್ದ ಕೆಲವೇ ಕೆಲವು ಅಭಿಮಾನಿಗಳು ಒಂದಿಷ್ಟು ನೆರವು ನೀಡಿದ್ದರಷ್ಟೆ. ಅವರನ್ನು ಕೈಹಿಡಿದು ಕಾಪಾಡಬೇಕಾದವರೇ ಕೈಬಿಟ್ಟರು. ಭಾರತೀಯ ಧರ್ಮ, ಪರಂಪರೆ, ದೇಶಪ್ರೇಮ ಮುಂತಾದವುಗಳ ಬಗ್ಗೆ ಚಿಂತಿಸುತ್ತಿದ್ದ, ಉಜ್ವಲ ರಾಷ್ಟ್ರಪ್ರೇಮಿಯೂ ಆಗಿದ್ದ ಶಿವರಾಮು 1999ರ ನವಂಬರ್ 14ರಂದು ನಿಧನರಾದಾಗ ಹಲವು ಮಂದಿ ಅಭಿಮಾನಿಗಳು, ಪರಿಚಿತರಿಗೇ ಈ ಸುದ್ದಿ ತಕ್ಷಣ ತಿಳಿದಿರಲಿಲ್ಲ.

ಶಿವರಾಮು ಅವರು ಕವಿಯಾಗಿ, ಚರಿತ್ರಕಾರರಾಗಿ, ವಿಚಾರ ಸಾಹಿತ್ಯದ ನಿರ್ಮಾಪಕರಾಗಿ, ಹಾಸ್ಯ- ವಿಡಂಬನೆ -ಪ್ರಬಂಧಕಾರರಾಗಿ ಆರಿಸಿಕೊಂಡ ಎಲ್ಲ ಪ್ರಕಾರಗಳಲ್ಲೂ ಅಚ್ಚೊತ್ತಿದ್ದು ಭಾರತೀಯ ಸಂಸ್ಕೃತಿಯ ಸಾಕಾರ ರೂಪವನ್ನೆ. 'ರಾಷ್ಟ್ರದೇವಗೆ..' ದೇಶಭಕ್ತಿ ಗೀತೆ ಈಗಲೂ ಶಾಖೆಗಳಲ್ಲಿ, ಸಂಘದ ಕಾರ್ಯಕ್ರಮಗಳಲ್ಲಿ ಅನುರಣಿಸಿ ದೇಶಪ್ರೇಮದ ಉನ್ಮಾದ ಮೂಡಿಸುತ್ತದೆ. ಶಿವರಾಮು ಅವರ ಸಾಹಿತ್ಯ ಸಾರ್ವಕಾಲಿಕ ಹಾಗೂ ಜೀವಂತ ಎನ್ನುವುದಕ್ಕೆ ಇದು ಸಾಕ್ಷಿ.

ಸಂಘದ ಶತಮಾನೋತ್ಸವ ಸಂದರ್ಭದಲ್ಲಿ, ರಾಷ್ಟ್ರ ದೇವಗೆ ಪ್ರಾಣ ದೀವಿಗೆ ಯಾದ ಕವಿ, ಸಾಹಿತಿ ಶಿವರಾಮು ಅವರಿಗೆ ಇದು ನಮ್ಮೆಲ್ಲರ ಮೌನ ಶ್ರದ್ಧಾಂಜಲಿ. ಅಷ್ಟೂ ಮಾಡದಿದ್ದರೆ ನಾವೆಲ್ಲ ಕೃತಘ್ನರಾಗಿ ಬಿಡುತ್ತೇವೆ.

ಸಾಮಾನ್ಯ ಮಾನಸಿಕ ಕಾಯಿಲೆಗಳು-1

ತಾರುಣ್ಯ ತಲ್ಲಣ

• ಡಾ.ಕೆ,ಆರ್, ಶ್ರೀಧರ್
drkrsridhar208@gmail.com




ಹರೆಯದವರಲ್ಲಿ ಸಾಮಾನ್ಯವಾಗಿ ಆತಂಕ, ಭಯ, ಖಿನ್ನತೆ, ಆತ್ಮಹತ್ಯೆ, ನಡವಳಿಕೆ ಕಾಯಿಲೆ, ವರ್ತನಾ ಕಾಯಿಲೆ, ಹರೆಯದ ಪ್ರತಿಭಟನಾ ಕಾಯಿಲೆ, ಮದ್ಯ ಮಾದಕ ವಸ್ತುಗಳ ಚಟ, ಮೊಬೈಲ್ ಫೋನ್ ಮತ್ತು ವಿಡಿಯೋ ಆಟಗಳ ವ್ಯಸನ ಇವನ್ನು ನೋಡಬಹುದು. ಉಳಿದಂತೆ ಚಿತ್ತ ಭ್ರಮಣೆ, ಸಮಾಜ ಬಾಹಿರ ಕೃತ್ಯಗಳು, ಉನ್ಮಾದ ಇವು ಕಾಣಿಸಿಕೊಳ್ಳುತ್ತವೆ.

ಆತಂಕದ ಕಾಯಿಲೆ: ಸುಮಾರು ಹನ್ನೆರಡರಿಂದ ಹದಿನೇಳು ವರ್ಷವಯಸ್ಸಿನ ಹರೆಯದವರಲ್ಲಿ ಪ್ರಚಲಿತವಾಗಿರುವುದು ಆತಂಕದ ಕಾಯಿಲೆ. ಆತಂಕದ ಕಾಯಿಲೆಯನ್ನು ಮೂರು ವಿಧಗಳಾಗಿ ವಿಂಗಡಿಸಬಹುದು. (1) ಸಾಮಾನ್ಯ ಆತಂಕದ ಕಾಯಿಲೆ (Generalised, Anxiety disorder) (2) ಸಾಮಾಜಿಕ ಆತಂಕ (Social Anxiety) ಮತ್ತು ಆಧಾರವಿಲ್ಲದ ಭಯ (Phobia).

ಸಾಮಾನ್ಯ ಆತಂಕದ ಕಾಯಿಲೆ

ಈ ಕಾಯಿಲೆಯಿಂದ ಬಳಲುವ ವ್ಯಕ್ತಿಯು ದಿನನಿತ್ಯದ ಆಗು ಹೋಗುಗಳಿಗೆ, ಅದು ಕೆಲಸವಿರಬಹುದು, ಆರೋಗ್ಯವಿರಬಹುದು, ಕೌಟುಂಬಿಕ ಸಮಸ್ಯೆ ಇರಬಹುದು, ಪ್ರತಿಯೊಂದಕ್ಕೂ ಅತಿಯಾದ ಚಿಂತೆ ಮಾಡುತ್ತಾನೆ. ಉದಾಹರಣೆಗೆ ಒಂದು ಕೆಲಸ ಮಾಡಬೇಕೆಂದರೆ ಅದು ಆಗುವುದೋ ಇಲ್ಲವೋ, ತನ್ನಿಂದ ಆಗದೇ ಹೋದರೆ ಬೇರೆಯವರು ನಗಬಹುದು, ಏನಾದರೂ ಟೀಕೆ ಮಾಡಬಹುದು ಎಂಬ ಆತಂಕ ಆ ವ್ಯಕ್ತಿಯನ್ನು ಕಾಡುತ್ತದೆ. ಪರೀಕ್ಷೆ ಕುರಿತು ಏನಾಗುತ್ತದೋ ಏನು ಮತ್ತು ಹೇಗೆ ಬರೆಯುವುದು, ಹೇಗೆ ಇಷ್ಟೆಲ್ಲಾ ಓದುವುದು ಎಂದು ಚಿಂತಿಸಬಹುದು. ಈ ವಿಧದ ಚಿಂತೆಯಿಂದ ನಿದ್ದೆ ಮಾಡುವುದೇ ಇಲ್ಲ. ಇದರಿಂದ ಯಾವಾಗಲೂ ಒಂದು ವಿಧದ ಚಡಪಡಿಕೆ, ಸ್ನಾಯುಗಳ ಸೆಳೆತ, ಓದುವುದರಲ್ಲಿ ಅಥವಾ ಯಾವ ಕೆಲಸ ಮಾಡಲೂ ಏಕಾಗ್ರತೆ ಇರುವುದಿಲ್ಲ. ಎದೆ ಬಡಿತ, ಮೈ ಜುಂ ಎನ್ನುವುದು, ಮನಸ್ಸಿನಲ್ಲಿ ಒಂದು ವಿಧದ ಕಿರಿಕಿರಿ ಹೀಗೆ ಹಲವಾರು ಆತಂಕದ ಲಕ್ಷಣಗಳು ದಿನವಿಡೀ ಮನಸ್ಸನ್ನು ಕಾಡುತ್ತಿರುತ್ತವೆ. ಕೆಲವರಿಗೆ ಹಸಿವಿಲ್ಲದಿರಬಹುದು, ಮೈಕೈ ಬೆವರಬಹುದು, ವಿನಾಕಾರಣ ಬೇರೆಯವರ ಮೇಲೆ ರೇಗಬಹುದು, ಕೆಲವೊಮ್ಮೆ ಹತಾಶೆ, ನಿರಾಸೆಗಳು ಸಾಮಾನ್ಯ. ಮನಸ್ಸು ಶಾಂತವಾಗಿರುವುದಿಲ್ಲ. ಯಾವಾಗಲೂ ಒಂದು ರೀತಿಯ ಚಿಂತೆ. ಕೆಲವೊಮ್ಮೆ ಮುಂದೆ ಏನಾಗುವುದೋ ಎಂಬ ಭಯ.



ದೈಹಿಕವಾಗಿಯೂ ಆತಂಕದ ಲಕ್ಷಣಗಳನ್ನು ಇವರಲ್ಲಿ ಕಾಣಬಹುದು. ಮೈಕೈ ನೋವು, ನಿದ್ರಾಹೀನತೆ ಅಥವಾ ನಿದ್ದೆಯಲ್ಲಿ ಪದೇ ಪದೇ ಎಚ್ಚರಗೊಳ್ಳುವಿಕೆ, ದೇಹಕ್ಕೆ ಒಂದು ವಿಧದ ಸುಸ್ತು, ಆಯಾಸ ಕಾಣಿಸಿಕೊಳ್ಳಬಹುದು. ಕೆಲವರಿಗೆ ಅತಿಯಾದ ಬೆವರುವಿಕೆ, ಕೈಕಾಲು ನಡುಕ, ಎದೆ ಬಡಿದುಕೊಳ್ಳುವುದು ಆಗಬಹುದು. ಕೆಲವರಿಗೆ ಪದೇ ಪದೇ ವಾಂತಿ, ಭೇದಿ ಆಗುವುದು ಸಾಮಾನ್ಯ.

ಶಾಲೆಯಲ್ಲಿ ಕಲಿಕೆಯ ಗೊಂದಲ, ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಭಯ, ತಾನು ಗೆಲ್ಲುತ್ತೇನೋ ಇಲ್ಲವೋ ಎಂಬ ಆತಂಕ, ಹೀಗೆ ಹಲವಾರು ಆತಂಕ, ಭಯಗಳು ನಿರಂತರವಾಗಿ ಕಾಡುತ್ತವೆ. ಆತಂಕದ ಲಕ್ಷಣಗಳು ಸಾಮಾನ್ಯವಾಗಿ ಎರಡು ಮೂರು ತಿಂಗಳಿಗೆಲ್ಲ ಮರೆಯಾದರೆ, ಅದು ಕಾಯಿಲೆ ಎನಿಸುವುದಿಲ್ಲ. ಆರು ತಿಂಗಳುಗಳಿಗಿಂತ ಹೆಚ್ಚು ಅವಧಿಗೆ ಇದ್ದಾಗ ಅದನ್ನು ಸಾಮಾನ್ಯ ಆತಂಕದ ಕಾಯಿಲೆ ಎಂದು ಕರೆಯಲಾಗುತ್ತದೆ. ಇದಕ್ಕೆ ಕಾರಣ ಮತ್ತು ಚಿಕಿತ್ಸೆಯ ಕುರಿತು ಕೊನೆಯ ಒಂದು ಅಧ್ಯಾಯದಲ್ಲಿ ತಿಳಿಸಲಾಗಿದೆ.

ಸಾಮಾಜಿಕ ಆತಂಕ (Social Anxiety Disorder)

ಸಾಮಾಜಿಕ ಆತಂಕದಿಂದ ಬಳಲುವವರು ಜನಸಮೂಹದಲ್ಲಿ ಬೆರೆಯಲು ಇಚ್ಛಿಸುವುದಿಲ್ಲ. ಯಾರಾದರೂ ತನ್ನ ಕುರಿತು ಟೀಕೆ ಮಾಡಬಹುದೆಂಬ ಭಯ ಇವರನ್ನು ಸದಾ ಕಾಡುತ್ತಿರುತ್ತದೆ. ಯಾವಾಗಲೂ ತಮ್ಮ ಕುರಿತೇ ಯೋಚಿಸುತ್ತಿರುತ್ತಾರೆ. ತನ್ನನ್ನು ಯಾರಾದರೂ ನೋಡಿ ಟೀಕೆ ಮಾಡಬಹುದು. ಅವರಿಂದ ತನಗೆ ಅವಮಾನವಾಗಬಹುದು. ತನ್ನನ್ನು ಎಲ್ಲರೂ ನೋಡುತ್ತಾರೆ. ಅವರು ತನ್ನನ್ನು ನೋಡಿ ನಗಬಹುದು. ಪಾರ್ಟಿಗಳಿಗಾಗಲೀ, ಸ್ನೇಹಿತರ ಗುಂಪಿಗೆ ಸೇರಲು ಆತಂಕದ ಕಾರಣ ಇವರಿಂದ ಸಾಧ್ಯವಿಲ್ಲ. ಶಾಲೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದರೆ, ಸ್ಪರ್ಧಿಸಲು ಭಯಪಡುತ್ತಾರೆ. ಕೆಲವು ದಿನಗಳ ಮೊದಲೇ ಕಾರ್ಯಕ್ರಮಗಳ ಕುರಿತು ಚಿಂತೆ ಇವರನ್ನು ಕಾಡುತ್ತದೆ. ಸಾರ್ವಜನಿಕವಾಗಿ ಮಾತನಾಡಲು ಭಯ, ವೇದಿಕೆಯ ಮೇಲೆ ಯಾವುದೇ ಕಾರ್ಯಕ್ರಮ ನೀಡಲು, ಮಾತನಾಡಲು ಇಷ್ಟಪಡುವುದಿಲ್ಲ. ಇವು ಹರೆಯದವರಲ್ಲಿ ಸಾಮಾನ್ಯವಾದರೂ ಮೇಲಿನ ಲಕ್ಷಣಗಳು ನಿರಂತರವಾಗಿ ಆರು ತಿಂಗಳಿಗಿಂತ ಹೆಚ್ಚಾದರೆ ಅದು ಸಾಮಾಜಿಕ ಆತಂಕದ ಕಾಯಿಲೆ ಎಂದು ಕರೆಯುತ್ತಾರೆ.

ಆಧಾರವಿಲ್ಲದ ಭಯದ ಆತಂಕ (Phobic anxiety disorder)

ಈ ವಿಧದ ಆತಂಕದ ಭಯದಲ್ಲಿ ವ್ಯಕ್ತಿಯು ಯಾವ ಕಾರಣವೂ ಇಲ್ಲದೆ ಭಯ ಪಡುತ್ತಾನೆ. ತೀವ್ರ ಭಯದಿಂದ ಎದೆಬಡಿತ ಪ್ರಾರಂಭವಾಗುತ್ತದೆ. ತೀವ್ರ ಭಯದಿಂದ ಮೈ ಕೈ ಬೆವರಬಹುದು, ನಡುಗಬಹುದು, ಕೆಲವೊಮ್ಮೆ ಉಸಿರುಗಟ್ಟಿದಂತಾಗಬಹುದು. ಕೆಲವೊಮ್ಮೆ ತಲೆ ಸುತ್ತಿಬಂದಂತಾಗಬಹುದು. ಒಂದು ವಿಧದ ನಿರಂತರ ಚಿಂತೆ ಮನಸ್ಸನ್ನು ಆವರಿಸಬಹುದು. ಮೈ ಕೈ ಜುಂ ಎನ್ನಬಹುದು. ಆಧಾರವಿಲ್ಲದ ಭಯವು ಕೆಲವು ಸಂದರ್ಭಗಳಲ್ಲಿ ಅತಿಯಾಗಿ ತಡೆಯಲಾರದಷ್ಟು ಗಾಬರಿಯಾಗುತ್ತದೆ. ಕೆಲವರು ಮಹಡಿಗೆ ಹೋಗಲು ಭಯವೆನಿಸಿ, ಮಹಡಿಗೆ ಹೋಗಲು ನಿರಾಕರಿಸುತ್ತಾರೆ. ರೂಮಿನ ಬಾಗಿಲು ಹಾಕಿದರೆ ಭಯ ಎನಿಸಿ ಬಾಗಿಲು ಹಾಕುವುದೇ ಇಲ್ಲ. ಸುಮಾರು ಐವತ್ತು ವರ್ಷದ ಮಹಿಳೆಯೊಬ್ಬರಿಗೆ ವಿಮಾನದಲ್ಲಿ ಹೋಗಲು ಭಯವಿತ್ತು. ಕಾರಣ ಅದು ಮೇಲೆ ಎತ್ತರಕ್ಕೆ ಹೋದಾಗ ತಾನೆಲ್ಲಿ ಬಿದ್ದುಬಿಡುತ್ತೇನೋ ಎಂಬ ಭಯ. ಎ.ಸಿ ರೈಲ್ವೇ ಬೋಗಿಯಲ್ಲಿ ಪ್ರಯಾಣಿಸಲು ಹೆದರುತ್ತಿದ್ದರು. ಅಲ್ಲಿ ಬಾಗಿಲು ಹಾಕಿದರೆ, ತಾನೆಲ್ಲಿ ಸತ್ತು ಹೋಗುತ್ತೇನೋ ಎಂಬ ಭಯದಿಂದ ಅವರು ಎ.ಸಿ. ರೈಲ್ವೇ ಭೋಗಿಯಲ್ಲಿ ಪ್ರಯಾಣಿಸುತ್ತಿರಲಿಲ್ಲ. ಸುಮಾರು 40 ವರ್ಷ 'ಆಧಾರವಿಲ್ಲದ ಭಯದಿಂದ' ಎಲ್ಲಿಗೂ ಪ್ರಯಾಣಿಸುತ್ತಿರಲಿಲ್ಲ. ಐವತ್ತು ವರ್ಷ ವಯಸ್ಸಿಗೆ ಚಿಕಿತ್ಸೆಯ ನಂತರ ಅವರು ಎ.ಸಿ. ಭೋಗಿಯಲ್ಲಿ ಪ್ರಯಾಣಿಸಲು ಪ್ರಾರಂಭಿಸಿದರು. ಎರಡು ಮೂರು ಬಾರಿ ಆಸ್ಟ್ರೇಲಿಯ ಮತ್ತು ಅಮೇರಿಕಾಕ್ಕೆ ಏರೋಪ್ಲೇನಿನಲ್ಲಿ ಪ್ರಯಾಣಿಸಿ ಬಂದರು. ಆ ಮಹಿಳೆಗೆ ಆಧಾರವಿಲ್ಲದ ಭಯವು ಪ್ರಾರಂಭವಾದದ್ದು ಅವರೇ ಹೇಳಿದ ಹಾಗೆ, ಪ್ರೌಢಶಾಲೆಯಲ್ಲಿ ಅವರು ಒಮ್ಮೆ ಓದುವಾಗ ಕೆಳಗೆ ಬಿದ್ದದ್ದು. ಅವರಿಗೆ ಸುಮಾರು ಮೂವತ್ತೈದು ವರ್ಷಗಳು ಸಂದರೂ, ಅದು ಒಂದು ಕಾಯಿಲೆ ಎಂದು ತಿಳಿದಿರಲಿಲ್ಲ. ಹಾಗಂತ ಅವರಿಗೆ ಮದುವೆಯಾಗಿ ಮೂರು ಮಕ್ಕಳಿದ್ದರು. ಎಲ್ಲರಿಗೂ ಮದುವೆಯಾಗಿತ್ತು. ಮಾನಸಿಕ ಕಾಯಿಲೆಗಳ ಕುರಿತು ಸಮಾಜದಲ್ಲಿ ವಿದ್ಯಾವಂತರೂ ಸೇರಿದಂತೆ ಎಲ್ಲರಿಗೂ ಎಷ್ಟು ಅಜ್ಞಾನ ಇದೆ ಎಂಬುದಕ್ಕೆ ಇದು ಒಂದು ಉದಾಹರಣೆ.

ಪ್ಯಾನಿಕ್ ಆತಂಕ (Panic disorder)

ಒಂದೇ ಬಾರಿಗೆ ಡಬ್ ಡಬ್ ಎಂದು ಎದೆಬಡಿತ ಪ್ರಾರಂಭವಾಗಿ ಉಸಿರು ಗಟ್ಟಿದಂತಾಗುತ್ತದೆ. ಮೈ ಬೆವರಿ ಇನ್ನೇನು ತನ್ನ ಜೀವವೇ ಹೋಗುತ್ತದೆ ಎಂಬ ಭಾವನೆ ಉಂಟಾಗುತ್ತದೆ. ಎದೆನೋವು ಕಾಣಿಸಿಕೊಳ್ಳಬಹುದು. ಮೈಯೆಲ್ಲಾ ಬೆವರುತ್ತದೆ. ಒಮ್ಮೊಮ್ಮೆ ಉಸಿರಾಟ ಜೋರಾಗುತ್ತದೆ. ಕೈಕಾಲು ನಡುಕ ಉಂಟಾಗಿ ಇನ್ನೇನು ತಾನು ಎಲ್ಲಿ ಬಿದ್ದು ಬಿಡುತ್ತೇನೋ ಎನ್ನಿಸಬಹುದು. ಕೆಲವು ಸಾರಿ ಹೊಟ್ಟೆಯಲ್ಲಿ ಒಂದು ವಿಧದ ಸಂಕಟ, ಕೆಲವೊಮ್ಮೆ ಹೊಟ್ಟೆ ನೋವು, ತಲೆ ಸುತ್ತುವುದು ಕಾಣಿಸಿಕೊಳ್ಳಬಹುದು. ಕೆಲವು ವೇಳೆ ತಾನೆಲ್ಲಿದ್ದೇನೆ, ತನಗೇನೋ ಆಗಿದೆ ಎಂಬ ಭಾವನೆ ಉಂಟಾಗಬಹುದು. ಇಂತಹ ಆತಂಕದ ಲಕ್ಷಣಗಳು ರಾತ್ರಿ ವೇಳೆ ನಿದ್ದೆ ಮಾಡುತ್ತಿರುವಾಗ ಕಾಣಿಸಿಕೊಂಡು, ರೋಗಿಯು ಒಂದೇ ಬಾರಿಗೆ ಎಚ್ಚರಗೊಂಡು ಘಾಬರಿಗೊಳ್ಳುತ್ತಾನೆ. ಕೆಲವೇ ನಿಮಿಷಗಳಲ್ಲಿ ಅಥವಾ ಅರ್ಧ ತಾಸಿನಲ್ಲಿ ಮೇಲಿನ ಎಲ್ಲ ಲಕ್ಷಣಗಳೂ ಮರೆಯಾಗಿ ವ್ಯಕ್ತಿಯು ಮೊದಲಿನಂತಾಗುತ್ತಾನೆ. ಹೆಚ್ಚಿನವರಿಗೆ ಇದು ಒಂದೆರಡು ಬಾರಿ ಆಗಬಹುದು. ನಂತರದಲ್ಲಿ ಕೆಲವು ಕಾಲ ಇದರ ಸುಳಿವೇ ಇಲ್ಲದಿರಬಹುದು.

ಪ್ಯಾನಿಕ್ ಆತಂಕದ ಕಾಯಿಲೆಯು ಯಾವ ಕಾರಣವೂ ಇಲ್ಲದೇ ಪುನಃ ಪುನಃ ಮರುಕಳಿಸಿದಾಗ, ತನಗೇನೋ ಆಗುತ್ತಿದೆ ಎಂಬ ಭಯ ಉಂಟಾಗಿ ಪ್ರತಿ ಬಾರಿಯೂ ರೋಗಿಯು ವೈದ್ಯರ ಹತ್ತಿರ ಹೋಗುತ್ತಾನೆ. ವೈದ್ಯರು ಇವರ ತೊಂದರೆಗಳನ್ನು ಕೇಳಿ ಪರೀಕ್ಷಿಸಿದಾಗ ಎಲ್ಲವೂ ಸಹಜವಾಗಿರುತ್ತವೆ. ಎಷ್ಟೋ ವೇಳೆ ಇ.ಸಿ.ಜಿ. ಮತ್ತು ಇನ್ನಿತರೇ ವೈದ್ಯಕೀಯ ಪರೀಕ್ಷೆಗಳನ್ನು ಮಾಡಿಸುತ್ತಾ, ಕ್ರಮೇಣ ವೈದ್ಯರ ಶಾಪಿಂಗ್ ಪ್ರಾರಂಭವಾಗುತ್ತದೆ. ಆದರೆ ಇದು ಮಾನಸಿಕ ಕಾಯಿಲೆ, ಇದಕ್ಕೆ ಮನೋವೈದ್ಯರಿಂದ ಚಿಕಿತ್ಸೆ ಪಡೆಯಬೇಕೆಂಬುದರ ಅರಿವುಂಟಾಗುವುದಿಲ್ಲ.

(ಮುಂದುವರೆಯುವುದು....)

ವಾರ್ ಸಾರ್ ವಾರ್...

ವಾರದ ವರಸೆ


• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



'ಅಯ್ಯೋ, ಮನುಷ್ಯರೋ ಪರಮ ಧನದಾಹಿಗಳು' ಎಂದು ಹೇಳುತ್ತಿದ್ದರು. ಆದರೆ ಅವರು ಅದಷ್ಟೇ ಅಲ್ಲ, 'ಕದನ'-ದಾಹಿಗಳೂ ಹೌದು ಎನ್ನುವುದನ್ನು ಯುದ್ಧದ ಕುರಿತಾಗಿ ಆಗಾಗ ಭುಗಿಲೇಳುವ ಚರ್ಚೆಗಳು ಸಾಬೀತುಪಡಿಸುತ್ತಲೇ ಇರುತ್ತವೆ. 'ಯುದ್ಧ ಬಂದಿತು ಸಿದ್ಧರಾಗಿರಿ...' ಎಂಬ ಹಾಡಿನ ಸಾಲೊಂದು ಆಗಾಗ ಕಿವಿಗೆ ಬೀಳುವಾಗ, ಅದನ್ನು ಇಂದಿನ ಕಾಲಕ್ಕೆ ಅನ್ವಯಿಸಿಕೊಂಡು, "ಅರ್ರೇ.. ಅಲ್ಲೆಲ್ಲೋ ಯುದ್ಧವಾದರೆ ನಾವೇಕೆ ಸಿದ್ಧರಾಗಬೇಕು?" ಎಂದು ಅಂದುಕೊಂಡವರೇ ಹೆಚ್ಚು. ಆದರೆ ಕದನ ಅದೆಲ್ಲೇ ನಡೆದರೂ, ಆ ಕದನದ ಪರಿಣಾಮಗಳು ಹೇಗೆಲ್ಲ ನಮ್ಮ-ನಿಮ್ಮ ಮನೆಯ ಕದವನ್ನೂ ತಟ್ಟೀತು ಎನ್ನುವುದನ್ನು ಈಗಿನ ಯುದ್ಧ ಸನ್ನಿವೇಶ ನಮ್ಮ ಮನ ಮುಟ್ಟುವಂತೆ, ತಟ್ಟುವಂತೆ ಅರ್ಥೈಸುತ್ತಿದೆ. ಯುದ್ಧಭೂಮಿಯೆನ್ನುವುದು ಭೂಮಿಯ ಯಾವುದೋ ಒಂದು ಭಾಗದಲ್ಲೇ ಏರ್ಪಟ್ಟರೂ ಅದರ ಪರಿಣಾಮ ಮಾತ್ರ ಇಡೀ ಭೂಮಿಯ ಮೇಲೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಇದ್ದೇ ಇರುತ್ತದೆ ಎನ್ನುವುದು ನಿಸ್ಸಂಶಯ. ಹೋಟೆಲ್‌ನಲ್ಲಿ ಸಿಗೋ ಪೂರಿಯಿಂದ ಹಿಡಿದು ಅಮೇಜಾನ್‌ಲಿ ಮಾಡಿದ ಆರ್ಡರ್‌ನ ಡೆಲಿವರಿಯವರೆಗೆ ಅದರ ಪರಿಣಾಮ ಹತ್ತು ಹಲವು. ಇಂತಿಪ್ಪ ಯುದ್ಧದ ಪರಿಣಾಮದ ಕುರಿತಂತೆ ಹಲವರ ಅಭಿಪ್ರಾಯಗಳು ಈ ಕೆಳಗಿನಂತಿವೆ.

ಈ ಕುರಿತು ಅಭಿಪ್ರಾಯ ಕೇಳಲೆಂದು 'ವಾ.ವ' ತಂಡ ಬೀದಿಗೆ ಬಿದ್ದಾಕ್ಷಣ, ಮೊದಲು ಕಣ್ಣಿಗೆ ಬಿದ್ದದ್ದೇ ಆ್ಯಂಕರ್ ಆಜ್ಞೇಶ್. ಕರುನಾಡಿನ ಜನಪ್ರಿಯ ಆ್ಯಂಕರರು ಈತ ಎಂದರೆ ತಪ್ಪಾಗಲಿಕ್ಕಿಲ್ಲ. ವಿಷಯದಿಂದ ವಿಷಯಕ್ಕ ಚೆಂಗನೆ ಜಿಗಿಯುವ, ಹಿರಿಯ ಆ್ಯಂಕರ್ ಜೊತೆ ಪಳಗುತ್ತಾ ಬೆಳೆಯಲು ಹವಣಿಸುತ್ತಿರುವ ಕಾರಣಕ್ಕೂ ಆತನನ್ನು ಆ್ಯಂ'ಕರು' ಎಂದು ಕರೆದಿರುವುದು ಸರಿಯಿದೆ. ನಾವು ಕೇಳಿದ್ದಕ್ಕೆ, ಯುದ್ಧದ ಕುರಿತು ಆಜ್ಞೇಶ ಆಡಿದ ಮಾತುಗಳೇನು ಗೊತ್ತೇ?

ಆ್ಯಂಕರ್ ಆಜ್ಞೇಶ್- ನಾವೂ ಯುದ್ಧ ಬಂದಿದೆ ಎಂಬ ಕಾರಣಕ್ಕೆ ಸಿದ್ಧರಾಗುತ್ತೇವೆ. ಅದರ ಬಗ್ಗೆ ಇಲ್ಲದ್ದು ಸಲ್ಲದ್ದನ್ನೆಲ್ಲಾ ಕಲರ್ ಕಲರ್ ಆಗಿ ಹೇಳುವುದನ್ನು ಕರಗತ ಮಾಡಿಕೊಳ್ಳಲು ಇದೊಂದು ಅವಕಾಶ. ಇನ್ನು AI ಆಪ್ತ ಇರುವ ಕಾರಣಕ್ಕಂತೂ ಕಣ್ಣಿಗೆ ಕಟ್ಟುವಂತೆ ಹೇಳುವುದು ನಮಗೆ ಇನ್ನೂ ಸಲೀಸು.



ಹೌದೌದು. ಕಣ್ಣಿಗೆ ಕಟ್ಟಿದಂತೆ ಹೇಳ್ತೀರೋ ಇಲ್ಲ ಕಣ್ಣಟ್ಟನ್ನೆಲ್ಲಾ ನಿಜವೆಂಬಂತೆ ಹೇಳ್ತೀರೋ ಒಂದೂ ಅರ್ಥವಾಗಲ್ಲ ಕೆಲವೊಮ್ಮೆ ಎಂದು ಗೊಣಗುತ್ತಾ ಮುಂದೆ ನಡೆದ ತಂಡ ಗುರುತಿಸಿದ್ದು, ಕಾಯಿಪಲ್ಲೆ ಖರೀದಿಗೆ ಹೊರಟಿದ್ದ ಗೃಹಿಣಿ ಘಾಮಿನಿ. ಸದಾ ಘಮ್ ಎನ್ನುವ ಸೆಂಟ್ ಪೂಸಿಕೊಂಡು ಘಮ ಘಮಿಸುವುದರಿಂದಲೇ ಆ ಹೆಸರಿರಬೇಕು. ಯುದ್ಧ ಎಂದಾಕ್ಷಣ ವಿಲಕ್ಷಣ ಮುಖಭಾವ ಮೆರೆದ ಆಕೆ ಹೇಳಿದ್ದು ಹೀಗೆ.

ಗೃಹಿಣಿ ಘಾಮಿನಿ: ಶಾಲಾ ದಿನಗಳಲ್ಲಿ ಕಲಿತಿದ್ದ, ಬೆಂಕಿ ಇಲ್ಲದ ಅಡುಗೆಯನ್ನು ಮತ್ತೆ ನೆನಪಿಸಿಕೊಂಡು ಪ್ರಯೋಗಿಸುವಂತಾಗಿದೆ. ಗ್ಯಾಸ್ ಇಲ್ಲವೆಂಬ ಕಾರಣಕ್ಕೆ ಅಡುಗೆಯೇ ಇಲ್ಲವೆಂದಾಗಿದ್ದರೆ ನಾವೂ ಈ ಯುದ್ಧದ ಕಾರಣಕ್ಕೆ ಸ್ವಲ್ಪ ನೆಮ್ಮದಿಯಾಗಿರುತ್ತಿದ್ದೆವು. ಆದರೆ ಹಾಗೆ ಆಗುತ್ತಿಲ್ಲ. ಇದು ನಮ್ ಜೀವನವನ್ನು ಇನ್ನೂ ಸವಾಲಾಗಿಸುತ್ತಿದೆ.

ಈಗಲೂ ಹಾಲು, ಸಾಂಬಾರು ಸುಮ್ಮನೆ ಕುದಿದು ಉಕ್ಕಿ ಹೊರಚೆಲ್ಲಿ ವ್ಯರ್ಥವಾಗದಂತೆ ತಡೆಯದಿದ್ದರೆ, ಗ್ಯಾಸ್ ವೇಸ್ಟ್ ಮಾಡಿದ್ದಕ್ಕೆ ಬೈಸಿಕೊಳ್ಳುವುದೇ ಜಾಸ್ತಿಯಾಗುತ್ತದಷ್ಟೇ ಎಂದು ಹೇಳುತ್ತಾ ನಡೆದ ವಾ.ವ ತಂಡ ಮುಂದೆ ಮಾತನಾಡಿಸಿದ್ದು, ಕಿರಾಣಿ ಅಂಗಡಿಯ ಕಿಟ್ಟಪ್ಪನನ್ನು. ಆತನನ್ನು ಈ ಬಗ್ಗೆ ಕೇಳಿದ್ದಕ್ಕೆ -

ಕಿರಾಣಿ ಅಂಗಡಿ ಕಿಟ್ಟಪ್ಪ : ಈ ನಡುವೆ ವ್ಯವಹಾರವೇ ಡಲ್ ಹೊಡಿತಿದೆ. ಎಲ್ಲರೂ ಬಂದು ಟೂ-ಮಿನಿಟ್ ರೆಡಿ ಮ್ಯಾಗಿ ಪಾಕೀಟು ಕೇಳುವವರೇ ಹೆಚ್ಚು. ಸಮಯವೂ ಉಳಿತಾಯ, ಗ್ಯಾಸೂ ಉಳಿತಾಯ ಎಂಬ ಅವರ ಮನಃಸ್ಥಿತಿಗೆ ಇನ್ನೇನು ಕಾರಣವಿದೆ?

ಅವರ ಪ್ರಶ್ನೆಗೆ ಏನೆಂದು ಉತ್ತರಿಸುವುದು ಎಂದು ತೋಚದ ವಾ.ವ ತಂಡ ಹೀಗೇ ಆದರೆ ದಿನಸಿ ಹೋಗಿ 'ವಾರ'ಸಿ, 'ತಿಂಗಳು'ಸಿ, 'ವರ್ಷ'ಸಿ ಎಂದು ಹೇಳಬೇಕಾಗುತ್ತದೇನೋ ಅನಿಸುತ್ತದೆ ಎಂದು ಹೇಳಿದ್ದು ಎಲ್ಲರಿಗೂ ಕೇಳಿಸುವಂತಿತ್ತು. ಆಗ ದೂರದಲ್ಲಿ ಬರುತ್ತಿರುವುದು, ಯುದ್ಧಪ್ರಿಯ ಯಮನೇಶ ಎನ್ನುವುದು ಗೊತ್ತಾಗಿ ಅವನನ್ನು ಮಾತಿಗೆಳೆಯಲು ಅತ್ತ ದೌಡಾಯಿಸಿದರು.

ಯುದ್ಧಪ್ರಿಯ ಯಮನೇಶ್: ಯುದ್ಧ ನಡೆಯದೇ ಹೋದರೆ ಈ ಹೋರಾಟ, ಪರಾಕ್ರಮ, ಬಲಾಬಲ ಇತ್ಯಾದಿಗಳೆಲ್ಲ ಹೊರಬರುವುದಾದರೂ ಹೇಗೆ ಹೇಳಿ. ಅಲ್ಲದೇ ಇನ್ನೊಂದು 8-10 ದಶಕ ಹೋದ ಮೇಲೆ, ಇತಿಹಾಸದಲ್ಲಿ ಹೇಳೋಕೆ, ಟೆಕ್ಸ್ಟ್ ಬುಕ್‌ಗಳಲ್ಲಿ ಸೇರಿಸೋದಕ್ಕೆ ಯುದ್ಧಗಳೇ ಇಲ್ಲದಂತಾಗಿ, ಆ ಸಬ್ಜೆಕ್ಟ್‌ಗಳೆಲ್ಲ ಡ್ರೈ ಆಗಲ್ವಾ?

ಅದಕ್ಕೆ ವಾ.ವ ತಂಡದವರು ಥಟ್ಟನೇ ಪ್ರತಿಕ್ರಿಯಿಸುತ್ತಾ, "ಅಯ್ಯೋ, ಹೀಗೆ ಯುದ್ಧಗಳ ಮೇಲೆ ಯುದ್ಧ ನಡೆಯುತ್ತಿದ್ದರೆ ಮುಂದೆ ವಿದ್ಯಾರ್ಥಿಗಳು ಯಾವ ಯುದ್ಧ ಯಾವಾಗ ನಡೆಯಿತು, ಯಾವ್ಯಾವ ದೇಶಗಳ ನಡುವೆ ನಡೆಯಿತು ಎಂಬೆಲ್ಲಾ ಪ್ರಶ್ನೆಗಳಿಗೆ ಉತ್ತರಿಸುತ್ತಾ ಬೇಸ್ತು ಬೀಳುತ್ತಾರೆ, ಅದಕ್ಕೆ ಕಾರಣರಾದವರಿಗೆ ಹಿಡಿ ಶಾಪವನ್ನೂ ಹಾಕಿಯಾರು" ಎಂದರು.

ಮುಂದೆ ಮಾತಿಗೆ ಸಿಕ್ಕಿದ್ದು ರಿಕ್ಷಾ ರಘುಪತಿ. ಯುದ್ದದ ಬಗ್ಗೆ ಕೇಳಿದ್ದಕ್ಕೆ ರಘುಪತಿಯ ಉತ್ತರ ಏನು ಗೊತ್ತಾ?

ರಿಕ್ಷಾ ರಘುಪತಿ: ಮುಂಚೆಲ್ಲಾ ಜಾಸ್ತಿ ರೇಟ್ ಹೇಳೋಕೆ ಏನೇನೋ ಸರ್ಕಸ್ ಮಾಡಬೇಕಿತ್ತು. ಆದರೂ ಗ್ರಾಹಕರ ಮನವೊಲಿಸಲು ಆಗುತ್ತಿರಲಿಲ್ಲ. ಆದರೆ ಈಗ ಹಾಗೇನಿಲ್ಲ, ಎರಡು ಪಟ್ಟೋ ಮೂರು ಪಟ್ಟೋ ಎಷ್ಟೇ ಜಾಸ್ತಿಯೇ ಚಾರ್ಜ್ ಮಾಡಿದಾಗಲೂ, "ಅಯ್ಯೋ ವಾರ್ ಸಾರ್ ವಾರ್, ಗ್ಯಾಸ್ ಇಲ್ಲ, ಅದ್ಕೇ ರೇಟ್ ಜಾಸ್ತಿ" ಎಂದರೆ ಸಾಕು. ಗ್ರಾಹಕರು ಸುಮ್ಮನಾಗುತ್ತಾರೆ.

ಯುದ್ಧ ಇರಲಿ ಇಲ್ಲದೇ ಇರಲಿ, ನಿಮ್ ರಿಕ್ಷಾ ಎಲ್ಲಿ ಬರೀ ಗ್ಯಾಸ್‌ನಿಂದ ಓಡಿದೆ? ಮೀಟರ್ ಮೇಲೆ ಏನಾದರೂ ತಗೊಂಡರೇ ಅಷ್ಟೇ ತಾನೇ ನಿಮ್ಮ ರಿಕ್ಷಾ ಓಡೋದು, ಎಂದು ಕೊಂಕು ಮಾತಿನಿಂದ ಕುಟುಕಲು ಮರೆಯಲಿಲ್ಲ ವಾ.ವ ತಂಡದ ಪ್ರತಿನಿಧಿಗಳು.

ಇನ್ಯಾರನ್ನು ಮಾತಾಡಿಸೋದು ಎಂದು ಯೋಚನಾಮಗ್ನರಾಗಿ ತಂಡದವರು ಅತ್ತಿತ್ತ ನಿಲುಕುತ್ತಿರುವಾಗ ವಿದ್ಯಾರ್ಥಿಯೊಬ್ಬ ಬ್ಯಾಗ್ ನೇತುಹಾಕಿಕೊಂಡು ಬರುವುದು ಕಾಣಿಸಿತು. ಅವನಲ್ಲಿ ಯುದ್ದದ ಬಗ್ಗೆ ಕೇಳಿದರೆ ಇವನು ಅದೇನು ಹೇಳುತ್ತಾನೆ ನೋಡೇ ಬಿಡೋಣ ಎಂದು ಮಾತನಾಡಿಸಿದಾಗ,

ವಿದ್ಯಾರ್ಥಿ ವೀರೇಶ್: ನಾವು ಯುದ್ಧ ಬಗ್ಗೆ ಅದೆಷ್ಟೇ ಓದಿದರೂ, ಚಿತ್ರ ನೋಡಿದರೂ, ವಿವರಣೆ ಕೇಳಿದರೂ ಅದನ್ನೊಂದು ನೋಡಬೇಕಲ್ಲ ಲೈವ್ ಆಗಿ ಅಂತ ಅನಿಸುತ್ತಿತ್ತು. ಹೀಗೆ ಆಗಾಗ ಯುದ್ಧ ನಡೆದು, ಅದರ ವೀಡಿಯೋಗಳು ನ್ಯೂಸ್ ಚಾನೆಲ್‌ಗಳಲ್ಲಿ ಪ್ರಸಾರ ಆಗುವುದರಿಂದ ನಮಗೆ ಅದರ ಬಗ್ಗೆ ಹೆಚ್ಚು ತಿಳಿಯುತ್ತದೆ. ಇನ್ನು ಯುದ್ಧದ ಬಗ್ಗೆ ಪರೀಕ್ಷೆಯಲ್ಲಿ ಬರುವ ಎಲ್ಲಾ ಪ್ರಶ್ನೆಗಳಿಗೂ ಈ ಯುದ್ಧದ ವಿವರಗಳನ್ನೇ ಉತ್ತರವಾಗಿ ಬರೆದರಾಯ್ತು. ಎಂಥಾ ಚಾನ್ಸ್ ನೋಡಿ.

ಆತನ ಮಾತು ಕೇಳಿದ ನಮ್ಮ ವಾ.ವ ತಂಡದವರು ಅಯ್ಯೋ ವೀಡಿಯೋ ಗೇಮ್ ಕ್ಲಿಪ್ಪಿಂಗ್‌ಗಳನ್ನೂ ಯುದ್ಧದ ಫೂಟೇಜ್ ಎಂದು ಸುಖಾಸುಮ್ಮನೆ ಪ್ರಸಾರ ಮಾಡಿಯಾರು ಸ್ವಲ್ಪ ಚೆಕ್ ಮಾಡಿ ನೋಡಿಕೊಳ್ಳಪ್ಪ ಎಂದರು. ಇಷ್ಟೆಲ್ಲಾ ನೋಡುತ್ತಿದ್ದ ಸೋಷಿಯಲ್ ಮೀಡಿಯಾ ಸುಭಗ ಕುಮಾರ್ ನಾನೂ ಮಾತಾಡ್ತೀನಿ ಅಂತ ಹತ್ತಿರ ಬಂದ. ಬೇಡ ಅಂದರೆ ಅದಕ್ಕೇ ಲೈವ್ ಬಂದು ಗೋಳಾಡಿದರೆ ಕಷ್ಟವೆಂದು ಮಾತಾಡಲು ಬಿಟ್ಟರು.

ಸೋಷಿಯಲ್ ಮೀಡಿಯ ಸುಭಗ ಕುಮಾರ್: ಯಾರು ಏನೇ ಹೇಳಲಿ ಇದರಿಂದ ಕಂಟೆಂಟೋ ಕಂಟೆಂಟ್. ಎಲ್ಲವನ್ನೂ ಶಾರ್ಟ್ಸ್, ರೀಲ್ಸ್, ವೀಡಿಯೋ ಎಡಿಟ್ ಅಪ್‌ಲೋಡ್ ಮಾಡುತ್ತಿದ್ದರೆ, ರೀಚ್ ಸದಾ ಅಪ್ಪರ್ ಲೆವೆಲ್ ಹೋಗ್ತಿರುತ್ತೆ. ಮತ್ತೆ ಬೇಕಿದ್ದರೆ ವಾರ್ ಅಲ್ಲ ಬೇಕಿರುವುದು ಪೀಸ್ ಅಂತ ಒಂದು ಲೈನ್ ಬರೆದರೆ ಆಯಿತು.

ರೀಚ್‌ನ ರೊಚ್ಚಿನಲ್ಲಿ ಇರುವ ಅವನಿಗೆ ಇನ್ನು ಜಾಸ್ತಿ ಮಾತಾಡಲು ಬಿಟ್ಟರೆ ಕಷ್ಟ ಎಂದು ತಿಳಿದ ತಂಡದವರು ಅವನನ್ನು ಹೇಗೋ ಸಾಗ ಹಾಕಿದರು. ತುಂಬಾ ಹಿಂದೆ ವಾರಾನ್ನ ಅಂತಿತ್ತು. ಆದರೆ ಈಗ ಕೆಲವರು ವಾರ್‌ನ ಹೆಸರಲ್ಲೂ ಹೇಗೇಗೋ ತಮ್ಮ ಅನ್ನವನ್ನು ಗಳಿಸಿಕೊಳ್ಳುವ ಈ warಅನ್ನ ಬಹಳ ಲೇಟೆಸ್ಟ್ ಎಂದುಕೊಳ್ಳುತ್ತಾ ಅವರು ತಮ್ಮ ಮನೆ ಕಡೆಗೆ ಹೆಜ್ಜೆ ಹಾಕಿದರು.

ಓವರ್‌ಡೋಸ್: ಎಲ್ಲೋ ಹೋಗಬೇಕು, ಏನೋ ಮುಖ್ಯವಾದುದನ್ನು ಮಾಡಬೇಕು ಎಂದರೆ ಮೊದಲು ವಾರಾಂತ್ಯಕ್ಕೆ ಕಾಯುತ್ತಿದ್ದರು, ಅಲ್ಲಲ್ಲಿ ಯುದ್ಧದ ಸದ್ದು ಸುದ್ದಿ ಕೇಳಿಬರುತ್ತಿರುವುದರಿಂದ ಈಗ war-ಅಂತ್ಯಕ್ಕೆ ಕಾಯುವಂತಾಗಿದೆ

ಒಪ್ಪಂದವಿಲ್ಲದೆ ಅಂತ್ಯಗೊಂಡ ತ್ರಿಪಕ್ಷೀಯ ಮಾತುಕತೆ

ಅಮೆರಿಕ-ಇರಾನ್ ಮಾತುಕತೆ ವಿಫಲ



• **ಹೊಸದಿಲ್ಲಿ:** ಪಾಕಿಸ್ತಾನದಲ್ಲಿ ನಡೆದ ಸಂಧಾನ ಸಭೆಯಲ್ಲಿ ಅಮೆರಿಕದ ಬೇಡಿಕೆಗಳ ಕುರಿತಾದ ಭಿನ್ನಾಭಿಪ್ರಾಯಗಳಿಂದಾಗಿ ಮಾತುಕತೆಗಳು ವಿಫಲವಾಗಿವೆ ಎಂದು ಇರಾನ್ ತಿಳಿಸಿದೆ.

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷವನ್ನು ಕೊನೆಗಾಣಿಸುವ ಉದ್ದೇಶದಿಂದ ಪಾಕಿಸ್ತಾನದಲ್ಲಿ ನಡೆದ ಸುದೀರ್ಘ ಚರ್ಚೆಯ ನಂತರ, ಅಮೆರಿಕದೊಂದಿಗಿನ ಮಾತುಕತೆ ಬಿಕ್ಕಟ್ಟಿನಲ್ಲಿ ಅಂತ್ಯಗೊಂಡಿದೆ, ಎಂದು ಇರಾನ್ ಭಾನುವಾರ ಘೋಷಿಸಿದೆ. ಇರಾನ್‌ನ ಸರ್ಕಾರಿ ಪ್ರಸಾರ ಸಂಸ್ಥೆ ಐಆರ್‌ಐಬಿ ಪ್ರಕಾರ, ಇರಾನ್ ನಿಯೋಗ ಸತತ 21 ಗಂಟೆಗಳ ಕಾಲ ಮಾತುಕತೆಯಲ್ಲಿ ತೊಡಗಿಸಿಕೊಂಡಿತ್ತು. ಆದರೆ ಅಮೆರಿಕದ ಕಡೆಯಿಂದ ಬಂದ ಅಸ್ವೀಕಾರಾರ್ಹ ಬೇಡಿಕೆಗಳ ಕಾರಣದಿಂದಾಗಿ ಯಾವುದೇ ಪ್ರಗತಿ ಸಾಧಿಸಲು ಸಾಧ್ಯವಾಗಲಿಲ್ಲ, ಎಂದು ಅದು ವಿವರಿಸಿದೆ. ಇರಾನ್ ಹಲವಾರು ಯೋಜನೆಗಳನ್ನು ಪ್ರಸ್ತಾವಿಸಿದರೂ ಸಹ, ಚರ್ಚೆಗಳು ಯಾವುದೇ ಒಪ್ಪಂದವಿಲ್ಲದೆ ಮುಕ್ತಾಯ ಗೊಂಡವು.

ಷರತ್ತುಗಳ ಕುರಿತು ಭಿನ್ನಾಭಿಪ್ರಾಯ



ಒಂದೇ ಸಭೆಯಲ್ಲಿ ಪರಿಹಾರ ಸಿಗುತ್ತದೆ ಎಂಬ ನಿರೀಕ್ಷೆ ಮೊದಲಿನಿಂದಲೂ ಇರಲಿಲ್ಲ, ಎಂದು ಇರಾನ್ ವಿದೇಶಾಂಗ ಸಚಿವಾಲಯ ಸೂಚಿಸಿದೆ. ಇಂತಹ ಸಂಕೀರ್ಣ ಮಾತುಕತೆಗಳಿಗೆ ಹೆಚ್ಚಿನ ಸಮಯದ ಆಗತ್ಯವಿರುತ್ತದೆ ಎಂದು ವಕ್ತಾರ ಎಸ್ಮಾಯಿಲ್ ಬಕೈ ತಿಳಿಸಿದ್ದು, ಪಾಕಿಸ್ತಾನ ಮತ್ತು ಇತರ ಪ್ರಾದೇಶಿಕ ಪಾಲುದಾರರೊಂದಿಗೆ ರಾಜತಾಂತ್ರಿಕ ಸಂಪರ್ಕಗಳು ಮುಂದುವರಿಯಲಿವೆ ಎಂದು ಪುನರುಚ್ಚರಿಸಿದ್ದಾರೆ.

ಸಂಘರ್ಷದ ಹಿನ್ನೆಲೆ

ಫೆಬ್ರವರಿ 28ರಂದು ಪ್ರಾರಂಭವಾದ ಮಧ್ಯಪ್ರಾಚ್ಯದ ಸಂಘರ್ಷದ ನಂತರ ಈ ರಾಜತಾಂತ್ರಿಕ ಪ್ರಯತ್ನಗಳು ನಡೆಯುತ್ತಿವೆ. ಅಮೆರಿಕ ಮತ್ತು ಇಸ್ರೇಲ್‌ನ ಜಂಟಿ ಮಿಲಿಟರಿ ಕ್ರಮಗಳು ಇರಾನ್ ಅನ್ನು ಗುರಿಯಾಗಿಸಿಕೊಂಡು ನಡೆದಾಗ ಈ ಸಂಘರ್ಷ ಆರಂಭವಾಯಿತು, ಇದರಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಲಿ ಖಮೇನಿ ಮತ್ತು ಇತರ ಹಿರಿಯ ಅಧಿಕಾರಿಗಳು ಹತರಾಗಿದ್ದರು. ಪ್ರತೀಕಾರವಾಗಿ ಇರಾನ್ ಕೂಡ ಇಸ್ರೇಲ್ ಮತ್ತು ಕೊಲ್ಲಿ ರಾಷ್ಟ್ರಗಳಲ್ಲಿನ ಅಮೆರಿಕದ ಮಿಲಿಟರಿ ನೆಲೆಗಳ ಮೇಲೆ ದಾಳಿ ನಡೆಸಿತ್ತು. ಈ ವಾರದ ಆರಂಭದಲ್ಲಿ ಅಧ್ಯಕ್ಷ ಟ್ರಂಪ್ ಎರಡು ವಾರಗಳ ಕದನ ವಿರಾಮ ಘೋಷಿಸುವವರೆಗೆ ಎರಡೂ ಕಡೆಯಿಂದ ಮಿಲಿಟರಿ ಕ್ರಮಗಳು ಮುಂದುವರಿದಿದ್ದವು. ಈ ಸಂಘರ್ಷ ಮಧ್ಯ ಏಷ್ಯಾ ಭಾಗದಲ್ಲಿ ಸಾವಿರಾರು ಜನರ ಸಾವಿಗೆ ಕಾರಣವಾಗಿದ್ದು, ಅಂತರಾಷ್ಟ್ರೀಯ ಕಳವಳವನ್ನು ಹೆಚ್ಚಿಸಿದೆ. ಆದರೆ ರಾಜತಾಂತ್ರಿಕ ಪ್ರಯತ್ನಗಳಿಂದ ಹೆಚ್ಚು ಲಾಭವಾದಂತೆ ಕಾಣುತ್ತಿಲ್ಲ. ಮಾತುಕತೆ ವಿಫಲವಾಗಿದ್ದರೂ, ಪ್ರಾದೇಶಿಕ ನಾಯಕರೊಂದಿಗೆ ಸಂಪರ್ಕ ಮುಂದುವರಿಯಲಿದೆ, ಎಂದು ಇರಾನ್ ಸೂಚಿಸಿದೆ. ಇದು ರಾಜತಾಂತ್ರಿಕ ಪ್ರಯತ್ನಗಳು ನಡೆಯುವ ಸಾಧ್ಯತೆಯನ್ನು ತೋರಿಸುತ್ತಿದೆ.



ದಶಕಗಳ ನಂತರದ ಉನ್ನತ ಮಟ್ಟದ ಸಂವಾದ

ಈ ಮಾತುಕತೆ, ಕಳೆದ ಒಂದು ದಶಕಕ್ಕೂ ಹೆಚ್ಚು ಕಾಲದ ನಂತರ ಅಮೆರಿಕ ಮತ್ತು ಇರಾನ್ ಅಧಿಕಾರಿಗಳ ನಡುವೆ ನಡೆದ ಮೊದಲ ನೇರ ಸಂವಹನವಾಗಿದ್ದು, ಇದು ಮಹತ್ವದ ರಾಜತಾಂತ್ರಿಕ ಬೆಳವಣಿಗೆ ಎನ್ನಲಾಗಿದೆ. 1979ರ ಇಸ್ಲಾಮಿಕ್ ಕ್ರಾಂತಿಯ ನಂತರ ಉಭಯ ದೇಶಗಳ ನಡುವೆ ನಡೆದ ಅತ್ಯಂತ ಉನ್ನತ ಮಟ್ಟದ ಚರ್ಚೆ ಇದಾಗಿದೆ. ಈ ಹಿಂದೆ ಸಂವಹನಕ್ಕಾಗಿ ಮಧ್ಯವರ್ತಿಗಳನ್ನು ಅವಲಂಬಿಸಲಾಗುತ್ತಿತ್ತು. ಆದರೆ ಈ ಬಾರಿ ಪಾಕಿಸ್ತಾನಿ ಅಧಿಕಾರಿಗಳ ಸಮ್ಮುಖದಲ್ಲಿ ಉಭಯ ನಿಯೋಗಗಳು ನೇರವಾಗಿ ಮುಖಾಮುಖಿಯಾಗಿ ಮಾತುಕತೆ ನಡೆಸಿದವು. ಅಮೆರಿಕದ ನಿಯೋಗದಲ್ಲಿ ವ್ಯಾನ್ಸ್, ವಿಶೇಷ ಪ್ರತಿನಿಧಿ ಸ್ಟೀವ್ ವಿಟ್ಕಾಫ್ ಮತ್ತು ಜ್ಯಾರೆಡ್ ಕುಶ್ನರ್ ಇದ್ದರು. ಇರಾನ್‌ನ 71 ಸದಸ್ಯರ ನಿಯೋಗದ ನೇತೃತ್ವವನ್ನು ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಗರ್ ಗಾಲಿಬಾಫ್ ಮತ್ತು ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಗ್ಚಿ ವಹಿಸಿದ್ದರು. ಮಾತುಕತೆಯ ಸಮಯದಲ್ಲಿ ತಾವು ಅಧ್ಯಕ್ಷ ಟ್ರಂಪ್ ಅವರೊಂದಿಗೆ ನಿರಂತರ ಸಂಪರ್ಕದಲ್ಲಿದ್ದೆವು ಎಂದು ವ್ಯಾನ್ಸ್ ತಿಳಿಸಿದ್ದಾರೆ.

ಪ್ರಮುಖ ವಿಷಯಗಳ ಕುರಿತು ವಿವಾದ

ಅಮೆರಿಕ ಕಾರ್ಯತಂತ್ರದ ಮತ್ತು ಪರಮಾಣು ವಿಷಯಗಳಿಗೆ ಸಂಬಂಧಿಸಿದಂತೆ ಕೆಲವು ರಿಯಾಯಿತಿಗಳನ್ನು ಕೋರಿದೆ ಎಂದು ತಸ್ನಿಮ್ ಸುದ್ದಿ ಸಂಸ್ಥೆ ಸೇರಿದಂತೆ ಇರಾನ್ ಮಾಧ್ಯಮಗಳು ವರದಿ ಮಾಡಿವೆ. ಜಾಗತಿಕ ತೈಲ ಸಾಗಣೆಯ ಪ್ರಮುಖ ಮಾರ್ಗವಾದ ಹಾರ್ಮುಜ್ ಜಲಸಂಧಿಗೆ ಸಂಬಂಧಿಸಿದ ಷರತ್ತುಗಳು ಮತ್ತು ಪರಮಾಣು ಸಂಪನ್ಮೂಲಗಳನ್ನು ತೆಗೆದುಹಾಕುವುದು ಸೇರಿದಂತೆ ಇರಾನ್‌ನ ಪರಮಾಣು ಸಾಮರ್ಥ್ಯಗಳಿಗೆ ಸಂಬಂಧಿಸಿದ ಬೇಡಿಕೆಗಳು ಇದರಲ್ಲಿ ಸೇರಿವೆ ಎಂದು ವರದಿಯಾಗಿದೆ. ಅಮೆರಿಕದ ಪರವಾಗಿ ನಿಯೋಗದ ನೇತೃತ್ವ ವಹಿಸಿದ್ದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್, ಇಸ್ಲಾಮಾಬಾದ್ ಮಾತುಕತೆಯ ವೇಳೆ ಅಮೆರಿಕ ತನ್ನ ಅಂತಿಮ ಪ್ರಸ್ತಾವನೆಯನ್ನು ಮಂಡಿಸಿದೆ ಎಂದು ಖಚಿತಪಡಿಸಿದ್ದಾರೆ. ಈ ಷರತ್ತುಗಳಿಗೆ ಇರಾನ್ ನೀಡುವ ಪ್ರತಿಕ್ರಿಯೆಯ ಮೇಲೆ ಮುಂದಿನ ಫಲಿತಾಂಶ ನಿರ್ಧಾರವಾಗಲಿದೆ ಎಂದು ಅವರು ಸೂಚಿಸಿದ್ದಾರೆ.

ಇರಾನ್ ಪರಮಾಣು ಶಸ್ತ್ರಾಸ್ತ್ರ ಹೊಂದುವಂತಿಲ್ಲ: ಅಮೆರಿಕ

ಇರಾನ್‌ನ ಪರಮಾಣು ಕಾರ್ಯಕ್ರಮದ ಬಗ್ಗೆ ಭರವಸೆಗಳನ್ನು ಪಡೆಯುವುದು ಈ ಮಾತುಕತೆಯ ಕೇಂದ್ರ ಗುರಿ ಎಂದು ಅಮೆರಿಕ ಪ್ರತಿಪಾದಿಸಿದೆ. ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದುವುದಿಲ್ಲ ಅಥವಾ ಅವುಗಳನ್ನು ವೇಗವಾಗಿ ತಯಾರಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದಿಲ್ಲ ಎಂಬ ಸ್ಪಷ್ಟ ಬದ್ಧತೆಯನ್ನು ವಾಷಿಂಗ್ಟನ್ ನಿರೀಕ್ಷಿಸುತ್ತಿದೆ ಎಂದು ವ್ಯಾನ್ಸ್ ತಿಳಿಸಿದ್ದಾರೆ. ಈ ಷರತ್ತುಗಳು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕಾರ್ಯತಂತ್ರದ ಆದ್ಯತೆಗಳಿಗೆ ಅನುಗುಣವಾಗಿವೆ ಎಂದು ಅವರು ಹೇಳಿದ್ದಾರೆ. ಯಾವುದೇ ಒಪ್ಪಂದಕ್ಕೆ ಬರಲು ಸಾಧ್ಯವಾಗಿಲ್ಲ ಮತ್ತು ಈ ಫಲಿತಾಂಶ ಅಮೆರಿಕಕ್ಕೆ ಹೋಲಿಸಿದರೆ ಇರಾನ್‌ಗೆ ಹೆಚ್ಚು ಕೆಟ್ಟ ಸುದ್ದಿ ಎಂದು ವ್ಯಾನ್ಸ್ ಹೇಳಿಕೊಂಡಿದ್ದಾರೆ. ಅಲ್ಲದೆ, ಮಾತುಕತೆಯ ಉದ್ದಕ್ಕೂ ಅಮೆರಿಕದ ಮಿತಿಗಳನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಲಾಗಿದೆ ಎಂದು ಅವರು ಒತ್ತಿ ಹೇಳಿದ್ದಾರೆ.

ಸಂಘರ್ಷದ ನಡುವೆ ಭಾರತದಿಂದ ಇಂಧನ ಪೂರೈಕೆ ಪ್ರಮಾಣ ಹೆಚ್ಚಳ

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದಾಗಿ, ನಡೆಯುತ್ತಿರುವ ಇಂಧನ ವ್ಯತ್ಯಯದ ನಡುವೆ ದೇಶೀಯ ಇಂಧನ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಭಾರತ 5 ಕೆಜಿ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯನ್ನು ಹೆಚ್ಚಿಸಿದೆ ಮತ್ತು ಪೈಪ್ಡ್ ನೈಸರ್ಗಿಕ ಅನಿಲ (ಪಿಎನ್‌ಜಿ) ಸರಬರಾಜನ್ನು ವೇಗಗೊಳಿಸಿದೆ.

ಎಲ್‌ಪಿಜಿ ,ಪಿಎನ್‌ಜಿ ವಿಸ್ತರಣೆ: ಮಾ.23ರಿಂದ ಇದುವರೆಗೆ ಅಧಿಕಾರಿಗಳು 13 ಲಕ್ಷಕ್ಕೂ ಹೆಚ್ಚು 5 ಕೆಜಿ ಎಲ್‌ಪಿಜಿ ಸಿಲಿಂಡರ್‌ಗಳನ್ನು ಮಾರಾಟ ಮಾಡಿದ್ದು, ದೈನಂದಿನ ಮಾರಾಟ 1,00,000 ಯುನಿಟ್‌ಗಳನ್ನು ಮೀರಿದೆ. ಇದರೊಂದಿಗೆ 4,24,000 ಕ್ಕೂ ಹೆಚ್ಚು ಹೊಸ ಪಿಎನ್‌ಜಿ ಸಂಪರ್ಕಗಳನ್ನು ಸಕ್ರಿಯಗೊಳಿಸಲಾಗಿದ್ದು, 30,000 ಗ್ರಾಹಕರು ತಮ್ಮ ಹಳೆಯ ಎಲ್‌ಪಿಜಿ ಸಂಪರ್ಕಗಳನ್ನು ಬಿಟ್ಟುಕೊಟ್ಟಿದ್ದಾರೆ. ಏ.11ರಂದು ಒಂದೇ ದಿನ 52 ಲಕ್ಷಕ್ಕೂ ಹೆಚ್ಚು ಮನೆಬಳಕೆ ಸಿಲಿಂಡರ್‌ಗಳನ್ನು ವಿತರಿಸಲಾಗಿದೆ.

ಪ್ರಮುಖ ಕ್ರಮಗಳು : ಸರ್ಕಾರ ವಾಣಿಜ್ಯ ಬಳಕೆದಾರರಿಗಿಂತ ದೇಶೀಯ ಬಳಕೆದಾರರಿಗೆ ಅನಿಲ ಹಂಚಿಕೆಯಲ್ಲಿ ಆದ್ಯತೆ ನೀಡಿದೆ. ಇದರ ಪರಿಣಾಮವಾಗಿ, ವಾಣಿಜ್ಯ ಎಲ್‌ಪಿಜಿ ಲಭ್ಯತೆ ಪ್ರಸ್ತುತ ಬಿಕ್ಕಟ್ಟಿನ ಮೊದಲಿನ ಮಟ್ಟದ ಶೇ. 70 ರಷ್ಟಿದೆ. ಬೆಲೆ ನಿಯಂತ್ರಣಕ್ಕಾಗಿ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಪ್ರತಿ ಲೀಟರ್‌ಗೆ 10 ರೂ.ಗಳಷ್ಟು ಕಡಿತಗೊಳಿಸಿದೆ ಮತ್ತು ಡೀಸೆಲ್ ಹಾಗೂ ವಿಮಾನ ಇಂಧನದ ಮೇಲಿನ ರಫ್ತು ಸುಂಕವನ್ನು ಹೆಚ್ಚಿಸಿದೆ.

ಇಂಡಿಯನ್ ಆಯಿಲ್ ಮತ್ತು ಭಾರತ್ ಪೆಟ್ರೋಲಿಯಂ ಸೇರಿದಂತೆ ಸರ್ಕಾರಿ ಸ್ವಾಮ್ಯದ ಕಂಪನಿಗಳು ಗೇಲ್ ಗ್ಯಾಸ್ ಲಿಮಿಟೆಡ್ ನಂತಹ ನಗರ ಅನಿಲ ವಿತರಕರೊಂದಿಗೆ ಸಮನ್ವಯ ಸಾಧಿಸುತ್ತಿದ್ದು, ವಾಣಿಜ್ಯ ಪಿಎನ್‌ಜಿ ಸಂಪರ್ಕಗಳಿಗೆ ಆದ್ಯತೆ ನೀಡುತ್ತಿವೆ. ಸಂಸ್ಕರಣಾಗಾರಗಳ ಗರಿಷ್ಠ ಬಳಕೆಯ ಮೂಲಕ ದಾಸ್ತಾನು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುತ್ತಿವೆ.

ಲೆಬನಾನ್‌ನಲ್ಲಿ 10 ಲಕ್ಷಕ್ಕೂ ಹೆಚ್ಚು ನಿರಾಶ್ರಿತರು

• **ಸಿಡಾನ್(ಲೆಬನಾನ್):** ಇಸ್ರೇಲ್‌ನ ಸ್ಥಳಾಂತರ ಆದೇಶಗಳು ಮತ್ತು ಮಿಲಿಟರಿ ಕಾರ್ಯಾಚರಣೆಗಳಿಂದಾಗಿ ಲೆಬನಾನ್‌ನಾದ್ಯಂತ 10 ಲಕ್ಷಕ್ಕೂ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ. ಈ ಸಂಘರ್ಷದಲ್ಲಿ ಇದುವರೆಗೆ 2,000ಕ್ಕೂ ಹೆಚ್ಚು ಜನರು ಪ್ರಾಣ ಕಳೆದುಕೊಂಡಿದ್ದಾರೆ. ದಕ್ಷಿಣ ಭಾಗದ ಸ್ಮಶಾನಗಳ ಮೇಲೆ ದಾಳಿಗಳು ನಡೆಯುತ್ತಿರುವುದರಿಂದ 13 ಭದ್ರತಾ ಅಧಿಕಾರಿಗಳನ್ನು ಹರೆಶ್ ಸೈದಾದ ತಾತ್ಕಾಲಿಕ ಗೋರಿಗಳಲ್ಲಿ ಹೂಳಲಾಗಿದೆ.

ಲೆಬನಾನ್ ಸೇನೆ ಈ ಸಂಘರ್ಷದಲ್ಲಿ ತಟಸ್ಥ ನಿಲುವನ್ನು ಹೊಂದಿದ್ದರೂ, ಈ ವಾರ ನಡೆದ ಇಸ್ರೇಲ್ ದಾಳಿಯಲ್ಲಿ ನಾಲ್ವರು ಲೆಬನಾನ್ ಸೈನಿಕರು ಮೃತಪಟ್ಟಿದ್ದಾರೆ. ರಾಜಧಾನಿ ಬೈರೂತ್ ನಲ್ಲಿ ಸರ್ಕಾರಿ ವಿರೋಧಿ ಪ್ರತಿಭಟನಾಕಾರರು ಜಮಾಯಿಸಿದ್ದು, ಮಾತುಕತೆಗೆ ಮತ್ತು ಆಕ್ರಮಣದ ಸಮಯದಲ್ಲಿ ಜನರಿಗೆ ರಕ್ಷಣೆ ನೀಡಲು ಸರ್ಕಾರ ವಿಫಲವಾಗಿದೆ, ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಧಿಕಾರಿಗಳ ಅಂತ್ಯಸಂಸ್ಕಾರ: ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಮೃತಪಟ್ಟ ಲೆಬನಾನ್‌ನ 13 ಭದ್ರತಾ ಅಧಿಕಾರಿಗಳ ಅಂತ್ಯಸಂಸ್ಕಾರ ಶನಿವಾರ ನೆರವೇರಿತು. ಈ ಬೆಳವಣಿಗೆಯ ನಡುವೆಯೇ ಪ್ರಧಾನ ಮಂತ್ರಿ ನವಾಫ್ ಸಲಾಮ್, ಮಾತುಕತೆಗಾಗಿ ಹಮ್ಮಿಕೊಂಡಿದ್ದ ತಮ್ಮ ವಾಷಿಂಗ್ಟನ್ ಪ್ರವಾಸವನ್ನು ಮುಂದೂಡಿದ್ದಾರೆ.

ದಕ್ಷಿಣದ ಪಟ್ಟಣವಾದ ನಬತಿಯಾದಲ್ಲಿರುವ ಭದ್ರತಾ ಪ್ರಧಾನ ಕಚೇರಿಯನ್ನು ಗುರಿಯಾಗಿಸಿಕೊಂಡು ಶುಕ್ರವಾರ ಇಸ್ರೇಲ್ ನಡೆಸಿದ ದಾಳಿಯಲ್ಲಿ ಈ ಅಧಿಕಾರಿಗಳು ಸಾವನ್ನಪ್ಪಿದ್ದಾರೆ. ಬಂಧಿತರನ್ನು ಸಿಡಾನ್ ನಗರಕ್ಕೆ ವರ್ಗಾಯಿಸುವ ಕಾರ್ಯಾಚರಣೆ ಮುಗಿಸಿ ಅಧಿಕಾರಿಗಳು ಕಚೇರಿಗೆ ಮರಳಿದ ಕೆಲವೇ ನಿಮಿಷಗಳಲ್ಲಿ ಈ ದಾಳಿ ನಡೆದಿದೆ. ಘಟನೆಯಲ್ಲಿ ಒಬ್ಬ ಅಧಿಕಾರಿ ಬದುಕುಳಿದಿದ್ದು, ತೀವ್ರ ಸುಟ್ಟ



ಗಾಯಗಳಿಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಹೆಜ್ಬೊಲ್ಲಾ ಮೂಲಸೌಕರ್ಯಗಳನ್ನು ಗುರಿಯಾಗಿಸಿ ಈ ದಾಳಿ ನಡೆಸಲಾಗಿದೆ, ಎಂದು ತಿಳಿಸಿರುವ ಇಸ್ರೇಲ್ ಮಿಲಿಟರಿ, ಭದ್ರತಾ ಸಿಬ್ಬಂದಿಗೆ ಆಗಿರುವ ಹಾನಿಯ ಬಗ್ಗೆ ತನಿಖೆ ನಡೆಸುತ್ತಿರುವುದಾಗಿ ಹೇಳಿದೆ.

ರಾಜತಾಂತ್ರಿಕ ಮಾತುಕತೆಗಳು: ಮುಂದಿನ ವಾರ ಅಮೆರಿಕದಲ್ಲಿ ಲೆಬನಾನ್ ಮತ್ತು ಇಸ್ರೇಲ್ ನಡುವೆ ನೇರ ಮಾತುಕತೆ ನಡೆಯಲಿದ್ದು, ಆದರ ಮುನ್ನವೇ ಈ ಸಾವುಗಳು ಸಂಭವಿಸಿವೆ. ಮಾತುಕತೆಗೆ ಕದನ ವಿರಾಮವನ್ನೇ ಷರತ್ತನ್ನಾಗಿ ವಿಧಿಸಿದ್ದ ಪ್ರಧಾನಿ ಸಲಾಮ್, ಆಂತರಿಕ ಭದ್ರತೆಯ ಕಾರಣ ನೀಡಿ ತಮ್ಮ ವಾಷಿಂಗ್‌ಟನ್ ಪ್ರವಾಸವನ್ನು ಮುಂದೂಡಿದ್ದಾರೆ. ಆರಂಭಿಕ ಹಂತದ ಮಾತುಕತೆಗಳು ರಾಯಭಾರಿ ಮಟ್ಟದಲ್ಲಿ ನಡೆಯುವ ನಿರೀಕ್ಷೆಯಿದೆ. ಈ ಮಾತುಕತೆಗಳು ಕದನ ವಿರಾಮದ ಬಗ್ಗೆ ಅಲ್ಲದೆ, ಹೆಜ್ಬೊಲ್ಲಾ ಸಂಘಟನೆಯನ್ನು ನಿಶ್ಶಸ್ತ್ರೀಕರಣಗೊಳಿಸುವ ಬಗ್ಗೆ ಮಾತ್ರ ಇರಲಿವೆ, ಎಂದು ಇಸ್ರೇಲ್ ಸ್ಪಷ್ಟಪಡಿಸಿದೆ.

ಕಿರುಸುದ್ದಿ

ಭಾರತ-ಉಜ್ಬೇಕಿಸ್ತಾನ್ ಜಂಟಿ ಸಮರಾಭ್ಯಾಸ

• **ಹೊಸದಿಲ್ಲಿ:** ಭಾರತ ಮತ್ತು ಉಜ್ಬೇಕಿಸ್ತಾನ್ ಪಡೆಗಳ ಜಂಟಿ ಸಮರಾಭ್ಯಾಸ ಭಾನುವಾರ ಪ್ರಾರಂಭಗೊಂಡಿದ್ದು, ಏ.25ರವರೆಗೆ ನಡೆಯಲಿದೆ. ಇದು ಅರೆ-ಪರ್ವತ ಭೂಪ್ರದೇಶದಲ್ಲಿ ಸಂಯೋಜಿತ ಕಾರ್ಯಾಚರಣೆಗಳನ್ನು ನಡೆಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಭಾರತ-ಉಜ್ಬೇಕಿಸ್ತಾನ್ ಜಂಟಿ ಮಿಲಿಟರಿ ವ್ಯಾಯಾಮ 'ಡಸ್ಟ್ಲಿಕ್' ನ ಏಳನೇ ಆವೃತ್ತಿಗಾಗಿ ಭಾರತೀಯ ತಂಡವು ಭಾನುವಾರ ಹೊರಟಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಾನೂನುಬಾಹಿರ ಸಶಸ್ತ್ರ ಗುಂಪುಗಳನ್ನು ತಟಸ್ಥಗೊಳಿಸಲು ವಿಶೇಷ ಕಾರ್ಯಾಚರಣೆಗಳ ಸಿದ್ಧತೆ ಮತ್ತು ಕಾರ್ಯಗತಗೊಳಿಸುವಿಕೆಯ ಮೇಲೆ ಕೇಂದ್ರೀಕರಿಸಿ, ಜಂಟಿ ಕಾರ್ಯಾಚರಣೆಗಳಿಗಾಗಿ ಯುದ್ಧತಂತ್ರದ ಡ್ರಿಲ್ಗಳನ್ನು ಮೌಲ್ಯೀಕರಿಸುವ ಗುರಿಯನ್ನು ಹೊಂದಿರುವ 48 ಗಂಟೆಗಳ ವ್ಯಾಯಾಮದೊಂದಿಗೆ ಜಂಟಿ ತರಬೇತಿಯು ಮುಕ್ತಾಯಗೊಳ್ಳುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ.ಬಂಗಾಳ ಮೊದಲ ಹಂತ: 3.6 ಕೋಟಿ ಮತದಾರರು

• **ಕೋಲ್ಕತ್ತಾ:** ಏ.23ರಂದು ನಡೆಯಲಿರುವ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಮೊದಲ ಹಂತದಲ್ಲಿ 16 ಜಿಲ್ಲೆಗಳ 3.6 ಕೋಟಿಗೂ ಹೆಚ್ಚು ಮತದಾರರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅರ್ಹರಾಗಿದ್ದಾರೆ. ಎಂದು ಚುನಾವಣಾ ಆಯೋಗದ ಅಂಕಿ ಅಂಶದಿಂದ ಬಹಿರಂಗಗೊಂಡಿದೆ. ಮೊದಲ ಹಂತದ ಮತದಾರರ ಪಟ್ಟಿಯಲ್ಲಿ 1.84 ಕೋಟಿ ಪುರುಷರು, 1.75 ಕೋಟಿ ಮಹಿಳೆಯರು ಮತ್ತು 465 ತೃತೀಯ ಲಿಂಗಿಗಳಿದ್ದಾರೆ. ಜಿಲ್ಲೆಗಳ ಪೈಕಿ, ಮುರ್ಷಿದಾಬಾದ್‌ನಲ್ಲಿ ಅತಿ ಹೆಚ್ಚು 50.26 ಲಕ್ಷ ಮತದಾರರಿದ್ದರೆ, ನಂತರದ ಸ್ಥಾನದಲ್ಲಿ ಪೂರ್ವ ಮೇದಿನಿಪುರ (41.60 ಲಕ್ಷ) ಮತ್ತು ಪಶ್ಚಿಮ ಮೇದಿನಿಪುರ (37.7 ಲಕ್ಷ) ಮತದಾರರಿದ್ದಾರೆ. ಕಾಲಿಂಪಾಂಗ್ 2.01 ಲಕ್ಷ ಮತದಾರರನ್ನು ಹೊಂದಿರುವ ಅತಿ ಕಡಿಮೆ ಸಂಖ್ಯೆಯ ಮತದಾರರನ್ನು ಹೊಂದಿದೆ.

ಬಿಹಾರ ಶಾಸಕಾಂಗ ಪಕ್ಷದ ಕೇಂದ್ರ ವೀಕ್ಷಕರಾಗಿ ಚೌಹಾಣ್

• **ಹೊಸದಿಲ್ಲಿ:** ಬಿಹಾರದಲ್ಲಿ ತನ್ನ ಶಾಸಕಾಂಗ ಪಕ್ಷದ ನಾಯಕನ ಚುನಾವಣೆಗೆ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಕೇಂದ್ರ ವೀಕ್ಷಕರಾಗಿ ಬಿಜೆಪಿ ಭಾನುವಾರ ನೇಮಿಸಿದೆ. ಬಿಹಾರ ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ರಾಜ್ಯಸಭೆಗೆ ತೆರಳಿದ ನಂತರ ಪಕ್ಷ ಬಿಹಾರದಲ್ಲಿ ಹೊಸ ಸರ್ಕಾರ ರಚನೆ ಪ್ರಕ್ರಿಯೆ ಪ್ರಾರಂಭಿಸಿದೆ.



ಜೈಶಂಕರ್ ಯುಎಇ ಭೇಟಿ: ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಚರ್ಚೆ



• **ಅಬುಧಾಬಿ:** ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಭಾನುವಾರ ಯುನೈಟೆಡ್ ಅರಬ್ ಎಮಿರೇಟ್ಸ್‌ನ ಅಧ್ಯಕ್ಷ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರನ್ನು ಭೇಟಿಯಾಗಿ ಪಶ್ಚಿಮ ಏಷ್ಯಾದ ಬಿಕ್ಕಟ್ಟು ಮತ್ತು ಅದರ ಆರ್ಥಿಕ ಪರಿಣಾಮದ ಬಗ್ಗೆ ಚರ್ಚಿಸಿದರು. ಜೈಶಂಕರ್ ಅವರು ಶನಿವಾರದಿಂದ ಗಲ್ಫ್ ರಾಷ್ಟ್ರಕ್ಕೆ ಎರಡು ದಿನಗಳ ಭೇಟಿ ನೀಡಿದ್ದರು. ಪಶ್ಚಿಮ ಏಷ್ಯಾ ಸಂಘರ್ಷದ ವೇಳೆ ಭಾರತೀಯ ಸಮುದಾಯದ ಯೋಗಕ್ಷೇಮವನ್ನು ಖಾತ್ರಿಪಡಿಸಿದ್ದಕ್ಕಾಗಿ ಪ್ರಧಾನ ಮಂತ್ರಿಯವರ ಆತ್ಮೀಯ ಶುಭಾಶಯಗಳನ್ನು ಮತ್ತು ನಮ್ಮ ಕೃತಜ್ಞತೆಯನ್ನು ತಿಳಿಸಿದ್ದೇನೆ ಎಂದು ಅಬುಧಾಬಿಯಲ್ಲಿ ನಡೆದ ಸಭೆಯ ನಂತರ ವಿದೇಶಾಂಗ ವ್ಯವಹಾರಗಳ ಎಕ್ಸ್‌ನಲ್ಲಿ ತಿಳಿಸಿದ್ದಾರೆ. ಭಾರತ-ಯುಎಇ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ಮಾರ್ಗದರ್ಶನ ನೀಡಿದ್ದಕ್ಕಾಗಿ ಅಲ್ ನಹ್ಯಾನ್ ಅವರಿಗೆ ಧನ್ಯವಾದಗಳನ್ನು ಅರ್ಪಿಸುವುದಾಗಿ ಜೈಶಂಕರ್ ಹೇಳಿದರು. ಯುಎಇ ಅಧ್ಯಕ್ಷರೊಂದಿಗಿನ ಜೈಶಂಕರ್ ಅವರ ಭೇಟಿಯ ವೇಳೆ ದುಬೈ ಕ್ರೌನ್ ಪ್ರಿನ್ಸ್ ಮತ್ತು ಯುಎಇ ಉಪ ಪ್ರಧಾನಿ ಹಮ್ದಾನ್ ಬಿನ್ ಮೊಹಮ್ಮದ್ ಅಲ್ ಮಕ್ತೂಮ್ ಸಹ ಇದ್ದರು ಎಂದು ತಿಳಿದುಬಂದಿದೆ.

ತುಷ್ಟೀಕರಣ ನೀತಿಗಳನ್ನು ಅನುಸರಿಸುತ್ತಿರುವ ಟಿಎಂಸಿ

• **ಕೋಲ್ಕತ್ತಾ:** ಪಶ್ಚಿಮಬಂಗಾಳದಲ್ಲಿ ಟಿಎಂಸಿ ತುಷ್ಟೀಕರಣ ನೀತಿಗಳನ್ನು ಅನುಸರಿಸುತ್ತಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಆರೋಪಿಸಿದ್ದಾರೆ. ಬಂಕುರಾ ಜಿಲ್ಲೆಯ ಸೋನಾಮುಖಿಯಲ್ಲಿ ನಡೆದ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಆದಿತ್ಯನಾಥ್, ಬಂಗಾಳವನ್ನು ದೇಶದ ಆಧ್ಯಾತ್ಮಿಕ ಅನ್ವೇಷಣೆಯನ್ನು ಶ್ರೀಮಂತಗೊಳಿಸಿದ ಸ್ವಾಮಿ ವಿವೇಕಾನಂದ ಮತ್ತು ರಾಮಕೃಷ್ಣರ ಭೂಮಿ ಎಂದು ಕರೆಯಲಾಗುತ್ತದೆ. ಆದರೆ ಟಿಎಂಸಿ ಸರ್ಕಾರವು ವಿಶ್ವದಾದ್ಯಂತ ಪೂಜ್ಯ ಆಧ್ಯಾತ್ಮಿಕ ಪ್ರತಿಮೆಗಳನ್ನು ಅಗೌರವಗೊಳಿಸುತ್ತದೆ. ಇದು ರಾಜ್ಯದ ಹಿಂದು ಅಸ್ಮಿತೆಗೆ ಅಪಾಯವನ್ನುಂಟುಮಾಡುತ್ತದೆ ಎಂದು ಯೋಗಿ ಆರೋಪಿಸಿದ್ದಾರೆ. ನಿಜವಾದ ಅಂತರ್ಗತ ಆಡಳಿತವನ್ನು ತರಲು ಇಲ್ಲಿ ಡಬಲ್ ಎಂಜಿನ್ ಸರ್ಕಾರಕ್ಕೆ ಮತ ಚಲಾಯಿಸುವಂತೆ ಜನರನ್ನು ಒತ್ತಾಯಿಸಿದರು. ಒಂಬತ್ತು-ಹತ್ತು ವರ್ಷಗಳ ಹಿಂದೆ ಉತ್ತರ ಪ್ರದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಮೊದಲು ಸಾಮಾನ್ಯವಾಗಿದ್ದ ಗೂಂಡಾ ಗರ್ದಿಯ ತಾಣವಾಗಿ ಪಶ್ಚಿಮ ಬಂಗಾಳ ಈಗ ಮಾರ್ಪಟ್ಟಿದೆ. ಉತ್ತರಪ್ರದೇಶದಲ್ಲಿ ಅಭಿವೃದ್ಧಿ ಮತ್ತು ಬೆಳವಣಿಗೆಯ ಕೊರತೆ ಇತ್ತು. ಆದರೆ ಈಗ ಬದಲಾವಣೆಗಳನ್ನು ನೋಡಿ ಎಂದು ಅವರು ಹೇಳಿದರು. ಉತ್ತರ ಪ್ರದೇಶದಲ್ಲಿ ಯಾವುದೇ ತುಷ್ಟೀಕರಣವಿಲ್ಲ, ಆದರೆ ಅಂತರ್ಗತ ಹಿಂದು ಧರ್ಮ ಇದೆ. ಅಲ್ಲಿ ಪ್ರತಿ ಸಮುದಾಯವು ಸುರಕ್ಷಿತ ವಾತಾವರಣದಲ್ಲಿ ಶಾಂತಿಯುತವಾಗಿ ಬದುಕಬಹುದು ಎಂದು ಆದಿತ್ಯನಾಥ್ ಹೇಳಿದರು. ಪ್ರತಿ ತಿಂಗಳು, ಕರ್ಫ್ಯೂ ಇತ್ತು. ಆದರೆ 2017ರಿಂದ, ಉತ್ತರಪ್ರದೇಶದಲ್ಲಿ ಬಿಜೆಪಿ ಅಧಿಕಾರದಲ್ಲಿರುವುದರಿಂದ, ಯಾವುದೇ ಕರ್ಫ್ಯೂ ಅಥವಾ ಗಲಭೆಗಳು ನಡೆದಿಲ್ಲ ಎಂದರು.

ಭಾರತೀಯ ಭೂಪ್ರದೇಶಗಳಿಗೆ ನಾಮಕರಣ:ತಿರಸ್ಕರಿಸಿದ ಎಂಇಎ

• **ಹೊಸದಿಲ್ಲಿ:** ಅರುಣಾಚಲ ಪ್ರದೇಶ ಸೇರಿದಂತೆ ಭಾರತೀಯ ಭೂಪ್ರದೇಶದ ಸ್ಥಳಗಳಿಗೆ ಕಾಲ್ಪನಿಕ ಹೆಸರುಗಳನ್ನು ನೀಡಿದ್ದಕ್ಕಾಗಿ ಭಾರತವು ಭಾನುವಾರ ಚೀನಾವನ್ನು ತರಾಟೆಗೆ ತೆಗೆದುಕೊಂಡಿದೆ.

ಭಾರತದ ಭೂಪ್ರದೇಶದ ಭಾಗವಾಗಿರುವ ಸ್ಥಳಗಳಿಗೆ ಕಾಲ್ಪನಿಕ ಹೆಸರುಗಳನ್ನು ನೀಡುವ ಚೀನಾದ ಯಾವುದೇ ಪ್ರಯತ್ನಗಳನ್ನು ಭಾರತ ಸ್ಪಷ್ಟವಾಗಿ ತಿರಸ್ಕರಿಸುತ್ತದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಹೇಳಿಕೆಯಲ್ಲಿ ಹೇಳಿದೆ. ಸುಳ್ಳು ಹೇಳಿಕೆಗಳನ್ನು ನೀಡುವ ಮತ್ತು ಆಧಾರರಹಿತ ನಿರೂಪಣೆಗಳನ್ನು ಮಾಡುವ ಚೀನಾದ ಇಂತಹ ಪ್ರಯತ್ನಗಳು ಅರುಣಾಚಲ ಪ್ರದೇಶ ಸೇರಿದಂತೆ ಈ ಸ್ಥಳಗಳು ಯಾವಾಗಲೂ ಭಾರತದ ಅವಿಭಾಜ್ಯ ಮತ್ತು ಬೇರ್ಪಡಿಸಲಾಗದ ಭಾಗವಾಗಿ ಉಳಿದಿವೆ ಎಂಬ ವಾಸ್ತವವನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ಎಂಇಎ ಹೇಳಿದೆ. ಈ ಕ್ರಮಗಳು ಭಾರತ-ಚೀನಾ ದ್ವಿಪಕ್ಷೀಯ ಸಂಬಂಧಗಳನ್ನು ಸ್ಥಿರಗೊಳಿಸಲು ನಡೆಯುತ್ತಿರುವ ಪ್ರಯತ್ನಗಳಿಗೆ ಹಾನಿಕಾರಕವಾಗಿವೆ ಎಂದು ಸಚಿವಾಲಯ ಹೇಳಿದೆ. ಸಂಬಂಧಗಳಲ್ಲಿ ನಕಾರಾತ್ಮಕತೆಯನ್ನು ಉಂಟುಮಾಡುವ ಮತ್ತು ಉತ್ತಮ ತಿಳುವಳಿಕೆಯನ್ನು ಸೃಷ್ಟಿಸುವ ಪ್ರಯತ್ನಗಳನ್ನು ದುರ್ಬಲಗೊಳಿಸುವ ಕ್ರಮಗಳಿಂದ ದೂರವಿರಲು ಚೀನಾವನ್ನು ಒತ್ತಾಯಿಸಿತು. ಅರುಣಾಚಲ ಪ್ರದೇಶದ ಹಲವಾರು ಸ್ಥಳಗಳಿಗೆ ಚೀನಾದ ಹೆಸರುಗಳನ್ನು ಚೀನಾ ಘೋಷಿಸಿದ್ದಕ್ಕೆ ಪ್ರತಿಕ್ರಿಯೆಯಾಗಿ ಭಾರತದ ಪ್ರತಿಕ್ರಿಯೆ ಬಂದಿದೆ. ಈ ಹಿಂದೆ 2025ರ ಮೇ ತಿಂಗಳಲ್ಲಿ, 27 ಸ್ಥಳಗಳ ಮರುನಾಮಕರಣದ ಚೀನಾದ ಅಸಂಬದ್ಧ ಪ್ರಯತ್ನವನ್ನು ಭಾರತವು ಇದೇ ರೀತಿ ತಿರಸ್ಕರಿಸಿತ್ತು. ನಮ್ಮ ತಾತ್ವಿಕ ನಿಲುವಿಗೆ ಅನುಗುಣವಾಗಿ, ನಾವು ಅಂತಹ ಪ್ರಯತ್ನಗಳನ್ನು ಸ್ಪಷ್ಟವಾಗಿ ತಿರಸ್ಕರಿಸುತ್ತೇವೆ ಎಂದಿತ್ತು.



ಅಮರನಾಥ ಯಾತ್ರೆ ಜುಲೈ 3ರಿಂದ ಆರಂಭ

• **ಶ್ರೀನಗರ:** ವಾರ್ಷಿಕ ಅಮರನಾಥ ಯಾತ್ರೆ ಜುಲೈ 3ರಿಂದ ಆರಂಭಗೊಳ್ಳಲಿದೆ. ಮುಂಗಡ ನೋಂದಣಿ ಏ.15ರಂದು ದೇಶದಾದ್ಯಂತ 554 ಗೊತ್ತುಪಡಿಸಿದ ಬ್ಯಾಂಕ್ ಶಾಖೆಗಳಲ್ಲಿ ಪ್ರಾರಂಭವಾಗಲಿದೆ. ಯಾತ್ರಾರ್ಥಿಗಳ ಪರಿಶೀಲನೆ ಮತ್ತು ಪರವಾನಗಿ ವಿತರಣೆಯನ್ನು ಸುಗಮಗೊಳಿಸಲು ಆಧಾರ ಆಧಾರಿತ ನೈಜ-ಸಮಯದ ನೋಂದಣಿ ವ್ಯವಸ್ಥೆ ಪರಿಚಯಿಸಲಾಗಿದೆ. ಅಮರನಾಥ ದೇವಾಲಯ ಮಂಡಳಿಯ ಮೇಲ್ವಿಚಾರಣೆಯ ಈ ಪ್ರಕ್ರಿಯೆಯನ್ನು ಪಹಲ್ಗಾಮ್ ಮತ್ತು ಬಾಲ್ತಾಲ್ ಮಾರ್ಗಗಳೆರಡಕ್ಕೂ ದೈನಂದಿನ ಕೋಟಾಗಳಿಗೆ ಒಳಪಟ್ಟು, ಮೊದಲು ಬಂದವರಿಗೆ ಮೊದಲ ಆದ್ಯತೆ ಆಧಾರದ ಮೇಲೆ ನಡೆಸಲಾಗುತ್ತದೆ. ನೋಂದಣಿ ನಡೆಸಲು ಆಧಾರ್ ಚಾಲಿತ ಬಯೋಮೆಟ್ರಿಕ್ ದೃಢೀಕರಣ ಕಡ್ಡಾಯವಾಗಿ ಮಾಡಬೇಕು. ಅದೇರೀತಿ ಆರೋಗ್ಯ ತಪಸಣಾ ಪ್ರಮಾಣಪತ್ರ ಹಾಗೂ ನೋಂದಣಿಗೆ 150 ರೂ.ಗಳನ್ನು ನೀಡಬೇಕಾಗುತ್ತದೆ. ಇನ್ನುಳಿದಂತೆ 13-70 ವರ್ಷದೊಳಗಿನವರು ಮಾತ್ರ ಯಾತ್ರೆಗೆ ಅರ್ಹರಾಗಿರುತ್ತಾರೆ. ಈ ಪೈಕಿ 6 ವಾರಗಳಿಗಿಂತ ಹೆಚ್ಚಿನ ಗರ್ಭಿಣಿಯರು ಯಾತ್ರೆ ನಡೆಸಲು ಅನರ್ಹರಾಗಿರುತ್ತಾರೆ.



ತುಕ್ಡೆ-ತುಕ್ಡೆ ಗ್ಯಾಂಗ್‌ಗೆ ಟಿಎಂಸಿಯಿಂದ ಸಂಸತ್ತಿನವರೆಗೆ ಸಹಕಾರ: ಮೋದಿ

ಕಾರಿಡಾರ್‌ಗೆ ಬೆದರಿಕೆ: ಟಿಎಂಸಿ ಬೆಂಬಲ

• **ಸಿಲಿಗುರಿ:** ಈಶಾನ್ಯ ಭಾರತವನ್ನು ದೇಶದ ಉಳಿದ ಭಾಗಗಳಿಂದ ಪ್ರತ್ಯೇಕಿಸಲು ಆಯಕಟ್ಟಿನ ಸಿಲಿಗುರಿ ಕಾರಿಡಾರ್ ಅನ್ನು ಕಡಿತಗೊಳಿಸುವುದಾಗಿ ಬೆದರಿಕೆ ಹಾಕಿದ ಗುಂಪುಗಳಿಗೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಬೆಂಬಲ ನೀಡುತ್ತಿದೆ, ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಆರೋಪಿಸಿದ್ದಾರೆ.

ಕವಾಖಾಲಿ ಮೈದಾನದಲ್ಲಿ ಚುನಾವಣಾ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ತುಕ್ಡೆ-ತುಕ್ಡೆ ಗ್ಯಾಂಗ್‌ಗೆ ಟಿಎಂಸಿ ಬೀದಿಯಿಂದ ಸಂಸತ್ತಿನವರೆಗೆ ಬೆಂಬಲ ನೀಡುತ್ತಿದೆ. ಈ ಬೆಂಬಲಕ್ಕೆ ತುಷ್ಟೀಕರಣ ರಾಜಕಾರಣವೇ ಕಾರಣ ಎಂದು ಅವರು ಪ್ರತಿಪಾದಿಸಿದರು. ಈ ಭಾಗದಲ್ಲಿ ನಡೆಯುತ್ತಿರುವ ಅಕ್ರಮ ನುಸುಳುವಿಕೆ ಜನಸಂಖ್ಯಾ ಬದಲಾವಣೆಗೆ ಕಾರಣವಾಗುತ್ತಿದೆ ಎಂದು ದೂರಿದ ಪ್ರಧಾನಿ, ಕೇವಲ 20-22 ಕಿಮೀ ಅಗಲವಿರುವ ಸಿಲಿಗುರಿ ಕಾರಿಡಾರ್ ದೇಶದ ರಕ್ಷಣೆ ಮತ್ತು ಸಮೃದ್ಧಿಯ ದೃಷ್ಟಿಯಿಂದ ಅತ್ಯಂತ ನಿರ್ಣಾಯಕ ಭೂಸಂಪರ್ಕ ಎಂದು ಮೋದಿ ಬಣ್ಣಿಸಿದರು.



ಪ್ರಾದೇಶಿಕ ಅಭಿವೃದ್ಧಿ: ವ್ಯಾಪಾರ ಮತ್ತು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಸಿಕ್ಕಿಂ ಮತ್ತು ಸಿಲಿಗುರಿಯನ್ನು ಸಂಪರ್ಕಿಸುವ ಸೇವೋಕ್-ರಂಗ್ಪೋ ರೈಲು ಮಾರ್ಗವನ್ನು ಕೇಂದ್ರ ಸರ್ಕಾರ ನಿರ್ಮಿಸುತ್ತಿದೆ ಎಂದು ಪ್ರಧಾನಿ ತಿಳಿಸಿದರು. ಇದೇ ವೇಳೆ ರಾಜ್ಯ ಸರ್ಕಾರದ ವೈಫಲ್ಯಗಳನ್ನು ಉಲ್ಲೇಖಿಸಿದ ಅವರು, ಬುಡಕಟ್ಟು ಪ್ರದೇಶಗಳಿಗೆ ಪೈಪ್ ಮೂಲಕ ಕುಡಿಯುವ ನೀರು ಪೂರೈಸುವ ಕೇಂದ್ರದ ಯೋಜನೆಗಳನ್ನು ಟಿಎಂಸಿ ತಡೆದಿದೆ, ಇದರಿಂದಾಗಿ ಕೇವಲ ಶೇ. 25 ಕ್ಕಿಂತ ಕಡಿಮೆ ಕೆಲಸ ಪೂರ್ಣಗೊಂಡಿದೆ ಎಂದು ಆರೋಪಿಸಿದರು. ಉತ್ತರ ಬಂಗಾಳದ ಅಭಿವೃದ್ಧಿಗೆ ರಾಜ್ಯ ಬಜೆಟ್ ನಲ್ಲಿ ಸಾಕಷ್ಟು ಹಣ ಮೀಸಲಿಟ್ಟಿಲ್ಲ ಎಂದು ಅವರು ದೂರಿದರು.

ಚುನಾವಣಾ ವೇಳಾಪಟ್ಟಿ: ಏಪ್ರಿಲ್ 23 ರಂದು ಮೊದಲ ಹಂತದ ಮತದಾನ ನಡೆಯಲಿರುವ ದಾರ್ಜಿಲಿಂಗ್, ಜಲ್ಪೈಗುರಿ ಮತ್ತು ಕಾಲಿಂಪಾಂಗ್ ಜಿಲ್ಲೆಗಳ ಬಿಜೆಪಿ ಅಭ್ಯರ್ಥಿಗಳ ಪರ ಮೋದಿ ಪ್ರಚಾರ ನಡೆಸಿದರು. ಎರಡನೇ ಹಂತದ ಮತದಾನ ಏಪ್ರಿಲ್ 29 ರಂದು ನಿಗದಿಯಾಗಿದ್ದು, ಮೇ 4 ರಂದು ಮತ ಎಣಿಕೆ ನಡೆಯಲಿದೆ.

ಭಾರತ ಕಾನೂನುಗಳ ಕೊರತೆ ಎದುರಿಸುತ್ತಿಲ್ಲ: ಸಿಜೆಐ

ಸೀಮಿತ ಪ್ರವೇಶ ನ್ಯಾಯಕ್ಕೆ ಸವಾಲು

• **ಶಿಮ್ಲಾ:** ದೇಶದ ಕಾನೂನು ವ್ಯವಸ್ಥೆಯು ಎದುರಿಸುತ್ತಿರುವ ಅತಿದೊಡ್ಡ ಸವಾಲು ಕಾನೂನುಗಳ ಕೊರತೆಯಲ್ಲ, ಬದಲಿಗೆ ಸಾಮಾನ್ಯ ನಾಗರಿಕರಿಗೆ ಇರುವ ಸೀಮಿತ ಪ್ರವೇಶವಾಗಿದೆ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಭಾನುವಾರ ಹೇಳಿದ್ದಾರೆ.

ಕಾನೂನು ಹಕ್ಕುಗಳು ಮತ್ತು ಅವುಗಳ ಪ್ರಾಯೋಗಿಕ ಲಭ್ಯತೆಯ ನಡುವಿನ ಅಂತರವನ್ನು ಕಡಿಮೆ ಮಾಡುವ ತುರ್ತು ಅಗತ್ಯದ ಬಗ್ಗೆ ಹೇಳಿದ ಸಿಜೆಐ ಸೂರ್ಯ ಕಾಂತ್, ಭಾರತವು ಹಕ್ಕುಗಳು ಮತ್ತು ನೀತಿಗಳ ಬಲವಾದ ಚೌಕಟ್ಟನ್ನು ಹೊಂದಿದ್ದರೂ, ದೂರ, ವಿಳಂಬ ಮತ್ತು ಅನುಷ್ಠಾನದ ಅಂತರದಿಂದಾಗಿ ಈ ಪ್ರಯೋಜನಗಳು ಅಗತ್ಯವಿರುವವರನ್ನು ತಲುಪಲು ವಿಫಲವಾಗುತ್ತವೆ ಎಂದು ಹೇಳಿದರು.

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ನಲ್ಸಾ), ಉತ್ತರಾಖಂಡ್ ಹೈಕೋರ್ಟ್ ಮತ್ತು ಉತ್ತರಾಖಂಡ್ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಜಂಟಿಯಾಗಿ ಆಯೋಜಿಸಿದ್ದ 'ಜಸ್ಟಿಸ್ ಬಿಯಾಂಡ್ ಬ್ಯಾರಿಯರ್ಸ್: ರೈಟ್ಸ್, ರಿಹ್ಯಾಬಿಲಿಟೇಶನ್ ಅಂಡ್ ರಿಫಾರ್ಮ್ ಫಾರ್ ದಿ ಮೋಸ್ಟ್ ವಲ್‌ನೆರಬಲ್' ಎಂಬ ಶೀರ್ಷಿಕೆಯ ಎರಡು ದಿನಗಳ ಉತ್ತರ ವಲಯ ಪ್ರಾದೇಶಿಕ ಸಮ್ಮೇಳನವನ್ನು ಉದ್ದೇಶಿಸಿ ಸಿಜೆಐ ಭಾಷಣ ಮಾಡಿದರು. ಕೇವಲ ನ್ಯಾಯದ ಅಸ್ತಿತ್ವವು ಸಾಕಾಗುವುದಿಲ್ಲ. ಬದಲಿಗೆ, ಇದು ಪ್ರತಿ ಕೊನೆಯ ನಾಗರಿಕನ ಮನೆ ಬಾಗಿಲನ್ನು ಸಮಯೋಚಿತವಾಗಿ ತಲುಪಬೇಕು. ಗಣರಾಜ್ಯದ ಬಲವನ್ನು ಅದರ ಘೋಷಿತ ಹಕ್ಕುಗಳಿಂದ ಅಳೆಯಬಾರದು, ಆದರೆ ನಿಜವಾಗಿ ಸಾಧಿಸಲಾದ ಹಕ್ಕುಗಳಿಂದ ಅಳೆಯಬೇಕು ಎಂದರು.

ಮೂಲಸಂಪರ್ಕಗಳು ನ್ಯಾಯ ಪ್ರವೇಶಕ್ಕೆ ಅಡ್ಡಿ: ಉತ್ತರಾಖಂಡದಂತಹ ಗುಡ್ಡಗಾಡು ರಾಜ್ಯಗಳು ಎದುರಿಸುತ್ತಿರುವ ವಿಶಿಷ್ಟ ಸವಾಲುಗಳನ್ನು ಎತ್ತಿ ತೋರಿಸಿದ ಅವರು, ಒರಟಾದ ಭೌಗೋಳಿಕ ಭೂಪ್ರದೇಶ ಮತ್ತು ಸೀಮಿತ ಸಂಪರ್ಕ ಮೂಲಸೌಕರ್ಯಗಳು ನ್ಯಾಯದ ಪ್ರವೇಶಕ್ಕೆ ಅಡ್ಡಿಯಾಗುತ್ತವೆ ಎಂದು ಹೇಳಿದರು. ಅಂತಹ ಪ್ರದೇಶಗಳಲ್ಲಿ, ಸ್ಥಳೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ನ್ಯಾಯಾಂಗ ವ್ಯವಸ್ಥೆಯನ್ನು ಹೆಚ್ಚು ಸುಲಭವಾಗಿ ಮತ್ತು ಸ್ಪಂದಿಸುವಂತೆ ಮಾಡುವುದು ಅನಿವಾರ್ಯ ಎಂದರು.

ಯಾವುದೇ ಪ್ರವಾಸೋದ್ಯಮಕ್ಕೆ ಅವಕಾಶ ನೀಡದಿರಲು ಗ್ರಾಮಸ್ಥರ ಒಕ್ಕೊರಲ ನಿರ್ಣಯ

ರೆಸಾರ್ಟ್, ಹೋಂ ಸ್ಟೇ ಮುಕ್ತ ಪೊರಾಡ್ ಗ್ರಾಮ

ಪೊನ್ನಂಪೇಟೆ: ಪೊನ್ನಂಪೇಟೆ ತಾಲೂಕು ಬಿರುನಾಣಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಪೊರಾಡು ಗ್ರಾಮದಲ್ಲಿ ರೆಸಾರ್ಟ್, ಹೋಂ ಸ್ಟೇ ಸ್ಥಾಪನೆಗೆ ಅವಕಾಶ ನೀಡದಿರಲು ಗ್ರಾಮಸ್ಥರು ನಿರ್ಣಯ ಕೈಗೊಂಡಿದ್ದಾರೆ.

ಊರೋರ್ಮೆಯಲ್ಲಿ ಈ ಹಿಂದೆಯೇ ಈ ಬಗ್ಗೆ ಕೈಗೊಂಡ ನಿರ್ಣಯವನ್ನು ಸರ್ವಾನುಮತದಿಂದ ಎತ್ತಿಹಿಡಿಯುವ ಮೂಲಕ ಪ್ರವಾಸೋದ್ಯಮ ಗ್ರಾಮಕ್ಕೆ ಮಾರಕವಾಗಲಿದೆ ಎಂಬ ಮುನ್ನೆಚ್ಚರಿಕೆಯಿಂದ ಈ ನಿರ್ಣಯವನ್ನು ಗ್ರಾಮದ ಅಧ್ಯಕ್ಷ ಬಲ್ಯಮೀದೇರಿರ ಪ್ರಕಾಶ್ ಅವರ ಅಧ್ಯಕ್ಷತೆಯಲ್ಲಿ ಊರಿನ ಅಂಬಲದಲ್ಲಿ ನಡೆದ ವಿಶೇಷ ಮಹಾಸಭೆಯಲ್ಲಿ ಕೈಗೊಂಡಿದ್ದಾರೆ.

ಈ ಹಿನ್ನಲೆಯಲ್ಲಿ ನಿರ್ಣಯದ ಪ್ರತಿಯನ್ನು ಬಿರುನಾಣಿ ಗ್ರಾಮ ಪಂಚಾಯತ್ ಅವಧಿ ಪೂರ್ವ ಅಧ್ಯಕ್ಷ ಅಮ್ಮತ್ತಿರ ರಾಜೇಶ್ ಹಾಗೂ ಪಿಡಿಒ ಪ್ರಕಾಶ್ ಮತ್ತು ಶ್ರೀಮಂಗಲ ಪೊಲೀಸ್ ಠಾಣಾಧಿಕಾರಿ ರವೀಂದ್ರ ಅವರು ಗ್ರಾಮಕ್ಕೆ ಕರೆದು ನಿರ್ಣಯದ ಪ್ರತಿಯನ್ನು ನೀಡಿದರು. ಈ ಸಂದರ್ಭ ಸುಮಾರು 15 ವರ್ಷಗಳ ಹಿಂದೆಯೇ ಗ್ರಾಮದಲ್ಲಿ ಯಾವುದೇ ಹೋಂ ಸ್ಟೇ ಹಾಗೂ ರೆಸಾರ್ಟ್ ನಿರ್ಮಾಣಕ್ಕೆ ನಿರಪೇಕ್ಷಣ ಪತ್ರ ಪತ್ರವನ್ನು ನೀಡದಂತೆ ಗ್ರಾಮಸ್ಥರು ಮನವಿ ಮಾಡಿದ್ದು ಅದರಂತೆ ಇದುವರೆಗೆ ಯಾವುದೇ ರೆಸಾರ್ಟ್ ಹಾಗೂ ಹೋಂ ಸ್ಟೇಗೆ ನಿರಪೇಕ್ಷಣ ಪತ್ರವನ್ನು ನೀಡಿಲ್ಲ ಎಂದು ಗ್ರಾಮಕ್ಕೆ ಆಗಮಿಸಿದ ಗ್ರಾಮ ಪಂಚಾಯತ್ ಅವಧಿ ಪೂರ್ವ ಅಧ್ಯಕ್ಷರು ಹಾಗೂ ಪಿಡಿಒ ಸ್ಪಷ್ಟಪಡಿಸಿದ್ದು ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತ್‌ನಿಂದಲೂ ನಿರ್ಣಯ ಕೈಗೊಳ್ಳಲಾಗಿದ್ದು, ಇದನ್ನು ಪೊರಾಡು ಗ್ರಾಮದಲ್ಲಿ ಹೋಂ ಸ್ಟೇ ಹಾಗೂ ರೆಸಾರ್ಟ್ ನಿರ್ಮಿಸುತ್ತಿರುವ ಮಾಲೀಕರಿಗೆ ಅವರಿಗೆ ಸ್ಥಳದಲ್ಲಿ ನೀಡಿ ತಿಳುವಳಿಕೆ ನೀಡಿದರು.

ಈ ಸಂದರ್ಭ ಠಾಣಾಧಿಕಾರಿ, ಗ್ರಾ. ಪಂ. ಅವಧಿ ಪೂರ್ವ ಅಧ್ಯಕ್ಷರು ಮತ್ತು ಪಿಡಿಓ ಅವರು ಹೋಮ್ ಸ್ಟೇ, ರೆಸಾರ್ಟ್ ನಿರ್ಮಾಣ ಮಾಲೀಕರಿಗೆ ಗ್ರಾಮಸ್ಥರ ವಿರೋಧ, ಪಂಚಾಯಿತಿಯಿಂದನಿರಪೇಕ್ಷಣಪತ್ರಪಡೆಯದೆ ಹೋಂ ಸ್ಟೇ ಹಾಗೂ ರೆಸಾರ್ಟ್ ನಿರ್ಮಾಣ ಮಾಡುತ್ತಿರುವುದು ಸರಿಯಲ್ಲ ಹಾಗೂ ಅದನ್ನು ನಡೆಸುತ್ತಿರುವುದು ಸಹ ಕಾನೂನು ಬಾಹಿರ ಆದ್ದರಿಂದ ತಮ್ಮ ರೆಸಾರ್ಟ್ ಹಾಗೂ ಸಂಸ್ಥೆಯನ್ನು ಸ್ಥಗಿತಗೊಳಿಸುವಂತೆ ಸೂಚಿಸಿದರು.

ಈಗಾಗಲೇ ಗ್ರಾಮದಲ್ಲಿ ಕೆಲವರು ಹೋಂ ಸ್ಟೇ ರೆಸಾರ್ಟ್ ಸ್ಥಾಪಿಸಲು ಬೃಹತ್ ಯಂತ್ರಗಳಿಂದ ಮಣ್ಣನ್ನು ಕೊರೆಯುತ್ತಿದ್ದು ಗುಡ್ಡ ಪ್ರದೇಶದಲ್ಲಿ ಭೂಕುಸಿತ ಉಂಟಾಗುವ ಆತಂಕವನ್ನು ಗ್ರಾಮಸ್ಥರು ವ್ಯಕ್ತಪಡಿಸಿದ್ದಾರೆ. ಇದನ್ನು ಕೂಡಲೇ ಗ್ರಾಮ ಪಂಚಾಯತ್ ಹಾಗೂ ಜಿಲ್ಲಾಧಿಕಾರಿಗಳು ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸಿದರು.



ಗ್ರಾಮಸ್ಥರ ಅಹವಾಲು

ನೂರರಷ್ಟು ಇಲ್ಲಿನ ಮೂಲ ನಿವಾಸಿಗಳು ಕೃಷಿಯನ್ನು ಅವಲಂಬಿಸಿ ಬದುಕುತ್ತಿದ್ದು ಸ್ಥಳೀಯರು ಯಾರು ಪ್ರವಾಸೋದ್ಯಮದ ಮೂಲಕ ಬದುಕು ಅವಲಂಬಿಸಿಲ್ಲ. ಆದ್ದರಿಂದ ಗ್ರಾಮವು ರೆಸಾರ್ಟ್, ಹೋಂ ಸ್ಟೇ ಮುಕ್ತವಾಗಿದೆ. ಆದರೆ ಇತ್ತೀಚೆಗೆ ಕೆಲವರು ಗ್ರಾಮದ ನಿವಾಸಿ ಅಲ್ಲದವರು ಗ್ರಾಮದಲ್ಲಿ ಆಸ್ತಿಯನ್ನು ಖರೀದಿಸಿ ರೆಸಾರ್ಟ್ ಹೋಂಸ್ಟೇ ಗಳನ್ನು ಸ್ಥಾಪಿಸಲು ಮುಂದಾಗುತ್ತಿದ್ದು ಇದಕ್ಕೆ ಗ್ರಾಮಸ್ಥರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಕೃಷಿ ಪ್ರಧಾನವಾದ ಗ್ರಾಮ ಅದಕ್ಕೆ ಪೂರಕವಾಗಿಯೇ ಮುಂದುವರೆಯಲಿ: ಆಗ್ರಹ

ಗ್ರಾಮದಲ್ಲಿ ಪ್ರವಾಸೋದ್ಯಮದಿಂದ ಗ್ರಾಮದಲ್ಲಿ ಅನೈತಿಕ ಚಟುವಟಿಕೆ, ಗ್ರಾಮಸ್ಥರ ಪ್ರಶಾಂತತೆಗೆ ಧಕ್ಕೆ,ಪರಿಸರ ಹಾನಿ, ತ್ಯಾಜ್ಯಗಳ ಸಂಗ್ರಹ ಶಬ್ದ, ಜಲ ಮಾಲಿನ್ಯ ಸ್ಥಳೀಯರು ಹಾಗೂ ಪ್ರವಾಸಿಗಳ ನಡುವೆ ಸಂಘರ್ಷ ಸೇರಿದಂತೆ, ಮಾದಕ ವಸ್ತು ಸರಬರಾಜು, ಇಲ್ಲಿನ ಧಾರ್ಮಿಕ ಪವಿತ್ರತೆಗಳಿಗೂ ಸಹ ಧಕ್ಕೆಯಾಗುವ ನಿಟ್ಟಿನಲ್ಲಿ ಮತ್ತು ಅಕ್ರಮ ಚಟುವಟಿಕೆ ಮತ್ತು ಅಭದ್ರತೆ ನಿಟ್ಟಿನಲ್ಲಿ ಇಂತಹ ಯಾವುದೇ ರೆಸಾರ್ಟ್ ಹಾಗೂ ಹೋಂ ಸ್ಟೇ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸಿ ಗ್ರಾಮ ಪಂಚಾಯತ್‌ನಿಂದ ಯಾವುದೇ ನಿರಪೇಕ್ಷಣ ಪತ್ರ ನೀಡದಂತೆ ಹಾಗೂ ಈ ಮೂಲಕ ಶ್ರೀಮಂಗಲ ಪೊಲೀಸ್ ಠಾಣಾಧಿಕಾರಿಗಳಿಗೂ ಸಹ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಗ್ರಾಮದ ಸುತ್ತ ಪರಿಶುದ್ಧವಾದ ನದಿ ಆವರಿಸಿದ್ದು, ಗ್ರಾಮದ ಪೂರ್ವಿಕರು ಗ್ರಾಮದಲ್ಲಿ 3 ದೇವರಕಾಡನ್ನು ಸಂರಕ್ಷಿಸುತ್ತ ಪರಿಸರವನ್ನು ಕಾಪಾಡಿದ್ದಾರೆ,ಇಂತಹ ನದಿ, ಪರಿಸರ ಪ್ರವಾಸಿಗರ ಮೋಜು ಮಾಸ್ತಿಗೆ ಹಾಳಾಗುವುದು ಬೇಡ ಎಂದ ಗ್ರಾಮಸ್ಥರು, ಅತ್ಯಂತ ಶಾಂತಿಯುತ ಗ್ರಾಮ ಹೊರಗಿನವರ ಆಗಮನದಿಂದ ಅಶಾಂತಿಗೆ ಹೋಗುವುದು ಬೇಡ. ಇದೀಗ ಅತ್ಯಂತ ಪ್ರಭಾವಿಗಳು ಗ್ರಾಮದಲ್ಲಿ ಜಾಗವನ್ನು ಖರೀದಿಸಿ ತಮ್ಮ ಪ್ರಭಾವಗಳನ್ನು ಬಳಸಿ ಹಾಗೂ ರೆಸಾರ್ಟ್ ಮಾಡಲು ಮುಂದಾಗಿದ್ದಾರೆ. ಗ್ರಾಮಸ್ಥರು ಯಾರು ಸಹ ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಂಡು ತಮ್ಮ ಆರ್ಥಿಕ ಸಂಪನ್ಮೂಲವನ್ನು ಪಡೆಯುತ್ತಿಲ್ಲ, ಆದ್ದರಿಂದ ಕೃಷಿ ಪ್ರಧಾನವಾದ ಗ್ರಾಮ ಅದಕ್ಕೆ ಪೂರಕವಾಗಿಯೇ ಮುಂದುವರೆಯಲಿ ಎಂದು ಗ್ರಾಮಸ್ಥರು ಆಗ್ರಹಿಸಿದರು.

ಕೆಆರ್‌ಎಂಎಸ್‌ಎಸ್ ಅಧ್ಯಕ್ಷರಾಗಿ ಡಾ.ಸುಧಾ ಚಂದ್ರಶೇಖರ್ ಶೆಟ್ಟಿ

ಮಂಗಳೂರು: ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘದ ಮಂಗಳೂರು ವಿಭಾಗದ ನೂತನ ಪದಾಧಿಕಾರಿಗಳ ಆಯ್ಕೆ ಇತ್ತೀಚೆಗೆ ನಡೆಯಿತು. ಅಧ್ಯಕ್ಷರಾಗಿ ಗೋವಿಂದ ದಾಸ ಕಾಲೇಜಿನ ರಾಜ್ಯಶಾಸ್ತ್ರ ಪ್ರಾಧ್ಯಾಪಕಿ ಮೇಜರ್ ಡಾ.ಸುಧಾ ಚಂದ್ರಶೇಖರ್ ಶೆಟ್ಟಿ ಆಯ್ಕೆಯಾಜರು. ಉಪಾಧ್ಯಕ್ಷರಾಗಿ ವಿಶ್ವವಿದ್ಯಾನಿಲಯ



ಕಾಲೇಜು ಮಂಗಳೂರು ಇಲ್ಲಿನ ಹಿಂದಿ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ನಾಗರತ್ನ ರಾವ್, ಕಾರ್ಯದರ್ಶಿಯಾಗಿ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರಿನ ರಾಜೇಶ್, ಜತೆ ಕಾರ್ಯದರ್ಶಿಯಾಗಿ ಪುತ್ತೂರು ವಿವೇಕಾನಂದ ಕಾಲೇಜಿನ ಡಾ.ಪ್ರಮೋದ್ ಹಾಗೂ ಎಸ್ ಡಿಎಂ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್ಮೆಂಟ್ ಮಂಗಳೂರು ಇಲ್ಲಿನ ಕಾಜಲ್, ಕೋಶಾಧಿಕಾರಿಯಾಗಿ ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು ಮಂಗಳೂರಿನ ಗೀತಾ ಜೈನ್, ಮಹಿಳಾ ಪ್ರಮುಖ್ ಆಗಿ ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು ಇಲ್ಲಿನ ಪ್ರಾಧ್ಯಾಪಕರಾದ ಸುಭಾಷಿಣಿ ಶ್ರೀವತ್ಸ, ಸಂಘಟನಾ ಕಾರ್ಯದರ್ಶಿಯಾಗಿ ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜಿನ ಜಯಲಕ್ಷ್ಮಿ ಆರ್ ಶೆಟ್ಟಿ, ಮಾಧ್ಯಮ ಪ್ರಮುಖ್ ಆಗಿ ಮಿಲಾಗ್ರಿಸ್ ಕಾಲೇಜಿನ ಪ್ರಿಯಾ ಭಟ್ ಆಯ್ಕೆಯಾದರು. ಕಾರ್ಯಕಾರಿಣಿ ಸಮಿತಿಯ ಸದಸ್ಯರಾಗಿ ಡಾ.ಸುಧಾ ಎನ್. ವೈದ್ಯ, ವಾಣಿ ಯು. ಎಸ್., ಪುಷ್ಪಲತಾ, ಡಾ. ವೆಂಕಟೇಶ್ ನಾಯಕ್, ಯಶವಂತ ಕುದ್ರೋಳಿ, ಮಮತಾ ಶೆಟ್ಟಿ, ಕಾರ್ತಿಕ್, ಶ್ರುತಿ ಎನ್, ಜಯಲಕ್ಷ್ಮಿ ಕಲ್ಲಡ್ಕ, ಸಹನಾ, ಸೌಮ್ಯ ಮುಲ್ಕಿ, ಹರಿಶ್ಚಂದ್ರ ಪುತ್ತೂರು, ಭಕ್ತಿಶ್ರೀ ಸುಬ್ರಮಣ್ಯ ಆಯ್ಕೆಯಾದರು ಎಂದು ಪ್ರಕಟಣೆ ತಿಳಿಸಿದೆ.

ಗೃಹಜ್ಯೋತಿ ಯೋಜನೆಯಡಿ ಪೊನ್ನಂಪೇಟೆಗೆ 4 ಕೋಟಿ ರೂ.

ಮಡಿಕೇರಿ: ಗೃಹಜ್ಯೋತಿ ಯೋಜನೆಯಡಿ ಪೊನ್ನಂಪೇಟೆ ತಾಲೂಕಿಗೆ 4 ಕೋಟಿ ಅನುದಾನದ ನಿರೀಕ್ಷೆಯಿದ್ದು, ಕ್ರೀಯಾ ಯೋಜನೆಯಲ್ಲಿ ಸೇರ್ಪಡೆಯಾದ ಕಾಮಗಾರಿಗಳನ್ನು ಅನುದಾನ ಬಿಡುಗಡೆಯಾದ ನಂತರ ಪ್ರಾರಂಭಿಸಲು ಪೊನ್ನಂಪೇಟೆ ತಾಲೂಕು ಪಂಚಾಯತ್ ಸಾಮರ್ಥ್ಯ ಸೌಧದಲ್ಲಿ ನಡೆದ ಪೊನ್ನಂಪೇಟೆ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಪ್ರಶಾಂತ್ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಗೃಹಲಕ್ಷ್ಮಿ ಯೋಜನೆಯಡಿ ಪೊನ್ನಂಪೇಟೆ ತಾಲೂಕಿನಲ್ಲಿ ಜನವರಿ ತಿಂಗಳವರೆಗೆ ಫಲಾನುಭವಿಗಳಿಗೆ ಹಣ ಜಮೆಯಾಗಿದ್ದು, ಶೇ.95 ರಷ್ಟು ಸಾಧನೆಯಾಗಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ತಾಲೂಕಿನಲ್ಲಿ ಲೈನ್‌ಮ್ಯಾನ್‌ಗಳ ಕೊರತೆಯಿದ್ದು, ಕೂಡಲೇ ಲೈನ್‌ಮ್ಯಾನ್ ನೇಮಕಾತಿ ಮಾಡಿ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸಲು ಸಭೆಯಲ್ಲಿ ಕೋರಲಾಯಿತು. ಯುವನಿ ಯೋಜನೆಯಡಿ ತಾಲೂಕಿನಲ್ಲಿ 1728 ವಿದ್ಯಾರ್ಥಿಗಳು ಸದುಪಯೋಗವನ್ನು ಪಡೆದುಕೊಳ್ಳುತ್ತಿರುವ ಕುರಿತು ಸಭೆಗೆ ಮಾಹಿತಿ ನೀಡಿದರು. ಈಗಾಗಲೇ ಉದ್ಯೋಗ ಪಡೆದುಕೊಂಡಿರುವ ಫಲಾನುವಿಗಳಿಗೂ ಹಣ ಜಮೆಯಾಗುತ್ತಿದ್ದು, ಈ ಬಗ್ಗೆ ಗಮನಹರಿಸುವಂತೆ ತಾಲೂಕು ಗ್ಯಾರಂಟಿ ಯೋಜನಾ ಸಮಿತಿ ಸದಸ್ಯರು ಸಭೆಯ ಗಮನಕ್ಕೆ ತಂದರು. ಶಕ್ತಿ ಯೋಜನೆಯಡಿ ಪೊನ್ನಂಪೇಟೆ ತಾಲೂಕಿನಲ್ಲಿ ಮಾರ್ಚ್ ತಿಂಗಳವರೆಗೆ ಸದುಪಯೋಗವನ್ನು ಪಡೆದುಕೊಂಡಿರುವ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಸಭೆಯಲ್ಲಿ ವೀರಾಜಪೇಟೆ ತಾ.ಪಂ. ಇಒ ಅಪ್ಪಣ್ಣ, ಗ್ಯಾರಂಟಿ ಯೋಜನೆಯ ಸದಸ್ಯರು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ನೆಹರು ಚಿಂತನ ಕೇಂದ್ರದ ವತಿಯಿಂದ ಆಯೋಜನೆ

ಸರ್ಕಾರಿ ಶಾಲೆಗಳಲ್ಲಿ ಬೇಸಿಗೆ ಶಿಬಿರ

ಕೊಣಾಜೆ: ಮಂಗಳೂರು ವಿಶ್ವ ವಿದ್ಯಾನಿಲಯದ ನೆಹರು ಚಿಂತನ ಕೇಂದ್ರದ ವತಿಯಿಂದ ಮಂಗಳೂರು ವಿಶ್ವವಿದ್ಯಾನಿಲಯದ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳ ಸರಕಾರಿ ಶಾಲೆಗಳಲ್ಲಿ ಇತ್ತೀಚೆಗೆ ಉಚಿತ ಬೇಸಿಗೆ ಶಿಬಿರವನ್ನು ಆಯೋಜಿಸಿತು.



ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳ ಸಹಯೋಗದಲ್ಲಿ ಈ ಶಿಬಿರದಲ್ಲಿ ಪ್ರತಿ ಶಾಲೆಗೆ ಸ್ನಾತಕೋತ್ತರ ವಿದ್ಯಾರ್ಥಿಗಳ ತಂಡವು ಎರಡು ದಿನಗಳ ಕಾಲ ಭೇಟಿ ನೀಡಿ ವಿವಿಧ ಚಟುವಟಿಕೆಗಳನ್ನು ನಡೆಸಿತು.

ಶಿಬಿರದಲ್ಲಿ ಮಂಗಳೂರು ವಿವಿಯ ಕನ್ನಡ ಅಧ್ಯಯನ ವಿಭಾಗ, ಇಂಗ್ಲಿಷ್ ವಿಭಾಗ, ರಸಾಯನ ಶಾಸ್ತ್ರ ವಿಭಾಗ, ಜೀವ ವಿಜ್ಞಾನ ವಿಭಾಗ, ಇತಿಹಾಸ ವಿಭಾಗ ಮತ್ತು ಗಣಿತಶಾಸ್ತ್ರ ವಿಭಾಗಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಚಿತ್ರಕಲೆ, ಹಸ್ತಕಲೆ, ರಂಗೋಲಿ, ರಂಗ ತರಬೇತಿ, ಸಂಗೀತ, ನೃತ್ಯ, ವಿಜ್ಞಾನ ಮಾದರಿ ಪ್ರದರ್ಶನ, ಕೌಶಲ್ಯ ಅಭಿವೃದ್ಧಿ ಚಟುವಟಿಕೆಗಳು, ಸಾಂಪ್ರದಾಯಿಕ ಆಟಗಳು ಹಾಗೂ ಮನರಂಜನಾ ಕಾರ್ಯಕ್ರಮಗಳು ಮಕ್ಕಳಲ್ಲಿ ಹೊಸ ಉತ್ಸಾಹ ಮತ್ತು ಆತ್ಮವಿಶ್ವಾಸವನ್ನು ಮೂಡಿಸಿದವು. ಏಕಾಗ್ರತೆಯನ್ನು ಹೆಚ್ಚಿಸುವ ಆಟಗಳು ಮತ್ತು ಚಟುವಟಿಕೆಗಳು ಮಕ್ಕಳ ಮನಸ್ಸನ್ನು ಆಕರ್ಷಿಸಿತು.

ಈ ಶಿಬಿರವನ್ನು ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಶಾಲೆಗಳಾದ ಕೊಣಾಜೆ, ದೇರಳಕಟ್ಟೆ, ಉರುಮನೆ, ಇನೋಳಿ, ರಾಜಗುಡ್ಡೆ, ನ್ಯೂಪಡ್ಪು ಸರಕಾರಿ ಪ್ರೌಢಶಾಲೆ ಹಾಗೂ ಶ್ರೀ ರಾಮಕೃಷ್ಣ ಪ್ರೌಢಶಾಲೆ ಹರೇಕಳದಲ್ಲಿ ನಡೆಸಲಾಯಿತು. ನೆಹರು ಚಿಂತನ ಕೇಂದ್ರದ ನಿರ್ದೇಶಕರಾದ ಪ್ರೊ. ಪ್ರಶಾಂತ ನಾಯ್ಕ್, ಡಾ.ನಯನ ಕೃಷ್ಣಾಪುರ, ಸಂಧ್ಯಾ ಭಾಗವಹಿಸಿದ್ದರು.

ಮುಲ್ಕಿ: ಟಯರ್ ಸ್ಫೋಟ – ಚಾಲಕನ ನಿಯಂತ್ರಣ ತಪ್ಪಿ ಸೇತುವೆಗೆ ಪಿಕಪ್ ಡಿಕಿ

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66ರ ಕೋಲ್ನಾಡ್ ಕಿರು ಸೇತುವೆಗೆ ಪಿಕ್ ಅಪ್ ಡಿಕ್ಕಿಯಾಗಿ ಅಪಘಾತ ಸಂಭವಿಸಿದ್ದು ಪಿಕ್ ಅಪ್ ಚಾಲಕ ಅಲ್ಪ ಸ್ವಲ್ಪ ಗಾಯಗಳೊಂದಿಗೆ ಪವಾಡ ಸದೃಶ ಪಾರಾಗಿದ್ದಾನೆ ಗಾಯಾಳು ಚಾಲಕನನ್ನು ಶಿವಮೊಗ್ಗ ನಿವಾಸಿ ಇಮ್ರಾನ್ (25) ಎಂದು ಗುರುತಿಸಲಾಗಿದೆ ಮಂಗಳೂರಿನಿಂದ ಗೋವಾ ಕಡೆಗೆ ಮೀನಿನ ಚಿಪ್ಪುಗಳನ್ನು ಹೇರಿಕೊಂಡು ಹೋಗುತ್ತಿದ್ದ ಪಿಕಪ್ ವಾಹನ ಕೋಲ್ನಾಡ್ ಕಿರು ಸೇತುವೆ ತಲುಪುತ್ತಿದ್ದಂತೆ ಪಿಕಪ್ ನ ಹಿಂಭಾಗದ ಟಯರ್ ಸ್ಫೋಟಗೊಂಡು ಪಿಕಪ್ ಚಾಲಕನ ನಿಯಂತ್ರಣ ತಪ್ಪಿ ಉಡುಪಿ ಕಡೆಗೆ ಹೋಗುತ್ತಿದ್ದ ವಾಹನ ಜೊತೆ ಅಪಘಾತ ತಪ್ಪಿಸಲು ಯತ್ನಿಸಿ ತೀರಾ ಬಲಬದಿಗೆ ಚಲಿಸಿ ಸೇತುವೆಯ ತಡೆಗೋಡೆಗೆ ಪಿಕಪ್ ದಿಕ್ಕಿಯಾಗಿದೆ. ಅಪಘಾತದಿಂದ ಪಿಕಪ್ ಎದುರು ಭಾಗಕ್ಕೆ ಹಾನಿಯಾಗಿದ್ದು, ಸೇತುವೆಯ ಸಿಮೆಂಟ್ ತಡೆಗೋಡೆಗಳು ತುಂಡಾಗಿ ಬಿದ್ದಿದೆ. ಕಳೆದ ಕೆಲ ತಿಂಗಳಿನಿಂದ ತೀರಾ ಇಕ್ಕಟ್ಟಾಗಿರುವ ಪಡುಪಣಂಬೂರು ಕೋಲ್ನಾಡ್ ಕಿರು ಸೇತುವೆ ಬಳಿ ಅನೇಕ ಅಪಘಾತಗಳು ಸಂಭವಿಸುತ್ತಿದ್ದು ಚಾಲಕರ ಅತಿ ವೇಗದ ಚಾಲನೆ ಅಪಘಾತಕ್ಕೆ ಕಾರಣವಾಗಿದೆ ಸ್ಥಳಕ್ಕೆ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ.



ಅಂತಾರಾಷ್ಟ್ರೀಯ ಫಿಸಿಯೋಥೆರಪಿ ಸಮ್ಮೇಳನ 'ಮಂಗಳೂರು ಫಿಸಿಯೋಕಾನ್-2026'

ಸಂಶೋಧನಾ ಕಾರ್ಯಕ್ಕೆ ಆದ್ಯತೆ ನೀಡಿ: ಸ್ಪೀಕರ್ ಖಾದರ್

ಮಂಗಳೂರು: ಫಿಸಿಯೋಥೆರಪಿ ಕ್ಷೇತ್ರದಲ್ಲಿ ಇಂದು ಸಾಕಷ್ಟು ಅವಕಾಶಗಳಿದ್ದು, ಈ ಕ್ಷೇತ್ರ ಆಯ್ದುಕೊಳ್ಳುವ ವಿದ್ಯಾರ್ಥಿಗಳು ಬದ್ಧತೆಯಿಂದ ಸಂಶೋಧನಾ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂದು ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಹೇಳಿದ್ದಾರೆ.

ಸೌತ್ ಕೆನರಾ ಫಿಸಿಯೋಥೆರಪಿ ಟೀಚರ್ಸ್ ಅಸೋಸಿಯೇಶನ್ ವತಿಯಿಂದ ನಗರದ ಟಿಎಂಎ ಪೈ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆದ ಎರಡು ದಿನಗಳ ಅಂತಾರಾಷ್ಟ್ರೀಯ ಫಿಸಿಯೋಥೆರಪಿ ಸಮ್ಮೇಳನ 'ಮಂಗಳೂರು ಫಿಸಿಯೋಕಾನ್- 2026' ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಭಾರತ ಮಾತ್ರವಲ್ಲಿ ವಿಶ್ವದಲ್ಲಿಯೇ ಫಿಸಿಯೋಥೆರಪಿ ಕ್ಷೇತ್ರದಲ್ಲಿ ಹೆಚ್ಚಿನ ಬೇಡಿಕೆ ಇದೆ. ವೈದ್ಯಕೀಯ ವಿದ್ಯಾರ್ಥಿಗಳು ಸಂಶೋಧನಾ ಕಾರ್ಯದಲ್ಲಿ ತೊಡಗಿಕೊಂಡಾಗ ಮಾತ್ರ ಹೆಚ್ಚಿನ ಸಾಧನೆ ಸಾಧ್ಯ ಎಂದವರು ಹೇಳಿದರು.

ತೇಜಸ್ವಿನಿ ಹಾಸ್ಪಿಟಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಶನ್ಸ್‌ನ ಚೇರ್ಮನ್ ಪ್ರೊ.ಎಂ. ಶಾಂತಾರಾಮ ಶೆಟ್ಟಿ ಮಾತನಾಡಿ, ಪ್ರಸ್ತುತ ದೇಶದಲ್ಲಿ 700ಕ್ಕೂ ಅಧಿಕ ಫಿಸಿಯೋತೆರಪಿ ಕಾಲೇಜುಗಳಿವೆ. ರಾಜ್ಯದಲ್ಲಿ 150ಕ್ಕೂ ಹೆಚ್ಚು, ಮಂಗಳೂರಿನಲ್ಲಿ 15 ಫಿಸಿಯೋಥೆರಪಿ ಕಾಲೇಜುಗಳಿದ್ದು, ಸಾವಿರಾರು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ರೋಗಿಗಳ ನೋವು ಕಡಿಮೆ ಮಾಡುವಲ್ಲಿ ಫಿಸಿಯೋಥೆರಪಿಸ್ಟ್‌ಗಳ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು.

ಇದೇ ಸಂದರ್ಭ ಡಾ. ಶಾಂತಾರಾಮ ಶೆಟ್ಟಿ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಬೆಸ್ಟ್ ಅಕಾಡೆಮಿಶಿಯನ್ ಪ್ರಶಸ್ತಿಯನ್ನು ಡಾ.ಯೋಗರಾಜ್ ರೈ, ಡಾ.ಪ್ರಭು, ಡಾ.ಪ್ರಸನ್ನ ಕುಮಾರ್ ಅವರಿಗೆ, ಬೆಸ್ಟ್ ಫಿಸಿಯೋಥೆರಪಿಸ್ಟ್ ಪ್ರಶಸ್ತಿಯನ್ನು ಡಾ.ಶೆರಿನ್ ಜಾರ್ಜ್, ಡಾ.ಬಸವರಾಜ್ ನಂಜಣ್ಣವರ್, ಡಾ.ಸುಮಿತಾ ಅವರಿಗೆ, ಡಾ.ಶ್ರವಣ್ ಪೂಜಾರಿ ಅವರಿಗೆ ವಿಶೇಷ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಣಚೂರು ಇಸ್ಲಾಮಿಕ್ ಎಜ್ಯುಕೇಶನ್ ಟ್ರಸ್ಟ್ ಅಧ್ಯಕ್ಷ ಡಾ.ಯು.ಕೆ. ಮೋನು, ಆಕ್ಸ್‌ಫರ್ಡ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಶನ್ಸ್ ಅಧ್ಯಕ್ಷ ವಸಂತ ಹೊರಟ್ಟಿ, ಡಾ.ಅಬ್ದುಲ್ ಶಕೀಲ್ ಚಾರಿಟೆಬಲ್ ಟ್ರಸ್ಟ್‌ನ ಅಧ್ಯಕ್ಷ ಡಾ.ಅಬ್ದುಲ್ ಶಕೀಲ್, ಇಂಡಿಯನ್ ಅಸೋಸಿಯೇಶನ್ ಆಫ್ ಫಿಸಿಯೋಥೆರಪಿಸ್ಟ್ ಉಪಾಧ್ಯಕ್ಷ ಡಾ. ಸುರೇಶ್ ಬಾಬು ರೆಡ್ಡಿ, ಸಂಜಯ್ ಗಾಂಧಿ ಕಾಲೇಜ್ ಆಫ್ ಫಿಸಿಯೋಥೆರಪಿ ಡೀನ್ ಡಾ.ಸಾಯಿ ಕುಮಾರ್ ಎನ್., ಆರ್ ಜಿಯುಎಚ್‌ಎಸ್‌ನ ಫಿಸಿಯೋಥೆರಪಿ ಚೇರ್ಮನ್ ಡಾ.ವಿ.ಆರ್. ಅಯ್ಯಪ್ಪನ್ ಮತ್ತಿತರರು ಉಪಸ್ಥಿತರಿದ್ದರು.



ಪತ್ನಿಯ ಕೊಲೆ: ಪತಿಗೆ ಮೂರು ಜೀವಾವಧಿ ಸಜೆ

ಕಣ್ಣೂರು: ಪೊಲೀಸ್ ಅಧಿಕಾರಿಯಾದ ಪತ್ನಿಯನ್ನು ಇರಿದು ಕೊಲೆಗೈದ ಪ್ರಕರಣದಲ್ಲಿ ಆರೋಪಿಗೆ ಮೂರು ಜೀವಾವಧಿ ಕಠಿಣ ಸಜೆ ವಿಧಿಸಿ ನ್ಯಾಯಾಲಯವು ತೀರ್ಪು ನೀಡಿದೆ.

ಕಣ್ಣೂರು ಕರಿವೆಳ್ಳೂರು ಪಲಿಯೇರಿ ನಿವಾಸಿ ದಿವ್ಯಶ್ರೀ ಕೊಲೆ ಪ್ರಕರಣದಲ್ಲಿ ಆರೋಪಿಯಾದ ಅವರ ಪತಿ ಕೊಳುಮ್ಮಲ್ ಕೋಟೂರು ವೇರಳತ್‌ನ ಕೆ.ರಾಜೇಶ್‌ಗೆ ಈ ರೀತಿ ಶಿಕ್ಷೆ ವಿಧಿಸಲಾಗಿದೆ.

ಮೂರು ಜೀವಾವಧಿ ಕಠಿಣ ಸಜೆ ಮಾತ್ರವಲ್ಲದೆ 2 ಲಕ್ಷ ರೂಪಾಯಿ ದಂಡವನ್ನೂ ವಿಧಿಸಲಾಗಿದೆ. ಪ್ರಿನ್ಸಿಪಲ್ ಸೆಶನ್ಸ್ ನ್ಯಾಯಾಲಯದ ನ್ಯಾಯಾಧೀಶ ಕೆ.ಟಿ.ನಿಸಾರ್ ಅಹಮ್ಮದ್ ಈ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಮೂರು ಜೀವಾವಧಿ ಶಿಕ್ಷೆ ವಿಧಿಸುವುದು ಇದು ಅಪೂರ್ವವಾಗಿದೆ. ಮೂರು ಕಾಯ್ದೆಗಳಲ್ಲಿ ಮೂರು ಜೀವಾವಧಿ ಹಾಗೂ ಒಂದು ಕಾಯ್ದೆಯಲ್ಲಿ 7 ವರ್ಷ ಶಿಕ್ಷೆಯನ್ನು ವಿಧಿಸಲಾಗಿದೆ. ಶಿಕ್ಷೆಯನ್ನು ಜೊತೆಯಾಗಿ ಅನುಭವಿಸಿದರೆ ಸಾಕೆಂದು ತಿಳಿಸಲಾಗಿದೆ. ದಿವ್ಯಶ್ರೀ ಕಾಸರಗೋಡು ಚಂದೇರ ಪೊಲೀಸ್ ಠಾಣೆಯ ಸಿವಿಲ್ ಪೊಲೀಸ್ ಆಫೀಸರ್ ಆಗಿದ್ದರು. 2024 ನವೆಂಬರ್ 21ರಂದು ಸಂಜೆ 6 ಗಂಟೆಗೆ ಅವರನ್ನು ಇರಿದು ಕೊಲೆಗೈಯ್ಯಲಾಗಿತ್ತು. ಪತಿ ರಾಜೇಶ್‌ನಿಂದ ದೂರಾಗಿ ಸ್ವಂತ ಮನೆಯಲ್ಲಿ ದಿವ್ಯಶ್ರೀ ವಾಸಿಸುತ್ತಿದ್ದರೆನ್ನಲಾಗಿದೆ.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-50) ಡ್ರಾ ಏಪ್ರಿಲ್ 12ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
MX 357901 (THRISSUR)

Consolation Prize Rs.5,000/-
MN 357901 MO 357901 MP 357901 MR 357901
MS 357901 MT 357901 MU 357901 MV 357901
MW 357901 MY 357901 MZ 357901

2nd Prize Rs.25,00,000/- [25 Lakhs]
MN 560485 (KANNUR)

3rd Prize Rs.5,00,000/- [5 Lakhs]
MN 842968 (ERNAKULAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0043 0070 0584 0779 0813 2183 3647 3703 3766 3854
4897 6241 6660 7497 7762 7901 9545 9639 9792

5th Prize Rs.2,000/-
0284 0353 5895 8607 9651 9853

6th Prize Rs.1,000/-
1442 1596 2461 2885 2911 3057 3522 3812 4083 4128
4276 4406 4728 4817 6590 7140 7283 7559 7758 7886
8087 8538 8740 8774 9846

7th Prize Rs.500/-
0113 0238 0381 0592 0620 0711 0883 0910 1109 1132
1462 2062 2379 2628 2722 2812 2836 2915 3041 3051
3140 3257 3461 4052 4170 4467 4937 5099 5153 5166
5223 5293 5309 5487 5576 5685 5801 6035 6116 6207
6321 6560 6593 6842 6896 7186 7258 7325 7401 7440
7671 7744 7745 7934 7974 8115 8134 8178 8228 8378
8389 8566 8592 8676 8854 8962 9061 9072 9355 9361
9470 9572 9585 9687 9798 9935

8th Prize Rs.200/-
0067 0590 0629 0636 0640 0788 0978 1100 1117 1199
1356 1470 1554 1657 1713 1770 1826 2102 2274 2483
2502 2685 2689 2694 3049 3085 3128 3188 3253 3289
3324 3412 3453 3591 3713 3756 3767 3831 3977 4192
4296 4307 4381 4493 4586 4676 4686 4691 4835 4836
4901 4974 4982 5008 5195 5340 5368 5615 5718 5922
6051 6196 6216 6322 6529 6650 6826 6857 6946 7133
7312 7404 7545 7614 7628 7728 7782 7784 7791 7903
8263 8370 8537 8626 8629 8642 8694 8974 9277 9352
9476 9610

9th Prize Rs.100/-
0012 0062 0127 0203 0303 0307 0377 0595 0727 0936
1014 1047 1076 1130 1173 1187 1287 1334 1343 1544
1590 1599 1648 1694 1721 1754 1813 1815 1834 1839
1873 2077 2162 2275 2290 2331 2459 2580 2624 2634
2647 2713 2789 2869 2940 3009 3066 3083 3093 3221
3283 3362 3550 3584 3669 3747 3878 4178 4234 4236
4288 4315 4396 4550 4579 4668 4698 4707 4714 4847
4875 4905 5017 5039 5077 5104 5136 5150 5185 5295
5327 5329 5346 5409 5520 5573 5611 5782 5785 5926
5936 6007 6061 6153 6254 6295 6342 6417 6419 6535
6564 6603 6728 6801 6860 7144 7180 7232 7323 7337
7408 7418 7568 7596 7753 7763 7844 7859 7933 7937
7943 7947 7963 7984 8051 8097 8133 8225 8229 8253
8268 8269 8350 8531 8600 8603 8628 8731 8766 8847
8870 8909 8985 9073 9245 9445 9533 9742 9775 9991

ಪೊನ್ನಂಪೇಟೆಯ ಸಿಐಟಿ ಕಾಲೇಜಿಗೆ ಪ್ರಸಿದ್ಧ ತಂತ್ರಜ್ಞಾನ ಉದ್ಯಮಿ ರಾಮ್ ಪ್ರಕಾಶ್ ಭೇಟಿ

ಸಿಐಟಿನಲ್ಲಿ ಕೃತಕ ಬುದ್ಧಿಮತ್ತೆಯ ಮಹತ್ವದ ಅರಿವು

ಮಡಿಕೇರಿ : ಪೊನ್ನಂಪೇಟೆಯ ಕೂರ್ಗ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಸಿಐಟಿ) ಕಾಲೇಜಿನ ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಅಧ್ಯಯನ (ಎಐ – ಎಂಎಲ್) ವಿಭಾಗದಲ್ಲಿ "ಕೃತಕ ಬುದ್ಧಿಮತ್ತೆ – ಒಬ್ಬ ನಿಜವಾದ ಎಂಜಿನಿಯರ್ ಏನು ಮಾಡುತ್ತಾನೆ?" ಎಂಬ ವಿಷಯದಡಿ ವಿಶೇಷ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಖ್ಯಾತ ತಂತ್ರಜ್ಞಾನ ಉದ್ಯಮಿ ಎಚ್. ರಾಮ್ ಪ್ರಕಾಶ್ ಅವರು "ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿರುವ ಈ ಯುಗದಲ್ಲಿ ಪ್ರತಿಯೊಬ್ಬರೂ ಕೃತಕ ಬುದ್ಧಿಮತ್ತೆಯನ್ನು ಕಲಿಯಬೇಕು, ಅದನ್ನು ಅಭ್ಯಾಸ ಮಾಡಬೇಕು ಮತ್ತು ಅದರೊಂದಿಗೆ ಬದುಕಲು ಕಲಿಯಬೇಕು. ಕೃತಕ ಬುದ್ಧಿಮತ್ತೆ ಮಾನವನಿಗೆ ಬೆದರಿಕೆ ಅಲ್ಲ; ಸರಿಯಾದ ರೀತಿಯಲ್ಲಿ ಬಳಸಿದರೆ ಅದು ಮಾನವ ಜೀವನವನ್ನು ಸುಧಾರಿಸುತ್ತದೆ," ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ.ಬಸವರಾಜ್, "ಕೃತಕ ಬುದ್ಧಿಮತ್ತೆ ನಮ್ಮನ್ನು ಹೊಸ ಮಟ್ಟಕ್ಕೆ ಕೊಂಡೊಯ್ಯುತ್ತಿದೆ. ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು," ಎಂದು ಹೇಳಿದರು.

ಎಐ ಮತ್ತು ಎಂಎಲ್ ವಿಭಾಗದ ಮುಖ್ಯಸ್ಥರಾದ ಡಾ. ರಾಮಕೃಷ್ಣಮಾತನಾಡಿ, "ಇಂತಹಮಹಾನ್‌ವ್ಯಕ್ತಿತ್ವಕಾಲೇಜಿಗೆ ಭೇಟಿ ನೀಡಿರುವುದು ನಮ್ಮ ಭಾಗ್ಯ. ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು," ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಕೃತಕ ಬುದ್ಧಿಮತ್ತೆಯ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಿಸಿ, ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ದಾರಿಗಳನ್ನು ತೆರೆದಿದೆ ಎಂದರು.

ಉದ್ಯಮಿ ರಾಮ್ ಪ್ರಕಾಶ್ ಅವರು 17 ವರ್ಷಗಳ ಅನುಭವ ಹೊಂದಿರುವ ಅವರು ದಶಕಕ್ಕೂ ಹೆಚ್ಚು ಕಾಲ ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಅಧ್ಯಯನ ಕ್ಷೇತ್ರದಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಭಾರತೀಯ ಭಾಷೆಗಳಿಗಾಗಿ ಮೆಷಿನ್ ಲರ್ನಿಂಗ್ ಆಧಾರಿತ ಪ್ರಥಮ ಟ್ರಾನ್ಸ್ಲಿಟರೇಶನ್ ಸಾಧನವಾದ ಕ್ವಿಲ್‌ಪ್ಯಾಡ್ ಅನ್ನು ರೂಪಿಸಿದಕ್ಕಾಗಿ 2010ರಲ್ಲಿ ಎಂಐಟಿ ಟಿಆರ್ 35 ಯುವ ನವೋದ್ಯಮಿ ಪ್ರಶಸ್ತಿಗೆ ಭಾಜನರಾದರು. ಅವರು ಕಾಗ್ನಿರೆಲ್ ಟೆಕ್ನಾಲಜೀಸ್ ಸಂಸ್ಥೆಯನ್ನು ಸ್ಥಾಪಿಸಿ, ಶಿಕ್ಷಣ ಕ್ಷೇತ್ರಕ್ಕೆ ಕೃತಕ ಬುದ್ಧಿಮತ್ತೆ ಆಧಾರಿತ ಪರಿಹಾರಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಅವರು ಐಐಟಿ ಮದ್ರಾಸ್‌ನ ಹಳೆಯ ವಿದ್ಯಾರ್ಥಿಯಾಗಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಕುಟೆನ್ ಇಂಡಿಯಾ ಸಹಾಯಕ ನಿರ್ದೇಶಕರಾದ ರಾಘವೇಂದ್ರ, ಮುಖ್ಯ ವಾಸ್ತುಶಿಲ್ಪಿ ಎ.ಪಿ. ಪ್ರದೀಪ್ ಹಾಜರಿದ್ದರು. ವಿದ್ಯಾರ್ಥಿ ಸಂಘದ ಸಂಯೋಜಕರಾದ ಪ್ರೊ. ಬಬಿತಾ ಸ್ವಾಗತಿಸಿದರು.



ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿರುವ ಈ ಯುಗದಲ್ಲಿ ಪ್ರತಿಯೊಬ್ಬರೂ ಕೃತಕ ಬುದ್ಧಿಮತ್ತೆಯನ್ನು ಕಲಿಯಬೇಕು.

ಕೃತಕ ಬುದ್ಧಿಮತ್ತೆ ಮಾನವನಿಗೆ ಬೆದರಿಕೆ ಅಲ್ಲ; ಸರಿಯಾದ ರೀತಿಯಲ್ಲಿ ಬಳಸಿದರೆ ಅದು ಮಾನವ ಜೀವನವನ್ನು ಸುಧಾರಿಸುತ್ತದೆ

ಕಿರುಸುದ್ದಿ

ಮಲ್ಲಿಕಾರ್ಜುನ ಖರ್ಗೆ ಹೇಳಿಕೆಗೆ ಡಾ. ಭರತ್ ಶೆಟ್ಟಿ ಕಿಡಿ

ಮಂಗಳೂರು: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಚುನಾವಣಾ ಪ್ರಚಾರದ ವೇಳೆ ಬಿಜೆಪಿ ಹಾಗೂ ಆರ್‌ಎಸ್‌ಎಸ್ ವಿಷಕಾರಿ ಹಾವುಗಳಂತೆ. ಹಾವು ಬಂದರೆ, ನಮಾಜ್ ಅನ್ನು ಅರ್ಧಕ್ಕೆ ನಿಲ್ಲಿಸಿ ಅದನ್ನು ಕೊಲ್ಲಬೇಕು ಎಂದು ಹೇಳಿ ಪ್ರಚೋದನಾ ಹೇಳಿಕೆ ನೀಡಿದ್ದು ಖಂಡನೀಯ' ಎಂದು ಬಿಜೆಪಿ ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕರು ಡಾ. ವೈ ಭರತ್ ಶೆಟ್ಟಿಯವರು ಹೇಳಿದರು.



ರಾಜಕೀಯ ಲಾಭಕ್ಕಾಗಿ ಪದೇ ಪದೆ ಮಲ್ಲಿಕಾರ್ಜುನ ಖರ್ಗೆಯವರು ಹಿಂದೂ ವಿರೋಧಿ ಹಾಗೂ ಆರ್. ಎಸ್. ಎಸ್ ವಿರೋಧಿ ಹೇಳಿಕೆ ನೀಡಿ ಸಮಾಜದಲ್ಲಿ ಅಶಾಂತಿ ಸೃಷ್ಟಿಸುತ್ತಿದ್ದಾರೆ. ಇಂತಹ ಮನಸ್ಥಿತಿಯುಳ್ಳವರ ಕೈಯಲ್ಲಿ ಜನ ಅಧಿಕಾರ ನೀಡಿದರೆ ಸಮಾಜದಲ್ಲಿ ದಂಗೆ ಉಂಟಾಗುವುದರಲ್ಲಿ ಸಂಶಯವಿಲ್ಲ. ಸಮಾಜದ ಶಾಂತಿಗಾಗಿ ಕಾಂಗ್ರೆಸ್ ನ ಇಂತಹ ನೀಚ ಮನಸ್ಥಿತಿಯನ್ನು ಹಿಮ್ಮೆಟ್ಟಿಸಬೇಕಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಲ್‌ಡಿಎಫ್‌ಗೆ ಅಚ್ಚರಿಯ ಗೆಲುವು: ಕೆ.ಪಿ.ಸತೀಶ್ಚಂದ್ರನ್

ಕಾಸರಗೋಡು: ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಮಂಜೇಶ್ವರ ಮತ್ತು ಕಾಸರಗೋಡು ಮಂಡಲಗಳಲ್ಲಿ ಎಲ್‌ಡಿಎಫ್ ಒಕ್ಕೂಟವು ಅಚ್ಚರಿಯ ಗೆಲುವು ಸಾಧಿಸಲಿದೆ ಎಂದು ಎಲ್‌ಡಿಎಫ್‌ನ ಜಿಲ್ಲಾ ಸಂಚಾಲಕ ಕೆ.ಪಿ.ಸತೀಶ್ಚಂದ್ರನ್ ತಿಳಿಸಿದ್ದಾರೆ. ತೃಕ್ಕರೀಪ್ಪುರ, ಕಾಞಂಗಾಡು ಮತ್ತು ಉದುಮ ವಿಧಾನಸಭಾ ಕ್ಷೇತ್ರಗಳಲ್ಲಿ ಎಲ್‌ಡಿಎಫ್‌ನ ಗೆಲುವು ನೂರಕ್ಕೆ ನೂರರಷ್ಟು ನಿಶ್ಚಿತ. ಈ ಮೂರು ಮಂಡಲಗಳಲ್ಲಿ ಎಡರಂಗಕ್ಕೆ ಕಳೆದ ಬಾರಿ ಲಭಿಸಿರುವುದಕ್ಕಿಂತ ಹೆಚ್ಚು ಮತಗಳ ಅಂತರದಿಂದ ಗೆಲುವು ದೊರಕಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಮಂಜೇಶ್ವರ ಮತ್ತು ಕಾಸರಗೋಡು ವಿಧಾನಸಭಾ ಕ್ಷೇತ್ರಗಳಲ್ಲಿ ಇತರ ಕೆಲವು ಪಕ್ಷಗಳ ಮತಗಳು ಎಡರಂಗಕ್ಕೆ ಬಂದಿವೆ. ಈ ಚುನಾವಣೆಯಲ್ಲಿ ಎಡರಂಗವು ಐದು ವಿಧಾನಸಭಾ ಕ್ಷೇತ್ರಗಳಲ್ಲೂ ಪ್ರಬಲ ಪೈಪೋಟಿ ನಡೆಸಿದೆ. ಅಭ್ಯರ್ಥಿಗಳ ನಿರ್ಣಯ ವಿಚಾರದಲ್ಲಿ ಯುಡಿಎಫ್‌ನಲ್ಲಿ ಭಿನ್ನಮತ ತಲೆದೋರಿತ್ತು. ಇದರಿಂದಾಗಿ ಯುಡಿಎಫ್ ಮತಗಳು ಎಲ್‌ಡಿಎಫ್‌ಗೆ ಸೋರಿಕೆಯಾಗಿವೆ. ಮಾತ್ರವಲ್ಲದೆ ಯುಡಿಎಫ್ ಗೆಲವು ಸಾಧಿಸಲು ಕಷ್ಟಸಾಧ್ಯವಾಗಲಿದೆ ಎಂದು ಅವರು ನುಡಿದರು. ಸೋಲಿನ ಭೀತಿಯಿಂದಾಗಿ ಎಲ್‌ಡಿಎಫ್ ಅಭ್ಯರ್ಥಿಗಳ ವಿರುದ್ಧ ಯುಡಿಎಫ್ ಒಕ್ಕೂಟವು ಇಲ್ಲಸಲ್ಲದ ಆರೋಪಗಳನ್ನು ಹೋರಿಸುತ್ತಿದೆ. ತೃಕ್ಕರೀಪ್ಪುರ ಮಂಡಲದ ಯುಡಿಎಫ್ ಅಭ್ಯರ್ಥಿ ಮೇಲೆ ಎಲ್‌ಡಿಎಫ್ ಕಾರ್ಯಕರ್ತರು ಹಲ್ಲೆ ನಡೆಸಿದ್ದಾರೆಂಬ ಆರೋಪವು ಶುದ್ಧ ಸುಳ್ಳು ಆಗಿದೆ. ಇಂತಹ ಅಪಪ್ರಚಾರದಿಂದ ಯುಡಿಎಫ್ ಒಕ್ಕೂಟವು ಹಿಂದೆ ಸರಿಯಬೇಕೆಂದು ಅವರು ಹೇಳಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ದಿ। ಸದಾಶಿವ ಆಚಾರ್ಯ ಸ್ಮರಣಾರ್ಥ ಮಗ ರಮೇಶ, ಸಹೋದರ, ಸಹೋದರಿಯರು, ಕಲ್ಲಡಪು, ಕೊಂಪದವು.
2. ದಿ। ದಿವಾಕರ ಶೆಟ್ಟಿಗಾರರ ಬಾಬ್ತು ಪತ್ನಿ, ಮಕ್ಕಳು, ಮೇಲೆಕ್ಕಾರು ಪದವು, ಪೆರ್ಮುದೆ.
3. ಬಿ. ಸಾಂತಪ್ಪ ಸುವರ್ಣ, 'ಸುವರ್ಣ ನಿಲಯ', ಬಳೆಂಜ, ಬೆಳ್ತಂಗಡಿ (ತಾ).
4. ಪ್ರಕಾಶ್ ನಾವಡ, 'ಶ್ರೀ ಕೃಪಾ' ಮೂಡುಕೋಡಿ, ವಯಾ ವೇಣೂರು.
5. ವಿಶುಕುಮಾರ್ ಎನ್. ಬಿನ್ ಜಯಕರ ದೇವಾಡಿಗ, ಗಣೇಶ ನಗರ, ನೇರಳಕಟ್ಟೆ ವಯಾ ಮಾಣಿ, ಬಂಟ್ವಾಳ ತಾ).
6. ಶ್ರೀ ದುರ್ಗಾಪರಮೇಶ್ವರೀ ಸೇವಾ ಸಮಿತಿ, ಕನ್ಯಾನ, ಬಂಟ್ವಾಳ (ತಾ).
7. ಸಾಮ್ರಾಟ್ (ರಿ) ಮಾನ್ಯ, ನಿತ್ಯಾನಂದ ನಗರ, ಬೇಳ ವಯಾ ನೀರ್ಚಾಲು, ಕಾಸರಗೋಡು.

ಶ್ರೀ ಧರ್ಮಸ್ಥಳ ಮೇಳ
ಕೋಟೇಶ್ವರ ಅಂಕದಕಟ್ಟೆಯಲಿ
ಶ್ರೀ ಪಂಚವರ್ಣ ಹಾಯ್ಗುಳಿ ದೈವಸ್ಥಾನ ವರ್ಧಂತಿ ಸಮಿತಿ

ಶ್ರೀ ಸಾಲಿಗ್ರಾಮ ಮೇಳ
ಆನಂದಪುರದಲ್ಲಿ - **ವಿಷ್ಣುವರ್ಧನ**

ಶ್ರೀ ಪೆರ್ಡೂರು ಮೇಳ
ಸಾಗರದಲ್ಲಿ - **ನಾಗವಲ್ಲಿ**

ಶ್ರೀ ಹನುಮಗಿರಿ ಮೇಳ
ತೊಡಿಕಾನದಲ್ಲಿ

ಶ್ರೀ ಪಾವಂಜೆ ಮೇಳ
ಆಕಳಬೈಲು, ಅರೆಹೊಳೆಕ್ರಾಸ್, ಕಿರಿಮಂಜೇಶ್ವರ
ಧರ್ಮಸಿಂಹಾಸನ



ಬಲ್ಲಂಗುಡೆಲು ಶ್ರೀ ಪಾಡಂಗರೆ ಭಗವತಿ ಭಕ್ತವೃಂದ ವತಿಯಿಂದ ಗಲ್ಫ್ ರಾಷ್ಟ್ರಗಳಲ್ಲಿರುವ ಭಕ್ತರ ಕಲ್ಯಾಣಕ್ಕಾಗಿ ವಿಶೇಷ ದೀಪಾರಾಧನೆ ಸೇವೆ ಮತ್ತು ವಿಶೇಷ ಪ್ರಾರ್ಥನೆ ಬಲ್ಲಂಗುಡೆಲು ಶ್ರೀ ಪಾಡಂಗರೆ ಭಗವತಿ ಕ್ಷೇತ್ರದ ಭಂಡಾರ ನಿಲಯದಲ್ಲಿ ಜರಗಿತು. ಕ್ಷೇತ್ರದ ಅನುವಂಶಿಕ ಅಚ್ಚನ್ಮಾರರು, ಸೇವಾ ಸಮಿತಿಯ ಅಧ್ಯಕ್ಷ ಜಯರಾಮ ಬಲ್ಲಂಗುಡೆಲು, ಸಮಿತಿಯ ಪದಾಧಿಕಾರಿಗಳು ಮತ್ತು ಶ್ರೀ ಪಾಡಂಗರೆ ಭಗವತಿ ಭಕ್ತವೃಂದಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಖಾಸಗಿ ಕಂಪನಿಗಳ ಪೈಪೋಟಿಗೆ ಬಿಎಸ್‌ಎನ್‌ಎಲ್ ಸಜ್ಜು

ಉಡುಪಿ ಜಿಲ್ಲೆಯಲ್ಲಿ 500 ಟವರ್‌ಗಳ ಗುರಿ

ಉಡುಪಿ: ಜಿಲ್ಲೆಯಲ್ಲಿ ಬಿಎಸ್‌ಎನ್‌ಎಲ್ ನೆಟ್‌ವರ್ಕ್ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಲು ಹಾಗೂ ಖಾಸಗಿ ಸಂಸ್ಥೆಗಳ ಮಾದರಿಯಲ್ಲಿ ಗುಣಮಟ್ಟದ ಸೇವೆ ನೀಡಲು ಈಗಿರುವ ಟವರ್‌ಗಳ ಸಂಖ್ಯೆಯನ್ನು 500ಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ಉಡುಪಿ ಸಂಸದ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.



ನಗರದ ಬಿಎಸ್‌ಎನ್‌ಎಲ್ ಮುಖ್ಯ ಕಚೇರಿಯಲ್ಲಿ ಇಲಾಖಾ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಸ್ತುತ ಜಿಲ್ಲೆಯಲ್ಲಿ 235 ಬಿಎಸ್‌ಎನ್‌ಎಲ್ ಟವರ್‌ಗಳು ಕಾರ್ಯಾಚರಿಸುತ್ತಿದ್ದು, ನೆಟ್‌ವರ್ಕ್ ವ್ಯಾಪ್ತಿ ವಿಸ್ತರಿಸಲು ಹೆಚ್ಚುವರಿಯಾಗಿ 200 ರಿಂದ 250 ಟವರ್‌ಗಳ ಅಗತ್ಯವಿದೆ. ಈ ಬಗ್ಗೆ ಸವಿಸ್ತಾರ ಪಟ್ಟಿ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮಣಿಪಾಲದ ಮಾಹೆ ಮತ್ತು ಎಂಐಟಿ ಕ್ಯಾಂಪಸ್ ವ್ಯಾಪ್ತಿಯಲ್ಲಿ ಬಿಎಸ್‌ಎನ್‌ಎಲ್ ಟವರ್ ಅಳವಡಿಕೆಗೆ ಎದುರಾಗಿರುವ ತಾಂತ್ರಿಕ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಕೂಡಲೇ ಮಾಹೆ ಮುಖ್ಯಸ್ಥರಿಗೆ ಪತ್ರ ಬರೆದು ಆಸ್ಪತ್ರೆ ಹಾಗೂ ಕ್ಯಾಂಪಸ್‌ನ ಆಯಕಟ್ಟಿನ ಸ್ಥಳಗಳಲ್ಲಿ ಟವರ್ ಅಳವಡಿಸಲು ಸಂಸದರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಸಭೆಯಲ್ಲಿ ಬಿಎಸ್‌ಎನ್‌ಎಲ್ ಜನರಲ್ ಮ್ಯಾನೇಜರ್ ಹೇಮಂತ್ ಬೊರ್ಲೆ ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮೂಲಸೌಕರ್ಯ ಸುಧಾರಣೆ

ಜಿಲ್ಲೆಯಲ್ಲಿ ಮಂಜೂರಾಗಿರುವ 39 ಹೊಸ 4ಜಿ ಟವರ್‌ಗಳ ಪೈಕಿ ಈಗಾಗಲೇ 30 ಟವರ್‌ಗಳು ಸಂಪರ್ಕ ಪಡೆದಿವೆ. ಅಲ್ಲದೆ, ಹಳೆಯ 115 ಟವರ್‌ಗಳನ್ನು 3ಜಿಯಿಂದ 4ಜಿಗೆ ಮೇಲ್ದರ್ಜೆಗೇರಿಸಲಾಗಿದೆ. ಈ ಹಿಂದೆ ಎದುರಾಗಿದ್ದ ಬ್ಯಾಟರಿ ಮತ್ತು ಜನರೇಟರ್ ಸಮಸ್ಯೆಗಳು ಶೇ. 90ರಷ್ಟು ಬಗೆಹರಿದಿದ್ದು, ಹೊಸ ಟವರ್‌ಗಳಿಗೆ ಸೌರಶಕ್ತಿ ವ್ಯವಸ್ಥೆ ಇರುವುದರಿಂದ ತಾಂತ್ರಿಕ ಅಡಚಣೆಗಳು ಇರುವುದಿಲ್ಲ ಎಂದು ಸಂಸದರು ಸ್ಪಷ್ಟಪಡಿಸಿದರು.

ರಾಷ್ಟ್ರೀಯ ಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆ'ಯನ್ನು ಉದ್ಘಾಟಿಸಿ ನಿವೃತ್ತ ನ್ಯಾಯಾಧೀಶರಾದ ಎಂ.ಜಿ. ಉಮಾ

ವಕೀಲ ವೃತ್ತಿಯಲ್ಲಿ ಮಾನವೀಯತೆ ಅಳವಡಿಸಿ

ಉಡುಪಿ: ನ್ಯಾಯಾಂಗ ವ್ಯವಸ್ಥೆಯಲ್ಲಿ ವಕೀಲರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಒಬ್ಬ ಯಶಸ್ವಿ ವಕೀಲರಾಗಲು ಕೇವಲ ಕಾನೂನು ಜ್ಞಾನವಿದ್ದರೆ ಸಾಲದು. ಕಕ್ಷಿದಾರರ ನೋವಿಗೆ ಸ್ಪಂದಿಸುವ ಸಹಾನುಭೂತಿ ಮತ್ತು ವೃತ್ತಿಯಲ್ಲಿ ಮಾನವೀಯತೆಯನ್ನು ಅಳವಡಿಸಿಕೊಂಡಾಗ ಮಾತ್ರ ಉನ್ನತ ಸಾಧನೆ ಮಾಡಲು ಸಾಧ್ಯ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಎಂ.ಜಿ. ಉಮಾ ಅವರು ಅಭಿಪ್ರಾಯಪಟ್ಟರು.

ಅವರು ನಗರದ ವೈಕುಂಠ ಬಾಳಿಗಾ ಕಾನೂನು ಕಾಲೇಜಿನಲ್ಲಿ ಆಯೋಜಿಸಲಾಗಿದ್ದ '10ನೇ ವರ್ಷದ ಅಡ್ವಕೇಟ್ ಪಿ. ಶಿವಾಜಿ ಶೆಟ್ಟಿ ಸ್ಮಾರಕ ರಾಷ್ಟ್ರೀಯ ಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆ'ಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ವಕೀಲ ವೃತ್ತಿಯು ಒಂದು ಪವಿತ್ರವಾದ ಕಾಯಕವಾಗಿದ್ದು, ಇಲ್ಲಿ ಸಾಕ್ಷಿಗಳು ಮತ್ತು ಕಕ್ಷಿದಾರರೊಂದಿಗೆ ಉತ್ತಮ ಬಾಂಧವ್ಯವನ್ನು ವೃದ್ಧಿಸಿಕೊಳ್ಳುವುದು ಅತ್ಯಗತ್ಯ. ನ್ಯಾಯಾಲಯದ ಮುಂದೆ ಮಂಡಿಸುವ ವಾದಪತ್ರಗಳು ಅತ್ಯಂತ ಸ್ಪಷ್ಟ ಹಾಗೂ ಸಮರ್ಪಕವಾಗಿರಬೇಕು. ಇದರೊಂದಿಗೆ ಮೌಖಿಕ ವಾಕ್‌ಚಾತುರ್ಯ ಮತ್ತು ಕಾನೂನುಬದ್ಧವಾದ ಮಂಡನೆಯ ಕೌಶಲ್ಯಗಳು ವಕೀಲರ ವೃತ್ತಿಜೀವನಕ್ಕೆ ಭದ್ರ ಬುನಾದಿ ಒದಗಿಸುತ್ತವೆ ಎಂದು ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.



ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕಾನೂನು ವಿದ್ಯಾರ್ಥಿಗಳಿಗೆ ಕೇವಲ ಪಠ್ಯದ ಜ್ಞಾನ ಸಾಕಾಗುವುದಿಲ್ಲ. ಇಂತಹ ರಾಷ್ಟ್ರೀಯ ಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ನ್ಯಾಯಾಲಯದ ನೈಜ ನಡಾವಳಿಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇದು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಮಾರ್ಗದರ್ಶನ ನೀಡುವ ಜೊತೆಗೆ ವೃತ್ತಿಪರ ಕೌಶಲ್ಯಗಳನ್ನು ಮೈಗೂಡಿಸಿಕೊಳ್ಳಲು ಉತ್ತಮ ವೇದಿಕೆಯಾಗಿದೆ ಎಂದು ಅವರು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಬೆಂಗಳೂರಿನ ಅಲಯನ್ಸ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ಕಾಲೇಜಿನ ಪ್ರಾಕ್ತನ ಪ್ರಾಂಶುಪಾಲರಾದ ಪ್ರೊ. (ಡಾ.) ಪ್ರಕಾಶ್ ಕಣಿವೆ ಅವರು ಮಾತನಾಡಿ, ಅಡ್ವಕೇಟ್ ಪಿ. ಶಿವಾಜಿ ಶೆಟ್ಟಿ ಅವರ ಹೆಸರಿನಲ್ಲಿ ಆರಂಭವಾದ ಈ ಸ್ಪರ್ಧೆಯು ಕಳೆದ ಹತ್ತು ವರ್ಷಗಳಿಂದ ನಿರಂತರವಾಗಿ ನಡೆದುಕೊಂಡು ಬರುತ್ತಿರುವುದು ಹೆಮ್ಮೆಯ ವಿಷಯ. ಈ ರಾಷ್ಟ್ರೀಯ ಮಟ್ಟದ ಸ್ಪರ್ಧೆಯ ಆರಂಭಿಕ ದಿನಗಳು ಮತ್ತು ಅದು ಬೆಳೆದು ಬಂದ ಹಾದಿಯನ್ನು ಸ್ಮರಿಸಿದ ಅವರು, ವಿದ್ಯಾರ್ಥಿಗಳು ಶಿಸ್ತು ಮತ್ತು ನಿರಂತರ ಅಧ್ಯಯನದ ಮೂಲಕ ಕಾನೂನು ಕ್ಷೇತ್ರದಲ್ಲಿ ಹೆಸರು ಮಾಡಬೇಕು ಎಂದು ಕರೆ ನೀಡಿದರು.

ವಿಬಿಸಿಎಲ್ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಸುರೇಖ ಕೆ. ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದು ಕಾಲೇಜು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಇಂತಹ ಕಾರ್ಯಕ್ರಮಗಳು ಪೂರಕವಾಗಿವೆ ಎಂದು ತಿಳಿಸಿದರು. ವೇದಿಕೆಯಲ್ಲಿ ದಿವಂಗತ ಪಿ. ಶಿವಾಜಿ ಶೆಟ್ಟಿ ಅವರ ಪತ್ನಿ ಜಯಂತಿ ಶಿವಾಜಿ ಶೆಟ್ಟಿ ಅವರು ಉಪಸ್ಥಿತರಿದ್ದು, ಸ್ಪರ್ಧಾಳುಗಳಿಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಾನವಿಕ ವಿಭಾಗದ ಮುಖ್ಯಸ್ಥರಾದ ಪ್ರೊ. ರೋಹಿತ್ ಎಸ್. ಅಮೀನ್, ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಶ್ರೀಧರ್ ಪಿ.ಎಸ್., ಸಹಾಯಕ ಪ್ರಾಧ್ಯಾಪಕ ಡಾ. ಶ್ರೀನಿವಾಸಪ್ರಸಾದ್ ಹಾಗೂ ಅಣಕು ನ್ಯಾಯಾಲಯ ಸಮಿತಿಯ ಕಾರ್ಯದರ್ಶಿಗಳಾದ ಸಾಯಿ ರಮ್ಯ ಮತ್ತು ಅಪರ್ಣಾಲಕ್ಷ್ಮೀ ಉಪಸ್ಥಿತರಿದ್ದರು.

ಶ್ರೀನಿಧಿ ಪ್ರಾರ್ಥನೆಸಲ್ಲಿಸಿದರು, ರಿಶಾಲಿ ವಂದನಾರ್ಪಣೆ ಮಾಡಿದರು. ಸಿಮ್ರಾನ್ ಅವರು ಇಡೀ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ದೇಶದ ವಿವಿಧ ಕಾನೂನು ಕಾಲೇಜುಗಳಿಂದ ಆಗಮಿಸಿದ್ದ ನೂರಾರು ವಿದ್ಯಾರ್ಥಿಗಳು ಈ ಜ್ಞಾನದ ಹಬ್ಬಕ್ಕೆ ಸಾಕ್ಷಿಯಾದರು.

- ನ್ಯಾಯಾಂಗ ವ್ಯವಸ್ಥೆಯಲ್ಲಿ ವಕೀಲರ ಪಾತ್ರ ಅತ್ಯಂತ ಮಹತ್ವವಾದದ್ದು
- ವೃತ್ತಿಯಲ್ಲಿ ಮಾನವೀಯತೆಯನ್ನು ಅಳವಡಿಸಿಕೊಂಡಾಗ ಮಾತ್ರ ಉನ್ನತ ಸಾಧನೆ ಮಾಡಲು ಸಾಧ್ಯ
- ವಕೀಲ ವೃತ್ತಿಯು ಒಂದು ಪವಿತ್ರವಾದ ಕಾಯಕವಾಗಿದ್ದು, ಇಲ್ಲಿ ಸಾಕ್ಷಿಗಳು ಮತ್ತು ಕಕ್ಷಿದಾರರೊಂದಿಗೆ ಉತ್ತಮ ಬಾಂಧವ್ಯವನ್ನು ವೃದ್ಧಿಸಿಕೊಳ್ಳುವುದು ಅತ್ಯಗತ್ಯ.
- ವಾಕ್‌ಚಾತುರ್ಯ ಮತ್ತು ಕಾನೂನುಬದ್ಧ ವಾದ ಮಂಡನೆಯ ಕೌಶಲ್ಯಗಳು ವಕೀಲರ ವೃತ್ತಿಜೀವನಕ್ಕೆ ಭದ್ರ ಬುನಾದಿ

ಮಂಜನಾಡಿ: ಯಕ್ಷಶಿಕ್ಷಣ ಶಿಬಿರಕ್ಕೆ ಚಾಲನೆ



ಕೊಣಾಜೆ: ಅಂಬುರುಹ ಯಕ್ಷ ಸದನ ಪ್ರತಿಷ್ಠಾನ ಬೊಟ್ಟಿಕೆರೆ ಮಂಜನಾಡಿ ಸಂಸ್ಥೆಯು ಯಕ್ಷಗಾನ ಸವ್ಯಸಾಚಿ ಬೊಟ್ಟಿಕೆರೆ ಪುರುಷೋತ್ತಮ ಪೂಂಜರ ಮನೆ ಅಂಬುರುಹ ಯಕ್ಷಸದನದಲ್ಲಿ ಎರಡು ದಿನಗಳ ಕಾಲ ನಡೆಯಲಿರುವ ಯಕ್ಷಶಿಕ್ಷಣ ಶಿಬಿರದ ಉದ್ಘಾಟನಾ ಕಾರ್ಯಕ್ರಮವು ಶನಿವಾರ ನಡೆಯಿತು.

ಕಲಾಗಂಗೋತ್ರಿ ಯಕ್ಷಗಾನ ಅಧ್ಯಯನ ಕೇಂದ್ರದ ಹಿರಿಯ ಸದಸ್ಯ ಕೆ. ಸದಾಶಿವ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಬೊಟ್ಟಿಕೆರೆ ಪುರುಷೋತ್ತಮ ಪೂಂಜರ ಯಕ್ಷಗಾನೀಯ ಚಟುವಟಿಕೆಗಳನ್ನು ಅಂಬುರುಹ ಪ್ರತಿಷ್ಠಾನ ಮುಂದುವರಿಸುತ್ತಿರುವುದು ಶ್ಲಾಘನೀಯ ವಿಚಾರ. ಈ ಶಿಬಿರದಲ್ಲಿ ಚರ್ಚಿಸಲ್ಪಡುವ ವಿಚಾರಗಳು ಯಕ್ಷಗಾನ ರಂಗದಲ್ಲಿ ಅನುಸರಿಸುವಂತಾಗಲಿ. ಆ ನಿಟ್ಟಿನಲ್ಲಿ ಇಂತಹ ಯಕ್ಷಶಿಕ್ಷಣ ಶಿಬಿರಗಳು ಅಧ್ಯಯನ ಯೋಗ್ಯ ಕಾರ್ಯಾಗಾರಗಳನ್ನು ನಡೆಸುತ್ತಿರಲಿ ಎಂದು ತಿಳಿಸಿದರು. ಉದ್ಘಾಟನಾ ಕಾರ್ಯಕ್ರಮದ ಬಳಿಕ ಯಕ್ಷಗಾನ ಹಿಮ್ಮೇಳ ಪರಿಕರಗಳ ವಾದನಕ್ರಮ, ತಾಳಮದ್ದಳೆ ಮತ್ತು ಯಕ್ಷಗಾನ ಪ್ರದರ್ಶನವನ್ನು ಅನುಲಕ್ಷಿಸಿ ಎಂಬ ವಿಷಯದ ಬಗ್ಗೆ ಯಕ್ಷಗಾನ ಹಿಮ್ಮೇಳ ಗುರು ಕೊಂಕಣಾಜೆ ಚಂದ್ರಶೇಖರ ಭಟ್ ಮಾತನಾಡಿದರು. ಆ ಬಳಿಕ ಯಕ್ಷಗಾನ ಪೂರ್ವರಂಗ : ಪ್ರಯೋಗ ಮತ್ತು ಸಾಧ್ಯತೆ ಎಂಬ ವಿಷಯದ ಪ್ರಾತ್ಯಕ್ಷಿಕೆಯನ್ನು ಅಂಬುರುಹ ಪ್ರತಿಷ್ಠಾನದ ಸದಸ್ಯರು ನಡೆಸಿಕೊಟ್ಟರು. ಯಕ್ಷಗಾನ ಪ್ರಸಂಗಕರ್ತ ಪ್ರೊ. ಪವನ್ ಕಿರಣಕೆರೆ ಯಕ್ಷಗಾನ ಹಿಮ್ಮೇಳ ಮತ್ತು ಛಂದಸ್ಸು ಎಂಬ ವಿಷಯದ ಬಗ್ಗೆ ಮಾತನಾಡಿ ಛಂದಸ್ಸಿನ ಬಗ್ಗೆ ಪ್ರಾಥಮಿಕ ಪರಿಚಯವನ್ನು ಮಾಡಿದರು. ಆ ಬಳಿಕ ಯಕ್ಷಗಾನ ಹಿಮ್ಮೇಳ ಹಿರಿಯ ಭಾಗವತ ಪುತ್ತಿಗೆ ರಘುರಾಮ ಹೊಳ್ಳ ಯಕ್ಷಗಾನ ಭಾಗವತಿಕೆ ಮತ್ತು ಶಾಸ್ತ್ರೀಯ ಸಂಗೀತ ಎಂಬ ವಿಷಯದ ಬಗ್ಗೆ ಮಾಹಿತಿಯನ್ನು ನೀಡಿದರು.

ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಅಂಬುರುಹ ಪ್ರತಿಷ್ಠಾನದ ಅಧ್ಯಕ್ಷೆ ಶ್ರೀಮತಿ ಶೋಭಾ ಪುರುಷೋತ್ತಮ ಪೂಂಜ ಮತ್ತು ಉಪಾಧ್ಯಕ್ಷ ರಾಜಾರಾಮ ಹೊಳ್ಳ ಕೈರಂಗಳ ಉಪಸ್ಥಿತರಿದ್ದರು. ಪ್ರಧಾನ ಕಾರ್ಯದರ್ಶಿ ದೀವಿತ್ ಎಸ್ ಕೆ ಪೆರಾಡಿ ಕಾರ್ಯಕ್ರಮ ನಿರೂಪಿಸಿದರು.

ಕಾಂಗ್ರೆಸ್‌ನಿಂದ ಸುಳ್ಳು ಆರೋಪ: ಶೋಭಾ ಸುರೇಂದ್ರನ್

ಕಾಸರಗೋಡು: ಪಾಲಕ್ಕಾಡ್ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿಯಾದ ನನ್ನ ಗೆಲುವು ನಿಶ್ಚಿತ ಎಂಬುದನ್ನು ಮನಗಂಡ ಕಾಂಗ್ರೆಸ್ ತನ್ನ ಮೇಲೆ ಇಲ್ಲಸಲ್ಲದ ಆರೋಪ ಹೊರಿಸುತ್ತಿದೆ ಎಂದು ಶೋಭಾ ಸುರೇಂದ್ರನ್ ಹೇಳಿದ್ದಾರೆ.

ಇದರ ಜೊತೆಗೆ ಮತದಾರರನ್ನು ಕಾಂಗ್ರೆಸ್ ಅಪಮಾನಗೈಯ್ಯತೊಡಗಿದೆ. ಪಾಲಕ್ಕಾಡ್ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಕಾರ್ಯಕರ್ತರು ಮತದಾರರಿಗೆ ಹಣ ವಿತರಿಸಿದ್ದಾರೆಂಬ ಕಾಂಗ್ರೆಸ್‌ನ ಆರೋಪ ಒಂದು ಸುಳ್ಳಿನ ಕಂತೆಯಾಗಿದೆ. ಅದಕ್ಕೆ ಹೊಂದಿಕೊಂಡು ಕಾಂಗ್ರೆಸ್ ತೋರಿಸುತ್ತಿರುವ ವಿಡಿಯೋ ದೃಶ್ಯ ಕೂಡಾ ನಕಲಿಯಾಗಿದೆ. ಇದರ ಹಿಂದೆ ಪೂರ್ವಯೋಜಿತ ಚಿತ್ರಕಥೆಯನ್ನು ರಚಿಸಲಾಗಿದೆ.



ಪಾಲಕ್ಕಾಡ್ ವಿಧಾನಸಭಾ ಕ್ಷೇತ್ರದಲ್ಲಿ ಎನ್‌ಡಿಎಯ ಗೆಲುವು ನಿಶ್ಚಿತವೆಂದು ಮನಗಂಡ ಕಾಂಗ್ರೆಸ್ ಇಂತಹ ಸುಳ್ಳಿನ ಕಥೆಯೊಂದಿಗೆ ಮುಂದಕ್ಕೆ ಬಂದಿದೆ. ಇದಕ್ಕೆ ಕೆಲವು ಸುದ್ದಿ ಮಾಧ್ಯಮಗಳೂ ಕಾಂಗ್ರೆಸ್‌ಗೆ ಸಾಥ್ ನೀಡುತ್ತಿವೆಯೆಂದು ಶೋಭಾ ಸುರೇಂದ್ರನ್ ಆರೋಪಿಸಿದರು.

ಈ ಬಗ್ಗೆ ಶೋಭಾ ಸುರೇಂದ್ರನ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರಿಗೆ ಹಾಗೂ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದಾರೆ.

ಸಾಹಿತಿ, ಶಿಕ್ಷಕ ನರೇಂದ್ರ ಕುಮಾರ್ ಕೋಟಗೆ 'ಹುಟ್ಟೂರ ಸಾಹಿತ್ಯ ಸಾಧಕ ಶ್ರೀ' ಪುರಸ್ಕಾರ



ಕೋಟ: ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಸಾಹಿತಿ ನರೇಂದ್ರ ಕುಮಾರ್ ಕೋಟ ಅವರಿಗೆ ಹುಟ್ಟೂರ ಸಾಹಿತ್ಯ ಸಾಧಕ ಶ್ರೀ ಪುರಸ್ಕಾರ ನೀಡಿ ಗೌರವಿಸಲಾಯಿತು.

ಇತ್ತೀಚಿಗೆ ಕೋಟ ಶಾಲೆಯ ಪೂರ್ವ ಕಟ್ಟದ ಸಭಾಂಗಣದಲ್ಲಿ ಕೋಟದ ಮಿತ್ರ ಮಂಡಳಿ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಪುರಸ್ಕಾರ ನೀಡಿ ಗೌರವಿಸಲಾಗಿದೆ.

ಅಂಬಲಪಾಡಿ ಶ್ರೀ ಕ್ಷೇತ್ರದ ಧರ್ಮದರ್ಶಿಯಾದ ಡಾ. ವಿಜಯ ಬಲ್ಲಾಳ್ ಅವರು ಸಮ್ಮಾನ ಕಾರ್ಯಕ್ರಮವನ್ನು ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಗೀತಾನಂದ ಟ್ರಸ್ಟ್ ಪ್ರವರ್ತಕ ಆನಂದ್ ಸಿ. ಕುಂದರ್, ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ, ಕಾರ್ಕಳ ತಾಲೂಕು ಸಾಹಿತ್ಯ ಪರಿಷತ್ ಅಧ್ಯಕ್ಷ ಕೊಂಡಳ್ಳಿ ಪ್ರಭಾಕರ ಶೆಟ್ಟಿ, ನಿವೃತ್ತ ಶಿಕ್ಷಕ ನರಸಿಂಹ ಐತಾಳ, ಕೋಟ ವಿವೇಕ ವಿದ್ಯಾಸಂಸ್ಥೆಯ ಮುಖ್ಯ ಶಿಕ್ಷಕ ವೆಂಕಟೇಶ ಉಡುಪ, ಕಸಾಪ ತಾಲೂಕು ಅಧ್ಯಕ್ಷ ರಾಮಚಂದ್ರ ಐತಾಳ, ನಿವೃತ್ತ ಮುಖ್ಯ ಶಿಕ್ಷಕ ಶ್ರೀಪತಿ ಹೇರ್ಳೆ , ಮಹಾಲಕ್ಷ್ಮೀ ಸೋಮಯಾಜಿ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಹಿರೇ ಮಹಾಲಿಂಗೇಶ್ವರ ದೇಗುಲ ವ್ಯವಸ್ಥಾಪನಾ ಸಮಿತಿ ಸದಸ್ಯ ಶ್ರೀನಿವಾಸ ಅಡಿಗ ಸ್ವಾಗತಿಸಿದರು. ಸುಮನಾ ಹೇರ್ಳೆ ಕಾರ್ಯಕ್ರಮ ನಿರೂಪಿಸಿದರು. ನಿವೃತ್ತ ಬ್ಯಾಂಕ್ ಅಧಿಕಾರಿ ಮಂಜುನಾಥ ಉಪಾಧ್ಯ ವಂದಿಸಿದರು.

ಬಾಲ ಪುರಸ್ಕಾರ ಪ್ರದಾನ

ಕಾರ್ಯಕ್ರಮದಲ್ಲಿ ರಿಷಿಕಾ ದೇವಾಡಿಗ ಹಾಗೂ ಪ್ರಥ್ವಿ ಪೂಜಾರಿ ಅವರಿಗೆ ಅಣ್ಣಾಜಿ ಬಲ್ಲಾಳ್ ಬಾಲ ಪುರಸ್ಕಾರ ಪ್ರದಾನಿಸಲಾಯಿತು.

ಅಕ್ಷಯ ಪದವಿ ಕಾಲೇಜಿನಲ್ಲಿ ರಾಷ್ಟ್ರಮಟ್ಟದ ಅಂತರ್ ಕಾಲೇಜ್

ಸಾಂಸ್ಕೃತಿಕ ಸ್ಪರ್ಧೆ 'ಕೃತ್ವ ಫೆಸ್ಟ್-2ಕೆ26' ಸಂಪನ್ನ

ಪುತ್ತೂರು: ಅಕ್ಷಯ ಪದವಿ ಕಾಲೇಜಿನಲ್ಲಿ ರಾಷ್ಟ್ರ ಮಟ್ಟದ ಪದವಿ ಕಾಲೇಜ್‌ಗಳ ಸಾಂಸ್ಕೃತಿಕ ಸ್ಪರ್ಧೆ 'ಕೃತ್ವ ಫೆಸ್ಟ್-2ಕೆ26' ಸಂಪನ್ನಗೊಂಡಿತು.

ಅಕ್ಷಯ ಶಿಕ್ಷಣ ಸಂಸ್ಥೆಗಳ ಆಡಳಿತ ನಿರ್ದೇಶಕಿ ಕಲಾವತಿ ಜಯಂತ್ ಕಾರ್ಯಕ್ರಮವನ್ನು ಉದ್ಘಾಟಿಸಿ, ಪ್ರತಿಭೆಗಳ ಅನಾವರಣಕ್ಕಾಗಿ ಕಾಲೇಜು ವಿದ್ಯಾರ್ಥಿಗಳೇ ಆಯೋಜಿಸಿದ ಸ್ಪರ್ಧೆಯ ಸದುಪಯೋಗ ಪಡೆದುಕೊಂಡು ಯಶಸ್ಸನ್ನು ಕಾಣುವಂತಾಗಲಿ ಎಂದು ಶುಭ ಹಾರೈಸಿದರು.

ಅಧ್ಯಕ್ಷತೆ ವಹಿಸಿದ್ದ ಜಯಂತ್ ನಡುಬೈಲು ಮಾತನಾಡಿ, ವಿದ್ಯಾರ್ಥಿಗಳ ಪ್ರತಿಭೆಯ ಅನಾವರಣಕ್ಕೆ ದೊರಕಿದ ವೇದಿಕೆಯಲ್ಲಿ ಸ್ಪರ್ಧಿಸಿ, ಅದರಿಂದ ಕಲಿತ ಶಿಕ್ಷಣ ತಮ್ಮ ವ್ಯಕ್ತಿತ್ವ ವಿಕಸನಕ್ಕೆ ನಾಂದಿಯಾಗಲಿ ಎಂದು ಶುಭ ಹಾರೈಸಿದರು. ಅಕ್ಷಯ ಪದವಿ ಕಾಲೇಜಿನ ಪ್ರಾಂಶುಪಾಲ ಸಂಪತ್ ಪಕ್ಕಳ, ಅಕ್ಷಯ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಗಂಗಾರತ್ನ, ಆಡಳಿತಾಧಿಕಾರಿ ಅರ್ಪಿತ್ ಟಿ.ಎ. ಶುಭಾಶಂಸನೆಗೈದರು.

ಸಮಾರೋಪ ಸಮಾರಂಭ

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ರಂಗಭೂಮಿ ಕಲಾವಿದ, ನಿರೂಪಕ ವಿಜಯ್ ಶೋಭರಾಜ್ ಪಾವೂರ್ ಭಾಗವಹಿಸಿ, ಭಯ ಬಿಟ್ಟು ಬದುಕುವುದನ್ನು ಕಲಿಯಬೇಕು. ಶಿಕ್ಷಣದ ಜೊತೆ ಪ್ರತಿಭೆ ಎನ್ನುವುದು ಕೂಡ ಭವಿಷ್ಯವನ್ನು ನಿರ್ಧರಿಸುತ್ತದೆ. ಜೀವನದಲ್ಲಿ ಕುಗ್ಗದೆ ಮುನ್ನುಗ್ಗಿದರೆ ಗುರಿ ಮುಟ್ಟುವುದರಲ್ಲಿ ಸಂಶಯವಿಲ್ಲ ಎಂದು ಹೇಳಿದರು.



ಪುತ್ತೂರಿನ ನೃತ್ಯೋಪಾಸನ ಕಲಾ ಅಕಾಡೆಮಿಯ ನೃತ್ಯ ಗುರು ವಿಧುಷಿ ಶಾಲಿನಿ ಆತ್ಮಭೂಷಣ್ ಮತ್ತು ಶೈಕ್ಷಣಿಕ ಮಾರ್ಗದರ್ಶಕ ಅಭಿಲಾಶ್ ಕ್ಷತ್ರಿಯ ಮಾತನಾಡಿ, ಅವಕಾಶಗಳು ಯಾವಾಗಲೂ ಬರುವುದಿಲ್ಲ. ಅವಕಾಶ ಬಂದಾಗ ಕಾರ್ಯ ಸನ್ನದ್ಧರಾಗಬೇಕು. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಾವು ಅನ್ವೇಷಣೆಯನ್ನು ಮಾಡುತ್ತ ಸಾಗುವುದು ಅತ್ಯಗತ್ಯವಾಗಿದೆ ಎಂದು ಹೇಳಿದರು.

ವೇದಿಕೆಯಲ್ಲಿ ಐಕ್ಯೂಎಸಿ ನಿರ್ದೇಶಕಿ ರಶ್ಮಿ, ಕಾಲೇಜ್ ವಿದ್ಯಾರ್ಥಿ ಸಂಘದ ಜತೆ ಕಾರ್ಯದರ್ಶಿ ಕಲಂದರ್ ಶಮಾ ಉಪಸ್ಥಿತರಿದ್ದರು. ಕೃತ್ವ 2ಕೆ26 ಸಂಯೋಜಕ ಗಂಧರ್ವ ಪ್ರಸ್ತಾವಿಸಿದರು. ವಿದ್ಯಾರ್ಥಿಗಳಾದ ಸೃಜನ್ ಮತ್ತು ಕಲಂದರ್ ಶಮಾ ಅತಿಥಿಗಳನ್ನು ಪರಿಚಯಿಸಿದರು. ಉಪನ್ಯಾಸಕಿ ಶೃತ ವಿಜೇತರ ಪಟ್ಟಿಯನ್ನು ವಾಚಿಸಿದರು. ಪ್ರಕೃತಿ ತೃಳ ಪ್ರಾರ್ಥಿಸಿದರು. ಉಪನ್ಯಾಸಕಿ ಸುಪ್ರಭ ಕೆ. ಮತ್ತು ಕಾಲೇಜಿನ ವಿದ್ಯಾರ್ಥಿ ಸಂಘದ ನಾಯಕ ರಾಕೇಶ್ ಸ್ವಾಗತಿಸಿ, ಉಪನ್ಯಾಸಕ ಅವಿನಾಶ್ ಮತ್ತು ವಿದ್ಯಾರ್ಥಿನಿ ಜೆನಿಫರ್ ಡಿ'ಸೋಜ ವಂದಿಸಿದರು. ಆಯಿಷತುಲ್ ರಝೀನ ಬಾನು ಮತ್ತು ಶಹನಾ ಕಾರ್ಯಕ್ರಮ ನಿರ್ವಹಿಸಿದರು.

ಫಲಿತಾಂಶ ವಿವರ

ಮಂಗಳೂರಿನ ಮ್ಯಾಪ್ಸ್ ಕಾಲೇಜ್ ಕೃತ್ವ-2ಕೆ26 ಸಮಗ್ರ ಪ್ರಶಸ್ತಿ ಗಳಿಸಿತು. ಪುತ್ತೂರಿನ ವಿವೇಕಾನಂದ ಬಿ.ಎಡ್ ಕಾಲೇಜ್ ಪ್ರಥಮ ರನ್ನರ್ ಅಪ್, ಸಂತ ಫಿಲೋಮಿನ ಕಾಲೇಜ್ ದ್ವಿತೀಯ ರನ್ನರ್ ಅಪ್ ಪ್ರಶಸ್ತಿ ಗೆದ್ದುಕೊಂಡಿತು. ವೈಯಕ್ತಿಕ ಮತ್ತು ಗುಂಪು ಸೇರಿದಂತೆ 27 ಕಾಲೇಜುಗಳಿಂದ 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

'ನಾನು ಮತ್ತು ನನ್ನ ಗೀಚು' ಸಾಹಿತ್ಯ ಬಳಗದಿಂದ

ಯುಗಾದಿಯ ಸ್ಪರ್ಧಾ ಫಲಿತಾಂಶ ಪ್ರಕಟ

ಮಂಗಳೂರು: ಕಳೆದ ಸುಮಾರು ಏಳು ವರ್ಷಗಳಿಂದ ಸಾಹಿತ್ಯ ಸೇವೆಯಲ್ಲಿ ಗುರುತಿಸಿಕೊಂಡಿರುವ, ರಾಜ್ಯದ ವಿವಿಧ ಪ್ರದೇಶಗಳ, ಅಂತರ್ ರಾಜ್ಯ, ಹಾಗೂ ವಿದೇಶಿ ಕನ್ನಡ ಸಾಹಿತಿಗಳನ್ನೊಳಗೊಂಡ ಕಡಬ ತಾಲೂಕು ಕೊಂಬಾರಿನ 'ನಾನು ಮತ್ತು ನನ್ನ ಗೀಚು' ಸಾಹಿತ್ಯ ಬಳಗ 2026ರ ಯುಗಾದಿ ವಿಶೇಷವಾಗಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಕನ್ನಡ ಕಥಾ ಸ್ಪರ್ಧೆ ಹಾಗೂ ಹನಿಗವನ ಸ್ಪರ್ಧೆಯ ಫಲಿತಾಂಶ ಪ್ರಕಟವಾಗಿದೆ.

ಪ್ರಥಮ ಬಹುಮಾನಕ್ಕೆ ಈ ಬಾರಿ ಒಟ್ಟು 5 ಅತ್ಯುತ್ತಮ ಕಥೆಗಳು ಆಯ್ಕೆ ಆಗಿದ್ದು, ಐದು ಸಾವಿರ ರೂಪಾಯಿ ನಗದು ಹಾಗೂ ಪ್ರಶಸ್ತಿ ಪತ್ರ ಹಂಚಲಾಗುತ್ತದೆ. ಉಳಿದಂತೆ ಇತರ ಬಹುಮಾನಿತ ಬರಹಗಳಿಗೆ ಪುಸ್ತಕ ಬಹುಮಾನ ನೀಡಲಾಗುವುದು.

ಗೀಚು 2026 ಕಥಾ ಸ್ಪರ್ಧೆಯಲ್ಲಿ ವರಲಕ್ಷ್ಮಿ ಮಂಜುನಾಥ್ ಅವರ 'ಮೇಷ್ಟು', ನರೇಂದ್ರ ಎಸ್.ಗಂಗೊಳ್ಳಿಯವರ 'ಕಬಂಧ ಬಾಹು', ವಾಗೀಶ ಆರಾಧ್ಯಮಠ ಅವರ ' ದಿಶಾ', ಸಂಧ್ಯಾ ಭಟ್ ಅರಂತಾಡಿ ಬರೆದ 'ಅರುಣಿಮಾ' ಮತ್ತು ನಗುವಾ ನಯನ ಬರೆದಿರುವ 'ಸಾಕ್ಷಾತ್ಕಾರ' ಕಥೆಗಳು ಪ್ರಥಮ ಬಹುಮಾನಕ್ಕೆ ಅರ್ಹವಾಗಿವೆ.

ಹನಿಗವನ ವಿಭಾಗದಲ್ಲಿ ಕವಯತ್ರಿ ವಿದ್ಯಾಶ್ರೀ ಅಡೂರ್ ಅವರು ಆಯ್ಕೆ ಪ್ರಕ್ರಿಯೆ ನಡೆಸಿಕೊಟ್ಟಿದ್ದು, ವಾಗೀಶ ಆರಾಧ್ಯ ಮಠ ಇವರ ಕವನ ಅತ್ಯುತ್ತಮ ಸ್ಥಾನ ಪಡೆದರೆ, ಉತ್ತಮ ಸ್ಥಾನವನ್ನು ನಗುವ ನಯನ, ಮೆಚ್ಚುಗೆಯ ಸ್ಥಾನಗಳನ್ನು

ಸತ್ಯವತಿ ಭಟ್ ಕೊಳ್ಚಪ್ಪು ಮತ್ತು ನರೇಂದ್ರ ಎಸ್. ಗಂಗೊಳ್ಳಿ ಪಡೆದುಕೊಂಡಿದ್ದಾರೆ. ಬೆಂಗಳೂರಿನಲ್ಲಿ ವಕೀಲರಾಗಿರುವ ಕೆ.ಎನ್. ಪ್ರವೀಣ ಕುಮಾರ್ ಕಟ್ಟೆ ಗೀಚು ಬಳಗದ ಸಾರಥ್ಯ ವಹಿಸಿದ್ದಾರೆ.

- ಐದು ಸಾವಿರ ರೂಪಾಯಿ ನಗದು ಹಾಗೂ ಪ್ರಶಸ್ತಿ ಪತ್ರ ಹಂಚಲಾಗುತ್ತದೆ.
- ಇತರ ಬಹುಮಾನಿತ ಬರಹಗಳಿಗೆ ಪುಸ್ತಕ ಬಹುಮಾನ ನೀಡಲಾಗುವುದು.

ಕಿರು ಸುದ್ದಿ

ಶಿರೂರು ಗ್ರಾ.ಪಂ.ಗೆ ಮೊದಲ ಬಾರಿಗೆ ಗಾಂಧಿ ಗ್ರಾಮ ಪುರಸ್ಕಾರ

ಬೈಂದೂರು: ರಾಜ್ಯ ಸರ್ಕಾರ ನೀಡುವ 2024-25ನೇ ಸಾಲಿನ ಪ್ರತಿಷ್ಠಿತ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಬೈಂದೂರು ತಾಲೂಕಿನ ಶಿರೂರು ಗ್ರಾಮ ಪಂಚಾಯತ್ ಆಯ್ಕೆಯಾಗಿದೆ. ಉಡುಪಿ ಜಿಲ್ಲೆಯಲ್ಲಿ ಅತೀ ದೊಡ್ಡ ಗ್ರಾಮ ಪಂಚಾಯತ್, ಸುಸಜ್ಜಿತ ಆಡಳಿತ, ವಿವಿಧ ಅಭಿವೃದ್ಧಿ ಕಾರ್ಯಗಳ ಪರಿಣಾಮಕಾರಿ ಅನುಷ್ಠಾನ ಮತ್ತು ಗ್ರಾಮ ನೈರ್ಮಲ್ಯಕ್ಕೆ ನೀಡಿದ ಆದ್ಯತೆಯನ್ನು ಪರಿಗಣಿಸಿ ಈ ಗೌರವ ನೀಡಲಾಗಿದೆ. ಸೂಕ್ತ ರೀತಿಯಲ್ಲಿ ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿ, ನರೇಗಾ ಯೋಜನೆಯ ಯಶಸ್ವಿ ಅನುಷ್ಠಾನ ಹಾಗೂ ಗುಣಮಟ್ಟದ ಆರೋಗ್ಯ ಸೇವೆಗಳಂತಹ ಹಲವು ಮಾನದಂಡಗಳನ್ನು ಆಧರಿಸಿ ಈ ಆಯ್ಕೆ ನಡೆದಿದೆ. ಪಂಚಾಯತ್‌ನ ಹಿಂದಿನ ಆಡಳಿತ ಮಂಡಳಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿಗಳು, ಲೆಕ್ಕ ಸಹಾಯಕರು, ಸಿಬ್ಬಂದಿ ವರ್ಗ, ಮೇಲಾಧಿಕಾರಿಗಳು ಹಾಗೂ ಸಂಪೂರ್ಣ ಸಹಕಾರ ನೀಡಿದ ಗ್ರಾಮಸ್ಥರಿಂದ ಈ ಸಾಧನೆ ಸಾಧ್ಯವಾಗಿದೆ. ಈ ಪ್ರಶಸ್ತಿಯು ಗ್ರಾಮದ ಅಭಿವೃದ್ಧಿಯ ವಿಷಯದಲ್ಲಿ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ. ಮುಂದಿನ ದಿನಗಳಲ್ಲಿ ಸಾರ್ವಜನಿಕರಿಗೆ ಮತ್ತಷ್ಟು ಉತ್ತಮ ಸೇವೆಗಳನ್ನು ನೀಡಲು ಮತ್ತು ಮಾದರಿ ಗ್ರಾಮವಾಗಿ ಮುನ್ನಡೆಯಲು ಈ ಪುರಸ್ಕಾರವು ದೊಡ್ಡ ಪ್ರೇರಣೆಯಾಗಿದೆ. ಇದು ಶಿರೂರು ಗ್ರಾಮ ಪಂಚಾಯತ್ ಸ್ಥಾಪನೆಗೊಂಡ ಬಳಿಕ ದೊರೆತ ಅತ್ಯಂತ ಶ್ರೇಷ್ಠ ಗೌರವ ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿ ರಾಜೇಂದ್ರ ಶೆಟ್ಟಿ ಹರ್ಷವ್ಯಕ್ತಪಡಿಸಿದ್ದಾರೆ.


ಈಜಲು ಹೋದ ಇಬ್ಬರು ಕೆರೆಯ ನೀರಿಗೆ ಬಲಿ

ಮಡಿಕೇರಿ: ಈಜಲೆಂದು ಕೆರೆಗೆ ಇಳಿದ ಬಾಲಕ ಹಾಗೂ ಯುವಕ ನೀರು ಪಾಲಾದ ಘಟನೆ ದಕ್ಷಿಣ ಕೊಡಗಿನ ಬಾಳೆಲೆ ಗ್ರಾಮದಲ್ಲಿ ನಡೆದಿದೆ. ಬಾಳೆಲೆ ನಿವಾಸಿ ಪ್ರಕಾಶ ಹಾಗೂ ಚಂದ್ರಿಕಾ ದಂಪತಿಯ ಪುತ್ರ, ಪ್ರಾಥಮಿಕ ಶಾಲೆಯ 6ನೇ ತರಗತಿ ವಿದ್ಯಾರ್ಥಿ ಗೌತಮ್ (12) ಮತ್ತು ಮಂಜುಳಾ ಹಾಗೂ ದಿ.ರಾಜು ಎಂಬವರ ಪುತ್ರ ಕೃಷ್ಣ (22) ಮೃತಪಟ್ಟವರಾಗಿದ್ದಾರೆ. ಶನಿವಾರ ಸಂಜೆ ಇಬ್ಬರೂ ಬಾಳೆಲೆ ಗ್ರಾಮದ ಕೊಟ್ಟಗೇರಿ ಮಾರಿಗುಡಿ ಎಂಬಲ್ಲಿರುವ ಕೆರೆಗೆ ಈಜಲು ತೆರಳಿದವರು ಕೆರೆಯಲ್ಲಿದ್ದ ಕೆಸರಿನಲ್ಲಿ ಸಿಲುಕಿ ಮೃತಪಟ್ಟಿದ್ದಾರೆ. ಭಾನುವಾರ ಬೆಳಗ್ಗೆ ಗೋಣಿಕೊಪ್ಪ ಅಗ್ನಿ ಶಾಮಕ ದಳದ ಪ್ರಭಾರ ಠಾಣಾಧಿಕಾರಿ ಸುನಿಲ್ ಕುಮಾರ್, ಪ್ರಮುಖ ಅಗ್ನಿ ಶಾಮಕ ಜಗದೀಶ್ ಸಿಬ್ಬಂದಿಗಳು ಇಬ್ಬರ ಮೃತದೇಹಗಳನ್ನು ಹೊರ ತೆಗೆದಿದ್ದಾರೆ.

ನಿಧನ ಸುದ್ದಿ

ಶಿವರಾಮ ಶೆಟ್ಟಿ


ಬೈಂದೂರು: ನಿವೃತ್ತ ಅಧ್ಯಾಪಕ, ಹಿರಿಯ ಪ್ರಗತಿಪರ ಕೃಷಿಕ ಶಿರಿಯಾರ ಮೇಲ್ಮನೆ ಶಿವರಾಮ ಶೆಟ್ಟಿ (97) ಅಲ್ಪಕಾಲದ ಅನಾರೋಗ್ಯದಿಂದ ಭಾನುವಾರ ಮಧ್ಯಾಹ್ನ ಉಳ್ಳೂರು-11 ಮೇಕೋಡು ಹೊಸಗದ್ದೆ ಸ್ವಗೃಹದಲ್ಲಿ ನಿಧನ ಹೊಂದಿದರು. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಸೋದರಳಿಯ,



ಖಂಬದಕೋಣೆ ರೈತರ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಎಸ್. ಪ್ರಕಾಶ್ಚಂದ್ರ ಶೆಟ್ಟಿ ಅವರನ್ನು ಅಗಲಿದ್ದಾರೆ. ಕರ್ಕುಂಜೆ, ಸ್ಟಾಬರಕಟ್ಟೆ, ಕಾರ್ಕಳ, ಹಕ್ಲಾಡಿ, ರಾಗಿಹಕ್ಲು ಶಾಲೆಗಳಲ್ಲಿ ಒಟ್ಟು 40 ವರ್ಷ ಸೇವೆ ಸಲ್ಲಿಸಿದ್ದಾರೆ. ಅಕ್ರಮ-ಸಕ್ರಮ ಸಮಿತಿ ಸದಸ್ಯರಾಗಿ, ಮೇಕೋಡು ಹಾಲು ಉತ್ಪಾದಕರ ಸಂಘದ ನಿರ್ದೇಶಕರಾಗಿ, ಮೇಕೋಡು ಶ್ರೀ ದುರ್ಗಾಪರಮೇಶ್ವರಿ ದೇವಳದ ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸಿದ ಇವರು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಧರ್ಣಪ್ಪ ಶೆಟ್ಟಿ

ಬಂಟ್ವಾಳ: ತಾಲೂಕಿನ ಸಂಗಬೆಟ್ಟು ಸಮೀಪದ ಪೂವಳ ನಿವಾಸಿ, ಪ್ರಗತಿಪರ ಕೃಷಿಕ, ಹಿರಿಯ ಧಾರ್ಮಿಕ ಮುಖಂಡ ಧರ್ಣಪ್ಪ ಶೆಟ್ಟಿ ಪೂವಳ (88) ಅವರು ಅಸೌಖ್ಯದಿಂದ ಭಾನುವಾರ ಸ್ವಗೃಹದಲ್ಲಿ ನಿಧನರಾದರು.



ಮೃತರಿಗೆ ಪತ್ನಿ, ವಕೀಲ ಸುರೇಶ್ ಶೆಟ್ಟಿ ಸಹಿತ ಇಬ್ಬರು ಪುತ್ರರು ಮತ್ತು ಮೂವರು ಪುತ್ರಿಯರು ಇದ್ದಾರೆ. ಪ್ರಗತಿಪರ ಕೃಷಿಕರಾಗಿ, ಯಕ್ಷಗಾನ ಪ್ರೋತ್ಸಾಹಕರಾಗಿ, ಕಳೆದ 10 ವರ್ಷಗಳ ಹಿಂದೆ ಪೂವಳ ಪರಿಸರದಲ್ಲಿ, ಶ್ರೀ ರಾಮಾಂಜನೇಯ ಕ್ಷೇತ್ರ ಸ್ಥಾಪಿಸಿ, ಸ್ವತಃ ಪೂಜೆ ನೆರವೇರಿಸುತ್ತಿದ್ದರು.

ಪುಷ್ಪಾ ಎನ್. ಶೆಟ್ಟಿ

ಕಿನ್ನಿಗೋಳಿ: ಕೆಂಚನಕೆರೆ ನಿವಾಸಿ ಪುಷ್ಪಾ ಎನ್. ಶೆಟ್ಟಿ (79) ಅವರು ಅಲ್ಪ ಕಾಲದ ಅಸೌಖ್ಯದಿಂದ ಸ್ವಗೃಹದಲ್ಲಿ ಮಾ. 12 ರಂದು ನಿಧನ ಹೊಂದಿದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಅಂಗರಗುಡ್ಡೆ ಶ್ರೀ ರಾಮ ಭಜನಾ ಮಂದಿರದ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.





ಕೊಟ್ಟಾರದ ಭರತಾಂಜಲಿಯ ಕಿಂಕಿಣಿ ತ್ರಿಂಶತ್ 30 ವರ್ಷ ಸಂಭ್ರಮದ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ನಗರದ ಪುರಭವನದಲ್ಲಿ ನಾಟ್ಯಾಚಾರ್ಯ ಗುರು ಉಳ್ಳಾಲ್ ಮೋಹನ ಕುಮಾರ್ ನಟರಾಜನಿಗೆ ದೀಪ ಬೆಳಗಿಸುವುದರ ಮೂಲಕ ಚಾಲನೆ ನೀಡಿದರು. ಭರತಾಂಜಲಿಯ ನೃತ್ಯ ಗುರು ಶ್ರೀಧರ ಹೊಳ್ಳ, ವಿದುಷಿ ಪ್ರತಿಮಾ ಶ್ರೀಧರ್, ಶಿಕ್ಷಕಿ ವಿದುಷಿ ಪ್ರಕ್ಷಿಲಾ ಜೈನ್, ಜಿಲ್ಲೆಯ ಹಿರಿಯ ನೃತ್ಯ ಗುರುಗಳಾದ ವಿದುಷಿ ರಾಜಶ್ರೀ ಉಳ್ಳಾಲ್, ವಿದುಷಿ ಸುಲೋಚನಾ ಭಟ್, ವಿದುಷಿ ಗೀತಾ ಸರಳಾಯ, ವಿದುಷಿ ವಿನಯ ರಾವ್, ಆಕಾಶ್ ಎಸ್. ಹೊಳ್ಳ. ಅಂಕಿತಾ ರಾವ್ ಮೊದಲಾದವರು ಉಪಸ್ಥಿತರಿದ್ದರು.

ಕುಂಜತ್ತೂರಿನ ವಿದ್ಯಾರ್ಥಿನಿಗೆ ಕರ್ನಾಟಕ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ.96 ಅಂಕ

ಮಂಜೇಶ್ವರ: ಗಡಿನಾಡಿನ ಪ್ರತಿಭೆಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಸದಾ ಮುಂಚೂಣಿಯಲ್ಲಿರುತ್ತಾರೆ ಎಂಬುದನ್ನು ಮಂಜೇಶ್ವರ ಸಮೀಪದ ಕುಂಜತ್ತೂರಿನ ವಿದ್ಯಾರ್ಥಿನಿ ಮರಿಯಮ್ ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ. ಅದರಂತೆ 2025-26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಮರಿಯಮ್ ಅವರು 576 (ಶೇಕಡಾ 96) ಅಂಕಗಳನ್ನು ಗಳಿಸುವ ಮೂಲಕ ಅತ್ಯುತ್ತಮ ಸಾಧನೆ ಮಾಡಿದ್ದಾರೆ.



ಮರಿಯಮ್ ಅವರು ಮಂಗಳೂರಿನ ಬಬ್ಬುಕಟ್ಟೆಯ ಹಿರಾ ವಿಮೆನ್ಸ್ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಹೆಮ್ಮೆಯ ವಿದ್ಯಾರ್ಥಿನಿ. ವಿಜ್ಞಾನ ವಿಭಾಗದಲ್ಲಿ ಕಠಿಣ ಪರಿಶ್ರಮ ಮತ್ತು ನಿರಂತರ ಅಧ್ಯಯನದ ಮೂಲಕ ಈ ಗಮನಾರ್ಹ ಅಂಕಗಳನ್ನು ಪಡೆದು ತನ್ನ ಕಾಲೇಜಿಗೆ ಮತ್ತು ಗಡಿನಾಡು ಮಂಜೇಶ್ವರಕ್ಕೆ ಕೀರ್ತಿ ತಂದಿದ್ದಾರೆ.

ಅವರು ಕುಂಜತ್ತೂರು ನಿವಾಸಿ ಹಾಜಿ ಅಬ್ದುಲ್ ರಹ್ಮಾನ್ ಅರಿಮಲ ಹಾಗೂ ಆಯಿಷಾ ದಂಪತಿಯ ಪುತ್ರಿಯಾಗಿದ್ದು, ಈ ಅದ್ಭುತ ಸಾಧನೆಯಿಂದಾಗಿ ಸಂತಸ ವ್ಯಕ್ತಪಡಿಸಿದ್ದಾರೆ. ಮರಿಯಮ್ ಅವರ ಸಾಧನೆಯು ಕುಟುಂಬಕ್ಕೆ ಮಾತ್ರವಲ್ಲದೆ ಇಡೀ ಊರಿಗೇ ಹೆಮ್ಮೆಯ ವಿಷಯವಾಗಿದೆ.

ರಾಜ್ಯ ಮಟ್ಟದಲ್ಲಿ ಗಮನ ಸೆಳೆದಿರುವ ಮರಿಯಮ್ ಅವರ ಸಾಧನೆಯನ್ನು ಗುರುತಿಸಿ ಸಾರ್ವಜನಿಕರು, ಶಿಕ್ಷಣಾಭಿಮಾನಿಗಳು ಹಾಗೂ ಸ್ಥಳೀಯ ಗಣ್ಯರು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿಯೂ ಈಕೆಯ ಪ್ರತಿಭೆಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಮರಿಯಮ್ ಅವರ ಶ್ರಮ ಮತ್ತು ಶಿಸ್ತುಬದ್ಧ ಅಧ್ಯಯನ ಈ ಫಲಿತಾಂಶಕ್ಕೆ ಕಾರಣವಾಗಿದೆ. ಗಡಿನಾಡಿನ ಮಕ್ಕಳು ಶೈಕ್ಷಣಿಕವಾಗಿ ರಾಜ್ಯಕ್ಕೇ ಮಾದರಿಯಾಗುತ್ತಿರುವುದು ಸಂತಸದ ವಿಷಯ ಎಂದು ಸ್ಥಳೀಯರು ಹರ್ಷ ವ್ಯಕ್ತಪಡಿಸಿದ್ದಾರೆ.

ಕದ್ರಿ ಕ್ಷೇತ್ರದಿಂದ ಕುತ್ತಾರು ಕೊರಗಜ್ಜನ ಕಟ್ಟೆಗೆ ವಿಹಿಂಪದ ಆರನೇ ವರ್ಷದ ಬೃಹತ್ ಪಾದಯಾತ್ರೆ

ನಮ್ಮಲ್ಲಿರುವುದನ್ನು ಮಾತ್ರ ಅರ್ಪಿಸಬೇಕು

ಮಂಗಳೂರು/ಉಳ್ಳಾಲ: ವಿಶ್ವ ಹಿಂದು ಪರಿಷತ್ ಮಂಗಳೂರು ಜಿಲ್ಲೆ ಉಳ್ಳಾಲ ಪ್ರಖಂಡದ ವತಿಯಿಂದ ಹಿಂದು ಸಮಾಜದ ಏಕತೆ ಹಾಗೂ ಲೋಕಕಲ್ಯಾಣಾರ್ಥವಾಗಿ 6ನೇ ವರ್ಷದ 'ಕೊರಗಜ್ಜನ ಆದಿ ಕ್ಷೇತ್ರಕ್ಕೆ ನಮ್ಮ ನಡೆ' ಕಾರ್ಯಕ್ರಮ ಭಾನುವಾರ ನಡೆಯಿತು. ಬೆಳಗ್ಗೆ ಕದ್ರಿ ಶ್ರೀ ಮಂಜುನಾಥ ಕ್ಷೇತ್ರದಿಂದ ಕುತ್ತಾರ್ ಕೊರಗಜ್ಜನ ಆದಿಕ್ಷೇತ್ರಕ್ಕೆ ಪಾದಯಾತ್ರೆ ಆರಂಭಗೊಂಡಿತು. ಸಹಸ್ರಾರು ಸಂಖ್ಯೆಯಲ್ಲಿ ಕೊರಗಜ್ಜನ ಭಕ್ತರು ಭಾಗವಹಿಸಿದ್ದರು. ಪಾದಯಾತ್ರೆ ಸಾಗುವ ದಾರಿಯುದ್ದಕ್ಕೂ ಪಾನೀಯದ ವ್ಯವಸ್ಥೆ ಮಾಡಲಾಗಿತ್ತು.

ಕದ್ರಿಯಲ್ಲಿ ಪಾದಯಾತ್ರೆಗೆ ಚಾಲನೆ ನೀಡುವ ವೇಳೆ ವಿಶ್ವಹಿಂದು ಪರಿಷತ್ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್‌ವೆಲ್, ವಿಹಿಂಪ ಜಿಲ್ಲಾಧ್ಯಕ್ಷ ಎಚ್.ಕೆ. ಪುರುಷೋತ್ತಮ, ಪ್ರಮುಖರಾದ ಶಿವಾನಂದ ಮೆಂಡನ್, ಗೋಪಾಲ ಕುತ್ತಾರ್, ಭುಜಂಗ ಕುಲಾಲ್, ಕೃಷ್ಣ ಅಡಿಗ ಕದ್ರಿ, ರಾಜಗೋಪಾಲ ರೈ, ರವಿ ಅಸೈಗೋಳಿ, ಪ್ರವೀಣ್ ಕುತ್ತಾರ್, ನಾರಾಯಣ್ ಬಿ.ಎನ್. ಮತ್ತಿತರರು ಉಪಸ್ಥಿತರಿದ್ದರು.



ಮನೆಯ ಹೊಸ್ತಿಲ ಒಳಗಷ್ಟೆ ನಾವು ನಮ್ಮ ಜಾತಿಗೆ ಸೀಮಿತರಾಗಿ, ಹೊಸ್ತಿಲು ದಾಟಿ ಹೊರಬಂದಾಗ ಭಾರತೀಯರಾಗಿ ಎಲ್ಲರೊಂದಿಗೂ ಬೆರೆಯಬೇಕು. ಗುತ್ತು ಬರಿಕೆಗಳ ಯಜಮಾನರಲ್ಲಿ ಎಲ್ಲವನ್ನೂ ಮುಂದುವರಿಸಿ ಕೊಂಡೊಯ್ಯುವ ನಾಯಕತ್ವದ ಗುಣಗಳಿರುವ ಕಾರಣ ಕರಾವಳಿಯಲ್ಲಿ ಇಂದಿಗೂ ದೈವಾರಾಧನೆಗಳು ಉಳಿಯಲು ಸಾಧ್ಯವಾಗಿದೆ. ಕಾಯ ಬಿಟ್ಟು ಮಾಯವಾಗಿ ದೈವತ್ವವನ್ನು ಪಡೆದ ಕೊರಗಜ್ಜನಿಗೆ ಯಾವುದೇ ಜಾತಿಯ ಪರಿಧಿಯಿಲ್ಲವೆಂದು ಕದ್ರಿ ಶ್ರೀ ಮಂಜುನಾಥೇಶ್ವರ ಕ್ಷೇತ್ರದ ಪ್ರಧಾನ ಅರ್ಚಕರಾದ ಕೃಷ್ಣ ಅಡಿಗ ಅಭಿಪ್ರಾಯಪಟ್ಟರು.

ವಿಶ್ವ ಹಿಂದೂ ಪರಿಷತ್ ಉಳ್ಳಾಲ ಪ್ರಖಂಡ ವತಿಯಿಂದ ಹಿಂದೂ ಸಮಾಜದ ಐಕ್ಯತೆ ಮತ್ತು ಲೋಕ ಕಲ್ಯಾಣಾರ್ಥವಾಗಿ ಮಂಗಳೂರಿನ ಕದ್ರಿ ಮಂಜುನಾಥೇಶ್ವರಕ್ಷೇತ್ರದಿಂದಕುತ್ತಾರುದೆಕ್ಕಾಡುವಿನ ಕೊರಗಜ್ಜನ ಆದಿಕ್ಷೇತ್ರಕ್ಕೆ ಭಾನುವಾರದಂದು ನಡೆದ 6ನೇ ವರ್ಷದ 'ಕೊರಗಜ್ಜನ ಆದಿಕ್ಷೇತ್ರಕ್ಕೆ ನಮ್ಮ ನಡೆ' ಬೃಹತ್ ಪಾದಯಾತ್ರೆಯ ಪ್ರಯುಕ್ತ ಕೊರಗಜ್ಜನ ಕ್ಷೇತ್ರದ ಬಳಿ ನಡೆದ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಅವರು ಧಾರ್ಮಿಕ ಉಪನ್ಯಾಸಗೈದರು.

ದೈವ, ದೇವರುಗಳಿಗೆ ನಮ್ಮಲ್ಲಿ ಇದ್ದುದನ್ನಷ್ಟೇ ಭಕ್ತಿಯಿಂದ ಸಮರ್ಪಿಸಿದರೆ ಸಾಕು. ಸಾಲ ಮಾಡಿ ವಿಜೃಂಭಣೆ, ಆಡಂಭರಗಳ ಉತ್ಸವ, ಆಚರಣೆಗಳು ಅನಗತ್ಯ. ಕೊಡು ಕೊಳ್ಳುವಿಕೆಯನ್ನು ಜೀವನದಲ್ಲಿ ಅನುಸರಿಸಿದರೆ ನಮ್ಮ ಬದುಕು ಸಾಕಾರಗೊಳ್ಳಲು ಸಾಧ್ಯ. ವಿವಿಧ ಸ್ತರದ ಕುಲ ಕಸುಬನ್ನು ಮಾಡಿ ಸಮಾಜಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿರುವ ಪ್ರತೀ ಜಾತಿ ವರ್ಗದವರೂ ಶ್ರೇಷ್ಠರೇ ಆಗಿದ್ದಾರೆ. ಅತ್ಯಂತ ಕಷ್ಟಪಟ್ಟು ಕೆಲಸ ನಿರ್ವಹಿಸುವ ಪೌರಕಾರ್ಮಿಕರು ಮತ್ತು ನರ್ಸ್‌ಗಳನ್ನ ಗುರುತಿಸಿ ದೇಶದ ಅತ್ಯುನ್ನತ ಪ್ರಶಸ್ತಿಗಳನ್ನ ಕೊಡುವಂತಾಗಬೇಕೆಂಬುದು ನನ್ನ ವೈಯಕ್ತಿಕ ಅಭಿಪ್ರಾಯವೆಂದರು.

ವಿಶ್ವ ಹಿಂದೂ ಪರಿಷತ್ ದಕ್ಷಿಣ ಪ್ರಾಂತ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ಮಾತನಾಡಿ, ನಮ್ಮ ರಾಜ್ಯದಲ್ಲೇ ಕೆಲವು ಜಾತಿ ವರ್ಗದವರಿಗೆ ಈಗಲೂ ದೇವಸ್ಥಾನಗಳಿಗೆ ಪ್ರವೇಶ ನಿರಾಕರಿಸಲಾಗುತ್ತಿದೆ. ಈ ಧೋರಣೆಯ ವಿರುದ್ಧ ವಿಶ್ವ ಹಿಂದೂ ಪರಿಷತ್ ನಿರಂತರ ಹೋರಾಟ ನಡೆಸಿ ಸಮಾನತೆಯನ್ನು ಸಾರುವ ಕೆಲಸ ನಡೆಸುತ್ತಿದೆ. ಹಿಂದೂ ಯುವಕ, ಯುವತಿಯರು ಪರಸ್ಪರ ಪ್ರೀತಿಸಿದರೆ ಜಾತಿ ಹೆಸರಲ್ಲಿ ಮರ್ಯಾದ ಹತ್ಯೆಗಳನ್ನು ನಡೆಸುತ್ತಿದ್ದಾರೆ. ನಮ್ಮ ಹಿಂದೂ ಯುವತಿಯರನ್ನು ಅನ್ಯಮತೀಯರು ಪ್ರೀತಿಸುವ ನಾಟಕ ಮಾಡಿ ಲವ್ ಜಿಹಾದ್ ನಡೆಸಿದರೂ ನಾವು ಏನೂ ಮಾಡಲಾಗದ ಸ್ಥಿತಿಯಲ್ಲಿದ್ದೇವೆ. ಹಿಂದೂ ಸಮಾಜದ ಐಕ್ಯತೆಗಾಗಿ ಕೊರಗಜ್ಜನ ಕ್ಷೇತ್ರಕ್ಕೆ ಆರಂಭಿಸಲಾದ ಈ ಪಾದಯಾತ್ರೆಗೆ ಇವತ್ತು ನಾವು ಯಾರನ್ನೂ ಕರೆಯಬೇಕೆಂಬ ಅವಶ್ಯಕತೆಯಿಲ್ಲ, ಬದಲಾಗಿ ಕೊರಗಜ್ಜನ ಭಕ್ತರೇ ಸಾವಿರಾರು ಸಂಖ್ಯೆಯಲ್ಲಿ ಸ್ವಯಂಪ್ರೇರಿತರಾಗಿ ಪಾದಯಾತ್ರೆಯಲ್ಲಿ ಪಾಲ್ಗೊಳ್ಳುತ್ತಿರುವುದು ಸಂತಸದ ವಿಚಾರವಾಗಿದೆಯೆಂದರು.

ವಿಶ್ವ ಹಿಂದೂ ಪರಿಷತ್ ಉಳ್ಳಾಲ ನಗರ ಪ್ರಖಂಡದ ಅಧ್ಯಕ್ಷರಾದ ನಾರಾಯಣ ಕುಂಪಲ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕರಾದ ಕೆ.ಜಯರಾಮ ಶೆಟ್ಟಿ, ಪ್ರಮುಖರಾದ ಬೊಲ್ಯಗುತ್ತು ವಿನೋದ್ ಶೆಟ್ಟಿ, ರತ್ನಾಕರ ಕಾವ ಕುತ್ತಾರುಗುತ್ತು, ದೇವಿಪ್ರಸಾದ್ ಶೆಟ್ಟಿ ಮಾಗಣತ್ತಡಿ, ವಿಹಿಂಪ ಸಹ ಸೇವಾ ಪ್ರಮುಖರಾದ ಗೋಪಾಲ ಕುತ್ತಾರು, ವಿಹಿಂಪ-ಬಜರಂಗದಳ ದಕ್ಷಿಣ ಪ್ರಾಂತ ಸಹಸಂಯೋಜಕರಾದ ಬುಜಂಗ ಕುಲಾಲ್, ವಿಹಿಂಪ ಸಹ ಕಾರ್ಯದರ್ಶಿ ಶಿವಾನಂದ ಮೆಂಡನ್ ಮೊದಲಾದವರು ಉಪಸ್ಥಿತರಿದ್ದರು.

ನಮ್ಮ ನಡೆ ಆಯೋಜನಾ ಸಮಿತಿಯ ಅಧ್ಯಕ್ಷ ಪ್ರವೀಣ್ ಕುತ್ತಾರ್ ಸ್ವಾಗತಿಸಿ ಪ್ರಸ್ತಾವಿಕ ಮಾತುಗಳನ್ನಾಡಿದರು. ಆಶಿಕ್ ಗೋಪಾಲಕೃಷ್ಣ ಕಾರ್ಯಕ್ರಮ ನಿರೂಪಿಸಿ, ಪ್ರವೀಣ್ ಬಸ್ತಿ ವಂದಿಸಿದರು.

> **ವಿಶ್ವ ಹಿಂದೂ ಪರಿಷತ್, ಬಜರಂಗದಳವು ಕೇವಲ ಪಾದಯಾತ್ರೆಗೆ ಸೀಮಿತವಾಗಿರದೆ ಸಮಾಜದ ಮಹತ್ತರ ಜವಬ್ದಾರಿಗಳನ್ನು ವಹಿಸಿಕೊಂಡಿದೆ. ಸಂಘಟನೆಯ ಜವಬ್ದಾರಿಯಡಿ ಕುತ್ತಾರು ಬಾಲಸಂರಕ್ಷಣಾ ಕೇಂದ್ರದಲ್ಲಿ ನೂರಾರು ಮಕ್ಕಳು, ಊಟ, ವಸತಿಯೊಂದಿಗೆ ವಿದ್ಯಾರ್ಜನೆಗೈಯುತ್ತಿದ್ದಾರೆ. ಪಜೀರು, ಬೀಜಗುರಿಯ ಗೋಶಾಲೆಯಲ್ಲಿ ಕಟುಕರಿಂದ ರಕ್ಷಿಸಲ್ಪಟ್ಟ ನೂರಾರು ಗೋವುಗಳನ್ನು ಸಾಕಿ ಸಲಹಲಾಗುತ್ತಿದೆ. ಪಾದಯಾತ್ರೆಗೆ ಆಪಸ್ವರ ಎತ್ತುವವರು ಇದನ್ನೆಲ್ಲವನ್ನೂ ಗಮನಿಸಬೇಕಿದೆ.**
>
> ■ **ಪ್ರವೀಣ್ ಕುತ್ತಾರು,** ಪಾದಯಾತ್ರೆ, ಆಯೋಜನ ಸಮಿತಿ ಅಧ್ಯಕ್ಷರು.

ಮೂಡುಬಿದಿರೆಯಲ್ಲಿ ಜಿ.ಎಲ್. ಆಚಾರ್ಯ ಜುವೆಲ್ಲರ್ಸ್ ನೂತನ ಮಳಿಗೆ ಲೋಕಾರ್ಪಣೆ

ಮೂಡುಬಿದಿರೆ: ದಕ್ಷಿಣ ಕರ್ನಾಟಕದ ಪ್ರತಿಷ್ಠಿತ ಚಿನ್ನಾಭರಣ ಸಂಸ್ಥೆ ಜಿ.ಎಲ್. ಆಚಾರ್ಯ ಜುವೆಲ್ಲರ್ಸ್, ತನ್ನ ವಿಸ್ತರಣೆಯ ಭಾಗವಾಗಿ ಮೂಡುಬಿದಿರೆಯ ಬಸ್ ಸ್ಟ್ಯಾಂಡ್ ಸಮೀಪದ ನವಮಿ ಪ್ಲಾಜಾದಲ್ಲಿ ನೂತನ ಮಳಿಗೆಯನ್ನು ಭಾನುವಾರ ಪ್ರಾರಂಭಿಸಿದೆ.



ಆಳ್ವಾಸ್ ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ನೂತನ ಮಳಿಗೆ ಉದ್ಘಾಟಿಸಿ, ಸಂಸ್ಥೆಯ ಸ್ಥಾಪಕರಾದ ಜಿ.ಎಲ್ ಆಚಾರ್ಯರು ಕೇವಲ ಈ ವೃತ್ತಿಯನ್ನಷ್ಟೇ ಅಲ್ಲ, ಅದರ ಜೊತೆಯಲ್ಲಿ ಸಮಾಜದ ಪರಿಕಲ್ಪನೆಯಲ್ಲಿ ಹೊಂದಿದವರು. ಯಾವ ರೀತಿ ನಾವು ವೃತ್ತಿ ಮತ್ತು ನಮ್ಮ ಧರ್ಮ, ಬೇರೆ ಬೇರೆ ಚಟುವಟಿಕೆಗಳನ್ನು ಹೇಗೆ ಮಾಡಬೇಕು ಎಂದು ನಮಗೆಲ್ಲ ಕಿವಿಮಾತುಗಳನ್ನು ಹೇಳಿಕೊಟ್ಟವರು. ಅದೇ ದಿಕ್ಕಿನಲ್ಲಿ ಇವತ್ತು ಅವರ ಮಗ ಬಲರಾಮ ಆಚಾರ್ಯ ಮುನ್ನಡೆಯುತ್ತಿದ್ದಾರೆ. ಕಾಲಾಂತರದಲ್ಲಿ ಒಂದು ಸಂಸ್ಥೆ ಇವತ್ತು ಐದು ಸಂಸ್ಥೆಗಳಾಗಿದ್ದು, ಮೂಡುಬಿದಿರೆಯಲ್ಲಿ ಎರಡು ವರ್ಷದ ಹಿಂದೆ ಒಂದು ಪ್ರಾರಂಭ ಮಾಡಿ, ಈಗ ಅದನ್ನು ಸ್ಥಳಾಂತರಗೊಳಿಸಿ, ಇಂದಿನ ವ್ಯವಸ್ಥೆಗೆ ಅನುಗುಣವಾಗಿ ಅಪ್‌ಗ್ರೇಡ್ ಮಾಡಿರುವುದು ಉತ್ತಮ ಬೆಳವಣಿಗೆ ಎಂದು ಶುಭ ಹಾರೈಸಿದರು.

ಮಾಜಿ ಸಚಿವ ಅಭಯಚಂದ್ರ ಜೈನ್, ಶ್ರೀ ಧನಲಕ್ಷ್ಮಿ ಕ್ಯಾಶ್ಯೂ ಎಕ್ಸ್‌ಪೋರ್ಟ್‌ನ ಶ್ರೀಪತಿ ಭಟ್, ಚೌಟರ ಅರಮನೆಯ ಕುಲದೀಪ ಎಂ., ನವಮಿ ಗ್ರೂಪ್‌ನ ಆಡಳಿತ ನಿರ್ದೇಶಕ ನಂದಕುಮಾರ್ ಕುಡ್ವ, ನಿಶ್ಮಿತಾ ಗ್ರೂಪ್ಸ್ನ ಪ್ರವರ್ತಕ ನಾರಾಯಣ ಪಿ.ಎಂ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಸ್ಥೆಗೆ ಶುಭ ಹಾರೈಸಿದರು.

ಸಂಸ್ಥೆಯ ಚೇರ್ಮನ್ ಜಿ.ಎಲ್. ಬಲರಾಮ ಆಚಾರ್ಯ ಪ್ರಾಸ್ತಾವಿಕವಾಗಿ ಮಾತನಾಡಿ, ಜಿ.ಎಲ್. ಆಚಾರ್ಯ ಜ್ಯುವೆಲರ್ಸ್ ತನ್ನ ಹೊಸ ಶೋರೂಮ್‌ನ್ನು ಮೂಡುಬಿದಿರೆಯಲ್ಲಿ ಆರಂಭಿಸಿದೆ. ಹೊಸ ತಲೆಮಾರಿನ ಗ್ರಾಹಕರ ಅಭಿರುಚಿಗೆ ತಕ್ಕಂತೆ ವಿಶಾಲವಾದ ಮತ್ತು ಆಕರ್ಷಕವಾದ ಜ್ಯುವೆಲರಿ ಶೋರೂಮ್‌ನ್ನು ಇಲ್ಲಿ ನಿರ್ಮಿಸಲಾಗಿದೆ. ಅತ್ಯಾಧುನಿಕ ವಿನ್ಯಾಸದ ಚಿನ್ನಾಭರಣಗಳು, ನವೀನ ಶೈಲಿಯ ಮತ್ತು ಹೊಸ ಮಾದರಿಯ ಆಭರಣಗಳನ್ನು ಗ್ರಾಹಕರಿಗೆ ಒದಗಿಸಲು ಜಿ.ಎಲ್. ಆಚಾರ್ಯ ಜ್ಯುವೆಲರ್ಸ್ ಸಜ್ಜಾಗಿದೆ. ಕರಾವಳಿ ಭಾಗದ ಗ್ರಾಹಕರಿಗೆ ಮತ್ತು ಆಭರಣ ಪ್ರಿಯರಿಗೆ ನಮ್ಮ ಸಂಸ್ಥೆಯು ಉತ್ತಮ ಗುಣಮಟ್ಟದ ಆಭರಣಗಳ ಮುಖೇನ ಸೇವೆ ನೀಡುತ್ತಾ ಬಂದಿದೆ. ಮೂಡುಬಿದಿರೆಯ ಗ್ರಾಹಕರಿಗೆ ಸುಸಜ್ಜಿತವಾದ ಈ ಹೊಸ ಶೋರೂಮ್ ಉತ್ತಮ ಅನುಭವವನ್ನು ನೀಡುತ್ತದೆ ಎಂದು ತಿಳಿಸಿದರು.

ನಿರ್ದೇಶಕರಾದ ಲಕ್ಷ್ಮಿಕಾಂತ ಬಿ.ಆಚಾರ್ಯ, ರಾಜೀವ್ ಬಲರಾಮ್ ಆಚಾರ್ಯ. ಸುಧನ್ವ ಆಚಾರ್ಯ, ಕುಟುಂಬಸ್ಥರು, ಸಿಬ್ಬಂದಿಗಳು ಉಪಸ್ಥಿತರಿದ್ದರು.

ರಾಜ್ಯಮಟ್ಟದ ಅಭಿನಯ ಪ್ರಧಾನ ಚಿಣ್ಣರ ಮೇಳದ ಉದ್ಘಾಟನೆ

ಲವಲವಿಕೆ, ಸಮಯಪ್ರಜ್ಞೆ ಮುಖ್ಯ: ಡಾ.ಆಳ್ವ

ಮೂಡುಬಿದಿರೆ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಹಾಗೂ ಆಳ್ವಾಸ್ ರಂಗ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಆಯೋಜಿಸಲಾದ ರಾಜ್ಯಮಟ್ಟದ ಅಭಿನಯ ಪ್ರಧಾನ ಚಿಣ್ಣರ ಮೇಳದ ಉದ್ಘಾಟನೆ ಭಾನುವಾರ ಕನ್ನಡ ಭವನದಲ್ಲಿ ಜರುಗಿತು.



ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ಅವರು, ಜೀವನದಲ್ಲಿ ಲವಲವಿಕೆ ಮತ್ತು ಸಮಯಪ್ರಜ್ಞೆ ಅತ್ಯಂತ ಮುಖ್ಯವೆಂದು ತಿಳಿಸಿದರು. ಡಾ. ಜೀವನ್ ರಾಂ ಸುಳ್ಯ ಅವರ ನಿರ್ದೇಶನದಲ್ಲಿ ನಡೆಯುತ್ತಿರುವ ಈ ರೀತಿಯ ಶಿಬಿರಗಳು ಮಕ್ಕಳ ಸಮಗ್ರ ಅಭಿವೃದ್ಧಿಗೆ ಬಹಳ ಉಪಯೋಗಕಾರಿಯಾಗಿವೆ ಎಂದು ಹೇಳಿದರು.

ನಾನು ಚಿಕ್ಕವನಾಗಿದ್ದಾಗ ನನ್ನ ತಂದೆ-ತಾಯಿಗೆ ಇಂತಹ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿ ಇರಲಿಲ್ಲ. ನಾಲ್ಕನೇ ತರಗತಿಯಿಂದಲೇ ಹಾಸ್ಟೆಲ್ ಜೀವನ ಆರಂಭಿಸಿ ಸ್ವತಂತ್ರವಾಗಿ ಬೆಳೆಯುವ ಅವಕಾಶ ನನಗೆ ದೊರಕಿತು. ಸಾಂಸ್ಕೃತಿಕ ವೇದಿಕೆಗಳ ಮೂಲಕ ಫಿಲಿಫೈನ್ಸ್, ಜಪಾನ್, ಇಂಗ್ಲೆಂಡ್ ಸೇರಿದಂತೆ ಹಲವು ದೇಶಗಳಿಗೆ ತೆರಳಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಆದರೆ ನನ್ನ ತಂದೆ-ತಾಯಂದಿರು ನನ್ನ ಕಾರ್ಯಕ್ರಮಗಳನ್ನು ನೋಡುವ ಅವಕಾಶ ಪಡೆದಿರಲಿಲ್ಲ. ಇಂದಿನ ಪೋಷಕರು ಮಕ್ಕಳಿಗೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸುತ್ತಿರುವುದು ಸಂತೋಷದ ಸಂಗತಿ ಎಂದು ಹೇಳಿದರು.

ಕ್ಲಾಸ್‌ರೂಮ್ ಶಿಕ್ಷಣದ ಜೊತೆಗೆ ಬಯಲು ಶಾಲೆಯ ಕಲಿಕೆ ಜೀವನದಲ್ಲಿ ಬಹಳ ಮುಖ್ಯ. ನಮ್ಮ ಕಾಲದಲ್ಲಿ ಕೂಡು ಕುಟುಂಬಗಳಿದ್ದವು; ಈಗ ಅವು ಕಡಿಮೆಯಾಗಿವೆ. ಇಂತಹ ಶಿಬಿರಗಳ ಮೂಲಕ ಕೂಡು ಕುಟುಂಬದ ಮಹತ್ವ ಮಕ್ಕಳಿಗೆ ತಿಳಿಯುತ್ತದೆ ಎಂದರು.

ಮಕ್ಕಳಿಗೆ ಇಂತಹ ಶಿಬಿರಗಳಲ್ಲಿ ಹಾಡು, ನೃತ್ಯ, ಮಾತುಕತೆ ಸೇರಿದಂತೆ ವಿವಿಧ ಕೌಶಲ್ಯಗಳನ್ನು ಪ್ರದರ್ಶಿಸಲು ಅವಕಾಶ ದೊರೆಯುತ್ತದೆ. ಇದು ಆತ್ಮವಿಶ್ವಾಸವನ್ನು ವೃದ್ಧಿಸುತ್ತದೆ. ದೇವರು ನೀಡಿದ ಕಣ್ಣು, ಕಿವಿ, ಬಾಯಿ ಮುಂತಾದ ಅಂಗಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಸಿ. ಎ. ಉಮೇಶ್ ರಾವ್ ಮಿಜಾರ್ ಅವರು ಮಾತನಾಡಿ, ಜೀವನದಲ್ಲಿ ಅಂಕಗಳು ಮಾತ್ರ ಮುಖ್ಯವಲ್ಲ; ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆಯೂ ಅಷ್ಟೇ ಅಗತ್ಯ ಎಂದು ಹೇಳಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ್ ಆಳ್ವ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಡಾ. ಜೀವನ್ ರಾಂ ಸುಳ್ಯ ಅವರು ನಿರೂಪಿಸಿ ವಂದಿಸಿದರು.

ಕಾಂಚಿಕಾಮಕೋಟಿ ಪೀಠದ ಶ್ರೀಗಳಿಂದ ಭಾರದ್ವಾಜ ಆಶ್ರಮದಲ್ಲಿ ವೇದ ವಿದ್ಯಾಲಯ ಲೋಕಾರ್ಪಣೆ

ಸುಳ್ಯ: ಹಿಂದೂ ಧರ್ಮದಲ್ಲಿ ಸತ್ಯ ಮತ್ತು ತತ್ವ ಅಡಗಿದ್ದು, ಧರ್ಮದ ಪ್ರಚಾರ ಇಂದಿನ ಕಾಲಘಟ್ಟದಲ್ಲಿ ಅತ್ಯಾವಶ್ಯಕವಾಗಿದೆ ಎಂದು ಕಾಂಚಿ ಕಾಮಕೋಟಿ ಪೀಠದ ಶ್ರೀ ವಿಜೇಯೇಂದ್ರ ಸರಸ್ವತಿ ಸ್ವಾಮೀಜಿ ಹೇಳಿದರು.

ಅವರು ಅರಂಬೂರು ಭಾರದ್ವಾಜ ಆಶ್ರಮದಲ್ಲಿ ವೇದಾ ವಿದ್ಯಾಲಯ ಹಾಗೂ ವೇದ ವಿದ್ವಾಂಸರಿಗೆ ಗೌರವಾರ್ಪಣೆ ಬಳಿಕ ಮಾತನಾಡಿ, ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ವೇದ ಪಾಠ ಶಾಲೆಯನ್ನು ಪ್ರತಿ ಕೇಂದ್ರದಲ್ಲಿ ತೆರೆಯಬೇಕು. ನಿವೃತ್ತ ಶಿಕ್ಷಕರು ವೇದ ಪಾಠ ಪ್ರವಚನ ನೀಡಲು ಮುಂದಾಗಬೇಕು. ನಮ್ಮ ದೇಶ ಶಾಂತಿಯಿಂದಿರಬೇಕಾದರೆ ಧಾರ್ಮಿಕ ಶಿಕ್ಷಣದ ಆವಶ್ಯಕತೆ ಇದೆ. ವೇದ ಮತ್ತು ವೈದಿಕ ಪ್ರಚಾರದಿಂದ ಹಿಂದೂ ಧರ್ಮದ ಅಮೃತ ಬಿಂದು ಆನಂದ ಸಿಂಧುವಾಗಲು ಸಾಧ್ಯ ಎಂದು ಶ್ರೀಗಳು ಹೇಳಿದರು. ನೂತನ ವೇದ ಪಾಠ ಶಾಲೆಯ ನಿರ್ಮಾಣಕ್ಕೆ ದೇಣಿಗೆ ನೀಡಿದ ಕರ್ನಾಟಕ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಕೀಲಾರು ಡಾ. ಟಿ. ಶ್ಯಾಮ್ ಭಟ್ ಅವರನ್ನು ಗೌರವಿಸಲಾಯಿತು. ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಮೊಕ್ತೇಸರರಾದ ಸತ್ಯನಾರಾಯಣ ಭಟ್, ಪದ್ಮಶ್ರೀ ಪುರಸ್ಕೃತ ಡಾ. ಗಿರೀಶ್ ಭಾರದ್ವಾಜ್, ಗೋವಿಂದರಾಜ್ ಭಾರದ್ವಾಜ್, ರವಿಶಂಕರ ಭಾರದ್ವಾಜ್, ಭಾರದ್ವಾಜ್ ಸಹೋದರರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.



ಕಾಂಚಿ ಕಾಮಕೋಟಿ ವಸಂತ ವೇದ ಪಾಠ ಶಾಲೆಗೆ 25 ಸಂವತ್ಸರ ಪೂರೈಸಿದ ಹಿನ್ನಲೆಯಲ್ಲಿ ಜಿಲ್ಲೆಯ ಮತ್ತು ಕೇರಳದಲ್ಲಿ ನಡೆಸಲಾಗುತ್ತಿರುವ 25 ವೇದ ಪಾಠ ಶಾಲೆಯ ವೇದ ವಿದ್ವಾಂಸರನ್ನು ಸ್ವಾಮೀಜಿಯವರು ಗೌರವಿಸಿದರು. ಕೊರೋನಾ ಸಂದರ್ಭದಲ್ಲಿ ವೇದವಾಹಿನಿ ಆನ್‌ಲೈನ್ ಮೂಲಕ ವೇದ ಪಾಠ ಪ್ರವಚನ ನಡೆಸಿದ್ದು ಸುಮಾರು 600 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ವೇದ ಅಧ್ಯಯನ ಪಡೆದಿದ್ದು ಅದರಲ್ಲಿ ಸಂಗ್ರಹವಾದ ರೂ. 1 ಲಕ್ಷ ಮೊತ್ತವನ್ನು ಗುರುಗಳಾದ ವೆಂಕಟೇಶ್ ಶಾಸ್ತ್ರೀಯವರ ನೇತೃತ್ವದಲ್ಲಿ ವಿದ್ಯಾರ್ಥಿಗಳು ವ್ಯವಸ್ಥಾಪಕರಾದ ರವಿಶಂಕರ ಭಾರದ್ವಾಜ್‌ರಿಗೆ ಹಸ್ತಾಂತರಿಸಿದರು.

ವೇದವಿದ್ಯಾಲಯದಲ್ಲಿ ಕಲಿತು ಉತ್ತಮ ಅಧ್ಯಯನ ನಡೆಸಿದ ವಿದ್ಯಾರ್ಥಿಗಳನ್ನು ಸ್ವಾಮೀಜಿಯವರು ಆಶೀರ್ವದಿಸಿದರು. ಭಾರದ್ವಾಜ ಆಶ್ರಮದ ವೇದ ಗುರುಗಳಾದ ವೆಂಕಟೇಶ್ ಶಾಸ್ತ್ರೀ ಕಾರ್ಯಕ್ರಮ ನಿರ್ವಹಿಸಿದರು.

» 25 ವೇದ ಪಾಠ ಶಾಲೆಯ ವೇದ ವಿದ್ವಾಂಸರನ್ನು ಸ್ವಾಮೀಜಿಯವರು ಗೌರವಿಸಿದರು.

ಹಿರಿಯ ಪತ್ರಕರ್ತ ರಾಮಕೃಷ್ಣ ಆರ್.ಗೆ ಗರುಡನಗಿರಿ ನಾಗರಾಜ್ ಪ್ರಶಸ್ತಿ ಪ್ರದಾನ

ಮಂಗಳೂರು: ಬೀದರ್‌ನಲ್ಲಿ ಭಾನುವಾರ ನಡೆದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 40ನೇ ರಾಜ್ಯ ಸಮ್ಮೇಳನದಲ್ಲಿ ಹಿರಿಯ ಪತ್ರಕರ್ತ, ಸಂಯುಕ್ತ ಕರ್ನಾಟಕ ಪತ್ರಿಕೆಯ ಮಂಗಳೂರು ಬ್ಯೂರೋ ಮುಖ್ಯಸ್ಥ ರಾಮಕೃಷ್ಣ ಆರ್ ಅವರಿಗೆ 'ಗರುಡನಗಿರಿ ನಾಗರಾಜ್ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಸಮಾರಂಭದಲ್ಲಿ ಮುಖ್ಯಮಂತ್ರಿ, ಸಿದ್ದರಾಮಯ್ಯ,ಸ್ಪೀಕರ್ ಯು.ಟಿ.ಖಾದರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮತ್ತಿತರರು ಉಪಸ್ಥಿತರಿದ್ದರು. ಕಳೆದ ಮೂವತ್ತಕ್ಕೂ ಅಧಿಕ ವರ್ಷಗಳಿಂದ ಪತ್ರಕರ್ತರಾಗಿ ಕಾರ್ಯ ನಿರ್ವಹಿಸುತ್ತಿರುವ ರಾಮಕೃಷ್ಣ ಅವರಿಗೆ 2020ನೆಯ ಸಾಲಿನ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ, ರೋಟರಿ ವಂದನಾ ಪ್ರಶಸ್ತಿ, ದ.ಕ.ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ಮಂಗಳೂರು ಪ್ರೆಸ್‌ಕ್ಲಬ್ ಅಧ್ಯಕ್ಷರಾಗಿ ಪತ್ರಿಕಾ ಭವನ ಟ್ರಸ್ಟ್ ಅಧ್ಯಕ್ಷ, ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಹೀಗೆ ವಿವಿಧ ಜವಾಬ್ದಾರಿಯನ್ನು ಅವರು ನಿರ್ವಹಿಸಿದ್ದಾರೆ.



» ಸಂಯುಕ್ತ ಕರ್ನಾಟಕ ಪತ್ರಿಕೆಯ ಮಂಗಳೂರು ಬ್ಯೂರೋ ಮುಖ್ಯಸ್ಥ ರಾಮಕೃಷ್ಣ ಆರ್ ಅವರಿಗೆ 'ಗರುಡನಗಿರಿ ನಾಗರಾಜ್ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಕಿರುಸುದ್ದಿ



ಕೊನೆಗೂ ಗೆದ್ದ ಸಿಎಸ್‌ಕೆ

• **ಚೆನ್ನೈ**: ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಕೊನಗೂ ಖಾತೆ ತೆರೆಯಿತು. ಸಂಜು ಸ್ಯಾಮ್ಸನ್ ಅವರ ಸ್ಫೋಟಕ ಶತಕ ಮತ್ತು ಜಾಮ್ಮಿ ಓವರ್‌ಟನ್ ಅವರ ಮಾರಕ ಬೌಲಿಂಗ್ ದಾಳಿಯ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್, ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ 23 ರನ್‌ಗಳ ಜಯಭೇರಿ ಬಾರಿಸಿತು. ಇದರೊಂದಿಗೆ ಹ್ಯಾಟ್ರಿಕ್ ಸೋಲಿನ ನಂತರ ಮೊದಲ ಪಂದ್ಯ ಗೆದ್ದ ಚೆನ್ನೈ ತವರಲ್ಲಿ ಸತತ ಆರು ಸೋಲುಗಳ ಸರಪಳಿ ಮುರಿಯಿತು. ಮೊದಲು ಬ್ಯಾಟಿಂಗ್ ಮಾಡುವಾಗ ಪವರ್ ಪ್ಲೇನಲ್ಲಿ 45 ರನ್ ಮಾಡಿದ್ದ ಸಂಜು ಸ್ಯಾಮ್ಸನ್ ಕೊನೆಯ ಓವರ್‌ವರೆಗೂ ಬ್ಯಾಟಿಂಗ್ ಮಾಡಿ 115 ರನ್ ಬಾರಿಸಿದರು. ಇದಕ್ಕೂ ಮುನ್ನ ಆಯುಷ್ ಮಾತ್ರೆ ಅರ್ಧಶತಕ ಬಾರಿಸಿ ನಿವೃತ್ತರಾಗಿದ್ದರು. ಇವರಿಬ್ಬರ ಬ್ಯಾಟಿಂಗ್‌ನೊಂದಿಗೆ ಚೆನ್ನೈ ಸೂಪರ್ ಕಿಂಗ್ಸ್ 211 ರನ್‌ಗಳ ದೊಡ್ಡ ಗುರಿ ನೀಡಿತ್ತು. ದಿಲ್ಲಿ ತಂಡಕ್ಕೆ ಆಲ್‌ರೌಂಡರ್ ಓವರ್‌ಟನ್ ಕಡಿವಾಣ ಹಾಕಿದರು. ಅನ್ಶುಲ್ ಕಂಬೋಜ್ ಕೂಡ ಗಮನಾರ್ಹ ಕೊಡುಗೆ ನೀಡಿದರು. ಪಾಳಯದ ಪರ ಸ್ಫೋಟಕ ಬ್ಯಾಟರ್ ಟ್ರೈಸನ್ ಸ್ಟಬ್ಸ್ ಏಕಾಂಗಿ ಹೋರಾಟ ನಡೆಸಿದರು. ನಿಸ್ಸಂಕಾ ಅಲ್ಪ ಪ್ರಯತ್ನ ಪಟ್ಟಿದ್ದರು. ಪರಿಣಾಮ ದಿಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 189 ರನ್‌ಗಳಿಗೆ ಆಲೌಟ್ ಆಯಿತು.

ಚೆನ್ನೈ ಪವರ್‌ಪ್ಲೇನಲ್ಲಿ 61 ರನ್‌ಗಳಿಸಿದರೆ, ದಿಲ್ಲಿ 66 ರನ್ ಗಳಿಸಿತ್ತು. ಮಧ್ಯಮ ಓವರ್‌ಗಳಲ್ಲಿ ಚೆನ್ನೈ 107, ದಿಲ್ಲಿ 90 ರನ್‌ಗಳಿಸಿತು. ಈ ಓವರ್‌ಗಳಲ್ಲಿ ದಿಲ್ಲಿ 5 ವಿಕೆಟ್ ಕಳೆದುಕೊಂಡಿತು. ಇದೇ ಹೊಡೆತ ನೀಡಿತು. ಅಂತಿಮ ಓವರ್‌ಗಳಲ್ಲಿ ಚೆನ್ನೈ 44 ರನ್, ದಿಲ್ಲಿ 33 ರನ್‌ಗಳಿಸಿದವು. ಅಲ್ಲೂ ದಿಲ್ಲಿ 3 ವಿಕೆಟ್ ಕಳೆದುಕೊಂಡಿತು.

ಓವರ್‌ಟನ್ ದಾಳಿ: ಆರಂಭಿಕ ಓವರ್‌ಗಳಲ್ಲಿ ಅದೆಲ್ಲಾ ಸ್ಫೋಟಕ ಬ್ಯಾಟಿಂಗ್ ಮಾಡಿ ಗೆಲುವಿನ ಹಂತಕ್ಕೆ ಸಾಗುತ್ತಿದ್ದ ದಿಲ್ಲಿ ಕ್ಯಾಪಿಟಲ್ಸ್, ಪವರ್‌ಪ್ಲೇನ ಕೊನೆ ಓವರ್‌ಗಳಲ್ಲಿ ಸರಸರನೇ ಎರಡು ವಿಕೆಟ್ ಕಳೆದುಕೊಂಡಿತು. ಅಲ್ಲಿಂದ ಪಂದ್ಯವನ್ನು ಜಗ್ಗಿದ ಚೆನ್ನೈ, ಮಧ್ಯಮ ಓವರ್‌ಗಳಲ್ಲಿ ಕರಾರುವಾಕ್ ದಾಳಿ ನಡೆಸಿತು. ಅಲ್ಲೇ ಓವರ್‌ಟನ್ 3 ವಿಕೆಟ್ ಪಡೆದರು. ಡೆತ್ ಓವರ್‌ಗಳಲ್ಲಿ ದಿಲ್ಲಿಗೆ ದೊಡ್ಡ ಗುರಿಯಿತ್ತು. ಆದಾಗ್ಯೂ ಸ್ಟಬ್ (60) ರನ್ ಆಸರೆಯಾದರು. 18ನೇ ಓವರ್‌ನಲ್ಲಿ ಓವರ್‌ಟನ್ ಸ್ಟಬ್ಸ್ ವಿಕೆಟ್ ಕಿತ್ತು ಗೆಲುವು ಖಚಿತಪಡಿಸಿದರು. ಕಂಬೋಜ್ ಕೂಡ ವಿಕೆಟ್ ಪಡೆದು ಪಂದ್ಯವನ್ನು ಸಮಾಪ್ತಗೊಳಿಸಿದರು.

ರಾಜಸ್ಥಾನಕ್ಕಿಂದು ಹೈದರಾಬಾದ್ ಸವಾಲು

• **ಹೈದರಾಬಾದ್:** ಪಂದ್ಯಾವಳಿಯಲ್ಲಿ ಭಾರೀ ಹಿನ್ನಡೆ ಅನುಭವಿಸಿರುವ ಸನ್‌ರೈಸರ್ಸ್ ಹೈದರಾಬಾದ್ ಹಾಗೂ ಗೆಲುವಿನ ಹಳಿಯಲ್ಲಿರುವ ರಾಜಸ್ಥಾನ ತಂಡಗಳು ಸೋಮವಾರದ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ವೈಭವ್ ಸೂರ್ಯವಂಶಿ ಹಾಗೂ ಜೈಸ್ವಾಲ್ ಅವರ ಬ್ಯಾಟಿಂಗ್‌ನೊಂದಿಗೆ ಪಂದ್ಯಾವಳಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿರುವ ರಾಜಸ್ಥಾನ ಇದುವರೆಗೂ ಯಾವುದೇ ಪಂದ್ಯದಲ್ಲಿ ಸೋತಿಲ್ಲ. ಇತ್ತ ಕಿಶನ್ ನಾಯಕತ್ವದ ಹೈದರಾಬಾದ್ ಕೇವಲ ಒಂದು ಪಂದ್ಯದಲ್ಲಿ ಮಾತ್ರ ಗೆಲುವು ಸಾಧಿಸಿದೆ. ಬಲಿಷ್ಠ ಆರಂಭಿಕರನ್ನು ಹೊಂದಿರುವ ಎರಡೂ ತಂಡಗಳು ರನ್ ಹೊಳೆ ಹರಿಸಲು ಸಿದ್ಧವಾಗಿವೆ. ಹೈದರಾಬಾದ್‌ನಲ್ಲಿ ಪಂದ್ಯ ನಡೆಯಲಿದೆ. ಪಾಯಿಂಟ್ಸ್ ಟೇಬಲ್ ವಿಚಾರದಲ್ಲಿ ರಾಜಸ್ಥಾನ ಮೊದಲನೇ ಸ್ಥಾನದಲ್ಲಿದ್ದರೆ ಹೈದರಾಬಾದ್ ಏಳನೇ ಸ್ಥಾನದಲ್ಲಿ ಕಾಣಿಸಿಕೊಂಡಿದೆ. ಉಭಯ ತಂಡದಲ್ಲೂ ಸಮಾನ ಬ್ಯಾಟಿಂಗ್ ಮತ್ತು ಬೌಲಿಂಗ್ ಪಡೆಗಳಿದ್ದು ಕುತೂಹಲ ಮೂಡಿಸಿದೆ.

ನಿತೀಶ್ ರಾಣಾಗೆ ದಂಡ

• **ಹೊಸದಿಲ್ಲಿ:** ದಿಲ್ಲಿ ಕ್ಯಾಪಿಟಲ್ಸ್ ತಂಡದ ಬ್ಯಾಟರ್ ನಿತಿಶ್ ರಾಣಾಗೆ ನಿರ್ಣಾಯಕರೊಂದಿಗೆ ವಿವಾದಕ್ಕಿಳಿದ ಕಾರಣ ಪಂದ್ಯ ಶುಲ್ಕದ ಶೇ.25 ರಷ್ಟು ರೂ. ದಂಡ ವಿಧಿಸಲಾಗಿದೆ. ಇಂಡಿಯನ್ ಪ್ರೀಮಿಯರ್ ಲೀಗ್‌ಪಂದ್ಯಾವಳಿಯ ಪಂದ್ಯದಲ್ಲಿ ಚೆನ್ನೈ ವಿರುದ್ಧದ ಪಂದ್ಯದ ವೇಳೆ ನಾಲ್ಕನೇ ಅಂಪೈರ್‌ನೊಂದಿಗೆ ವಾದಕ್ಕಿಳಿದ ಅವರು, ಹತಾಶೆ ಹೊರಹಾಕಿದ್ದರು. ಇತ್ತ ನಿಧಾನಗತಿ ಓವರ್ ಮಾಡಿಸಿದ್ದಕ್ಕಾಗಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ರುತುರಾಜ್ ಗಾಯಕ್ವಾಡ್ ಅವರಿಗೂ ದಂಡ ವಿಧಿಸಲಾಗಿದೆ ಎಂದು ಬಿಸಿಸಿಐ ತಿಳಿಸಿದೆ. ಪಂದ್ಯದ 19ನೇ ಓವರ್‌ನಲ್ಲಿ ಸ್ಟಬ್ಸ್ ಗ್ಲೌಸ್ ಬದಲಾಯಿಸುವ ಅವಕಾಶ ಕೇಳಿದರು. ಇತ್ತ ನಿತಿಶ್ ಅವುಗಳನ್ನು ಕೊಡಲು ಮೈದಾನಕ್ಕೆ ಹೋಗಲು ಸಜ್ಜಾದರು. ಮೊದಲೇ ತಿಳಿಸದ ಕಾರಣ ನಾಲ್ಕನೇ ಅಂಪೈರ್ ಅವರನ್ನು ತಡೆದರು. ಇದಕ್ಕೆ ಆಕ್ರೋಶಗೊಂಡ ನಿತಿಶ್ ರಾಣಾ ವಾದಕ್ಕಿಳಿದರು.

ಗಿಲ್ ಪಡೆಗೆ 7 ವಿಕೆಟ್ ಜಯ | ಬಟ್ಲರ್-ಗಿಲ್ ಮಿಂಚಿನಾಟ

ಕೃಷ್ಣ ದಾಳಿಗೆ ಕುಗ್ಗಿದ ಲಖನೌ

• **ಲಖನೌ:** ಲಖನೌ ಗೆಲುವಿನೋಟಕ್ಕೆ ಬ್ರೇಕ್ ಹಾಕಿರುವ ಗುಜರಾತ್ ಟೈಟಾನ್ಸ್ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಎರಡನೇ ಗೆಲುವು ದಾಖಲಿಸಿದೆ. ಪ್ರಸಿದ್ಧ ಕೃಷ್ಣ ಅವರ ಕರಾರುವಾಕ್ ಬೌಲಿಂಗ್ ದಾಳಿಯ ಮುಂದೆ ಕುಗ್ಗಿದ ಸೂಪರ್ ಜೇಂಟ್ಸ್ ಬಳಿಕ ಗಿಲ್-ಬಟ್ಲರ್ ಆಟದ ಮುಂದೆ ಶರಣಾಯಿತು.


ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬ್ಯಾಟಿಂಗ್ ಮಾಡುವ ವೇಳೆ ತೀವ್ರ ಕುಸಿತ ಕಂಡ ಪಂತ್ ಪಡೆ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 164 ರನ್ ಗಳಿಸಿತು. ಏಡನ್ ಮಾರ್ಕ್ರಂ ಗಳಿಸಿದ್ದ 30 ರನ್ ತಂಡದ ಪರ ಬ್ಯಾಟರ್ ಗಳಿಸಿದ್ದ ಅತಿ ಹೆಚ್ಚು ಸ್ಕೋರ್ ಆಗಿತ್ತು. ಶಾರ್ಟ್ ಬಾಲ್ ಮೂಲಕ ಬೆವರಿಳಿಸಿದ ಕೃಷ್ಣ 28 ರನ್ ಮಾತ್ರ ನೀಡಿ 4 ವಿಕೆಟ್ ಕಬಳಿಸಿದರು. ಗುರಿ ಬೆನ್ನತ್ತಿದ ಗುಜರಾತ್ ಶುಭಮನ್ ಗಿಲ್ ಅವರ ಆಸರೆ ಪಡೆದ ನಂತರ ಜಾಸ್ ಬಟ್ಲರ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ 18.4 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 165 ರನ್ ಗಳಿಸಿ 7 ವಿಕೆಟ್‌ಗಳಿಂದ ಜಯಭೇರಿ ಬಾರಿಸಿತು.

ಬಟ್ಲರ್ ಮತ್ತು ಶುಭಮನ್ ಗಿಲ್ ಪಂದ್ಯದ ಬೆಸ್ಟ್ ಬ್ಯಾಟರ್ಸ್ ಅನ್ನಿಸಿಕೊಂಡರೆ, ಕೃಷ್ಣ ಪಂದ್ಯ ಗೆಲ್ಲಿಸಿದ ಹೀರೋ ಎನಿಸಿಕೊಂಡರು. ಲಖನೌ ಪರ ಯಾವುದೇ ಬ್ಯಾಟರ್ ಅರ್ಧ ಶತಕ ಬಾರಿಸಲಾಗಲಿಲ್ಲ. ಈ ಬೌಲಿಂಗ್ ದಾಳಿಯೊಂದಿಗೆ ಪ್ರಸಿದ್ಧ ಕೃಷ್ಣ ಪರ್ಪಲ್ ಕ್ಯಾಪ್ ಪಡೆದುಕೊಂಡರು.

ಲಖನೌ v/s ಗುಜರಾತ್ ಏರಿಳಿತ: ಬ್ಯಾಟಿಂಗ್‌ಗಿಳಿದ ಲಖನೌ ಆರಂಭಿಕ ಹಿನ್ನಡೆ ಅನುಭವಿಸಿತು. ಆದಾಗ್ಯೂ ಪಂತ್ ಮತ್ತು ಮಾರ್ಕ್ರಂ ಕೊಂಚ ಹೊತ್ತು ಆಸರೆಯಾದರು. ಇದರೊಂದಿಗೆ ಪವರ್‌ಪ್ಲೇನಲ್ಲಿ 2 ವಿಕೆಟ್ ನಷ್ಟಕ್ಕೆ 60 ರನ್‌ಗಳಿಸಿತು. ಇತ್ತ ಗುಜರಾತ್ ಕೂಡ ಆರಂಭಿಕ ಆಘಾತ ಎದುರಿಸಿತು. ಗಿಲ್ ಹಾಗೂ ಸುದರ್ಶನ್ ನಿಧಾನವಾಗಿ ಪಿಚ್‌ಗೆ ಹೊಂದಿಕೊಳ್ಳುವತ್ತ ಸಾಗಿದರು. ಸುದರ್ಶನ್ ತಮ್ಮ ವಿಕೆಟ್ ಕೂಡ ಕಳೆದುಕೊಂಡರು. ಗಿಲ್ ಶಮಿ ಸೇರಿದಂತೆ ಪ್ರಮುಖರನ್ನು ದಂಡಿಸಿದರು. ಇದರೊಂದಿಗೆ ಗುಜರಾತ್ 1 ವಿಕೆಟ್ ಮಾತ್ರ ಕಳೆದುಕೊಂಡು 52 ರನ್ ಗಳಿಸಿತು.

ಮಧ್ಯಮ ಓವರ್‌ಗಳಲ್ಲಿ (7-15) ಲಖನೌ ಬ್ಯಾಟಿಗರು ದೊಡ್ಡ ಹೊಡೆತಗಳಿಗೆ ಮುಂದಾಗಿ ವಿಕೆಟ್ ಕೊಡುತ್ತಾ ಬಂದರು. ಇಲ್ಲೇ ಕೃಷ್ಣ ತಮ್ಮ ಅನುಭವದೊಂದಿಗೆ ಮಿಂಚಿದರು. ಮಾರ್ಕ್ರಂ 30, ಪೂರಣ್, 19, ಬದೋನಿ 9 ಹೀಗೆ ಮಧ್ಯಮ ಕ್ರಮಾಂಕ ಉರುಳಿಬಿದ್ದಿತು. ಪರಿಣಾಮ ಈ ಓವರ್‌ಗಳಲ್ಲಿ ಪಂತ್ ಪಡೆ 3 ವಿಕೆಟ್ ನಷ್ಟಕ್ಕೆ 57 ರನ್ ಮಾತ್ರ ಗಳಿಸಿತು. ಅದೆ ಗುಜರಾತ್ ಮುನ್ನಡೆಯ ನಾಗಾಲೋಟದೊಂದಿಗೆ ಮಧ್ಯಮ ಓವರ್‌ಗಳಲ್ಲಿ ಮಿಂಚಿತು. ಏಕಾನಾ ಪಿಚ್‌ಗೆ ತಕ್ಕಂತೆ ಬ್ಯಾಟಿಂಗ್ ಮಾಡುತ್ತಾ ನಿಧಾನವಾಗಿ ಗೆಲುವಿನತ್ತ ಸಾಗಿತು. ಗಿಲ್(56 ರನ್, 40 ಬಾ, 6 ಬೌ, 1 ಸಿ)-ಬಟ್ಲರ್(60 ರನ್, 37 ಬಾ, 11 ಬೌ) ಇಬ್ಬರೇ ಪಂದ್ಯದ ಮೇಲೆ ಹಿಡಿತ ಸಾಧಿಸಿದರು. ಇಬ್ಬರೂ ಅರ್ಧ ಶತಕ ಬಾರಿಸಿದರು. ಪ್ರಿನ್ಸ್ ಯಾದವ್ ಮತ್ತು ಶಮಿ ಈ ಇಬ್ಬರ ವಿಕೆಟ್ ಪಡೆದರೂ ಅಷ್ಟೊತ್ತಿಗಾಗಲೇ ಪಂದ್ಯ ಬಾಚಿಕೊಂಡಿತ್ತು ಗುಜರಾತ್. ಮಧ್ಯಮ ಓವರ್‌ಗಳಲ್ಲಿ ಉತ್ತಮ ಬ್ಯಾಟಿಂಗ್ ಮಾಡಿಯೇ ಪಂದ್ಯ ಗೆದ್ದಿತು.

ಅಂತಿಮ ಓವರ್‌ಗಳಲ್ಲಿ (16-20) ಲಖನೌ ಮತ್ತೊಮ್ಮೆ ಆತುರ ಪಟ್ಟಿತು. ಅಲ್ಲೂ ದೊಡ್ಡ ಹಿಟ್ಟರ್‌ಗಳು ವಿಕೆಟ್ ಕಳೆದುಕೊಂಡರು. ಶಮಿ ಮತ್ತು ಜಾರ್ಜ್ ಲಿಂಡೆ ಒಂದೆರಡು ಬೌಂಡರಿಗಳನ್ನು ಬಾರಿಸಿದ ನಂತರ ಡೆತ್ ಓವರ್‌ಗಳಲ್ಲಿ ಲಖನೌ 47 ರನ್ ಜೋಡಿಸಿತು. ಒಟ್ಟು ಸ್ಕೋರ್ 164 ಆಯಿತು. ಇತ್ತ ಗುಜರಾತ್ ಹೆಚ್ಚಿನ ರನ್‌ಗಳನ್ನು ಮಧ್ಯಮ ಓವರ್‌ಗಳಲ್ಲೇ ಬಾರಿಸಿದ್ದರಿಂದ ಡೆತ್‌ನಲ್ಲಿ ನಿಂತು ಬಂದರೆ ಸಾಕಿತ್ತು. ಆಗ ವಾಷಿಂಗ್ಟನ್ ಸುಂದರ್ (21 ರನ್, 13 ಬಾ, 2 ಬೌ, 1 ಸಿ) ಪಂದ್ಯ ಗೆಲ್ಲಿಸಿದರು. 16ನೇ ಓವರ್‌ನಿಂದ 18.4 ಅನ್ನುವಷ್ಟರಲ್ಲಿ ಗುಜರಾತ್ 29 ರನ್ ಗಳಿಸಿ ಪಂದ್ಯ ಗೆದ್ದಿತು.



ಸಂಕ್ಷಿಪ್ತ ಸ್ಕೋರ್

ಲಖನೌ: 20 ಓವರ್‌ಗಳಲ್ಲಿ 164/8: ಮಾರ್ಕ್ರಂ 30, ಪೂರಣ್ 19; ಕೃಷ್ಣ 28/4

ಗುಜರಾತ್: 18.4 ಓವರ್‌ಗಳಲ್ಲಿ 165: ಬಟ್ಲರ್ 60, ಗಿಲ್ 56; ಪ್ರಿನ್ಸ್ 31/1

ಆರ್‌ಸಿಬಿಯಿಂದ ಮುಂಬೈಗೆ 241 ರನ್ ಗುರಿ

ಸಾಲ್ಟ್ ಆಟಕ್ಕೆ ಮುಂಬೈ ತತ್ತರ



• **ಮುಂಬೈ:** ತಮ್ಮ ಅಸಲು ಲಯಕ್ಕೆ ಮರಳಿದ ಫಿಲ್ ಸಾಲ್ಟ್(78) ಹಾಗೂ ರಜತ್ ಪಾಟಿದಾರ್ (53) ಕೊಹ್ಲಿಯ(50) ಸಾಥ್ ಪಡೆದು ಮುಂಬೈ ತಂಡವನ್ನು ದಂಡಿಸಿದ ನಂತರ ಬೆಂಗಳೂರು ದೊಡ್ಡ ಗುರಿ ಕಲೆಹಾಕಿತು. ಅನುಭವ ಬೌಲರ್‌ಗಳನ್ನು ಹೊಂದಿರುವ ಮುಂಬೈ ಇಂಡಿಯನ್ಸ್ ಪಂದ್ಯಾವಳಿಯಲ್ಲಿ ಮತ್ತೊಮ್ಮೆ ದಂಡಿಸಿಕೊಂಡಿತು. ಪಾಂಡ್ಯ, ಬೂಮ್ರಾ, ಬೋಲ್ಟ್ ಹೀಗೆ ಬಂದ ಬೌಲರ್‌ಗಳನ್ನೆಲ್ಲಾ ದಂಡಿಸಿದ ಬೆಂಗಳೂರಿನ ಬ್ಯಾಟರ್‌ಗಳು 20 ಓವರ್‌ಗಳಲ್ಲಿ 240 ರನ್ ಗಳಿಸಿತು. ಮುಂಬೈ ಪರ ಬೂಮ್ರಾ ಮತ್ತು ಪಾಂಡ್ಯ ಮಾತ್ರ 12ಕ್ಕೂ ಕಡಿಮೆ ಎಕಾನಮಿ ಹೊಂದಿ ಬೌಲರ್‌ಗಳಾಗಿದ್ದರು. ಜೇಕ್ ಅವರೇ ಕಡಿಮೆ ಸ್ಟ್ರೈಕ್‌ರೇಟ್(111) ಹೊಂದಿದ ಆಟಗಾರ ಅನ್ನಿಸಿಕೊಂಡರು.

ಆರ್‌ಸಿಬಿ ಅಬ್ಬರ: ಮುಂಬೈ ಇಂಡಿಯನ್ಸ್ ತಂಡದ ಪ್ರತಿಯೊಬ್ಬ ಬೌಲರ್ ಕೂಡ ಸಾಲ್ಟ್, ಪಾಟಿದಾರ್ ಮತ್ತು ಕೊಹ್ಲಿ ಆಟಕ್ಕೆ ತತ್ತರಿಸಿದರು. ಕಳೆದ ಪಂದ್ಯಗಳಲ್ಲಿ ಅಲ್ಪ ಹಿನ್ನಡೆ ಅನುಭವಿಸಿದ್ದ ಫಿಲ್ ಸಾಲ್ಟ್ ತಮ್ಮ ಸ್ವಾಭಾವಿಕ ಲಯಕ್ಕೆ ಮರಳಿದರು. ಪವರ್‌ಪ್ಲೇನಲ್ಲಿ ಮುಂಬೈ ಪಡೆಯಲ್ಲಿರುವ ದಿಗ್ಗಜ ಬೌಲರ್‌ಗಳಾದ ಬೋಲ್ಟ್, ಪಾಂಡ್ಯ ಅವರನ್ನು ದಂಡಿಸುತ್ತಾ ಬಂದರು. ಸಾಲ್ಟ್ ಯಾವುದೇ ಕ್ಷಣಕ್ಕೂ ಸೆಟ್ ಆಗುವ ಮುಲಾಜಿಗೆ ಬೀಳಲೇ ಇಲ್ಲ. ಬಂದ ಬಾಲ್‌ಗಳನ್ನೆಲ್ಲಾ ಬೌಂಡರಿಗಟ್ಟುವ ಅವರ ನಿರ್ಧಾರ ಸ್ಪಷ್ಟವಾಗಿ ಗೋಚರಿಸಿತು. ಇತ್ತ ಪವರ್‌ಪ್ಲೇನಲ್ಲಿ ಸಿಂಗಲ್‌ಗಳ ಮೂಲಕ ಕೊಹ್ಲಿ ಸಾಲ್ಟ್‌ಗೆ ಸಾಥ್ ನೀಡಿದರು. ಅಲ್ಲಿಗೆ ಆರ್‌ಸಿಬಿ 6 ಓವರ್‌ಗಳಲ್ಲಿ 71 ರನ್ ಬಾರಿಸಿತ್ತು. ಪವರ್‌ಪ್ಲೇ ಮುಗಿದ ನಂತರವೂ ಸಾಲ್ಟ್ ವೇಗಕ್ಕೆ ಬ್ರೇಕ್ ಬೀಳಲೇ ಇಲ್ಲ. ಅರ್ಧ ಶತಕ ಬಾರಿಸಿದ ನಂತರ ಇತ್ತ ಕೊಹ್ಲಿ ಕೂಡ ಬೌಂಡರಿಗಳ ಮೂಲಕ ಸಿಡಿದರು. ಮುಂಬೈ ಬೌಲರ್‌ಗಳ ಪಾಲಿಗೆ ದುಃಸ್ವಪ್ನವೇ ಎದುರಾಯಿತು. 10 ಓವರ್‌ಗಳಲ್ಲಿ 120 ರನ್ ದಾಟಿದ ಆರ್‌ಸಿಬಿ ಮೊದಲ ವಿಕೆಟ್ ಕಳೆದುಕೊಂಡರು. ಸಾಲ್ಟ್ 36 ಬಾಲ್ ಮಾತ್ರದಲ್ಲಿ 78 ರನ್ ಬಾರಿಸಿ ಔಟಾದರು. ಈ ಇನ್ನಿಂಗ್ಸ್‌ನಲ್ಲಿ 6 ಬೌಂಡರಿ ಮತ್ತು 6 ಸಿಕ್ಸರ್‌ಗಳು ಸೇರಿವೆ.

ಪಾಟಿದಾರ್ ಮಿಂಚಿನಾಟ: ಸಾಲ್ಟ್ ವಿಕೆಟ್ ಬಿದ್ದಂತೆ ಮುಂಬೈ ಅಲ್ಪ ಸಂಭ್ರಮಪಟ್ಟಿತು. ಆದರೆ ಸಾಲ್ಟ್‌ಗಿಂತಲೂ ಸ್ಫೋಟಕ ಬ್ಯಾಟಿಂಗ್ ಮಾಡಿದ ನಾಯಕ ರಜತ್ ಪಾಟಿದಾರ್ ಮುಂಬೈ ತಂಡದ ವಿಶ್ವಾಸ ಕೆಡವಿದರು. ಮೊದಲನೇ ಎಸೆತದಿಂದಲೂ ಸ್ಫೋಟಕ ಸಿಕ್ಸರ್‌ಗಳನ್ನು ಬಾರಿಸುತ್ತಾ ಬಂದ ಅವರು ಮಧ್ಯಮ ಓವರ್‌ಗಳಲ್ಲಿ ಸ್ಪಿನ್ನರ್‌ಗಳನ್ನು ದಂಡಿಸಿದರು. ಆರ್‌ಸಿಬಿ ಹಿರಿಹಿರಿ ಹಿಗ್ಗಿತು. ಅಲ್ಲಿಗೆ 38 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿದ್ದ ಕೊಹ್ಲಿ ವಿಕೆಟ್ ಒಪ್ಪಿಸಿದರು. ಪಾಟಿದಾರ್ 20 ಬಾಲ್‌ಗಳಲ್ಲಿ 53 ರನ್ ಬಾರಿಸಿ 265 ಸ್ಟ್ರೈಕ್‌ರೇಟ್ ಬ್ಯಾಟಿಂಗ್ ನಿಲ್ಲಿಸಿದರು. ಆರ್‌ಸಿಬಿ ಮಧ್ಯಮ ಓವರ್‌ಗಳಲ್ಲಿ ಬರೋಬ್ಬರಿ 123 ರನ್ ಗಳಿಸಿತು. ಡೆತ್ ಓವರ್‌ಗಳಲ್ಲಿ ಡೇವಿಡ್ ಮತ್ತೊಮ್ಮೆ ಸ್ಫೋಟಕ ಬ್ಯಾಟಿಂಗ್ ಮಾಡಿದರು. 16 ಬಾಲ್ ಮಾತ್ರದಲ್ಲಿ 34 ರನ್ ಗಳಿಸಿದ ಅವರು ಸ್ಕೋರ್ ಹಿಗ್ಗಿಸಿದರು. ಈ ಓವರ್‌ಗಳಲ್ಲಿ ಬೆಂಗಳೂರು 46 ರನ್ ಗಳಿಸಿತು.

ಆಶಾ ಭೋಸ್ಲೆ ನಿಧನಕ್ಕೆ ಸಂತಾಪ

ದಿಗ್ಗಜ ಗಾಯಕಿ ಆಶಾ ಭೋಸ್ಲೆ ಅವರ ನಿಧನಕ್ಕೆ ಐಪಿಎಲ್ ಪಂದ್ಯದ ವೇಳೆ ಸಂತಾಪ ಸಲ್ಲಿಸಲಾಯಿತು. ಮುಂಬೈನ ವಾಂಖೆಡೆ ಕ್ರೀಡಾಂಗಣದ ಬೆಂಗಳೂರು ಹಾಗೂ ಮುಂಬೈ ವಿರುದ್ಧದ ಪಂದ್ಯಕ್ಕೂ ಮುನ್ನ ಆಟಗಾರರು, ಮೈದಾನದಲ್ಲಿದ್ದ ಸಾವಿರಾರು ಅಭಿಮಾನಿಗಳು ಮೌನ ಆಚರಣೆ ಮಾಡಿ ಸಂತಾಪ ಸೂಚಿಸಿದರು.

ಆಯುಷ್‌ಗೆ ಐತಿಹಾಸಿಕ ರಜತ

• **ನಿಂಗ್ಬೋ(ಚೀನಾ):** ವಿಶ್ವದ ನಂಬರ್ 1 ಆಟಗಾರ ಕೆ. ವಿಟಿಡ್ಸರ್ನ್, ಏಳನೇ ಶ್ರೇಯಾಂಕದ ಫೆಂಗ್ ಹೀಗೆ ಬಂದ ದಿಗ್ಗಜ ಆಟಗಾರರನ್ನೆಲ್ಲಾ ಸೋಲಿಸುತ್ತಾ ಇತಿಹಾಸ ಸೃಷ್ಟಿಸುತ್ತಿದ್ದ ಭಾರತದ ಪ್ರತಿಭಾನ್ವಿತ ಆಟಗಾರ, ಕನ್ನಡಿಗ ಆಯುಷ್ ಶೆಟ್ಟಿ ಬೆಳ್ಳಿ ಪದಕಕ್ಕೆ ತೃಪ್ತರಾದರು.

ಸೆಮಿಫೈನಲ್‌ನಲ್ಲಿ ವಿಶ್ವ ಬ್ಯಾಡ್ಮಿಂಟನ್ ಅಭಿಮಾನಿಗಳಿಗೆ ನಿಬ್ಬೆರಗಾಗುವಂತೆ ಮಾಡಿದ್ದ ಅವರು, ಭಾನುವಾರ ನಡೆದ ಫೈನಲ್‌ನಲ್ಲಿ 2ನೇ ಶ್ರೇಯಾಂಕಿತ ಚೀನಾದ ಶಿ ಯುಕಿ ಅವರೊಂದಿಗೆ ಸೋತರು. ಪಂದ್ಯಾವಳಿಯುದ್ದಕ್ಕೂ ಸಂಚಲನ ಮೂಡಿಸಿದ್ದ ಆಯುಷ್ ಸೋಲಿಸಲು ಶಿ 42 ನಿಮಿಷ ತೆಗೆದುಕೊಂಡರು. ಮೊದಲಿನಿಂದಲೂ ಹಿಡಿತ ಸಾಧಿಸಿದರೂ ಗೆಲುವು ಅಷ್ಟು ಸರಳವಾಗಿ ಬಿಟ್ಟುಕೊಡಲಿಲ್ಲ.



ಆಯುಷ್ ವಿರುದ್ಧ ಚೀನಾ ಆಟಗಾರ ಶಿ ಗೆ 21-8, 21-10ರಿಂದ ಗೆಲುವು.

ಭಾನುವಾರದ ಪಂದ್ಯದ ಬಹುತೇಕ ಸಮಯದಲ್ಲಿ ಎದುರಾಳಿಯೇ ಪಾರಮ್ಯ ಸಾಧಿಸಿದರು. ಮೊದಲನೇ ಸೆಟ್‌ನಿಂದ ಹಿಡಿದು ಪಂದ್ಯ ಮುಕ್ತಾಯವಾಗುವ ಹಂತದಲ್ಲೂ ಆಯುಷ್ ಮುನ್ನಡೆ ಸಾಧಿಸಲಾಗಲಿಲ್ಲ. ನಿರಂತರ ಪ್ರಯತ್ನ ಹೊರತಾಗ್ಯೂ ಚೀನಾ ಆಟಗಾರ 21-8, 21-10ರಿಂದ ಗೆದ್ದು ಬೀಗಿದರು. ಮೊದಲನೇ ಸೆಟ್‌ನಲ್ಲಿ ಆರಂಭಿಕ ಮುನ್ನಡೆ ಸಾಧಿಸಿದ ಶಿ ಶೆಟ್ಟಿ ಮೇಲೆ ಸರ್ವ್‌ಗಳ ಮೂಲಕ ಒತ್ತಡ ಹಾಕಿದರು. 6 ಅಂಕಗಳ ಮುನ್ನಡೆಯ ನಂತರ ಆಯುಷ್ ಕಂಬ್ಯಾಕ್ ಸೂಚನೆ ಕೊಟ್ಟರೂ ಎದುರಾಳಿ ತಮ್ಮ ಮುನ್ನಡೆ ವಿಸ್ತರಿಸುತ್ತಾ ಸೆಟ್ ಅನ್ನು 21-8ರಿಂದ ಗೆದ್ದುಕೊಂಡರು. ಮುನ್ನಡೆಯೊಂದಿಗೆ ಎರಡನೇ ಸೆಟ್‌ಗೆ ಕಾಲಿಟ್ಟ ಅವರು, ಅಲ್ಲೂ ಆರಂಭಿಕ ಪ್ರಾಬಲ್ಯ ಸಾಧಿಸಿದರು. ಶೆಟ್ಟಿ ಈ ಬಾರಿ ಕಠಿಣ ಪ್ರಯತ್ನ ಪಟ್ಟರು. ಆದರೆ ಎದುರಾಳಿ 10 ಅಂಕಗಳ ಮುನ್ನಡೆ ಸಾಧಿಸಿದರು. ಸ್ಮ್ಯಾಷ್, ಸರ್ವ್ ಹಾಗೂ ಡ್ರಾಪ್‌ಗಳ ಮೂಲಕ ಕ್ರಮೇಣವಾಗಿ ಪಂದ್ಯ ಜಯಸುತ್ತಾ ಬಂದರು ಶಿ. ಆಯುಷ್ 10 ಅಂಕ ಗಳಿಸುವಷ್ಟರಲ್ಲಿ ಎದುರಾಳಿ ಪಂದ್ಯ ಗೆದ್ದು ಚಾಂಪಿಯನ್ ಪಟ್ಟಕ್ಕೇರಿದರು.

ಆಯುಷ್ ದಾಖಲೆ: 25ನೇ ಶ್ರೇಯಾಂಕದ ಆಯುಷ್ ಈ ಗೆಲುವಿನೊಂದಿಗೆ ದಾಖಲೆ ಮಾಡಿದ್ದಾರೆ. ಏಷ್ಯನ್ ಚಾಂಪಿಯನ್‌ಶಿಪ್ ಕೂಟದುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿರುವ ಅವರು, ಕೂಟದಲ್ಲಿ ಸಿಂಗಲ್ಸ್ ಪದಕ ಗೆದ್ದ ಏಳನೇ ಭಾರತೀಯ ಅನ್ನಿಸಿಕೊಂಡರು. ಇದಕ್ಕೂ ಮುನ್ನ ದಿನೇಶ್‌ಖನ್ನಾ, ಸುರೇಶ್ ಗೋಯಲ್, ಪ್ರಕಾಶ್ ಪಡುಕೋಣೆ, ಪುಲ್ಲೆಲಾ ಗೋಪಿಚಂದ, ಅನುಪ್ ಶ್ರೀಧರ ಹಾಗೂ ಪ್ರಣೊಯ್ ಈ ದಾಖಲೆ ಮಾಡಿದ್ದಾರೆ.

ಏಷ್ಯನ್ ಕುಸ್ತಿ: ಭಾರತಕ್ಕೆ ಹಲವು ಪದಕ

• **ಹೊಸದಿಲ್ಲಿ:** ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಅಮನ್ ಸೆಹ್ರಾವತ್ (61 ಕೆಜಿ) ಮತ್ತು ಮುಕುಲ್ ದಹಿಯಾ (86 ಕೆಜಿ) ಬೆಳ್ಳಿ ಪದಕಗಳನ್ನು ಗೆದ್ದರೆ, ಭಾನುವಾರ ಕಿರ್ಗಿಸ್ತಾನ್‌ನ ಬಿಷ್ಕೆಕ್‌ನ ಚಾಂಪಿಯನ್‌ಶಿಪ್‌ನಲ್ಲಿ ದಿನೇಶ್ (125 ಕೆಜಿ) ಕಂಚಿನ ಪದಕವನ್ನು ಗೆದ್ದರು. ತನ್ನ ನಿಯಮಿತ 57 ಕೆಜಿಯಿಂದ 61 ಕೆಜಿಗೆ ಜಿಗಿದ ಅಮನ್ ಅವರನ್ನು ಉತ್ತರ ಕೊರಿಯಾದ ಯುವ ಕಿಮ್ ಕ್ವಾಂಗ್ ಮ್ಯೊಂಗ್ 13-10 ಅಂತರದಿಂದ ಸೋಲಿಸಿದರೆ, ಮುಕುಲ್ ಅವರನ್ನು ಆಯಾ ಫೈನಲ್‌ಗಳಲ್ಲಿ ಇರಾನಿನ ಕಮ್ರಾನ್ ಘಾಸೆಂಪೂರ್ ಸೋಲಿಸಿದರು. ಕಂಚಿನ ಪದಕ ಸ್ಪರ್ಧೆಯಲ್ಲಿ ದಿನೇಶ್ ತವರಿನ ನೆಚ್ಚಿನ ಅಸ್ಲಾನ್‌ಬೆಕ್ ತುರ್ದುಬೆಕೊವ್ ಅವರನ್ನು 12-1 ಅಂತರದಿಂದ ಸೋಲಿಸಿದರು. ಇದರೊಂದಿಗೆ ಭಾರತ ಎರಡು ಚಿನ್ನ, ಮೂರು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳೊಂದಿಗೆ, ಭಾರತವು ಫ್ರೀಸ್ಟೈಲ್‌ನಲ್ಲಿ ಎರಡನೇ ಸ್ಥಾನ ಗಳಿಸಿತು.

ಏಷ್ಯಾ ಕಿರಿಯರ ಟೆನಿಸ್: ಭಾರತ ರನ್ನರ್-ಅಪ್

• **ಬೆಂಗಳೂರು:** ಕನ್ನಡಿಗರಾದ ಸೃಷ್ಟಿ ಕಿರಣ್, ಪುನೀತ್ ಮನೋಹರ್ ಮತ್ತು ಪದ್ಮಪ್ರಿಯಾ ರಾಮೇಶ್ ಕುಮಾರ್ ಅವರ ಅಮೋಘ ಪ್ರದರ್ಶನಕ್ಕೆ ಪಂಜಾಬ್‌ನ ತಾನಿಷ್ ನಂದಾ ಅವರ ಸಾಥ್ ಸಿಕ್ಕ ನಂತರ ಶ್ರೀಲಂಕಾದ ಕೊಲಂಬೊದಲ್ಲಿ ನಡೆದ ಐಟಿಎಫ್ ಏಷ್ಯಾ ಅಂಡರ್-14 ಡೆವಲಪ್‌ಮೆಂಟ್ ಚಾಂಪಿಯನ್‌ಶಿಪ್‌ನಲ್ಲಿ ಭಾರತ ರನ್ನರ್‌ಅಪ್ ಸ್ಥಾನ ಪಡೆಯಿತು.

14 ರಾಷ್ಟ್ರಗಳು ಭಾಗವಹಿಸಿದ್ದ ಟೂರ್ನಿಯಲ್ಲಿ, ಮೊದಲಿಗೆ ಅಗ್ರಸ್ಥಾನ ಪಡೆದಿದ್ದ ಭಾರತ ಗೆಲುವಿನ ನಿರೀಕ್ಷೆಯಲ್ಲಿತ್ತು. ಆದರೆ ಅಂತಿಮವಾಗಿ ತೈವಾನ್ ಭಾರತವನ್ನು ಹಿಂದಿಕ್ಕಿತು. ಎರಡನೇ ಸ್ಥಾನ ಪಡೆಯಿತು.

ಕನ್ನಡಿಗರ ಅಬ್ಬರ: ಪುನೀತ್ ಮನೋಹರ್ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಮೊದಲ ವಾರದ ಚಾಂಪಿಯನ್ ಆಗಿ ಹೊರಹೊಮ್ಮಿದರು. ಹಾಂಗ್ ಕಾಂಗ್‌ನ ಹಿಮ್ ವಾಂಗ್ ವಿರುದ್ಧ 2-6, 7-5, 6-2 ಅಂತರದಲ್ಲಿ ಹಿನ್ನಡೆಯಿಂದ ಮರಳಿ ಗೆದ್ದು ಪ್ರಶಸ್ತಿ ತಮ್ಮದಾಗಿಸಿಕೊಂಡರು. ನಂತರ ಎರಡನೇ ವೀಕ್‌ನ ಡಬಲ್ಸ್‌ನಲ್ಲಿ ರನ್ನರ್‌ಅಪ್ ಸ್ಥಾನ ಪಡೆದರು. ಮಹಿಳಾ ವಿಭಾಗದಲ್ಲಿ ಸೃಷ್ಟಿ ಕಿರಣ್ ಎರಡು ವಾರಗಳಲ್ಲೂ ಸಿಂಗಲ್ಸ್ ಫೈನಲ್ ತಲುಪಿ ನಿರಂತರ ಪ್ರದರ್ಶನ ನೀಡಿದರು. ಅವರು ಮೊದಲ ವಾರದ ಫೈನಲ್‌ನಲ್ಲಿ ತೈವಾನ್‌ನ ಕೆ ಚಿಯೆ ಹ್ಸು ವಿರುದ್ಧ ಸೋತು ರನ್ನರ್ ಅಪ್ ಸ್ಥಾನ ಪಡೆದರು. ಜೊತೆಗೆ ಕೂಟದ ಮೊದಲ ವೀಕ್‌ನ ಡಬಲ್ಸ್‌ನಲ್ಲಿ ಕೂಡ ರನ್ನರ್‌ಅಪ್ ಆಗಿದರು. ಪದ್ಮಪ್ರಿಯಾ ರಾಮೇಶ್ ಕುಮಾರ್ ಅವರು ಸೃಷ್ಟಿಯ ಜೊತೆಗೂಡಿ ಡಬಲ್ಸ್‌ನಲ್ಲಿ ರನ್ನರ್‌ಅಪ್ ಆಗಿ ಸಾಧನೆ ಮಾಡಿದರು. ತಾನಿಷ್ ನಂದಾ ಎರಡನೇ ವಾರದ ಬಾಲಕರ ಡಬಲ್ಸ್‌ನಲ್ಲಿ ರನ್ನರ್‌ಅಪ್ ಆಗಿದ್ದಾರೆ.



ಅಂತಾರಾಷ್ಟ್ರೀಯ ಟೂರ್ನಿಗಳಿಗೆ ಆಯ್ಕೆ


ಈ ಸಾಧನೆಯ ಆಧಾರದಲ್ಲಿ ಕರ್ನಾಟಕದ ಈ ಮೂವರು ಆಟಗಾರರು ಯುರೋಪ್ ಅಂಡರ್-14 ಡೆವಲಪ್‌ಮೆಂಟ್ ತಂಡಕ್ಕೆ ಆಯ್ಕೆಯಾಗಿದ್ದು, ಜೊತೆಗೆ ಸೃಷ್ಟಿ ಕಿರಣ್ ಮತ್ತು ಪುನೀತ್ ಮನೋಹರ್ 2026ರ ವಿಂಬಲ್ಡನ್ ಅಂಡರ್-14 ಚಾಂಪಿಯನ್‌ಶಿಪ್‌ಗೆ ಅರ್ಹತೆ ಪಡೆದಿದ್ದಾರೆ.

- ಪಂದ್ಯಾವಳಿಯಲ್ಲಿ ಕನ್ನಡಿಗರ ಅಮೋಘ ಸಾಧನೆ
- ಗಮನ ಸೆಳೆದ ಸೃಷ್ಟಿ, ಪುನೀತ್, ಪದ್ಮಪ್ರಿಯಾ
- ಯುರೋಪ್ ಚಾಂಪಿಯನ್‌ಶಿಪ್‌ಗೆ ಮೂವರ ಆಯ್ಕೆ
- ವಿಂಬಲ್ಡನ್‌ಗೂ ಸೃಷ್ಟಿ, ಪುನೀತ್ ಅರ್ಹ
- ಮಿಂಚಿದ ಪಂಜಾಬ್‌ನ ತಾನಿಷ್

ಪದಬಂಧ

ರಾಜಾ ಸಂಗಮೇಶ ಹಿರೇಮಠ

5952



ಎಡದಿಂದ ಬಲಕ್ಕೆ
1. ಶಿವನು ಇಲ್ಲಿ ನೆಲೆಸಿದ್ದರಿಂದ ಬಂದ ಹೆಸರು (5)
3. ಮೂಗು, ಮಹಾರಾಷ್ಟ್ರದ ಒಂದು ನಗರ (3)
5. ಕೆಂಪೇಗೌಡರ ಆಡಳಿತದ ಪ್ರಮುಖ ಕೇಂದ್ರ (3)
6. ಹರೆಯ ಬರುವ ವಯಸ್ಸು ತಿರುಗಿದೆ (4)
9. ಕೇಳಿದರೆ ಸರಣಿಯಲ್ಲಿರುವೆನೆಂದ ಹೆಣ್ಣು ಸಿಂಹ (4)
10. ಮಾಂತ್ರಿಕ-ಇಂದ್ರಜಾಲ ಪ್ರದರ್ಶಕ (4)
12. ಬಂದಿರುವ ಕೆಟ್ಟ ಸಮಯ (4)
14. ಮಂದಿಯ ನಾಯಕನಾಗಿ ಅರಸ (3)
16. ನೈಜವಲ್ಲದ್ದು-ಕೃತಕ ಪ್ರತಿ (3)
17. ಪ್ರಕಾಶಿಸು-ಹೊಳೆಯುವಿಕೆ (5)

ಮೇಲಿನಿಂದ ಕೆಳಕ್ಕೆ
1. ಮಾರ್ಗದರ್ಶನ ಮಾಡು ಎಂಬರ್ಥದ ನುಡಿಗಟ್ಟು (3)
2. ತಿಂಗಳು ತಲೆಕೆಳಗಾಗಿದೆ (2)
3. ನಾಗದ ನಡುವೆ ಧರ್ಮಾಧಿಕಾರಿಯಿದ್ದಾನೆ (3)
4. ಸುಗಂಧದ್ರವ್ಯ ಕೊಡುತ್ತದೆಯೆನ್ನುವ ಜಿಂಕೆಯ ಪ್ರಭೇಧ (5)
7. ಹಸುವಿನ ನಡುವೆ ಹೊಂಚುಹಾಕುವಿಕೆಯಿದೆ (4)
8. ಉತ್ಪಾದನೋದ್ಯಮ ಕಡೆಯಲ್ಲಿ ದೀರ್ಘವಾಗಿದೆ (4)
9. ತಲೆಗೂದಲನ್ನು ಕತ್ತರಿಸುವಿಕೆ-ಚೌಲಕ್ರಿಯೆ (5)
11. ಮಜವಾಗಿ ಏರಿದ ಹಂತಗಳು (3)
13. ಆನಂದಭಾಷ್ಪವಿಲ್ಲಿ ಉಲ್ಟಾ ಬೀಳುತ್ತಿದೆ (3)
15. ಸಂಸ್ಥ ತದಲ್ಲಿ ಸಾಗುತ್ತಿರುವ ದಾರಿ (2)

5951 ಉತ್ತರ

ಎಡದಿಂದ ಬಲಕ್ಕೆ: 2.ಚರಣದಾಸ 4.ವರದಿಗಾರ 7.ತಲ 9.ನಾಗರಿಕತೆ 11.ಬೆಂಕಿಪೊಟ್ಟಣ 14.ಮಗು 17.ಕ್ಷಾಮ ಡಾಮರ 18.ನವನಾಗರ

ಮೇಲಿನಿಂದ ಕೆಳಕ್ಕೆ: 1.ನವನೀತ 2.ಚರ 3.ಸತೀಶ 5.ಗಾಯನಾ 6.ಸಂಕ 8.ಬೆಂಬಲ 10.ತೆಲುಗು 12.ಕಿಚ್ಚು 13.ಮರಣ 15.ಮನೋರಥ 16.ವಿಮಾನ 17.ಕ್ಷಾರ

ಏಳು ಮಹಿಳಾ ಪೊಲೀಸರಿಂದ ರಹಸ್ಯ ಕಾರ್ಯಾಚರಣೆ | ಮಹಿಳೆಯರೊಂದಿಗೆ ಆರೋಪಿಗಳ ಅನುಚಿತ ವರ್ತನೆ

ನಾಸಿಕ್‌ನಲ್ಲಿ ಮತಾಂತರ, ಲೈಂಗಿಕ ಕಿರುಕುಳ ಸಂಚು

• **ನಾಸಿಕ್:** ಇಲ್ಲಿನ ಒಂದು ಮಲ್ಟಿ-ನ್ಯಾಷನಲ್ ಕಂಪನಿಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ಮಹಿಳಾ ಉದ್ಯೋಗಿಗಳಿಗೆ ಲೈಂಗಿಕ ಕಿರುಕುಳ ನೀಡಲಾಗುತ್ತಿದ್ದ ಆರೋಪದ ಕೇಸ್‌ನಲ್ಲಿ 7 ಮಹಿಳಾ ಪೊಲೀಸ್ ಅಧಿಕಾರಿಗಳು ಸಿಬ್ಬಂದಿಯ ವೇಷದಲ್ಲಿ ಕಂಪನಿಗೆ ತೆರಳಿ ದೊಡ್ಡ ಮತಾಂತರ, ಲೈಂಗಿಕ ಹಗರಣದ ಸಂಚನ್ನು ಬಯಲು ಮಾಡಿದ್ದಾರೆ.

ಮುಖ್ಯ ಆರೋಪಿಯು ಹಲವಾರು ಮಹಿಳೆಯರೊಂದಿಗೆ ಅನುಚಿತ ವರ್ತನೆ ಮಾಡುತ್ತಿರುವುದನ್ನು ಕಣ್ಣಾರೆ ಕಂಡಿರುವ ಈ ಮಹಿಳಾ ಪೊಲೀಸರು, ಕೆಲವರ ಬಂಧನಕ್ಕೂ ಕಾರಣವಾಗಿದ್ದಾರೆ.

ಕಂಪನಿಯೊಳಗೆ ನಡೆಯುತ್ತಿದ್ದ ಒಂದು ಮೀಟಿಂಗ್‌ಗೆ ಈ ಮಹಿಳಾ ಪೊಲೀಸರು ಪ್ರವೇಶಿಸಿದಾಗ ಆರೋಪಿಯೊಬ್ಬ ಮಹಿಳೆಯರೊಂದಿಗೆ ಅನುಚಿತವಾಗಿ ವರ್ತಿಸುತ್ತಿರುವುದನ್ನು ರೆಡ್‌ಹ್ಯಾಂಡೆಡ್ ಆಗಿ ಹಿಡಿದಿದ್ದಾರೆ. ಪೊಲೀಸರು ಈಗ 40ಕ್ಕೂ ಹೆಚ್ಚು ಸಿಸಿಟಿವಿ ಫುಟೇಜ್‌ಗಳನ್ನು ಪರಿಶೀಲಿಸುತ್ತಿದ್ದಾರೆ. ಇದರಿಂದ ಆರೋಪಿಗಳ ವಿರುದ್ಧ ದೃಢ ಪುರಾವೆಗಳನ್ನು ಸಂಗ್ರಹಿಸುತ್ತಿದ್ದಾರೆ. ಸದ್ಯ ಎಸ್‌ಐಟಿ ರಚಿಸಲಾಗಿದ್ದು, ಇಡೀ ಪ್ರಕರಣದ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸುತ್ತಿದೆ. ಈ ಕೇಸ್‌ನಲ್ಲಿ ಲೈಂಗಿಕ ಕಿರುಕುಳ, ಧಾರ್ಮಿಕ ಭಾವನೆಗಳನ್ನು ಗಾಯಗೊಳಿಸುವ ಆರೋಪಗಳೊಂದಿಗೆ ಆರು ಜನರ ವಿರುದ್ಧ ಒಟ್ಟು 9 ಕೇಸ್‌ಗಳು ದಾಖಲಾಗಿವೆ. ಇದರಲ್ಲಿ ಟೀಮ್ ಲೀಡರ್ ಮತ್ತು ಎಚ್‌ಆರ್ ಪ್ರತಿನಿಧಿಯೂ ಸೇರಿದ್ದಾರೆ. ದೂರುದಾರ ಮಹಿಳೆಯರು ಸಾಮಾನ್ಯವಾಗಿ 18 ರಿಂದ 25 ವಯಸ್ಸಿನವರಾಗಿದ್ದಾರೆ.

ಕೇಸ್‌ಗಳು: ಕೇಸ್ 1 (ಜುಲೈ 2022 – ಫೆಬ್ರುವರಿ 2026):

ಆರೋಪಿಗಳು ಡ್ಯಾನಿಶ್ ಶೇಖ್, ತೌಸಿಫ್ ಅಟ್ಟಾರ್ ಮತ್ತು ನಿದಾ ಖಾನ್. ಇವರು ಒಬ್ಬ ಮಹಿಳಾ ಉದ್ಯೋಗಿಯ ಧಾರ್ಮಿಕ ಭಾವನೆಗಳನ್ನು ಘಾಸಿಗೊಳಿಸಿದ್ದಾರೆ. ಹಿಂದೂ ದೇವತೆಗಳ ಬಗ್ಗೆ ಅವಮಾನಕರ ಟೀಕೆಗಳನ್ನು ಮಾಡಿದ್ದಾರೆ. ತೌಸಿಫ್ ಅಟ್ಟಾರ್ ವಿವಾಹದ ಮುಸುಕಿನಲ್ಲಿ ಆಕೆಯೊಂದಿಗೆ ದೈಹಿಕ ಸಂಬಂಧ ಹೊಂದಿದ್ದಾನೆ. ಡ್ಯಾನಿಶ್ ಶೇಖ್ ಆಫೀಸ್ ಲಾಬಿಯಲ್ಲಿ ಅಶ್ಲೀಲ ಕ್ರಿಯೆಗಳಲ್ಲಿ ತೊಡಗಿ ಆಕೆಯ ಮಾನಭಂಗ ಮಾಡಲು ಪ್ರಯತ್ನಿಸಿದ್ದಾನೆ.

ಕೇಸ್ 2 (ಮೇ 2023 - ಮಾರ್ಚ್ 19, 2026): ಆರೋಪಿಗಳು ರಝಾ ಮೆಮನ್ ಮತ್ತು ಶಹರುಖ್ ಕುರೇಶಿ. ಒಬ್ಬ ಮಹಿಳಾ ಉದ್ಯೋಗಿಯನ್ನು ನೋಡಿ ನೋಡಿ ಮಾತನಾಡುವುದು, ಅನುಚಿತವಾಗಿ ಸ್ಪರ್ಶಿಸುವುದು ಮತ್ತು ಆಕೆಯ ಖಾಸಗಿ ವೈವಾಹಿಕ ಜೀವನದ ಬಗ್ಗೆ ಅವಮಾನಕರ ಟೀಕೆಗಳನ್ನು ಮಾಡಿದ್ದಾರೆ. ಆಕೆ ಔಪಚಾರಿಕ ದೂರು ನೀಡಿದ್ದರೂ ಕಂಪನಿಯ ಹೆಡ್ ಆಫೀಸರ್ ಯಾವುದೇ ಕ್ರಮ ಕೈಗೊಳ್ಳದೆ ಆರೋಪಿಗಳಿಗೆ ಪ್ರೋತ್ಸಾಹ ನೀಡಿದ್ದಾರೆ ಎಂಬ ಆರೋಪವಿದೆ.

ಕೇಸ್ 3 (2022 - ಫೆಬ್ರವರಿ 2026): ಆರೋಪಿ ಶಫಿ ಶೇಖ್. ಒಬ್ಬ ಮಹಿಳಾ ಉದ್ಯೋಗಿಯನ್ನು ಅಶ್ಲೀಲವಾಗಿ ನೋಡುವುದು ಮತ್ತು ಮೀಟಿಂಗ್‌ಗಳಲ್ಲಿ ಆಕೆಯನ್ನು ಹಾಸ್ಯ ಮಾಡುವುದು. ತೌಸಿಫ್ ಆಕೆಯ ವೈವಾಹಿಕ ಜೀವನದಲ್ಲಿ ಮಕ್ಕಳು ಇಲ್ಲ ಎಂದು ಅವಮಾನಕರ ಮಾತುಗಳನ್ನಾಡಿ, ದೈಹಿಕ ಸಂಪರ್ಕ ಸ್ಥಾಪಿಸಲು ಪ್ರಯತ್ನಿಸಿ ಅವಮಾನಿಸಿದ್ದಾನೆ.

ಕೇಸ್ 4 (ಮೇ 4, 2025 - ಡಿಸೆಂಬರ್ 2025): ಆರೋಪಿ ತೌಸಿಫ್ ಅಟ್ಟಾರ್. ಒಬ್ಬ ಮಹಿಳಾ ಉದ್ಯೋಗಿಯ ಖಾಸಗಿ ಜೀವನದ ಬಗ್ಗೆ ಅಶ್ಲೀಲ ಪ್ರಶ್ನೆಗಳನ್ನು ಕೇಳಿ ಅನುಚಿತ ಸನ್ನೆಗಳನ್ನು ಮಾಡಿದ್ದಾನೆ. ಆಫೀಸ್‌ನಲ್ಲಿ ಇತರ ಹಿಂದೂ ಮಹಿಳಾ ಉದ್ಯೋಗಿಗಳ ಮುಂದೆ ಹಿಂದೂ ದೇವತೆಗಳ ಬಗ್ಗೆ ಅವಮಾನಕರ ಟೀಕೆಗಳನ್ನು ಮಾಡಿದ್ದಾನೆ.

ಕೇಸ್ 5 (2022 - ಮಾರ್ಚ್ 23, 2026): ಆರೋಪಿಗಳು ತೌಸಿಫ್ ಅಟ್ಟಾರ್, ಡ್ಯಾನಿಶ್, ಶಹರುಖ್ ಶೇಖ್ ಮತ್ತು ರಝಾ ಮೆಮನ್. ಒಬ್ಬ ಮಹಿಳಾ ಉದ್ಯೋಗಿಯ ಧರ್ಮವನ್ನು ಅವಮಾನಿಸಿ, ಆಕೆಯನ್ನು ಬಲವಂತವಾಗಿ ನಮಾಜ್ ಮಾಡಿಸಲು ಒತ್ತಾಯಿಸಿದ್ದಾರೆ. ಧಾರ್ಮಿಕ ಪರಿವರ್ತನೆಗೆ ಒತ್ತಾಯಿಸಿ ಆಕೆಯ ಇಚ್ಛೆಗೆ ವಿರುದ್ಧವಾಗಿ ಮಾಂಸಾಹಾರ ತಿನ್ನಿಸಿದ್ದಾರೆ. ಒಂದು ನಿರ್ದಿಷ್ಟ ಧರ್ಮದ ಮಹಿಳೆಯರ ವಿರುದ್ಧ ಅಶ್ಲೀಲ ಭಾಷೆ ಬಳಸಿದ್ದಾರೆ.

ಕೇಸ್ 6 (ಸೆಪ್ಟೆಂಬರ್ 6, 2024 - ಫೆಬ್ರವರಿ 2026): ಆರೋಪಿಗಳು ಆಸಿಫ್ ಅನ್ಸಾರಿ ಮತ್ತು ಶಫಿ ಶೇಖ್. ಒಬ್ಬ ಮಹಿಳಾ ಉದ್ಯೋಗಿಯ ದೇಹದ ಬಗ್ಗೆ ಅಶ್ಲೀಲ ಟೀಕೆಗಳನ್ನು ಮಾಡಿ ಅನುಚಿತವಾಗಿ ಸ್ಪರ್ಶಿಸಿದ್ದಾರೆ. ಇದೇ ಕೇಸ್‌ನಲ್ಲಿ ತೌಸಿಫ್ ಅಟ್ಟಾರ್ ಆಕೆಯ ಧರ್ಮದ ದೇವತೆಗಳ ಬಗ್ಗೆ ಅವಮಾನಕರ ಭಾಷೆ ಬಳಸಿದ್ದಾನೆ.

ಕೇಸ್ 7 (2025 - ಮಾರ್ಚ್ 2026): ಆರೋಪಿಗಳು ಆಸಿಫ್ ಅನ್ಸಾರಿ, ಶಹರುಖ್ ಕುರೇಶಿ, ರಝಾ ಮೆಮನ್, ತೌಸಿಫ್ ಅಟ್ಟಾರ್ ಮತ್ತು ಶಫಿ ಶೇಖ್. ಒಬ್ಬ ಮಹಿಳಾ ಉದ್ಯೋಗಿಯನ್ನು ಸ್ಟಾಕಿಂಗ್ ಮಾಡಿ ಅಶ್ಲೀಲ ಟೀಕೆಗಳನ್ನು ಮಾಡಿ ಅನುಚಿತವಾಗಿ ಸ್ಪರ್ಶಿಸಿದ್ದಾರೆ. ಒಟ್ಟಾಗಿ ಸೇರಿ ಆಕೆಯ ಧರ್ಮದ ವಿರುದ್ಧ ಕೆಟ್ಟ ಶಬ್ದಗಳನ್ನು ಬಳಸಿ ವಾತಾವರಣವನ್ನು ಕಲುಷಿತಗೊಳಿಸಲು ಪ್ರಯತ್ನಿಸಿದ್ದಾರೆ.

ಕೇಸ್ 8 (ಜನವರಿ 2025 - ಪ್ರಸ್ತುತ): ಆರೋಪಿಗಳು ರಝಾ ಮೆಮನ್ ಮತ್ತು ಶಫಿ ಶೇಖ್. ಒಬ್ಬ ಮಹಿಳಾ ಉದ್ಯೋಗಿಯೊಂದಿಗೆ ಆಕೆಯ ಇಚ್ಛೆ ವಿರುದ್ಧ ದೈಹಿಕ ಸಂಪರ್ಕ ಸ್ಥಾಪಿಸಲು ಪ್ರಯತ್ನಿಸಿದ್ದಾರೆ. ಶಫಿ ಆಕೆಗೆ ಬಲವಂತವಾಗಿ ಪ್ರಪೋಸ್ ಮಾಡಿದ್ದಾನೆ. ರಝಾ ಮೆಮನ್ ಆಕೆಯ ದೇಹದ ಬಗ್ಗೆ ಅಶ್ಲೀಲ ಟೀಕೆಗಳನ್ನು ಮಾಡಿ ಸ್ಪರ್ಶಿಸಲು ಪ್ರಯತ್ನಿಸಿದ್ದಾನೆ.

ಪೊಲೀಸ್ ಕಾರ್ಯಾಚರಣೆ

ಸೋಮವಾರ ಐದು ಆರೋಪಿಗಳನ್ನು ಅರೆಸ್ಟ್ ಮಾಡಿ ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಅವರನ್ನು ಏಪ್ರಿಲ್ 10ರವರೆಗೆ ಪೊಲೀಸ್ ಕಸ್ಟಡಿಗೆ ಕಳುಹಿಸಲಾಗಿದೆ. ಒಬ್ಬ ಆರೋಪಿ ನ್ಯಾಯಾಂಗ ವಶದಲ್ಲಿದ್ದಾನೆ. ಏಳನೇ ಆರೋಪಿ ಎಚ್‌ಆರ್ ಇಲಾಖೆಯ ಮಹಿಳೆಯಾಗಿದ್ದು, ಲೈಂಗಿಕ ಕಿರುಕುಳ ತಡೆಗಟ್ಟುವ ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳದಿದ್ದ ಆರೋಪವಿದೆ. ಪೊಲೀಸ್ ಅಧಿಕಾರಿಗಳ ಪ್ರಕಾರ, "ದೂರುದಾರರು ಈ ಘಟನೆಗಳ ಬಗ್ಗೆ ಮೌಖಿಕವಾಗಿ ಹಲವು ಬಾರಿ ದೂರು ನೀಡಿದ್ದರೂ ಕಂಪನಿಯ ಹೆಡ್ ಆಫೀಸರ್ ಅದನ್ನು ಗಮನಿಸದೆ ಆರೋಪಿಗಳ ಕ್ರಿಯೆಗಳಿಗೆ ಸಹಾಯ ಮಾಡಿದ್ದಾರೆ." ಇನ್ನೂ ಹೆಚ್ಚು ಮಹಿಳೆಯರು ಕಿರುಕುಳಕ್ಕೊಳಗಾಗಿದ್ದಾರೆ ಎಂದು ತಿಳಿದಿದ್ದಲ್ಲಿ ತಮ್ಮನ್ನು ಸಂಪರ್ಕಿಸುವಂತೆ ಮನವಿ ಮಾಡಿದ್ದಾರೆ.

ಕೇಸ್ 9 (ಜನವರಿ 2026 - ಏಪ್ರಿಲ್ 1, 2026): ಆರೋಪಿಗಳು ರಝಾ ಮೆಮನ್ ಮತ್ತು ಶಹರುಖ್ ಕುರೇಶಿ. ಒಬ್ಬ ಮಹಿಳಾ ಉದ್ಯೋಗಿಯೊಂದಿಗೆ ಅಶ್ಲೀಲ ಸಂಭಾಷಣೆ ನಡೆಸಿ ಅನುಚಿತ ಕ್ರಿಯೆಗಳಲ್ಲಿ ತೊಡಗಿದ್ದಾರೆ. ಆಕೆ ನಿರಾಕರಿಸಿದರೂ ಖಾಸಗಿ ಜೀವನಕ್ಕೆ ಮುನ್ನುಗ್ಗಿ, ನಿಗಾ ಇಟ್ಟು ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿದ್ದಾರೆ. ಆಕೆಯ ದೇಹದ ಬಗ್ಗೆ ಅಶ್ಲೀಲ ಟೀಕೆಗಳನ್ನು ಮಾಡಿದ್ದಾರೆ.

ಹೆಚ್ಚುತ್ತಿದೆ ಸೈಬರ್ ವಂಚನೆ ಪ್ರಕರಣ | 3 ತಿಂಗಳಲ್ಲಿ 24 ಪ್ರಕರಣ

ಹುಷಾರು, ನಿಮ್ಮ ಮೊಬೈಲ್‌ಗೂ ಬಂದೀತು ಇಂತಹಾ ಕರೆ, ಮೆಸೇಜ್



ಮಂಗಳೂರು: ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಸೈಬರ್ ವಂಚನೆ ಪ್ರಕರಣಗಳಿಂದ ಜನತೆ ತತ್ತರಿಸಿ ಹೋಗಿದ್ದಾರೆ. ಒಂದಲ್ಲಾ ಒಂದು ಪ್ರಕರಣಗಳು ನಿತ್ಯ ನಡೆಯುತ್ತಲೇ ಇದ್ದು, ಸೈಬರ್ ವಂಚಕರು ಜನತೆಯ ಹಣವನ್ನು ಲೂಟಿ ಮಾಡುತ್ತಿದ್ದಾರೆ.

ಸೈಬರ್ ವಂಚನೆಗೆ ಸಿಲುಕದಂತೆ ಪೊಲೀಸ್ ಇಲಾಖೆ ಎಷ್ಟೇ ಜಾಗೃತಿ ಮೂಡಿಸಿದರೂ ವಂಚನೆಗೊಳಗಾಗುವ ಪ್ರಕರಣಗಳು ಮಾತ್ರ ಕಡಿಮೆಯಾಗಿಲ್ಲ. ಶ್ರೀಮಂತರು ಮಾತ್ರವಲ್ಲದೆ ಜನಸಾಮಾನ್ಯರ ಬ್ಯಾಂಕ್ ಖಾತೆಗೂ ಕನ್ನ ಬೀಳುತ್ತಿದೆ! ನಕಲಿ ಫೋನ್ ಕರೆ, ಮೊಬೈಲ್ ಸಂದೇಶಗಳನ್ನು ನಂಬುವ ಮಂದಿ ಲಿಂಕ್ ಒತ್ತಿ ಮೋಸದ ಜಾಲದಲ್ಲಿ ಸಿಲುಕಿಕೊಳ್ಳುತ್ತಿದ್ದಾರೆ. ಬಹುತೇಕ ಮಂದಿ ಮರ್ಯಾದೆಗೆ ಅಂಜಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಕೂಡ ಹಿಂಜರಿಯುತ್ತಿದ್ದಾರೆ. ಕೆಲವೇ ಕೆಲವು ಮಂದಿಯಷ್ಟೇ ಮೋಸ ಹೋಗಿರುವ ಕುರಿತು ದೂರು ದಾಖಲಿಸುತ್ತಿದ್ದಾರೆ.

ಮಂಗಳೂರಿನಲ್ಲಿ 3 ತಿಂಗಳಲ್ಲಿ 24 ಪ್ರಕರಣ

ಮಂಗಳೂರು ನಗರವೊಂದರಲ್ಲಿಯೇ ಕಳೆದ ಮೂರು ತಿಂಗಳಲ್ಲಿ 24 ವಂಚನೆ ಪ್ರಕರಣಗಳು ದಾಖಲಾಗಿವೆ. ದಾಖಲಾಗಿರುವ ಪ್ರಕರಣಗಳಲ್ಲಿ ಒಟ್ಟು 6,37,01,987 ರೂ. ವಂಚನೆ ಮಾಡಲಾಗಿದೆ. ಮೋಸ ಹೋಗುತ್ತಿದ್ದುದು ಗೊತ್ತಾಗುತ್ತಿದ್ದಂತೆ ಕೆಲವು ಮಂದಿ ತಕ್ಷಣ ಪೊಲೀಸರಿಗೆ ದೂರು ನೀಡಿದ ಹಿನ್ನೆಲೆಯಲ್ಲಿ ಬಚಾವಾಗಿದ್ದಾರೆ.ಗೋಲ್ಡನ್ ಅವರ್‌ನಲ್ಲಿ ದೂರು ನೀಡಿದ ಹಿನ್ನೆಲೆಯಲ್ಲಿ ವಂಚಕರ ಖಾತೆಗೆ ವರ್ಗಾವಣೆಯಾಗುತ್ತಿದ್ದ 1,04,46,643 ರೂ.ಗಳನ್ನು ಪೊಲೀಸರು ತಡೆ ಹಿಡಿದಿದ್ದಾರೆ.

ಹೂಡಿಕೆ ಪ್ರಕರಣಗಳೇ ಅಧಿಕ

ದಾಖಲಾದ ಪ್ರಕರಣಗಳ ಪೈಕಿ ಹೆಚ್ಚಿನ ಪ್ರಕರಣಗಳು ಹಣ ಹೂಡಿಕೆಗೆ ಸಂಬಂಧಿಸಿದ್ದಾಗಿದೆ. ಟ್ರೇಡಿಂಗ್ ಅಥವಾ ಶೇರು ಟ್ರೇಡಿಂಗ್ ಸಂಬಂಧಿಸಿ ಸೈಬರ್ ವಂಚನೆಯ ನಾಲ್ಕು ಪ್ರಕರಣಗಳಲ್ಲಿ 4,58,97,905 ರೂ.ಗಳನ್ನು ದೂರುದಾರರು ಕಳೆದುಕೊಂಡಿದ್ದಾರೆ. ಇದರಲ್ಲಿ 1,02,76,643 ರೂ.ಗಳನ್ನು ವಂಚಕರ ಪಾಲಾಗುವುದನ್ನು ಪೊಲೀಸರು ತಡೆದಿದ್ದಾರೆ.

ಇದಲ್ಲದೆ ಡಿಜಿಟಲ್ ಅರೆಸ್ಟ್‌ಗೆ ಸಂಬಂಧಿಸಿ ಮೂರು ಪ್ರಕರಣಗಳು ದಾಖಲಾಗಿದ್ದು, 89,04,972 ರೂ.ಗಳನ್ನು ದೂರುದಾರರು ಕಳೆದುಕೊಂಡಿದ್ದಾರೆ. ಇದರಲ್ಲಿ 1,50,000 ರೂ.ಗಳನ್ನು ಮಾತ್ರವೇ ತಡೆಹಿಡಿಯಲು ಸಾಧ್ಯವಾಗಿದೆ.

ಉದ್ಯೋಗದ ಹೆಸರಲ್ಲೂ ವಂಚನೆ

ಕೆವೈಸಿ ಅಪ್‌ಡೇಟ್ ಮಾಡುವುದು, ಎಪಿಕೆ ಲಿಂಕ್‌ಗೆ ಸಂಬಂಧಿಸಿ 2 ಪ್ರಕರಣಗಳು ದಾಖಲಾಗಿದ್ದು, 13,32,247 ರೂ.ಗಳ ವಂಚನೆಯಾಗಿದೆ. ಆನ್‌ಲೈನ್ ಹಣ ವರ್ಗಾವಣೆಯ ಒಂದು ಪ್ರಕರಣದಲ್ಲಿ 3,64,000 ರೂ.ಗಳನ್ನು ಸೈಬರ್ ವಂಚಕರು ದೋಚಿದ್ದಾರೆ.

ಬ್ಯಾಂಕ್ ಖಾತೆಗಳನ್ನು ಹ್ಯಾಕ್ ಮಾಡುವುದು ಅಥವಾ ಐಡಿಗಳನ್ನು ಬಳಸಿಕೊಂಡು ಸೈಬರ್ ಖದೀಮರು ವಂಚನೆ ಮಾಡುತ್ತಿದ್ದು, ಇಂತಹ ಒಂದು ಪ್ರಕರಣದಲ್ಲಿ 28,46,688 ರೂಗಳನ್ನು ದೋಚಲಾಗಿದೆ.

ಸುದ್ದಿಗಳ ಬಗ್ಗೆಯೂ ಇರಲಿ ಎಚ್ಚರ

ಮಂಗಳೂರು ನಗರದಲ್ಲಿ ಕಳೆದ ಮೂರು ತಿಂಗಳಿನಲ್ಲಿ ಸಾಮಾಜಿಕ ಜಾಲತಾಣದಲ್ಲಿ ಬರುವ ಪಾರ್ಟ್ ಟೈಮ್ ಉದ್ಯೋಗ ಕುರಿತ ನಕಲಿ ಸುದ್ದಿ, ಮೊಬೈಲ್‌ನಲ್ಲಿನ ಟಾಸ್ಕ್ ಅಥವಾ ರಿವ್ಯೂ ನೀಡುವ ವಂಚನೆ ಪ್ರಕರಣಕ್ಕೆ ಸಂಬಂಧಿಸಿ ನಾಲ್ಕು ಪ್ರಕರಣಗಳು ದಾಖಲಾಗಿದ್ದು, ದೂರುದಾರರು 39,42,975 ರೂ.ಗಳನ್ನು ಕಳೆದುಕೊಂಡಿದ್ದಾರೆ. ಆದ್ದರಿಂದ ಈ ಬಗ್ಗೆ ಜನತೆ ಎಚ್ಚರಿಕೆ ವಹಿಸಬೇಕಿದೆ.

ನಂಬದಿರಿ ನಕಲಿ ಕರೆ

ನಕಲಿ ಫೋನ್ ಕರೆ, ನಕಲಿ ಆ್ಯಪ್, ಇನ್‌ಸ್ಟಾಗ್ರಾಂ, ಫೇಸ್‌ಬುಕ್, ವಾಟ್ಸ್ ಆ್ಯಪ್, ಬ್ಯಾಂಕ್‌ನವರೆಂದು ನಂಬಿಸಿ ವಂಚಿಸುವುದು ಇತ್ಯಾದಿ ಪ್ರಕರಣಗಳು ನಡೆಯುತ್ತಿದ್ದು, ಜನತೆ ಇದರತ್ತ ಎಚ್ಚರಿಕೆ ವಹಿಸುವುದು ಅಗತ್ಯವಾಗಿದೆ.

ಲೋನ್ ಆ್ಯಪ್ ನಂಬದಿರಿ



ನಕಲಿ ಲೋನ್ ಆ್ಯಪ್‌ಗಳು ಕೂಡ ಹೆಚ್ಚಾಗಿ ಕಾರ್ಯಾಚರಿಸುತ್ತಿದ್ದು, ಇದಕ್ಕೆ ಹೆಚ್ಚಿನ ಮಂದಿ ಬಲಿಬೀಳುತ್ತಿದ್ದಾರೆ. ತುರ್ತಾಗಿ ಸಾಲ ದೊರೆಯುತ್ತದೆ ಎಂದು ಎಲ್ಲಾ ದಾಖಲೆಗಳನ್ನು ನೀಡಿ ವಂಚನೆಗೊಳಗಾಗುವುದು ಕಂಡು ಬರುತ್ತಿದೆ. ಕಳೆದ ಮೂರು ತಿಂಗಳಿನಲ್ಲಿ ಮಂಗಳೂರಿನಲ್ಲಿ ನಕಲಿ ಲೋನ್ ಆ್ಯಪ್‌ಗೆ ಸಂಬಂಧಿಸಿ ಒಂದು ದೂರು ದಾಖಲಾಗಿದ್ದು, 2,15,000 ರೂ.ಗಳನ್ನು ವಂಚಕರು ದೋಚಿದ್ದಾರೆ.

- ಟ್ರೇಡಿಂಗ್ ಅಥವಾ ಶೇರು ಟ್ರೇಡಿಂಗ್ ಸಂಬಂಧಿಸಿ ಸೈಬರ್ ವಂಚನೆಯ ನಾಲ್ಕು ಪ್ರಕರಣಗಳಲ್ಲಿ 4,58,97,905 ರೂ.ಗಳನ್ನು ದೂರುದಾರರು ಕಳೆದುಕೊಂಡಿದ್ದಾರೆ.
- ಡಿಜಿಟಲ್ ಅರೆಸ್ಟ್‌ಗೆ ಸಂಬಂಧಿಸಿ ಮೂರು ಪ್ರಕರಣಗಳು ದಾಖಲಾಗಿದ್ದು, 89,04,972 ರೂ.ಗಳನ್ನು ದೂರುದಾರರು ಕಳೆದುಕೊಂಡಿದ್ದಾರೆ.

ಅರಣ್ಯ ಇಲಾಖೆ ಸಿಬಂದಿ, ಆನೆ ಕಾರ್ಯಪಡೆಯಿಂದ ಕಾರ್ಯಾಚರಣೆ

ಕುಮಾರಧಾರಾ ನದಿ ದಾಟಿ ಹೋದ ಕಾಡಾನೆ ಹಿಂಡು



ಕಡಬ: ಕೋರಿಯಾರ್‌ನಲ್ಲಿ ಕುಮಾರಧಾರಾ ನದಿಯಲ್ಲಿ ಕಾಡಾನೆಗಳ ಹಿಂಡು

ಕಡಬ: ಕಡಬ ತಾಲೂಕಿನ 102 ನೇ ನೆಕ್ಕಿಲಾಡಿ ಭಾಗದ ಕೋರಿಯಾರ್ ಸಮೀಪದ ಕುಮಾರಧಾರಾ ನದಿ ತಟದಲ್ಲಿ ಕಾಣಿಸಿಕೊಂಡು ಕೃಷಿ ತೋಟಗಳಿಗೆ ಹಾನಿಗೈದಿದ್ದ ಕಾಡಾನೆಗಳ ಹಿಂಡು ಶನಿವಾರ ರಾತ್ರಿ ವೇಳೆಗೆ ಕುಮಾರಧಾರ ನದಿಯನ್ನು ದಾಟಿ ಕೇನ್ಯ, ಏನೆಕಲ್ ಅರಣ್ಯ ಪ್ರದೇಶಕ್ಕೆ ಹೋಗಿವೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ 2 ದಿನಗಳಿಂದ 1 ಮರಿಯಾನೆ ಸೇರಿದಂತೆ 8 ಆನೆಗಳು ಕುಮಾರಾಧಾರ ನದಿಯ ಆಸುಪಾಸಿನ ಪ್ರದೇಶಗಳಲ್ಲಿ ಕಾಣಿಸಿಕೊಂಡು ಕೃಷಿ ತೋಟಗಳಿಗೆ ಲಗ್ಗೆ ಇಟ್ಟು ಸಾರ್ವಜನಿಕ ವಲಯದಲ್ಲಿ ಆತಂಕಕ್ಕೆ ಕಾರಣವಾಗಿದ್ದವು. ಶನಿವಾರ ಹಗಲು ಹೊತ್ತಿನಲ್ಲಿ ಕುಮಾರಾಧಾರ ನದಿಯ ನೀರಿಗಿಳಿದು ಆಟವಾಡುತ್ತಿದ್ದ ಆನೆಗಳನ್ನು ಊರಿನ ಜನ ಬೇರೆಡೆಗೆ ಅಟ್ಟಲು ಪಟಾಕಿ, ಗರ್ನಾಲ್ ಸಿಡಿಸಿ ಪ್ರಯತ್ನಿಸಿದ್ದರೂ ಅದು ವಿಫಲವಾಗಿತ್ತು. ಬಳಿಕ ಅರಣ್ಯ ಇಲಾಖೆಯ ಸಿಬಂದಿಗಳು ಹಾಗೂ ಸ್ಥಳೀಯ ಜನರು ಕೋರಿಯಾರ್ ಭಾಗದ ಅರಣ್ಯ ಅಭಿವೃದ್ಧಿ ನಿಗಮದ ರಬ್ಬರ್ ತೋಟದಲ್ಲಿ ಸಂಜೆಯ ತನಕ ಬೀಡು ಬಿಟ್ಟಿದ್ದ ಆನೆ ಹಿಂಡನ್ನು ಅರಣ್ಯದತ್ತ ಓಡಿಸುವ ಪ್ರಯತ್ನನಡೆಸಿದ್ದರು. ಹೊಸದಾಗಿ ರಚನೆಯಾಗಿರುವ ಆನೆ ಕಾರ್ಯಪಡೆಯ ಸಿಬಂದಿಗಳು ಕೂಡ ಸ್ಥಳಕ್ಕೆ ಆಗಮಿಸಿ ಕಾರ್ಯಾಚರಣೆಯಲ್ಲಿ ಸಹಕರಿಸಿದ್ದರು. ಶನಿವಾರ ತಡರಾತ್ರಿ ವೇಳೆ ಆನೆಗಳ ಹಿಂಡು ನದಿ ದಾಟಿ ಕೇನ್ಯ ಏನೆಕಲ್ ಭಾಗದ ಅರಣ್ಯ ಪ್ರದೇಶಕ್ಕೆ ಹೋಗಿವೆ ಎಂದು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಉಪ ವಲಯ ಅರಣ್ಯಾಧಿಕಾರಿ ಯೋಗೀಶ್ ಜಿ.ಸಿ. ಅವರು ತಿಳಿಸಿದ್ದಾರೆ.

ಕಡಬ: ಕೋರಿಯಾರ್ ಪ್ರದೇಶದಲ್ಲಿ ಆನೆ ದಾಳಿಯಿಂದ ಕೃಷಿ ಹಾನಿ: ಅರಣ್ಯಾಧಿಕಾರಿಗಳ ಭೇಟಿ

ಕಡಬ: ಕಡಬ ತಾಲೂಕಿನ 102ನೇ ನೆಕ್ಕಿಲಾಡಿ ಗ್ರಾಮದ ಕೋರಿಯಾರ್ ಕುಮಾರಧಾರ ನದಿ ತೀರದ ಪ್ರದೇಶದಲ್ಲಿ ಆನೆ ದಾಳಿಯಿಂದಾಗಿ ಕೃಷಿ ಹಾನಿಗೀಡಾದ ಪ್ರದೇಶಕ್ಕೆ ಭಾನುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ಕೆಪಿಸಿಸಿ ಸುಳ್ಯ ವಿಧಾನಸಭಾ ಕ್ಷೇತ್ರದ ಉಸ್ತುವಾರಿ ಕೃಷ್ಣಪ್ಪ ಜಿ. ರಾಮಕುಂಜ ಅವರು ಅರಣ್ಯ ಇಲಾಖಾಧಿಕಾರಿಗಳು ಹಾಗೂ ಕೃಷಿಕರ ಜೊತೆ ಮಾತುಕತೆ ನಡೆಸಿದರು.

ಕಳೆದ 2 ದಿನಗಳಿಂದ ಕೋರಿಯಾರ್ ಸಮೀಪದ ಕುಮಾರಧಾರಾ ನದಿ ತೀರದಲ್ಲಿ ಬೀಡು ಬಿಟ್ಟಿರುವ 8 ಕಾಡಾನೆಗಳ ಹಿಂಡು ಕೃಷಿ ತೋಟಗಳಿಗೆ ಹಾನಿಗೈದು ಸ್ಥಳೀಯರಲ್ಲಿ ಆತಂಕಕ್ಕೆ ಕಾರಣವಾಗಿತ್ತು. ಕೋರಿಯಾರ್ ಹಾಗೂ ಮಾಯಿಪಾಜೆ ಭಾಗಗಳಲ್ಲಿ ಆನೆಗಳು ಸಂಚರಿಸಿ , ಕೃಷಿ ತೋಟಗಳಿಗೆ ಹಾನಿ ಮಾಡಿತ್ತು. ಪಂಜೋಡಿ ಭಾಗದ ನಿಶಿತ್ ಮಾಯಿಪಾಜೆ, ಹರೀಶ್ ಕೋರಿಯಾರ್ ಹಾಗೂ ಕರ್ಮಾಯಿ ತಮಿಳು ಕಾಲನಿ ಪರಿಸರದಲ್ಲಿ ತೋಟಗಳಿಗೆ ನುಗ್ಗಿದ ಆನೆಗಳು ತೆಂಗು, ಅಡಕೆ ಹಾಗೂ ಬಾಳೆ ಗಿಡಗಳನ್ನು ನಾಶಪಡಿಸಿತ್ತು.

ಘಟನೆ ಕುರಿತು ಮಾಹಿತಿ ಪಡೆದುಕೊಂಡ ಕೃಷ್ಣಪ್ಪ ಜಿ. ರಾಮಕುಂಜ ಅವರು ಬೆಳೆ ಹಾನಿಗೊಳಗಾದ ರೈತರಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸೂಕ್ತ ವರದಿ ನೀಡುವಂತೆ ಅರಣ್ಯ ಇಲಾಖಾಧಿಕಾರಿಗಳಿಗೆ ಸೂಚಿಸಿದರು. ಹಾಗೆಯೇ ಕಾಡಾನೆಗಳ ಹಿಂಡನ್ನು ಕಾಡಿನತ್ತ ಓಡಿಸಲು ತ್ವರಿತ ಕ್ರಮ ಕೈಗೊಳ್ಳುವಂತೆ ಅವರು ತಿಳಿಸಿದರು. ಉಪವಲಯ ಅರಣ್ಯಾಧಿಕಾರಿ ಯೋಗೀಶ್ ಜಿ.ಸಿ., ಬೀಟ್ ಫಾರೆಸ್ಟರ್‌ಗಳಾದ ಪ್ರಕಾಶ್ ಕುಮಾರ್, ಶುಶಾಂತ್ ಹಾಗೂ ಗ್ರಾಮಸ್ಥರಾದ ಈರೇಶ್ ಗೌಡ, ಸರ್ವೋತ್ತಮ ಗೌಡ ಪಂಜೋಡಿ, ಹರೀಶ್ ಕೋರಿಯಾರ್, ಮನಮೋಹನ್ ಗೋಲ್ಯಾಡಿ, ಸುರೇಶ್ ಕೋರಿಯಾರ್, ಜಯರಾಮ್ ಕರ್ಮಾಯಿ ಮುಂತಾದವರು ಹಾಜರಿದ್ದರು.

ಅಕ್ರಮ ಗೋ ಸಾಗಾಟ: ಆರೋಪಿಗಳು ಪರಾರಿ



ಮೂಡುಬಿದಿರೆ: ತೋಡಾರು ಬಳಿ ನಡೆಸಿದ ಕಾರ್ಯಾಚರಣೆಯಲ್ಲಿ ಅಕ್ರಮವಾಗಿ ಸಾಗಾಟವಾಗುತ್ತಿದ್ದ ಎಂಟು ಜಾನುವಾರುಗಳನ್ನು ಪೊಲೀಸರು. ರಕ್ಷಿಸಿದ್ದಾರೆ, ಎರಡು ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ.

ಮೂಡುಬಿದಿರೆ ಪೊಲೀಸ್ ಠಾಣೆಯ ಎಸ್.ಐ ಪ್ರತಿಭಾ ಕೆ.ಸಿ ಅವರು ಸಿಬ್ಬಂದಿಗಳೊಂದಿಗೆ ಗಸ್ತು ಕರ್ತವ್ಯ ನಿರ್ವಹಿಸುತ್ತಿದ್ದಾಗ, ತೋಡಾರು ಕಡೆಗೆ ಪಿಕಪ್ ವಾಹನದಲ್ಲಿ ಜಾನುವಾರುಗಳನ್ನು ಅಕ್ರಮವಾಗಿ ಸಾಗಿಸಲಾಗುತ್ತಿದೆ ಎಂಬ ಮಾಹಿತಿ ಲಭ್ಯವಾಯಿತು. ಈ ಹಿನ್ನೆಲೆಯಲ್ಲಿ ತೋಡಾರು ಗ್ರಾಮದ ದ್ವಾರದ ಬಳಿ ಪೊಲೀಸರು ತಪಾಸಣೆ ನಡೆಸುತ್ತಿದ್ದರು. ಆ ಸಮಯದಲ್ಲಿ ಗರಡಿ ಕಡೆಯಿಂದ ಬಂದ ಕೆ.ಎ–19–ಎಂ.ಎ–7854 ನಂಬರಿನ ವ್ಯಾಗನರ್ ಕಾರು ಮತ್ತು ಅದರ ಹಿಂದೆಯೇ ಬಂದ ಕೆ.ಎ–19–ಎ.ಎ–1106 ನಂಬರಿನ ಪಿಕಪ್ ವಾಹನವನ್ನು ನಿಲ್ಲಿಸುವಂತೆ ಸೂಚಿಸಲಾಯಿತು. ಆದರೆ ವಾಹನ ಸವಾರರು ನಿಲ್ಲಿಸದೆ ಮುಂದೆ ಚಲಾಯಿಸಿದರು. ಕೂಡಲೇ ಪೊಲೀಸರು ವಾಹನಗಳನ್ನು ಬೆನ್ನಟ್ಟಿ ಹೋಗಿ ಅಡ್ಡಗಟ್ಟಿದರು. ಪಿಕಪ್ ವಾಹನದ ಚಾಲಕ ಹರ್ಷದ್ ಮತ್ತು ಇತರರು ಅಲ್ಲಿಂದ ಓಡಿ ಪರಾರಿಯಾದರು. ಪಿಕಪ್ ವಾಹನಕ್ಕೆ ಬೆಂಗಾವಲಾಗಿ ಬಂದಿದ್ದ ವ್ಯಾಗನರ್ ಕಾರಿನ ಚಾಲಕ ಸಫರ್ ಮತ್ತು ಹಂಡೇಲು ನಿವಾಸಿ ಅಬೂಬಕರ್ ಕೂಡ ಸ್ಥಳದಿಂದ ಓಡಿ ಪರಾರಿಯಾದರು. ಪಿಕಪ್ ವಾಹನವನ್ನು ಪರಿಶೀಲಿಸಿದಾಗ, ಎರಡು ಹಸುಗಳು, ಎರಡು ಗಂಡು ದನಗಳು ಹಾಗೂ ನಾಲ್ಕು ಗಂಡು ಕರುಗಳನ್ನು ಹಿಂಸಾತ್ಮಕವಾಗಿ ಕಾಲು ಹಾಗೂ ತಲೆಯನ್ನು ಹಗ್ಗದಿಂದ ಕಟ್ಟಿ ತುಂಬಿರುವುದು ಪತ್ತೆಯಾಯಿತು.

ಪೊಲೀಸರು ವಾಹನಗಳು ಹಾಗೂ ಎಂಟು ಜಾನುವಾರುಗಳನ್ನು ರಕ್ಷಿಸಿ ಮುಂದಿನ ಕ್ರಮಕ್ಕಾಗಿ ವಶಕ್ಕೆ ಪಡೆದರು. ಆರೋಪಿಗಳು ಕಳ್ಳತನದ ಜಾನುವಾರುಗಳನ್ನು ಅಬೂಬಕರ್ ಎಂಬಾತನ ಮನೆಗೆ ಸಾಗಿಸಿ, ಅಲ್ಲಿ ವಧೆ ಮಾಡಿ ಮಾಂಸ ಮಾರಾಟ ಮಾಡುವ ಸಂಚು ರೂಪಿಸಿದ್ದರು ಎಂದು ತಿಳಿದುಬಂದಿದೆ.

Hosadiganttha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸೋಮವಾರ 13, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2
ಮಾಣಿ ಪೆರಾಜೆ ಶ್ರೀ ರಾಮಚಂದ್ರಾಪುರ ಮಠಕ್ಕೆ ಕಂಚಿಶ್ರೀ ಭೇಟಿ



ಪುಟ 5
ಸವಾಲಿನ ಸುಳಿಗೆ ಸಿಲುಕಿದೆ ಮೇಣದ ಬತ್ತಿಯ ಉದ್ಯಮ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಹಿಂದೂ ಸಮಾಜದ ಐಕ್ಯತೆ, ಲೋಕ ಕಲ್ಯಾಣಾರ್ಥ 'ಕೊರಗಜ್ಜನ ಆದಿಕ್ಷೇತ್ರಕ್ಕೆ ನಮ್ಮ ನಡೆ'



ಹಿಂದೂ ಸಮಾಜದ ಐಕ್ಯತೆ ಮತ್ತು ಲೋಕ ಕಲ್ಯಾಣಾರ್ಥವಾಗಿ ವಿಶ್ವ ಹಿಂದೂ ಪರಿಷತ್ ಉಳ್ಳಾಲ ಪ್ರಖಂಡ ವತಿಯಿಂದ ಮಂಗಳೂರಿನ ಕದ್ರಿ ಶ್ರೀ ಮಂಜುನಾಥ ಕ್ಷೇತ್ರದಿಂದ ಕುತ್ತಾರು ದೆಕ್ಕಾಡುವಿನ ಶ್ರೀ ಕೊರಗಜ್ಜನ ಆದಿಕ್ಷೇತ್ರಕ್ಕೆ ಭಾನುವಾರದಂದು ನಡೆದ ಆರನೇ ವರ್ಷದ 'ಕೊರಗಜ್ಜನ ಆದಿಕ್ಷೇತ್ರಕ್ಕೆ ನಮ್ಮ ನಡೆ' ಬೃಹತ್ ಪಾದಯಾತ್ರೆಯ ನಡೆಯಿತು.

ಸುತ್ತಮುತ್ತ

ನವಮಂಗಳೂರು ಬಂದರಿನಿಂದ 25 ಸಾವಿರ ಮೆಟ್ರಿಕ್ ಟನ್ ಸಕ್ಕರೆ ರಫ್ತು

ಮಂಗಳೂರು: ನವಮಂಗಳೂರು ಬಂದರಿನಿಂದ ವಿದೇಶಕ್ಕೆ ಸಕ್ಕರೆ ರಫ್ತು ಮತ್ತೆ ಆರಂಭಗೊಂಡಿದೆ. 'ನ್ಯೂ ಲೆಗಸಿ' ಹೆಸರಿನ ಹಡಗು ಮಂಗಳೂರಿನಿಂದ ಬರೋಬ್ಬರಿ 20 ಸಾವಿರ ಮೆಟ್ರಿಕ್ ಟನ್ ಬಿಳಿ ಸಕ್ಕರೆ ಹೇರಿಕೊಂಡು ತೆರಳಿದೆ.

ಏ.9ರಂದು ಈ ಹಡಗು ನವ ಮಂಗಳೂರು ಬಂದರಿಗೆ ಆಗಮಿಸಿತ್ತು. ಸಕ್ಕರೆ ಲೋಡಿಂಗ್ ಪೂರ್ಣಗೊಂಡ ಬಳಿಕ ಹಡಗು ತನ್ನ ಮುಂದಿನ ಪ್ರಯಾಣವನ್ನು ಆರಂಭಿಸಿದೆ.

ಬಳ್ಪ ಗ್ರಾಮದಲ್ಲಿಯೂ ಗಜಪಡೆ ಸಂಚಾರ: ಆತಂಕ ಹೆಚ್ಚಿಸಿದೆ ಈ ವಿದ್ಯಮಾನ

ಮಂಗಳೂರು: ಕಡಬ ಪರಿಸರದಲ್ಲಿ ಕಾಡಾನೆ ಸಂಚಾರದ ಬೆನ್ನಿಗೇ ಈಗ ಸುಬ್ರಹ್ಮಣ್ಯ ಪರಿಸರದಲ್ಲಿಯೂ ಆತಂಕ ಮೂಡಿದ್ದು, ಇಲ್ಲಿ ಸಂಚರಿಸಿರುವ ಗಜ ಪಡೆ ಸ್ಥಳೀಯರಲ್ಲಿ ಭಯ ಹುಟ್ಟಿಸಿದೆ. ಸ್ಥಳೀಯರ ಮಾಹಿತಿ ಪ್ರಕಾರ ಪತೋಳಿ ಭಾಗದಿಂದ ಕಾಡಾನೆಗಳು ಕಣ್ಕಲ್ ಕಡೆಗೆ ಸಾಗಿದ್ದು, ದಾರಿಯುದ್ದಕ್ಕೂ ಬೈನೆ ಮರಗಳನ್ನು ಉರುಳಿಸಿವೆ. ನಾಗರಿಕರು ಹೆಚ್ಚಿನ ಎಚ್ಚರಿಕೆ ವಹಿಸಬೇಕು ಎಂದು ಅರಣ್ಯ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಹೆಚ್ಚುತ್ತಿರುವ ಧಗೆ: ಕರಾವಳಿಯ ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆ?

ಮಂಗಳೂರು: ದಕ್ಷಿಣ ಕನ್ನಡ ಸಹಿತ ಕರಾವಳಿ ಭಾಗದ ಜಿಲ್ಲೆಗಳಲ್ಲಿ ಮುಂದಿನ ಎರಡು ದಿಗಳ ಕಾಲ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈಗಾಗಲೇ ಕರಾವಳಿ ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಬಿಸಿಲಿನ ಧಗೆ ಕಂಡುಬರುತ್ತಿದ್ದು, ಸಹಿಸಲಸಾಧ್ಯ ವಾತಾವರಣ ಸೃಷ್ಟಿಸಿದೆ. ಸುಡುಬಿಸಿಲಿಗೆ ಮೈಯೊಡ್ಡದೆ ಆರೋಗ್ಯದ ಬಗ್ಗೆ ಹೆಚ್ಚು ನಿಗಾ ವಹಿಸುವಂತೆ ಆರೋಗ್ಯ ಇಲಾಖೆ ಸೂಚಿಸಿದೆ.

ಮುಂದುವರಿದ ಆಟೋ ಗ್ಯಾಸ್ ಅಭಾವ: ರಿಕ್ಷಾ ಚಾಲಕರಿಗೆ ನಿಲ್ಲದ ಸಂಕಷ್ಟ

ಮಂಗಳೂರು: ನೆರೆಯ ಉಡುಪಿ ಜಿಲ್ಲೆಯಲ್ಲಿ ಆಟೋ ಗ್ಯಾಸ್ ಪೂರೈಕೆ ವ್ಯತ್ಯಯ ಮುಂದುವರಿದಿದೆ. ಅಗತ್ಯ ಪ್ರಮಾಣದಲ್ಲಿ ಗ್ಯಾಸ್ ಲಭ್ಯವಾಗದೆ ಆಟೋ ಚಾಲಕರು ಸಂಕಷ್ಟ ಎದುರಿಸುತ್ತಿದ್ದು, ಸದ್ಯ ಪೆಟ್ರೋಲ್ ಅವಲಂಬಿಸಿ ಆಟೋ ಚಲಾಯಿಸುತ್ತಿದ್ದಾರೆ.

ಸಾರಿಗೆ ನಿಯಮ ಉಲ್ಲಂಘನೆ ಕಂಡೂ ಮೌನ

ಏನ್ ಸಾರ್ ಇದು?

ಆರ್‌ಟಿಓ ವಿರುದ್ಧ ನಾಗರಿಕರ ಅಸಮಾಧಾನ

ಕಾಸರಗೋಡು: ನಗರ ಪ್ರದೇಶ ದಿನ ಕಳೆದಂತೆ ಬೆಳೆಯುತ್ತಿದ್ದು, ಇದರೊಂದಿಗೆ ವಿವಿಧ ರಸ್ತೆಗಳಲ್ಲಿ ವಾಹನ ದಟ್ಟಣೆ ಕೂಡಾ ವಿಪರೀತಗೊಳ್ಳುತ್ತಿದೆ. ಜೊತೆಗೆ ನಗರದ ಎಲ್ಲಾ ರಸ್ತೆಗಳಲ್ಲೂ ಸಾರಿಗೆ ನಿಯಮ ಉಲ್ಲಂಘನೆ ಹೆಚ್ಚುತ್ತಿದೆ.

ಕಠಿಣ ಕ್ರಮವೇ ಆಗುತ್ತಿಲ್ಲ

ಯಾವುದೇ ಕಾನೂನುಗಳನ್ನು ಸಮರ್ಪಕವಾಗಿ ಪಾಲಿಸದೆ ರಸ್ತೆಗಳಲ್ಲಿ ವಾಹನಗಳು ನಾಗಾಲೋಟದಲ್ಲಿ ಓಡಾಡುತ್ತಿದ್ದರೂ ಮೋಟಾರು ವಾಹನ ಇಲಾಖೆಯಾಗಲಿ ಅಥವಾ ಅನುಷ್ಠಾನ ವಿಭಾಗವಾಗಲಿ ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂಬ ಆರೋಪ ವ್ಯಾಪಕವಾಗಿದೆ.

ಪದೇ ಪದೇ ವಾಹನ ಅಪಘಾತ

ಈ ಮಧ್ಯೆ ಕಾಸರಗೋಡು ನಗರದ ವಿವಿಧ ರಸ್ತೆಗಳಲ್ಲಿ ಪದೇ ಪದೇ ವಾಹನ ಅಪಘಾತಗಳು ಸಂಭವಿಸುತ್ತಿವೆ. ಇಲ್ಲಿ ಅಪಘಾತ ನಡೆದಾಗಲಷ್ಟೇ ನಾಮ ಮಾತ್ರವಾಗಿ ತಪಾಸಣೆಗಳನ್ನು ನಡೆಸಿ ಬಳಿಕ ಅಧಿಕಾರಿಗಳು ಈ ಬಗ್ಗೆ ವಿಶೇಷ ಗಮನ ಹರಿಸುತ್ತಿಲ್ಲ, ಅಧಿಕಾರಿಗಳ ಈ ನಿರ್ಲಕ್ಷ್ಯ ಧೋರಣೆ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಾರೆ. ಕಳೆದ ಕೆಲವು ತಿಂಗಳುಗಳಿಂದ ಕಾಸರಗೋಡು ನಗರದ ವಿವಿಧ ರಸ್ತೆಗಳಲ್ಲಿ ನಿಯಮ ಗಳನ್ನು ನಿರಂತರ ಉಲ್ಲಂಘಿಸಿ ಇಲ್ಲಿ ವಾಹನಗಳು ಸಂಚರಿಸುತ್ತಿವೆ. »ಪುಟ 6



ರಾತ್ರಿ ಹೊತ್ತಿನಲ್ಲಿ ಹೆಚ್ಚುತ್ತಿದೆ 'ಧೂಮ್ ಮಚಾಲೇ'!

ರಾತ್ರಿ ವೇಳೆಯಲ್ಲಿ ನಗರದ ವಿವಿಧ ಭಾಗಗಳಲ್ಲಿ ದೊಡ್ಡ ಸದ್ದಿನೊಂದಿಗೆ ಹಾಗೂ ಅತಿವೇಗದಲ್ಲಿ ದ್ವಿಚಕ್ರ ವಾಹನಗಳು ಸಂಚರಿಸುತ್ತಿದ್ದರೂ ಅಧಿಕಾರಿಗಳು ಮೌನ ಪಾಲಿಸುತ್ತಿರುವುದು ಕಂಡುಬರುತ್ತಿದೆ. ಮಧ್ಯರಾತ್ರಿಯಲ್ಲೇ ಕೆಲವು ಬೈಕ್‌ಗಳು ಸೈಲೆನ್ಸರ್‌ಗಳಲ್ಲಿ ವಿಶೇಷ ಬದಲಾವಣೆ ತಂದು ಭಾರೀ ಸದ್ದಿನೊಂದಿಗೆ ಓಡಾಡುತ್ತಿರುವುದು ಆತಂಕಕ್ಕೂ ಕಾರಣವಾಗುತ್ತಿದೆ.

ಅತೀ ವೇಗದಲ್ಲಿ ಬಸ್‌ಗಳ ಎಂಟ್ರಿ ಇಲ್ಲಿ

ಈ ಮಧ್ಯೆ ಕಾಸರಗೋಡಿನ ಹೊಸ ಬಸ್ ನಿಲ್ದಾಣಕ್ಕೆ ಬಸ್‌ಗಳು ಅತಿಯಾದ ವೇಗದಲ್ಲಿ ಪ್ರವೇಶಿಸುತ್ತಿವೆ ಎಂದು ವ್ಯಾಪಾರಿಗಳು ತಿಳಿಸುತ್ತಾರೆ. ಪಾದಚಾರಿಗಳು ಝೀಬ್ರಾ ಲೈನ್ ಮೂಲಕ ರಸ್ತೆ ದಾಟಲು ಯತ್ನಿಸುತ್ತಿದ್ದರೂ ವಾಹನಗಳು ನಾಗಾಲೋಟದಲ್ಲಿ ತೆರಳುತ್ತಿರುತ್ತವೆ. ಇಲ್ಲಿನ ನಗರ ಪ್ರದೇಶದ ಅನಿಯಂತ್ರಿತ ಪಾರ್ಕಿಂಗ್ ಸಮಸ್ಯೆಯೂ ಪಾದಚಾರಿಗಳಿಗೆ ಸಂಕಷ್ಟ ಸೃಷ್ಟಿಸುತ್ತಿದೆ. ರಸ್ತೆ ಬದಿಗಳನ್ನು ಮತ್ತು ಫುಟ್‌ಬಾತ್‌ಗಳನ್ನು ವಾಹನಗಳು ಆಕ್ರಮಿಸುತ್ತಿದ್ದು ಜನರು ಅಪಾರ ತೊಂದರೆ ಎದುರಿಸುವಂತಾಗಿದೆ.

ಬಿಕ್ಕಟ್ಟಿನ ನಡುವೆ ಬೆಳೆಗಾರ ಖುಷ್

ಕಾಳುಮೆಣಸಿಗೆ 'ಚಿನ್ನ'ದ ರೇಟು!

ಈಗ 690 ರೂ.ಗೆ ಜಿಗಿದ ಧಾರಣೆ

ಮಡಿಕೇರಿ: ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಉಂಟಾಗಿದ್ದ ಬಿಕ್ಕಟ್ಟಿನಿಂದಾಗಿ ಇಕ್ಕಟ್ಟಿಗೆ ಸಿಲುಕಿದ್ದ ಕಾಳುಮೆಣಸು ಧಾರಣೆ ಇದೀಗ ನಿಧಾನವಾಗಿ ಏರುಗತಿಯತ್ತ ಸಾಗುತ್ತಿದೆ.

ಮಾರುಕಟ್ಟೆಯಲ್ಲಿ ನಿಂತ ನೀರಾಗಿದ್ದ ಧಾರಣೆ

ಅಮೆರಿಕಾ –ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧದಿಂದಾಗಿ ಕಾಳುಮೆಣು ಸಾಗಾಟ ಮತ್ತು ವ್ಯಾಪಾರ ಮಾರ್ಗಗಳಿಗೆ ಅಡ್ಡಿಯಾಗಿದ್ದರಿಂದ ಕಳೆದ ಕೆಲವು ಸಮಯದಿಂದ ಕಾಫಿ ಹಾಗೂ ಕರಿಮೆಣಸು ಧಾರಣೆ ನಿಂತ ನೀರಿನಂತಾಗಿತ್ತು. ಆದರೆ ಇದೀಗ ಹಾರ್ಮುಜ್ ಜಲಸಂಧಿ ಮೂಲಕ ಭಾರತೀಯ ಹಡಗುಗಳ ಸಂಚಾರಕ್ಕೆ ಇರಾನ್ ಅನುಮತಿ ನೀಡಿರುವುದರಿಂದಾಗಿ ಅತಿ ಹೆಚ್ಚು ಸಂಬಾರ ಪದಾರ್ಥಗಳನ್ನು ಬಳಸುವ ಮುಸ್ಲಿಂ ರಾಷ್ಟ್ರಗಳಿಗೆ ಭಾರತದ ಕರಿಮೆಣಸು ರಫ್ತಾಗುವ ಸಾಧ್ಯತೆಗಳು ಹೆಚ್ಚಿದೆ. ಜಿಲ್ಲೆಯಲ್ಲಿ ಈಗಷ್ಟೇ ಕರಿಮೆಣಸು ಕೊಯ್ಲು ಮುಕ್ತಾಯದ ಹಂತ ತಲುಪಿದ್ದು, ಪ್ರಸಕ್ತ ದರ ಏರಿಕೆಯಾಗಿರುವುದು ಬೆಳೆಗಾರರಲ್ಲಿ ಹರ್ಷ ಮೂಡಿಸಿದೆ.



ಹೇಗಿದೆ ಕೊಡಗಿನಲ್ಲಿ ಕಾಳುಮೆಣಸಿನ ಧಾರಣೆ?

ಪರಿಣಾಮವಾಗಿ ಕೊಡಗಿನ ಮಾರುಕಟ್ಟೆಗಳಲ್ಲಿ ಮಾರ್ಚ್ ತಿಂಗಳಲ್ಲಿ ಒಂದು ರೂ.670-675 ಗಳಷ್ಟಿದ್ದ ಒಂದು ಕೆ.ಜಿ.ಕರಿಮೆಣಸಿನ ಬೆಲೆ ಇದೀಗ 680-690ರೂ.ಗಳಿಗೆ ಏರಿಕೆಯಾಗಿದೆ. ಅದರಲ್ಲೂ ಉತ್ತಮ ಗುಣಮಟ್ಟದ ಕರಿಮೆಣಸು 700ರೂ.ಗಳಿಗೆ ಖರೀದಿಯಾಗುತ್ತಿದೆ.

ಹಣ ಸ್ವೀಕರಿಸದ ಬ್ಯಾಂಕ್ | ಗ್ರಾಹಕರನ್ನು ಹೈರಾಣಾಗಿಸಿದೆ ತಾಂತ್ರಿಕ ಎಡವಟ್ಟು

ಸ್ಮಾರ್ಟ್ ಮೀಟರ್ ಬಿಲ್ ಪಾವತಿಗೆ ಪರದಾಟ

ಉಡುಪಿ: ಮೆಸ್ಕಾಂ ವ್ಯಾಪ್ತಿಯಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆಯಾದ ಬಳಿಕ ಗ್ರಾಹಕರು ಬಿಲ್ ಪಾವತಿಸಲು ಪಡುತ್ತಿರುವ ಪಾಡು ಹೇಳತೀರದಾಗಿದೆ.

ಆಧುನಿಕ ತಂತ್ರಜ್ಞಾನ ಹೆಸರಿನಲ್ಲಿ ಜಾರಿಗೆ ಬಂದ ಈ ವ್ಯವಸ್ಥೆ ಗ್ರಾಹಕರಿಗೆ ನುಂಗಲಾರದ ತುತ್ತಾಗಿದೆ. ಡಿಜಿಟಲ್ ಪಾವತಿ ಉತ್ತೇಜಿಸಲು ಬಿಲ್ ಮೇಲೆ ಕ್ಯೂಆರ್ ಕೋಡ್ ನೀಡಲಾಗಿದೆ. ಅದರ ಮೂಲಕ ಪಾವತಿಸಲು ಪ್ರಯತ್ನಿಸಿದರೆ ರಿಸೀವರ್ ಬ್ಯಾಂಕ್ ಹಣ ಸ್ವೀಕರಿಸುತ್ತಿಲ್ಲ ಎಂಬ ಸಂದೇಶ ಬರುತ್ತಿದೆ. ಕೈಯಲ್ಲಿ ಹಣವಿದ್ದರೂ ತಾಂತ್ರಿಕ ಎಡವಟ್ಟಿನಿಂದ ಪಾವತಿ ಸಾಧ್ಯವಾಗದೆ ಗ್ರಾಹಕರು ಕಂಗಾಲಾಗಿದ್ದಾರೆ. ಡಿಜಿಟಲ್ ಪಾವತಿಯ ಭರವಸೆ ನೀಡಿದ್ದ ಇಲಾಖೆಯು ಈಗ ತಾಂತ್ರಿಕ ಸುಳಿಯಲ್ಲಿ ಸಿಲುಕಿ ಗ್ರಾಹಕರನ್ನು ಕಚೇರಿಗಳಿಗೆ ಅಲೆಯುವಂತೆ ಮಾಡಿದೆ. ಹೊಸ ತಂತ್ರಾಂಶಕ್ಕೆ ಗ್ರಾಹಕರ ಡೇಟಾ ಸಮರ್ಪಕವಾಗಿ ವರ್ಗಾವಣೆಯಾಗದ ಕಾರಣ, ಆನ್‌ಲೈನ್ ಪಾವತಿ ಕೇಂದ್ರಗಳು ಹಳೆಯ ಗುರುತಿನ ಸಂಖ್ಯೆಯನ್ನು ಗುರುತಿಸುತ್ತಿಲ್ಲ, ಸ್ಮಾರ್ಟ್ ಆಗಬೇಕಿದ್ದ ಈ ಮೀಟರ್‌ಗಳು, ಈಗ ಗ್ರಾಹಕರಿಗೆ ದೊಡ್ಡ ತಲೆನೋವಾಗಿದೆ. »ಪುಟ 6

ಪ್ರಾತಿನಿಧಿಕ ಚಿತ್ರ



ಕೊನೆಯ ದಿನಾಂಕ ಕೂಡಾ ಮುಗಿದಿದೆ...

ಬಿಲ್ ಪಾವತಿಯ ಕೊನೆಯ ದಿನಾಂಕ ಮುಗಿದಿದ್ದರೂ ಹಣ ಪಾವತಿಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಸ್ಮಾರ್ಟ್ ಅಳವಡಿಸಿ ಆದ್ರೂ, ಹಳೆ ನಂಬರ್

ಸ್ಮಾರ್ಟ್ ಮೀಟರ್ ಅಳವಡಿಸಿ ನಾಲ್ಕು ತಿಂಗಳು ಕಳೆದರೂ ಮೆಸ್ಕಾಂ ಬಿಲ್‌ನಲ್ಲಿ ಇನ್ನೂ ಹಳೆಯ ಗ್ರಾಹಕ ಐಡಿಯನ್ನೇ ಮುದ್ರಿಸುತ್ತಿರುವುದು ಗೊಂದಲದ ಮೂಲವಾಗಿದೆ. ಬ್ಯಾಂಕಿಂಗ್ ವ್ಯವಸ್ಥೆ ಮತ್ತು ಪಾವತಿ ಆ್ಯಪ್‌ಗಳಲ್ಲಿ ಹಳೆಯ ಐಡಿಗಳು ಅಮಾನ್ಯವಾಗಿದ್ದರೂ, ಇಲಾಖೆಯು ಹೊಸ ಐಡಿಯನ್ನು ಬಿಲ್‌ನಲ್ಲಿ ಅಪ್‌ಡೇಟ್ ಮಾಡದೆ ನಿರ್ಲಕ್ಷ್ಯ ವಹಿಸಿದೆ.

ವಾರ ಎರಡು ಉರುಳಿದರೂ ಇಲ್ಲಿ ರಿಪೇರಿಯಾಗಿಲ್ಲ ಅಂಚೆ ತೂಕಯಂತ್ರ

ಸಂಕಷ್ಟದಲ್ಲಿ ಗ್ರಾಹಕರು | ಶೀಘ್ರ ದುರಸ್ತಿಗೆ ಆಗ್ರಹ

ಕಾಸರಗೋಡು: ತೂಕ ಯಂತ್ರ ಹಾಳಾಗಿ ಅಂಚೆ ಕಾಗದ, ಪಾರ್ಸೆಲ್ ತೂಕ ಮಾಡಲು ದೂರದ ಪಡಿತರ ಅಂಗಡಿಗೆ ಹೋಗಬೇಕಾದ ಸ್ಥಿತಿ ಇಲ್ಲಿನ ರಾಮದಾಸ್‌ನಗರ ಶಾಖೆ ಅಂಚೆ ಕಚೇರಿಯದ್ದಾಗಿದೆ. ಸಮೀಪ ಪ್ರದೇಶಗಳಿಂದ ಪೋಸ್ಟ್ ಮಾಡಲು ಕಚೇರಿಗೆ ತರುವ ಪತ್ರ, ಪಾರ್ಸೆಲ್‌ಗಳು ಮೊದಲಾದವುಗಳ ಭಾರದ ಅನುಸಾರ ಸ್ಟಾಂಪ್ ಬೆಲೆ ನಿಗದಿ ಪಡಿಸಲು, ಭಾರ ತಿಳಿಯಲು ಸಮೀಪದ ಪಡಿತರ ಅಂಗಡಿ ಆಶ್ರಯಿಸಬೇಕಾಗಿದೆ. ತಕ್ಷಣ ತೂಕಯಂತ್ರ ವ್ಯವಸ್ಥೆ ಸರಿಪಡಿಸಿ ಸಮಸ್ಯೆ ಪರಿಹರಿಸುವಂತೆ ಇಲ್ಲಿನ ನಾಗರಿಕರು ಒತ್ತಾಯಿಸಿದ್ದಾರೆ.



ಪಡಿತರ ಅಂಗಡಿಯಲ್ಲಿ ಅಂಚೆ ಪತ್ರಗಳ ತೂಕ

ಅಂಚೆ ಕಚೇರಿ ಮೂಲಕ ವಿಳಾಸಗಾರರು ಕಳುಹಿಸಬೇಕಾದ ಕಾಗದ, ಪಾರ್ಸೆಲ್ ಕಳೆದ ಎರಡು ವಾರಗಳಿಂದ ಇಪ್ಪತ್ತು ಮೀಟರ್ ದೂರದ ಪಡಿತರ ಅಂಗಡಿಗೆ ಕೊಂಡೊಯ್ದು ತೂಕ ಮಾಡಲಾಗುತ್ತಿದೆ. ಅಂಚೆ ಕಚೇರಿಯ ಪತ್ರಗಳು, ಪಾರ್ಸೆಲ್‌ಗಳನ್ನು ಸಮೀಪದ ಪಡಿತರ ಅಂಗಡಿಗೆ ಕೊಂಡೊಯ್ದು ತೂಕ ಮಾಡಲಾಗುತ್ತಿದೆ.

ಕುಂದಾಪುರ ತಾಲೂಕಿನ ವಿವಿಧೆಡೆ ಹಗಲು ಹೊತ್ತಿನಲ್ಲಿಯೂ ಬೀದಿ ದೀಪ ಜಗಮಗ

ಆಡಳಿತದ ಬೊಕ್ಕಸಕ್ಕೆ ಸಾವಿರಾರು ರೂಪ್ಯಾ ನಷ್ಟ

ಕುಂದಾಪುರ: ತಾಲೂಕಿನ ಅನೇಕ ಗ್ರಾಮ ಪಂಚಾಯತ್ ವ್ಯಾಪ್ತಿಗಳಲ್ಲಿ ಹಗಲು ಹೊತ್ತೂ ಬೀದಿ ದೀಪಗಳು ಉರಿಯುತ್ತಿರುತ್ತದೆ ಎಂಬ ಆರೋಪ ಸ್ಥಳೀಯರಿಂದ ಕೇಳಿ ಬರುತ್ತಿದೆ. ಗಂಗೊಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಲ್ಲೂಕಳೆದ ಹಲವು ದಿನಗಳಿಂದ ಹಗಲಿನಲ್ಲಿ ಬೀದಿ ದೀಪಗಳು ಉರಿಯುತ್ತಿದೆ.

ಎಲ್ಲೆಲ್ಲಿ ಕಾಣಿಸುತ್ತಿದೆ ಈ ಸಮಸ್ಯೆ ?

ಗಂಗೊಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಾವಿಕಟ್ಟೆ, ರಾಮ ಮಂದಿರ ಸುತ್ತ ಮುತ್ತಲಿನ ಪ್ರದೇಶ ಹಾಗೂ ಇನ್ನಿತರ ಕಡೆಗಳಲ್ಲಿ ಕಳೆದ ಕೆಲವು ದಿನಗಳಿಂದ ಹಗಲಿನಲ್ಲಿ ಬೀದಿ ದೀಪಗಳು ಉರಿಯುತ್ತಿರುವುದು ಕಂಡು ಬಂದಿದೆ. ಕೆಲವು ಕಡೆಗಳಲ್ಲಿ ಬೆಳಿಗ್ಗೆ ಬೀದಿ ದೀಪದ ಸ್ವಿಚ್‌ನಲ್ಲಿ ಆಫ್ ಮಾಡದೇ ಇರುವುದರಿಂದ ಹಗಲಿನಲ್ಲಿಯೂ ಕೂಡ ಬೀದಿ ದೀಪ ನಿರಂತರವಾಗಿ ಉರಿಯುತ್ತಿದ್ದರೆ, ಕೆಲವು ಕಡೆ ತಾಂತ್ರಿಕ ಕಾರಣದಿಂದ ಹಗಲಿನಲ್ಲಿ ಬೀದಿ ದೀಪ ಉರಿಯುತ್ತಿದೆ ಎನ್ನಲಾಗಿದೆ. ಇದರಿಂದ ಪ್ರತಿನಿತ್ಯ ಅನಗತ್ಯ ವಿದ್ಯುತ್ ಪೋಲಾಗುತ್ತಿದ್ದು ಸಾವಿರಾರು ರೂಪಾಯಿ ಪಂಚಾಯತ್ ಬೊಕ್ಕಸಕ್ಕೆ ಹಾನಿಯಾಗುತ್ತಿದೆ.




ಸಂಗಮ ವಿಶೇಷ

ಸರ್ಕಾರ ಮಿತ ಬಳಕೆ ಬಗ್ಗೆ ಎಚ್ಚರಿಸುತ್ತಲೇ ಇದೆ

ವಿದ್ಯುತ್‌ನ್ನು ಮಿತವಾಗಿ ಬಳಸಿ ಎಂದು ಸರಕಾರ ಸೂಚನೆ ನೀಡುತ್ತಿದ್ದರೂ, ಸ್ಥಳೀಯಾಡಳಿತ ಇದನ್ನು ಗಂಭೀರವಾಗಿ ಪರಿಗಣಿಸದಿರುವುದು ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಸ್ಥಳೀಯಾಡಳಿತ ಎಚ್ಚೆತ್ತುಕೊಂಡು ಹಗಲಿನಲ್ಲಿ ಉರಿಯುತ್ತಿರುವ ಬೀದಿ ದೀಪಗಳನ್ನು ಸರಿಪಡಿಸಬೇಕು ಎಂಬ ಆಗ್ರಹ ಕೇಳಿ ಬಂದಿದೆ.

ಹತ್ತೂರಿನಲ್ಲಿಯೂ ಪುತ್ತೂರು ಜಾತ್ರೆಯ ಸಂಭ್ರಮ ಸಡಗರ



ಇತಿಹಾಸ ಪ್ರಸಿದ್ಧ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ವಾರ್ಷಿಕ ಜಾತ್ರೋತ್ಸವ ಸಂಭ್ರಮ ಆರಂಭವಾಗಿದ್ದು, ಜಾತ್ರೆಯ ಅಂಗವಾಗಿ ಧ್ವಜಾರೋಹಣ ನಡೆದು ಪೇಟೆ ಸವಾರಿ ಆರಂಭಗೊಂಡಿದೆ. (ಪುಟ 2)

ಸುತ್ತ ಮುತ್ತ

ಪುತ್ತೂರು: ಇಂದಿನಿಂದ ಸಂಸ್ಕೃತ ಸಂಭಾಷಣಾ ಶಿಬಿರ

ಪುತ್ತೂರು: ಸಂಸ್ಕೃತವು ಭಾರತದ ಪ್ರಾಚೀನ ಭಾಷೆ. ಸರಳ, ಸುಂದರ ಹಾಗೂ ಮಧುರವಾದ ಈ ಭಾಷೆಯನ್ನು ಕಲಿಯಲು ಒಂದು ಉತ್ತಮ ಅವಕಾಶವಾಗಿ ಇದೀಗ ಪುತ್ತೂರಿನಲ್ಲಿ ಶಿಬಿರವೊಂದನ್ನು ಆಯೋಜಿಸಲಾಗಿದೆ. ಸಂಸ್ಕೃತ ಭಾರತೀ ಮತ್ತು ದೇವಾಲಯ ಸಂವರ್ಧನಾ ಸಮಿತಿ ವತಿಯಿಂದ 'ಉಚಿತ ಸಂಸ್ಕೃತ ಸಂಭಾಷಣಾ ಶಿಬಿರ'ವು ಏ.13ರಿಂದ ಏ.22ರ ವರೆಗೆ 10 ದಿನಗಳ ಕಾಲ ನಡೆಯಲಿದೆ. ಪುತ್ತೂರಿನ ಬೊಳುವಾರಿನಲ್ಲಿರುವ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದ 'ನವನೀತಂ ಸಭಾಂಗಣ'ದಲ್ಲಿ ಪ್ರತಿದಿನ ಬೆಳಗ್ಗೆ 10ರಿಂದ ಮಧ್ಯಾಹ್ನ 12ರ ವರೆಗೆ ಶಿಬಿರವನ್ನು ನಡೆಸಲಾಗುತ್ತದೆ. ಸಂಸ್ಕೃತ ಭಾರತೀಯದಲ್ಲಿ ಸಕ್ರಿಯ ಸದಸ್ಯೆ ಶ್ರೀಲತಾ ಕೆ.ಎಸ್ ಇಂದ್ರಪ್ರಸ್ಥ ಮೈಸೂರು ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಶಿಬಿರ ನಡೆಸಿಕೊಡಲಿರುವರು. 6 ವರ್ಷ ಮೇಲ್ಪಟ್ಟ ಎಲ್ಲರೂ ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ. 9591967066 ಅನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಚೇತನಾಗೆ ಹೋಮಿಯೋಪತಿ ಸಂಶೋಧನಾ ಪ್ರಶಸ್ತಿ

ಉಳ್ಳಾಲ: ವಿಶ್ವ ಹೋಮಿಯೋಪತಿ ದಿನ ಅಂಗವಾಗಿ ದೇರಳಕಟ್ಟೆ ಫಾದರ್ ಮುಲ್ಲರ್ ಹೋಮಿಯೋಪತಿ ಮೆಡಿಕಲ್ ಕಾಲೇಜಿನ



ಅಂತಿಮ ವರ್ಷದ ವಿದ್ಯಾರ್ಥಿನಿ ಚೇತನ ಪಿ.ಎಲ್. ಅವರಿಗೆ ಕೇಂದ್ರ ಹೋಮಿಯೋಪತಿ ಸಂಶೋಧನಾ ಮಂಡಳಿ (ಸಿಸಿಆರ್‌ಎಚ್) ವತಿಯಿಂದ ಸಂಶೋಧನಾ ಪ್ರಶಸ್ತಿ (ಎಲ್ ಟಿಎಸ್‌ಎಚ್ 2024) ಲಭಿಸಿದೆ. ದೆಹಲಿಯ ವಿಜ್ಞಾನ ಭವನದಲ್ಲಿ ಏ.10, 11ರಂದು ನಡೆದ ಸಮಾರಂಭದಲ್ಲಿ ಅವರು ಪ್ರಶಸ್ತಿ ಸ್ವೀಕರಿಸಿದರು. 'ಕಾಳುಮೆಣಸು ಬೆಳೆಗೆ ತಗಲುವ ಶಿಲೀಂಧ್ರ (ಫೈಟೊಪ್ಥೋರಾ ಕ್ಯಾಪ್ಸಿಸಿ) ವಿರುದ್ಧ ಹೋಮಿಯೋಪತಿ ಔಷಧಿಗಳ ಬಳಕೆ' ಕುರಿತಾದ ಅವರ ಸಂಶೋಧನಾ ಯೋಜನೆಗಾಗಿ ಈ ಪ್ರಶಸ್ತಿ ಲಭಿಸಿದೆ. ಅವರು ಉಳ್ಳಾಲ ತಾಲೂಕು ಲಾಡ ಬಗಂಬಿಲ ಜಿ.ಕೆ. ಪ್ರಸಾದ್ ಮತ್ತು ಜಯಶ್ರೀ ಪಿ. ದಂಪತಿ ಪುತ್ರಿ.

ಕೊಳಚಿಕಂಬಳ ದೈವಸ್ಥಾನ: ಧ್ವಜಾರೋಹಣ

ಮುಲ್ಕಿ: ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಆಡಳಿಕ್ಕೊಳಪಟ್ಟ ಕೊಳಚಿಕಂಬಳ ಶ್ರೀ ಜಾರಂದಾಯ, ಧೂಮಾವತಿ ದೈವಸ್ಥಾನದಲ್ಲಿ ಶ್ರೀ ಜಾರಂದಾಯ, ಧೂಮಾವತಿ ಮತ್ತು ಪರಿವಾರ ದೈವಗಳ ವರ್ಷಾವಧಿ ನೇಮದ ಪ್ರಯುಕ್ತ ಶನಿವಾರ ಮಧ್ಯಾಹ್ನ ಶ್ರೀ ಜಾರಂದಾಯ ಮತ್ತು ಧೂಮಾವತಿ ದೈವದ ದರುಶನದೊಂದಿಗೆ ಭಂಡಾರ ಇಳಿದು ಧ್ವಜಾರೋಹಣ ನೆರವೇರಿತು. ಊರ ಗುರಿಕಾರ ಡಾ. ಹರಿಶ್ಚಂದ್ರ ಪಿ ಸಾಲ್ಯಾನ್, ದೈವಸ್ಥಾನದ ಆಡಳಿತ ಸಮಿತಿಯ ಪ್ರಕಾಶ್ ಸುವರ್ಣ, ರಮಾನಾಥ ಸುವರ್ಣ, ಕೃಷ್ಣ ಸುವರ್ಣ ಸಾನದ ಮನೆ, ಮಹಿಳಾ ಮಂಡಳಿಯ ಲತಾ ಶೇಖರ್, ಯೂತ್ ಕ್ಲಬ್ಬಿನ ಪದಾಧಿಕಾರಿಗಳು. ಸಾನದ ಮನೆಯವರು. ಊರಿನ ಗ್ರಾಮಸ್ಥರು ಉಪಸ್ಥಿತರಿದ್ದರು. ಭಾನುವಾರ ನಾಗತಂಬಿಲ,ಮಧ್ಯಾಹ್ನ ಅನ್ನಸಂತರ್ಪಣೆ, ರಾತ್ರಿ ಶ್ರೀ ಜಾರಂದಾಯ, ಶ್ರೀ ಧೂಮಾವತಿ ಮತ್ತು ಪರಿವಾರ ದೈವಗಳ ನೇಮ ನಡೆಯಲಿದೆ.

ಕಂಪೌಂಡ್ ತೆರವು


ಬೆಳ್ತಂಗಡಿ: ಅಕ್ರಮವಾಗಿ ಸರಕಾರಿ ಜಾಗದಲ್ಲಿ ಕಂಪೌಂಡ್ ನಿರ್ಮಾಣ ಮಾಡಿದ ಬಗ್ಗೆ ಬೆಳ್ತಂಗಡಿ ಕಂದಾಯ ಇಲಾಖೆಗೆ ಬಂದ ದೂರಿನ ಹಿನ್ನೆಲೆಯಲ್ಲಿ ಪೊಲೀಸರ ನೇತೃತ್ವದಲ್ಲಿ ಕಂಪೌಂಡ್ ತೆರವು ಮಾಡಲಾಗಿದೆ. ಬೆಳ್ತಂಗಡಿ ನಗರದ ಜೈನ್ ಪೇಟೆಯ ರಾಜೇಶ್ ನಲಿಕೆ ಮತ್ತು ಶಾಜೀದಾ ನಡುವೆ ಜಾಗದ ತಕರಾರು ಪ್ರಕರಣದ ಸಂಬಂಧ ಸರಕಾರಿ ಜಾಗದಲ್ಲಿ ರಾಜೇಶ್ ನಲಿಕೆ ಎಂಬವರು ಅಕ್ರಮವಾಗಿ ಕಾಂಪೌಂಡ್ ನಿರ್ಮಾಣ ಮಾಡಿರುವ ದೂರಿನ ಮೇರೆಗೆ ಬೆಳ್ತಂಗಡಿ ಕಂದಾಯ ಇಲಾಖೆ ಮತ್ತು ಬೆಳ್ತಂಗಡಿ ಪೊಲೀಸರು ಏ.10ರಂದು ಕಾನೂನು ರೀತಿಯಲ್ಲಿ ತೆರವು ಮಾಡಿ ಸರಕಾರದ ವಶಕ್ಕೆ ಪಡೆದುಕೊಂಡಿದ್ದಾರೆ. ಕಂದಾಯ ನಿರೀಕ್ಷಕ ರಾಜು ಲಮಾಣಿ, ಗ್ರಾಮ ಆಡಳಿತಾಧಿಕಾರಿ ನಾರಾಯಣ ಕುಲಾಲ್ , ಗ್ರಾಮ ಸಹಾಯಕ ಸತೀಶ್, ಸರ್ವೆ ಇಲಾಖೆ ಮಲ್ಲು ಹಾಗೂ ಪೊಲೀಸರು ಇದ್ದರು.

ಮಾಣಿ ಪೆರಾಜೆ ಶ್ರೀ ರಾಮಚಂದ್ರಾಪುರ ಮಠಕ್ಕೆ ಭೇಟಿ, ಮಠದ ದೇವತಾ ಸಾನಿಧ್ಯ ದರುಶನ

ಪರಂಪರೆ, ಸಂಸ್ಕೃತಿಯ ನಿರಂತರ ಪಾಲನೆ ಅತ್ಯಗತ್ಯ: ಕಂಚಿ ಶ್ರೀ

ಪುತ್ತೂರು: ಪರಂಪರೆ, ಸಂಸ್ಕೃತಿಯ ನಿರಂತರ ಪಾಲನೆ ಅಗತ್ಯವಾಗಿದೆ. ಕುಲಗಳು ಒಂದಾದಾಗ ಬಲ ಹೆಚ್ಚಾಗುತ್ತದೆ. ಈ ಮೂಲಕ ಸಮಾಜದ ಶಕ್ತಿ ವೃದ್ಧಿಸುತ್ತದೆ. ಸಂಸ್ಕಾರದ ಸಂರಕ್ಷಣೆಯ ಕಾರ್ಯಗಳನ್ನು ಸಮಾಜ ಮಾಡಬೇಕು. ಯೋಗ ಸಾಧನೆಯ ಕಾರ್ಯ ನಡೆಯಬೇಕಾಗಿದೆ ಎಂದು ಶ್ರೀ ಕಂಚಿ ಕಾಮಕೋಟಿ ಪೀಠ ಶ್ರೀ ಜಗದ್ಗುರು ಶ್ರೀ ಶಂಕರ ವಿಜೇಯೇಂದ್ರ ಸರಸ್ವತಿ ಸ್ವಾಮಿಜಿ ಹೇಳಿದರು.

ಮಾಣಿ ಪೆರಾಜೆ ಶ್ರೀ ರಾಮಚಂದ್ರಾಪುರ ಮಠಕ್ಕೆ ಕಂಚಿ ಕಾಮಕೋಟಿ ಪೀಠ ಶ್ರೀಗಳು ಭೇಟಿ ನೀಡಿ ಮಠದ ದೇವತಾ ಸಾನಿಧ್ಯ ದರ್ಶನ ಪಡೆದು ಆಶೀರ್ವಚನ ನೀಡಿ, ಕುಲ ದೇವತಾ, ಕುಲ ಗುರುಗಳ ನೆನಪು ಪ್ರತಿಯೊಬ್ಬರಲ್ಲಿ ಇರಬೇಕು. ಆಚರಣೆಗಳನ್ನು ಕಾಲಕಾಲಕ್ಕೆ ನಡೆಸಿದಾಗ ಮಾತ್ರ ನಮ್ಮ ಏಳಿಗೆ ಸಾಧ್ಯವಾಗುತ್ತದೆ. ಸಮಾಜದ ಪರಿವರ್ತನೆಗಳಿಗಾಗಿ ಪ್ರತಿಯೊಬ್ಬರು ಕೆಲಸ ಮಾಡಬೇಕು. ಸಮಾಜದ ಹಿತಕ್ಕಾಗಿ ರಾಮಚಂದ್ರಾಪುರ ಮಠ ಗ್ರಾಮಣಿಗಳನ್ನೊಳಗೊಂಡ ವ್ಯವಸ್ಥೆಯನ್ನು ಇಟ್ಟುಕೊಂಡಿದೆ. ಸಂಸ್ಥೆಗಳು ಇದ್ದಾಗ ಆಧ್ಯಾತ್ಮಿಕ ಪ್ರಗತಿ, ಆರ್ಥಿಕ ಅಭಿವೃದ್ಧಿಗೆ



ಸಹಕಾರವಾಗುತ್ತದೆ ಎಂದರು.

ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿ ಅನುಗ್ರಹ ಸಂದೇಶ ನೀಡಿದರು. ರಾಮಚಂದ್ರಾಪುರ ಮಠದಿಂದ ಉಪಾಯನದ ಸಮರ್ಪಣೆ, ಸಾಲಿಗ್ರಾಮ ಸಹಿತ ಸ್ವರ್ಣ ಖಚಿತ ರುದ್ರಾಕ್ಷಿಯ ಹಾರ ಸಮರ್ಪಣೆ ಮಾಡಲಾಯಿತು. ಕಂಚಿ ಮಠದಿಂದ ಉಪಾಯನದ ಸಮರ್ಪಣೆ ನಡೆಯಿತು. ಪೆರಾಜೆ ಮಠದ ಶ್ರೀ ದೇವರ ಪುಷ್ಪ ರಥೋತ್ಸವಕ್ಕೆ ಚಾಲನೆಯನ್ನು ಕಂಚಿ ಶ್ರೀ ನೀಡಿದರು. ಪ್ರಶಾಸನಾಧಿಕಾರಿ ಸಂತೋಷ್ ಹೆಗಡೆ, ವಕೀಲರಾದ ಡಾ. ಅರುಣ್ ಶ್ಯಾಮ, ರಾಜಶೇಖರ್, ಕರ್ನಾಟಕ ಮಾನವ ಹಕ್ಕುಗಳ ಆಯೋಗ್ಯದ ಅಧ್ಯಕ್ಷ ಡಾ. ಟಿ. ಶ್ಯಾಮ್ ಭಟ್, ಕಲ್ಲಡ್ಕ ಪ್ರಭಾಕರ ಭಟ್, ಮಹಾಮಂಡಲ ಅಧ್ಯಕ್ಷ ಹರಿಪ್ರಸಾದ್ ಪೆರಿಯಾಪು ಮತ್ತಿತರರು ಉಪಸ್ಥಿತರಿದ್ದರು. ಶಾಸನತಂತ್ರ ಕಾರ್ಯದರ್ಶಿ ಕೃಷ್ಣಪ್ರಸಾದ್ ಎಡಪ್ಪಾಡಿ ಕಾರ್ಯಕ್ರಮ ನಿರೂಪಿಸಿದರು.

> ಧರ್ಮ ರಕ್ಷಣೆ, ವೇದ ರಕ್ಷಣೆಯ ಕಾರ್ಯ ಕಂಚಿ ಮಠದಿಂದ ಪಾತ್ರ ದೊಡ್ಡದಿದೆ. ಪ್ರತಿ ಮನೆಯಲ್ಲಿ ಆರೋಗ್ಯ ನೆಮ್ಮದಿ ಇರಬೇಕು. ಆಹಾರ ಶುದ್ಧದಿಂದ ಜೀವನ ಶುದ್ಧವಾಗುತ್ತದೆ. ತೋಟದಲ್ಲಿ ಅಡಿಕೆ, ಮನೆಯಲ್ಲಿ ಅಡಿಗೆ ಎರಡು ಮುಖ್ಯವಾಗಿದೆ ಎಂಬುದು ಕಂಚಿ ಗುರುಗಳ ಸಂದೇಶವನ್ನು ಆಚರಿಸುವ ಆಗತ್ಯವಿದೆ. ಅಭಿಮಾನವನ್ನು ಉಳಿಸುವ ಜವಾಬ್ದಾರಿಯಿದೆ. ಧರ್ಮ ಸಂಸ್ಕೃತಿಯ ರಕ್ಷಣೆ ಶಿಷ್ಯರ ಹೊಣೆಯಾಗಿದೆ. ಪರಂಪರೆಯನ್ನು ಉಳಿಸುವ ಜತೆಗೆ ಸಮಾಜ ರಕ್ಷಣೆ ಕಾರ್ಯವಾಗಬೇಕು. ದಕ್ಷಿಣ ಕನ್ನಡಕ್ಕೆ ಆಗಾಗ ಶ್ರೀಗಳ ಆಗಮನ ಆದಾಗ ಸನಾತನಿಗಳಿಗೆ ಪ್ರಯೋಜನವಾಗಲಿದೆ.
>
> ● ರಾಘವೇಶ್ವರ ಭಾರತೀ ಶ್ರೀ

ಸುಳ್ಯದಲ್ಲಿ ಕಾರ್ಯಕ್ರಮ

ಶ್ರೀ ಕಂಚಿ ಕಾಮಕೋಟಿ ಪೀಠ ಶ್ರೀ ಜಗದ್ಗುರು ಶ್ರೀ ಶಂಕರ ವಿಜೇಯೇಂದ್ರ ಸರಸ್ವತಿ ಶ್ರೀಗಳು ಸುಳ್ಯದ ಅರಂಬೂರು ಭಾರದ್ವಾಜ ಆಶ್ರಮದಲ್ಲಿ ವೇದಾ ವಿದ್ಯಾಲಯ ಲೋಕಾರ್ಪಣಾ ಕಾರ್ಯಕ್ರಮದಲ್ಲಿ ಭಾಗವಹಿಸುವ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಿದ್ದರು.

ವಿವೇಕ ಸ್ಮೃತಿ ಕಾರ್ಯಕ್ರಮದಲ್ಲಿ ಉಪನ್ಯಾಸಕಿ ಡಾ. ಉಷಾರಾಣಿ ಸಲಹೆ

ಆದರ್ಶ ವ್ಯಕ್ತಿಗಳ ತತ್ವಾದರ್ಶಗಳನ್ನು ಮೈಗೂಡಿಸಿ

ಪುತ್ತೂರು: ಹಿಂದೂ ಧರ್ಮವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ನಮಗೆಲ್ಲರಿಗೂ ಆದರ್ಶವಾದವರು ಸಹೋದರಿ ನಿವೇದಿತಾ. ಅಪಾರ ಪ್ರತಿಭಾ ಸಂಪನ್ನೆಯಾದ ಇವರು ಭಾರತೀಯ ಅಧ್ಯಾತ್ಮ, ಸಂಸ್ಕೃತಿಗೆ ಮನಸೋತು ಭಾರತಕ್ಕೆ ಬಂದವರು. ದೇಶಭಕ್ತಿಯನ್ನು ಇಟ್ಟುಕೊಳ್ಳುವುದರ ಜೊತೆಗೆ ಪ್ರತಿಯೊಬ್ಬ ಮಹಿಳೆಯೂ ಬದಲಾಗಬೇಕೆಂದು ಬಯಸಿದವರು ಎಂದು ಮಂಗಳೂರು ಸ್ವಸ್ತಿಕ್ ನ್ಯಾಷನಲ್ ಬಿಸಿನೆಸ್ ಕಾಲೇಜು ಸಮಾಜ ಕಾರ್ಯ ವಿಭಾಗ ಉಪನ್ಯಾಸಕಿ ಡಾ. ಉಷಾರಾಣಿ ಬಿ. ಹೇಳಿದರು.

ಅವರು ಪುತ್ತೂರಿನ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾ ವಿದ್ಯಾಲಯ (ಸ್ವಾಯತ್ತ), ವಿವೇಕಾನಂದ ಸ್ನಾತಕೋತ್ತರ ಅಧ್ಯಯನ ಕೇಂದ್ರ, ವಿವೇಕಾನಂದ ಸಂಶೋಧನಾ ಕೇಂದ್ರ ಮತ್ತು ಐಕ್ಯೂಎಸಿ, ಭಾರತೀಯ ಸಂಸ್ಕೃತಿ ಮತ್ತು ಲಲಿತ ಕಲೆಗಳ ಅಧ್ಯಯನ ಕೇಂದ್ರ ಹಾಗೂ ವಿವೇಕಾನಂದ ವಿದ್ಯಾರ್ಥಿ ವಸತಿ ನಿಲಯದ ಆಶ್ರಯದಲ್ಲಿ ನಿವೇದಿತಾ ವಿದ್ಯಾರ್ಥಿ ವಸತಿ ನಿಲಯದಲ್ಲಿ ನಡೆದ ವಿವೇಕ ಸ್ಮೃತಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ಬಾಲ್ಯದಲ್ಲೇ ವಿವೇಕಾನಂದರ ಸಂದೇಶ ಮೈಗೂಡಿಸಿಕೊಂಡು ಭಾರತದಲ್ಲಿನ



> ಆದರ್ಶ ಬದುಕನ್ನು ರೂಪಿಸಿಕೊಳ್ಳಲು ಸ್ವಾಮಿ ವಿವೇಕಾನಂದ ಮತ್ತು ನಿವೇದಿತಾರನ್ನು ಆದರ್ಶವಾಗಿಟ್ಟುಕೊಳ್ಳಬೇಕು. ವಿದೇಶದಿಂದ ಭಾರತಕ್ಕೆ ಬಂದು ಇಲ್ಲಿನ ಮಹಿಳೆಯರ ಸಬಲೀಕರಣಕ್ಕೆ ಶ್ರಮಿಸಿದ್ದು ನಿಜಕ್ಕೂ ಶ್ಲಾಘನೀಯ .
>
> ● ರಮೇಶ ಪ್ರಭು, ವಿವೇಕಾನಂದ ವಸತಿ ನಿಲಯದ ಅಧ್ಯಕ್ಷ

ಮೂಢನಂಬಿಕೆಯನ್ನು ಹೋಗಲಾಡಿಸುವುದರೊಂದಿಗೆ ಮಹಿಳೆಯರ ಸಬಲೀಕರಣಕ್ಕೆ ಶ್ರಮಿಸಿದರು. ಶಿಕ್ಷಕಿ, ಸಮಾಜಸೇವಕಿ ಹಾಗೂ ಬರಹಗಾರ್ತಿಯಾಗಿ ಭಾರತೀಯ ಸಂಸ್ಕೃತಿಯನ್ನು ತನ್ನಲ್ಲಿ ಬೆಳೆಸಿಕೊಂಡು ಜನರಲ್ಲೂ ಅದನ್ನು ಅಳವಡಿಸಲು ಮುಂದಾದರು ಈಕೆ. ಇಂತಹ ಒಬ್ಬ ಆದರ್ಶ ವ್ಯಕ್ತಿಯ ತತ್ವಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಮುಖ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ವಿವೇಕಾನಂದ ವಸತಿ ನಿಲಯದ ಅಧ್ಯಕ್ಷ ರಮೇಶ ಪ್ರಭು ಮಾತನಾಡಿದರು. ವೇದಿಕೆಯಲ್ಲಿ ವಿವೇಕಾನಂದ ವಸತಿ ನಿಲಯದ ಆಡಳಿತಾಕಾರಿ ಗೋವಿಂದರಾಜ ಶರ್ಮಾ, ವಿವೇಕಾನಂದ ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣಗಣರಾಜ್ ಭಟ್ ಉಪಸ್ಥಿತರಿದ್ದರು. ವಿವೇಕಾನಂದ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಡೀನ್ ಡಾ. ವಿಜಯಸರಸ್ವತಿ ಬಿ. ಸ್ವಾಗತಿಸಿ, ಕಾಲೇಜಿನ ಕನ್ನಡ ವಿಭಾಗದ ಉಪನ್ಯಾಸಕಿ ಸ್ವಾತಿ ವಂದಿಸಿದರು. ತೃತೀಯ ಬಿಎ ವಿದ್ಯಾರ್ಥಿನಿ ಸುಮನ ನಿರ್ವಹಿಸಿದರು.

ವಿಶೇಷ ವಸ್ತುಪ್ರದರ್ಶನ ಉದ್ಘಾಟಿಸಿ ಡಾ. ರಾಘವೇಂದ್ರ ಹೊಳ್ಳ ಬಣ್ಣನೆ

ಪ್ರತಿ ವಸ್ತುವಿನಲ್ಲೂ ತುಳುನಾಡ ಇತಿಹಾಸ ಅಡಗಿದೆ

ಬಂಟ್ವಾಳ: ಇತಿಹಾಸವನ್ನು ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯವನ್ನು ನಡೆಸುತ್ತಿರುವ ರಾಣಿ ಅಬ್ಬಕ್ಕ ವಸ್ತು ಸಂಗ್ರಹಾಲಯವನ್ನು ಐಎಫ್‌ಎ ಮತ್ತು ಟಾಟಾ ಸಂಸ್ಥೆ ಗುರುತಿಸಿರುವುದು ಶ್ಲಾಘನೀಯ ಕಾರ್ಯ ಎಂದು ಮಂಗಳೂರು ಸ್ವಸ್ತಿಕಾ ಬಿಸ್ ನೆಸ್ ಸ್ಕೂಲ್‌ನ ಅಧ್ಯಕ್ಷ ಡಾ. ರಾಘವೇಂದ್ರ ಹೊಳ್ಳ ಹೇಳಿದರು.

ಬಿ.ಸಿ.ರೋಡಿನ ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರದಲ್ಲಿ ಬೆಂಗಳೂರಿನ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐಎಫ್‌ಐ) ಸಂಸ್ಥೆಯ ಆರ್ಕೈವ್ ಮತ್ತು ಮ್ಯೂಸಿಯಂಸ್ ಕಾರ್ಯಕ್ರಮದ ಅಡಿಯಲ್ಲಿ, ರಾಣಿ ಅಬ್ಬಕ್ಕ ತುಳು ಸಂಗ್ರಹಾಲಯ ಮತ್ತು ಅಧ್ಯಯನ ಕೇಂದ್ರದ ಹಾಗೂ ಟಾಟಾ ಟ್ರಸ್ಟ್ ಸಹಯೋಗದಲ್ಲಿ ಶನಿವಾರ ಆರಂಭಗೊಂಡ 'ಹಸಿರು ಹೊದಿಕೆಯಡಿ-ತುಳು ಜೀವನದ ಸಾಂಸ್ಕೃತಿಕ ಪರಂಪರೆ' ಎಂಬ ವಿಶೇಷ ವಸ್ತು ಪ್ರದರ್ಶನ ಉದ್ಘಾಟಿಸಿ, ಮಾತನಾಡಿದರು.

ತುಳುನಾಡಿನ ಪ್ರತೀ ವಸ್ತುಗಳು ಇತಿಹಾಸವನ್ನು ತಿಳಿಸುತ್ತದೆ, ಅದರಲ್ಲೂ ತೆಂಗಿನ ಗೆರಟೆ ಎನ್ನುವ ಚಿಕ್ಕವಸ್ತು ಮಾಡುವ ಇತಿಹಾಸದ ಪಾಠ ಪ್ರದರ್ಶನದ ಪ್ರಮುಖ ಆಕರ್ಷಣೆಯಾಗಿರುವುದು ವಿಶೇಷ ಎಂದರು.

ಡಾ. ತುಕಾರಾಂ ಪೂಜಾರಿಯವರು



ಅವಿರತ ಶ್ರಮದ ಮುಖೇನ ಕಟ್ಟಿದ ಈ ವಸ್ತುಸಂಗ್ರಹಾಲಯ ಮುಂದಿನ ದಿನಗಳಲ್ಲಿ ದೇಶ ವಿದೇಶಿಗರ ಆಕರ್ಷಣೆಯ ಕೇಂದ್ರವಾಗಲಿದೆ ಎಂದರು.

ಐಎಫ್‌ಎ ಕಾರ್ಯಕ್ರಮ ಸಂಯೋಜಕಿ ರುತ್ವಿಕಾ ಮಿಶ್ರಾ ರವರು ಮಾತನಾಡಿ, ಐಎಫ್‌ಎಯ ಮೂಲ ಆಶಯಗಳು ರಾಣಿ ಅಬ್ಬಕ್ಕ ಕೇಂದ್ರದ ವಸ್ತುಗಳ ಮುಖೇನ ಜನಸಮುದಾಯಕ್ಕೆ ತಲುಪುತ್ತಿರುವುದು ಸಂತೋಷದ ವಿಚಾರ ಎಂದರು.

ಮೂರು ಯೋಜನೆಗಳಿಗೆ ನೆರವು

ರಾಣಿ ಅಬ್ಬಕ್ಕ ಅಧ್ಯಯನ ಕೇಂದ್ರದ ಅಧ್ಯಕ್ಷ ಡಾ. ತುಕಾರಾಮ್ ಪೂಜಾರಿಯವರು ಪ್ರಾಸ್ತಾವಿಕ ಮಾತನಾಡಿ, ಸ್ಥಳೀಯ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಐಎಫ್‌ಎ ಅತ್ಯುತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ ಎನ್ನುವುದಕ್ಕೆ ಈ ಕಾರ್ಯಕ್ರಮವೇ ಸ್ಪಷ್ಟ ನಿದರ್ಶನ ಎಂದ ಅವರು, ಕೇಂದ್ರದ ಸಹಯೋಗದಲ್ಲಿ ನಡೆಯುವ ಮೂರು ಯೋಜನೆಗಳಿಗೆ ಐಎಫ್‌ಎ ಅನುದಾನದ ನೆರವು ನೀಡುತ್ತಿದೆ ಎಂದರು.

ಐಎಫ್‌ಎ ಅನುದಾನದ ಮುಖೇನ ವಸ್ತುಪ್ರದರ್ಶನವನ್ನು ಆಯೋಜಿಸಿರುವ ಕ್ಯುರೇಟರ್‌ಗಳಾದ ಮಧುಶ್ರೀ ಕಾಮತ್ ಹಾಗೂ ಬ್ರಿಯನ್ ಡಿಸೋಜಾ ರವರು ಮಾತನಾಡಿ, ವಸ್ತು ಪ್ರದರ್ಶನದ ಆಯೋಜನೆ ಕುರಿತಾದ ಹಿನ್ನೋಟ ಹಾಗೂ ಮುನ್ನೋಟಗಳನ್ನು ವಿವರಿಸಿದರು. ಶ್ರಿಯದಿತ್ ಪ್ರಾರ್ಥಿಸಿದರು. ಸಿಂಧೂರಾ ಟಿ.ಪಿ. ಸ್ವಾಗತಿಸಿ, ವಂದಿಸಿದರು. ಡಾ. ಆಶಾಲತಾ ಸುವರ್ಣ ಸಹಕರಿಸಿದರು.

ಕಿನ್ನಿಗೋಳಿ ಶ್ರೀರಾಮ ಮಂದಿರದಲ್ಲಿ ಪ್ರತಿಷ್ಠಾ ವರ್ಧಂತಿ: ವಿಶೇಷ ಪೂಜೆ, ಹವನ



ಕಿನ್ನಿಗೋಳಿ: ಕಿನ್ನಿಗೋಳಿ ಶ್ರೀ ರಾಮ ಮಂದಿರದಲ್ಲಿ ಏ.12ರಂದು ರಂದು ಪ್ರತಿಷ್ಠಾ ವರ್ಧಂತಿ ಅಂಗವಾಗಿ ರಾಮ ಮೂಲ ಮಂತ್ರ ಹವನ ಹಾಗೂ ಶ್ರೀ ರಾಮ ಸಹಿತ ಹನುಮಂತ ದೇವರಿಗೆ ಪಂಚಾಮೃತ ಕಲಶಾಭಿಷೇಕ , ಸಾನಿದ್ಯ ಹವನ , ದೇವರಿಗೆ ವಿವಿಧ ಅಭಿಷೇಕ , ಭಜನ ಕಾರ್ಯಕ್ರಮ ಸಮಾರಾಧನೆ ನಡಯಿತು.

ವಿವಿಧ ಧಾರ್ಮಿಕ ಕಾರ್ಯಕ್ರಮ

ಮಂದಿರದ ಪ್ರಧಾನ ಅರ್ಚಕ ವೆ. ಮೂ. ಗಿರೀಶ್ ಭಟ್ ಅವರ ಮುತವರ್ಜಿಯಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಯಿತು. ವೆ. ಮೂ, ಅರುಣ್ ಭಟ್, ಉಮೇಶ್ ಭಟ್ ಮಂದಿರ ಅಧ್ಯಕ್ಷ ರಾಜೇಶ್ ನಾಯಕ್ , ಉಪಾಧ್ಯಕ್ಷ ಅದಿತ್ಯ ಕಾಮತ್, ಕಾರ್ಯದರ್ಶಿ ರಾಘವೇಂದ್ರ ಪ್ರಭು, ಕೋಶಾಧಿಕಾರಿ ಸುಧೀರ್ ಶೆಣೈ, ಆಡಳಿತ ಮಂಡಳಿಯ ವಿನಾಯಕ ಮಲ್ಯ , ಅಚ್ಯುತ ಪ್ರಭು, ಪ್ರಜ್ವಲ್ ನಾಯಕ್, ಗಣನಾಥ ಮಲ್ಯ, ನರೇಂದ್ರ ಪ್ರಭು , ರಾಧಾಕೃಷ್ಣ ನಾಯಕ್ , ಅನಂತ ಕಾಮತ್, ಪಾಜೇ ಪುರುಷೋತ್ತಮ ಶೆಣೈ, ಹಾಗೂ ಮಾತೃ ಮಂಡಳಿಯ ಸದಸ್ಯರು, ಯೂತ್ ಜಿ. ಎಸ್. ಬಿಯ ಸದಸ್ಯರು ಇದ್ದರು.

ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಳದಲ್ಲಿ ಮಹಾರಥೋತ್ಸವ ಸಂಪನ್ನ

ಆಲಂಕಾರು: ಕಡಬ ತಾಲೂಕು ಆಲಂಕಾರು ಗ್ರಾಮದ ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಾಲಯದ ವಾರ್ಷಿಕ ಜಾತ್ರೋತ್ಸವದ ಅಂಗವಾಗಿ ಶನಿವಾರ ರಾತ್ರಿ ಮಹಾರಥೋತ್ಸವ ನಡೆಯಿತು.

ಬೆಳಿಗ್ಗೆ ಬಲಿಹೊರಟು ಉತ್ಸವ, ಕ್ಷೇತ್ರದ ನಾಗಬನದಲ್ಲಿ ಆಶ್ಲೇಷ ಬಲಿ ಮಹಾಪೂಜೆ, ನಿತ್ಯ ಬಲಿ ಪ್ರಸಾದ ವಿತರಣೆ, ಅನ್ನ ಸಂತರ್ಪಣೆ ನಡೆಯಿತು. ಸಾಯಂಕಾಲ ಸವಾರಿ ಮಂಟಪ ಕಟ್ಟೆಪೂಜೆಗಳು ವಸಂತ ಕಟ್ಟೆ ಪೂಜೆ, ಮಹಾಪೂಜೆ, ಭೂತಬಲಿ ನಡೆದು ಮಹಾರಥೋತ್ಸವ ನಡೆಯಿತು. ಬಳಿಕ ವಸಂತಕಟ್ಟೆ ಪೂಜೆ, ಮಹಾಪೂಜೆ, ಭೂತಬಲಿ ಕವಾಟಬಂಧನ ನಡೆಯಿತು. ಏ.12ರಂದು ಭಾನುವಾರ ಬೆಳಿಗ್ಗೆ ಕವಾಟೋದ್ಘಾಟನೆ, ಪ್ರಸನ್ನಪೂಜೆ, ಶಯನ ಪ್ರಸಾದ ವಿತರಣೆ ಬಳಿಕ ಯಾತ್ರಾಹೋಮ ನಡೆಯಿತು. ಸಂಜೆ ಅವಭೃತ ಮೆರವಣಿಗೆ ಕಟ್ಟೆಪೂಜೆಗಳು ನಡೆದು ಶಾಂತಿಮೊಗರು ಕುಮಾರಧಾರೆಯಲ್ಲಿ ಅವಭೃತ ನಡೆದು ಧ್ವಜಾವರೋಹಣ ಪ್ರಸಾದ ವಿತರಣೆ ನಡೆಯಿತು. ಈ ಸಂಧರ್ಭದಲ್ಲಿ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಕೆ ಸುಬ್ರಹ್ಮಣ್ಯ ರಾವ್ ನಗ್ರಿ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಗೋಪಾಲಕೃಷ್ಣ ಪಡ್ಡಿಲ್ಲಾಯ, ಜೀರ್ಣೋದ್ದಾರ ಸಮಿತಿ ಅಧ್ಯಕ್ಷ ಹೇಮಂತ



ರೈ ಮನವಳಿಕೆ ಗುತ್ತು, ಪವಿತ್ರಪಾಣಿ ಎನ್ ಹರೀಶ್ ಆಚಾರ್ಯ ನಗ್ರಿ ಗುತ್ತು ಸೇರಿದಂತೆ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಭದ್ರಕಾಳಿ ಅಮ್ಮನವರ ಪೂಜೆ

ಇಂದು (ಏ.13) ಬೆಳಿಗ್ಗೆ ಭದ್ರಕಾಳಿ ಅಮ್ಮನವರ ಗುಡಿಯಲ್ಲಿ ಶರವೂರು ಸುಬ್ರಹ್ಮಣ್ಯ ರಾವ್ ಮತ್ತು ಮನೆಯವರಿಂದ ವಿಶೇಷಪೂಜೆ ನಡೆದ ಬಳಿಕ ಶಿರಾಡಿ ಮತ್ತು ಗುಳಿಗ ದೈವಗಳ ನೇಮವು ನಡೆಯಲಿದೆ. ಇದೇ ವೇಳೆ ಅಯ್ಯಪ್ಪ ಭಕ್ತವೃಂದ ಶರವೂರು ಆಲಂಕಾರು, ರಾಮಕುಂಜ ಇವರಿಂದ ಗಂಜಿ ಊಟದ ಸೇವೆಯು ಕ್ಷೇತ್ರದಲ್ಲಿ ನಡೆಯಲಿದೆ ಎಂದು ವ್ಯವಸ್ಥಾಪನಾ ಸಮಿತಿ ತಿಳಿಸಿದೆ.

ಪುತ್ತೂರು ಜಾತ್ರಾ ಸಂಭ್ರಮ: ಬಲಿ ಉತ್ಸವ, ದೇವರ ಪೇಟೆ ಸವಾರಿ



ಪುತ್ತೂರು: ಇತಿಹಾಸ ಪ್ರಸಿದ್ಧ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ವಾರ್ಷಿಕ ಜಾತ್ರೆ ಅಂಗವಾಗಿ ಏ.10 ರಂದು ಧ್ವಜಾರೋಹಣ ನಡೆದು ಜಾತ್ರಾ ಪ್ರಧಾನ ಆಕರ್ಷಣೆಯಾದ ಪೇಟೆ ಸವಾರಿ ಆರಂಭಗೊಂಡಿದೆ.

ಭಾನುವಾರ ಬೆಳಗ್ಗೆ ಬಲಿ ಉತ್ಸವದಲ್ಲಿ ಸಾವಿರಾರು ಸಂಖ್ಯೆಯ ಭಕ್ತರು ಪಾಲ್ಗೊಂಡರು. ದೇವಾಲಯದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ, ಸದಸ್ಯರಾದ ವಸಂತ ಕೆದಿಲಾಯ, ಈಶ್ವರ ಬೆಡೇಕರ್, ಕೃಷ್ಣ ವೇಣಿ, ನಳಿನಿ ಪಿ. ಶೆಟ್ಟಿ, ದಿನೇಶ್ ಕುಲಾಲ್, ಮಹಾಬಲ ರೈ ಒಳತ್ತಡ್ಕ, ಸುಭಾಶ್ ರೈ ಬೆಳ್ಳಿಪ್ಪಾಡಿ, ವಿನಯ ಸುವರ್ಣ, ಕಾರ್ಯನಿರ್ವಹಣಾಧಿಕಾರಿ ಕೆ.ವಿ. ಶ್ರೀನಿವಾಸ, ವ್ಯವಸ್ಥಾಪಕ ಹರೀಶ್ ಶೆಟ್ಟಿ ಮೊದಲಾದವರು ಪಾಲ್ಗೊಂಡರು. ವಿಶೇಷವಾಗಿ ಮಧ್ಯಾಹ್ನ ಅನ್ನ ಸಂತರ್ಪಣೆಯಲ್ಲೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಅನ್ನ ಪ್ರಸಾದ ಸ್ವೀಕರಿಸಿದರು. ಸಂಜೆ ಉತ್ಸವ, ಶಿವಪೇಟೆ, ತೆಂಕಿಲ, ಕೊಟ್ಟಿಬೆಟ್ಟು, ಏಳ್ನಾಡುಗುತ್ತು, ಬೈಪಾಸ್ ಹೆದ್ದಾರಿ, ರಾಧಾಕೃಷ್ಣ ಮಂದಿರ ಸವಾರಿ ನಡೆಯಿತು. ಅಲ್ಲಲ್ಲಿ ದೇವರ ಕಟ್ಟೆಗಳಲ್ಲಿ ಸಾವಿರಾರು ಸಂಖ್ಯೆಯ ಭಕ್ತರು ದೇವರಿಗೆ ಸೇವೆ ನೆರವೇರಿಸಿದರು.

ಇಂದಿನ ಪೇಟೆ ಸವಾರಿ

ಏ.13ಕ್ಕೆ ಸಂಜೆ ಉತ್ಸವ, ಪೇಟೆ ಸವಾರಿ ಕೋರ್ಟು ರಸ್ತೆ, ಸೈನಿಕ ಭವನ ರಸ್ತೆ, ಬಪ್ಪಳಿಗೆ, ಉರ್ಲಾಂಡಿ, ಬೊಳುವಾರು ಬೈಲು ಸವಾರಿ ನಡೆಯಲಿದೆ.

ಪುತ್ತೂರು ವಿವೇಕಾನಂದ (ಸ್ವಾಯತ್ತ) ಪದವಿ, ಸ್ನಾತಕೋತ್ತರ ಪದವಿಗಳ ರ್‍ಯಾಂಕ್ ಪಟ್ಟಿ ಪ್ರಕಟ

2024-25ರ ಪದವಿ ಪರೀಕ್ಷೆಯಲ್ಲಿ ಒಟ್ಟು ಎಂಟು ರ್‍ಯಾಂಕ್‌ಗಳ ಸಾಧನೆ

ಪುತ್ತೂರು: ನಗರದ ವಿವೇಕಾನಂದ ಕಲಾ, ವಿಜ್ಞಾನ ಹಾಗೂ ವಾಣಿಜ್ಯ (ಸ್ವಾಯತ್ತ) ಕಾಲೇಜ್ 2024-25ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ನಡೆಸಿದ ಪದವಿ ಪರೀಕ್ಷೆಯಲ್ಲಿ ಒಟ್ಟು 8 ರ್‍ಯಾಂಕ್‌ಗಳನ್ನು ಘೋಷಿಸಲಾಗಿದೆ. ಬಿ.ಎ. ವಿಭಾಗದಲ್ಲಿ ಕೋಲಾರದ ವೈಷ್ಣವಿ ಶೆಟ್ಟಿ (ಶೇ.98.62) ಪ್ರಥಮ, ಬಿಎಸ್ಸಿ ವಿಭಾಗದಲ್ಲಿ ಸೋಮವಾರಪೇಟೆಯ ಧನ್ಯಶ್ರೀ ಸಿ.ಡಿ. (96.17) ಪ್ರಥಮ, ಬಿಬಿಎ ವಿಭಾಗದಲ್ಲಿ ಬಂಟ್ವಾಳದ ತನಿಷಾ ಬಿ. (93.37) ಪ್ರಥಮ, ಬಿಕಾಂ ವಿಭಾಗದಲ್ಲಿ ಸುಳ್ಯದ ಪ್ರಜ್ಞಾ ಕೆ.(96.65) ಪ್ರಥಮ ರ್‍ಯಾಂಕ್ ಹಾಗೂ ಬೆಳ್ತಂಗಡಿಯ ಅಮೃತಾ (96.51) ದ್ವಿತೀಯ, ಬಿಸಿಎ ವಿಭಾಗದಲ್ಲಿ ಬಂಟ್ವಾಳದ ಚೈತ್ರಾ ಯು.ಎಂ. (96.29) ಪ್ರಥಮ, ರ್‍ಯಾಂಕ್, ಕಬಕ ಪಡ್ನೂರಿನ ಮೇಘನಾ(95.82) ದ್ವಿತೀಯ ಹಾಗೂ ಪೆರ್ಲದ ದೀಕ್ಷಾ ಬಿ.(94.22) ತೃತೀಯ ರ್‍ಯಾಂಕ್‌ಗಳನ್ನು ಗಳಿಸಿದ್ದಾರೆ. 2023-24ರ ಸಾಲಿನ ಸ್ನಾತಕೋತ್ತರ ಪದವಿಯಲ್ಲಿ ಒಟ್ಟು 4 ರ್‍ಯಾಂಕ್‌ಗಳು ಲಭಿಸಿದ್ದು ಎಂಕಾಂ ವಿಭಾಗದಲ್ಲಿ ಪಡ್ನೂರಿನ ಧನ್ಯಾಶ್ರೀ ಐ.(9.03 ಸಿಜಿಪಿಎ) ಪ್ರಥಮ, ಎಂಎಸ್ಸಿ ರಸಾಯನಶಾಸ್ತ್ರದಲ್ಲಿ ಪಡ್ನೂರಿನ ವಂದನಾ ಎಸ್.ಎಂ.(8.01) ಪ್ರಥಮ, ಎಂಎಸ್ಸಿ ಗಣಿತಶಾಸ್ತ್ರ ವಿಭಾಗದಲ್ಲಿ ವೀರಮಂಗಲದ ವಿದ್ಯಾ ವಿ.(7.05) ಪ್ರಥಮ, ಜೆಎಂಸಿ ವಿಭಾಗದಲ್ಲಿ ಕಡೆಶಿವಾಲಯದ ಲಾವಣ್ಯ ಎಸ್.(8.66 ಸಿಜಿಪಿಎ) ಪ್ರಥಮ ರ್‍ಯಾಂಕ್‌ಗಳನ್ನು ಗಳಿಸಿದ್ದಾರೆ. 2024-25ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಪದವಿ ವಿಭಾಗದಲ್ಲಿ ಒಟ್ಟು 3 ರ್‍ಯಾಂಕ್‌ಗಳು ಲಭಿಸಿದ್ದು ಎಂಕಾಂ ವಿಭಾಗದಲ್ಲಿ ಪುತ್ತೂರಿನ ಲಾವಣ್ಯ ಕೆ. (8.83 ಸಿಜಿಪಿಎ) ಪ್ರಥಮ, ಎಂಎಸ್ಸಿ ರಸಾಯನಶಾಸ್ತ್ರದಲ್ಲಿ ಬಂಟ್ವಾಳದ ಮನಸ್ವಿ ಪಿ. (7.57) ಪ್ರಥಮ, ಜೆಎಂಸಿಯಲ್ಲಿ ಕಾಸರಗೋಡಿನ ಸುಲಕ್ಷಣಾ ಕೆ. (8.22) ಪ್ರಥಮ ರ್‍ಯಾಂಕ್‌ಗಳನ್ನು ಗಳಿಸಿದ್ದಾರೆ. ರ್‍ಯಾಂಕ್ ವಿಜೇತರಿಗೆ ಏ.21ರಂದು ಕಾಲೇಜಿನಲ್ಲಿ ನಡೆಯಲಿರುವ ಪ್ರಥಮ ಪದವಿ ಪ್ರದಾನ ಸಮಾರಂಭದಲ್ಲಿ ರ್‍ಯಾಂಕ್ ಪ್ರಮಾಣ ಪತ್ರವನ್ನು ಪ್ರದಾನ ಮಾಡಲಾಗುವುದು ಎಂದು ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ ಭಟ್ ಮತ್ತು ಪರೀಕ್ಷಾಂಗ ಕುಲಸಚಿವ ಡಾ. ಶ್ರೀಧರ್ ಎಚ್.ಜಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



■ 2023-24ರ ಸಾಲಿನಲ್ಲಿ ಒಟ್ಟು 4 ರ್‍ಯಾಂಕ್

ನೃತ್ಯದಲ್ಲಿ ದಾಖಲೆಗೆ ಸಜ್ಜು

ಸುಳ್ಯ: ಗೋಲ್ಡನ್ ಬುಕ್ ಆಫ್ ವಲ್ಡ್ ರೆಕಾರ್ಡ್‌ನಲ್ಲಿ ಸ್ಥಾನ ಪಡೆದು ದಾಖಲೆ ನಿರ್ಮಿಸಬೇಕು ಎಂಬ ಹಂಬಲದಿಂದ ಸುಳ್ಯದ ಖಾಸಗಿ ಕಾಲೇಜು ವಿದ್ಯಾರ್ಥಿ 24 ಗಂಟೆಗಳ ನಿರಂತರ ಕುಚುಪುಡಿ ನೃತ್ಯ ಶನಿವಾರ ಸಂಜೆ ಆರಂಭಿಸಿದರು. ಸುಳ್ಯ ನೆಹರೂ



ಸ್ಮಾರಕ ಮಹಾವಿದ್ಯಾಲಯದ ದ್ವಿತೀಯ ಬಿಎಸ್‌ಸಿ ವಿದ್ಯಾರ್ಥಿ ಮಂಡೆಕೋಲು ಗ್ರಾಮದ ಅಭಿಷೇಕ್ ಕಣೆಮರಡ್ಕ ಈ ಸಾಧನೆಯ ಹಾದಿಯಲ್ಲಿ ಗೆಜ್ಜೆ ಕಟ್ಟಿದ್ದು ನೆಹರೂ ಸ್ಮಾರಕ ಕಾಲೇಜಿನ ಸಭಾಂಗಣದಲ್ಲಿ ಶನಿವಾರ ಸಂಜೆ 6.30ರಿಂದ ಕುಚುಪುಡಿ ನೃತ್ಯ ಆರಂಭೀಸಿದ್ದು ಭಾನುವಾರ ಸಂಜೆ 6.30ರ ತನಕ ನಿರಂತರ 24 ಗಂಟೆ ಕುಚುಪುಡಿ ನೃತ್ಯ ಮಾಡಲಿದ್ದಾರೆ. ಮಂಡೆಕೋಲಿನ ರವಿ ಕಣೆಮರಡ್ಕ ಹಾಗೂ ಸುಜಾತ ದಂಪತಿಗಳ ಪುತ್ರನಾಗಿದ್ದಾನೆ.

ಸುತ್ತಮುತ್ತ

ಏ.26: ವಲಯ ಮಟ್ಟದ ಹಗ್ಗ-ಜಗ್ಗಾಟ ಸ್ಪರ್ಧೆ

ಕಿನ್ನಿಗೋಳಿ: ಸ್ವಾಮಿ ವಿವೇಕಾನಂದ ಸೇವಾ ಸಂಸ್ಥೆ ವತಿಯಿಂದ ಮುಲ್ಕಿ-ಮೂಡಬಿದರೆ ವಲಯ ಮಟ್ಟದ ಪುರುಷರ ಮತ್ತು ಮಹಿಳೆಯರ ಹಗ್ಗ-ಜಗ್ಗಾಟ ಸ್ಪರ್ಧೆ ಏ.26ರಂದು ಬೆಳಿಗ್ಗೆ 11:00 ಗಂಟೆಗೆ ಕಿನ್ನಿಗೋಳಿ ಸೈಂಟ್ ಮೇರೀಸ್ ಸ್ಪೆಷಲ್ ಸ್ಕೂಲ್, ಚರ್ಚ್ ಬಳಿ ನಡೆಯಲಿದೆ ಎಂದು ಕಿನ್ನಿಗೋಳಿ ಸ್ವಾಮಿ ವಿವೇಕಾನಂದ ಸೇವಾ ಸಂಸ್ಥೆ ಅಧ್ಯಕ್ಷ ಡಾ. ಜಗನ್ನಾಥ ಶೆಟ್ಟಿ ನಿಡ್ದೋಡಿ ಚಾವಡಿ ಮನೆ ಹೇಳಿದರು.



ಅವರು ಕಿನ್ನಿಗೋಳಿಯ ಸ್ವಾಮಿ ವಿವೇಕಾನಂದ ಸೇವಾ ಸಂಸ್ಥೆ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಹಗ್ಗ-ಜಗ್ಗಾಟ ಸ್ಪರ್ಧೆಯಲ್ಲಿ ಜಯ ಗಳಿಸಿದ ಮೊದಲನೇ ಬಹುಮಾನ ರೂ. 30,000 ಮತ್ತು ಟ್ರೋಫಿ, ಎರಡನೇ ಬಹುಮಾನ :ರೂ. 20,000 ಮತ್ತು ಟ್ರೋಫಿ,ಮೂರನೇ ಬಹುಮಾನ : ರೂ. 10,000 ಮತ್ತು ಟ್ರೋಫಿ, ನಾಲ್ಕನೇ ಬಹುಮಾನ ರೂ. 5,000 ಮತ್ತು ಟ್ರೋಫಿ ನೀಡಲಾಗುವುದು. ನೋಂದಣಿಗೆ ಏ.23 ದಿನವಾಗಿರುತ್ತದೆ. ಪಂದ್ಯಾಟದಲ್ಲಿ 30 ಪುರುಷ ಹಾಗೂ 20 ಮಹಿಳಾ ತಂಡಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದರು. ಕಿನ್ನಿಗೋಳಿಯ ಸ್ವಾಮಿ ವಿವೇಕಾನಂದ ಸೇವಾ ಸಂಸ್ಥೆ ಕಳೆದ 16 ವರ್ಷಗಳಿಂದ ಅನೇಕ ಸಾಮಾಜಿಕ , ಶಿಕ್ಷಣಕ್ಕೆ ಸಹಾಯ ಹಸ್ತ ಹಾಗೂ ಕ್ರೀಡೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದು ನಿರಂತರವಾಗಿ ನಡೆಯಲಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಕಿನ್ನಿಗೋಳಿ ಸ್ವಾಮಿ ವಿವೇಕಾನಂದ ಸೇವಾ ಸಂಸ್ಥೆಯ ಸಂಚಾಲಕರಾದ ನರಸಿಂಹ ಮಡಿವಾಳ,ಶರತ್ ಶೆಟ್ಟಿ ಸಂಕಲಕರಿಯ, ನರೇಂದ್ರ ಕೆರೆಕಾಡು ಉಪಸ್ಥಿತರಿದ್ದರು.

ಮೈಟ್ ಫ್ಯಾಶನ್ ಫೆಸ್ಟ್

ಬಂಟ್ವಾಳ: ಬಿ.ಸಿರೋಡ್ ನ ಮೈಟ್ ಟೆಕ್ನಿಕಲ್ ಆ್ಯಂಡ್ ಪ್ರೊಫೆಶನಲ್ ಕಾಲೇಜ್‌ನ ವತಿಯಿಂದ ಮೈಟ್ ಫ್ಯಾಶನ್ ಫೆಸ್ಟ್ ಪುರಭವನದಲ್ಲಿ ನಡೆಯಿತು. ಮಿಸ್ ವಿನ್ನಿಟ ಡಯಾಸ್ ಕಾರ್ಯಕ್ರಮ ಉದ್ಘಾಟಿಸಿದರು. ಮಾಡೆಲಿಂಗ್ ಕ್ಷೇತ್ರದ ಸಾಧಕರು ಹಾಗೂ ಸೈಬರ್ ಸೆಕ್ಯುರಿಟಿ ತಜ್ಞ ಜೋತ್ಸ್ನಾ ಅವರು ಮಾತನಾಡಿದರು. ಎಸ್.ಆರ್.ಮಾಡೆಲಿಂಗ್ ಕಂಪೆನಿ ಮಾಲಕರಾದ ರಿತೇಶ್ ರಾಜ್, ಮೇಕಪ್ ಆರ್ಟಿಸ್ಟ್ ಮನು ಮುರುಳೀಧರ್, ಸ್ವರ್ಣ ಕಿಡ್ಸ್‌ನ ನಿರ್ದೇಶಕರಾದ ರಂಜಿತ ಎನ್.ಬಪ್ಪಳಿಗೆ, ಪಾಥ್ ವೇ ಮಾಡೆಲಿಂಗ್ ಸ್ಟುಡಿಯೋ ನಿರ್ದೇಶಕ ದೀಪಕ್ ಗಂಗೋಲಿ, ಮೈಟ್ ಟೆಕ್ನಿಕಲ್ ಆ್ಯಂಡ್ ಪ್ರೊಫೆಶನಲ್ ಕಾಲೇಜ್ ನ ನಿರ್ದೇಶಕ ರಾಕೇಶ್ ಕುಮಾರ್, ನಿಶ್ಮಿತ ರಾಕೇಶ್, ಶಿಕ್ಷಕ ಮೊಹಮ್ಮದ್ ಅಶ್ರಫ್ ಮುಂತಾದವರು ಉಪಸ್ಥಿತರಿದ್ದರು. ಪಾಥ್ ವೇ ಮಾಡೆಲಿಂಗ್ ಹಾಗೂ ಶಾಂಭವಿ ಬ್ರೈಡಲ್ ಕಲೆಕ್ಷನ್ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಿತು. ಪ್ರತೀಕ್ ಡಿ.ಶೆಟ್ಟಿ ನಿರೂಪಿಸಿದರು.

ನರಿಂಗಾನ ಗ್ರಾಮದಲ್ಲಿ ಸ್ವಚ್ಛತಾ ಜಾಥಾ



ಕೋಣಾಜೆ: ಎಲ್ಲೆಂದರಲ್ಲಿ ಕಸ ಬಿಸಾಡುವುದು ಮತ್ತು ಸುಡುವುದನ್ನು ತಡೆದು ಶೂನ್ಯ ಕಸ ನಿರ್ವಹಣೆ ಮೂಲಕ ಬಯಲು ಕಸಾಲಯಗಳನ್ನು ಅಳಿಸಿ ಸುಸ್ಥಿರ ಸ್ವಚ್ಚತೆಯ ಕುರಿತು ಜಾಗೃತಿ ಮೂಡಿಸುವ ಗ್ರಾಮ ಸ್ವಚ್ಚತಾ ಜಾಗೃತಿ ಜಾಥಾ ನರಿಂಗಾನ ಗ್ರಾ.ಪಂ.ನಲ್ಲಿ ನಡೆಯಿತು.

ಗ್ರಾಮ ಪಂಚಾಯತ್,ಪಿ.ಎ. ಪ್ರಥಮ ದರ್ಜೆ ಕಾಲೇಜು ನಡುಪದವು, ಜನ ಶಿಕ್ಷಣ ಟ್ರಸ್ಟ್ ಸಹಯೋಗದಲ್ಲಿ ಶುಕ್ರವಾರ. ನಡೆದ ಜಾಗೃತಿ ಜಾಥಾವು ನರಿಂಗಾನ ಗ್ರಾ.ಪಂ ಕಚೇರಿ ವಠಾರದಿಂದ ಆರಂಭವಾಗಿ, ಮಂಜನಾಡಿ,ಮುರತ್ತ ಗುಂಡಿ ನೆತ್ತಿಲ ಪದವು ತೌಡುಗೋಳಿ, ಕಲ್ಮಂಜ, ವಿದ್ಯಾ ನಗರದ ಮೂಲಕ ಸಾಗಿ ಮೊಂಟೆಪದವು ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಸಮಾಪನಗೊಂಡಿತು.ಜಾಥಾ ದಲ್ಲಿ ಪ್ಲಾಸ್ಟಿಕ್ ಮಾಲಿನ್ಯದ ಅಪಾಯ, ಶೂನ್ಯ ಕಸ ನಿರ್ವಹಣೆ ಮೂಲಕ ಸುಸ್ಥಿರ ಸ್ವಚ್ಛತೆ ಸಾಧಿಸುವ ಸರಳ ಉಪಾಯಗಳ ಬಗ್ಗೆ ಮಾಹಿತಿ ನೀಡಿ ಅರಿವು ಮೂಡಿಸಲಾಯಿತು.

ಜಾಥಾದಲ್ಲಿ ಜಿಲ್ಲಾ ಸ್ವಚ್ಚತಾ ರಾಯಭಾರಿ ಶೀನ ಶೆಟ್ಟಿ ಗ್ರಾ.ಪಂ ಮಾಜಿ ಅಧ್ಯಕ್ಷ ನವಾಜ್, ಕಾರ್ಯದರ್ಶಿ, ನಳಿನಿ, ಮಾಜಿ ಸದಸ್ಯರಾದ ಅಬ್ದುಲ್ ರಹಿಮಾನ್, ಮುರಳೀಧರ ಶೆಟ್ಟಿ, ಸೆಲೀಮ್, ಶೇಖಬ್ಬ ರಾ ಸೇ ಯೋಜನಾಧಿಕಾರಿ ಚೈತ್ರಾ, ಪ್ರಾಧ್ಯಾಪಕರಾದ ಲೋಹಿತ್ ಗಟ್ಟಿ ಗುರುರಾಜ್, ಸ್ವಯಂ ಸೇವಕ, ಸ್ವಯಂ ಸೇವಕಿಯರು, ಗ್ರಾಮ.ಪಂ ಸಿಬ್ಬಂಧಿಗಳು, ಆಶಾ ಕಾರ್ಯಕರ್ತೆಯರು, ಸಂಜೀವಿನಿ ಒಕ್ಕೂಟದ ಸದಸ್ಯರು ಭಾಗವಹಿಸಿದ್ದರು.

ಕೊಡಗು ಕಸಾಪದಿಂದ ಲೇಖಕಿ ಪ್ರತಿಮಾ ಹರೀಶ್ ರೈಗೆ 'ವಿಜಯಾ ವಿಷ್ಣುಭಟ್' ದತ್ತಿ ಪ್ರಶಸ್ತಿ

ಇಂಗ್ಲೀಷ್ ವ್ಯಾಮೋಹ ತ್ಯಜಿಸಿದರೆ ಕನ್ನಡ ಭಾಷಾ ಬೆಳವಣಿಗೆ

ಮಡಿಕೇರಿ: ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕೊಡಮಾಡುವ ಪ್ರತಿಷ್ಠಿತ 'ಶ್ರೀಮತಿ ವಿಜಯಾ ವಿಷ್ಣು ಭಟ್ ದತ್ತಿ ಪ್ರಶಸ್ತಿ''ಯನ್ನು ಈ ಬಾರಿ ಉಪನ್ಯಾಸಕಿ ಹಾಗೂ ಲೇಖಕಿ ಪ್ರತಿಮಾ ಹರೀಶ್ ರೈ ಅವರಿಗೆ ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಸಭಾಂಗಣದಲ್ಲಿ ನಡೆದ ಪ್ರಶಸ್ತಿ ಪ್ರದಾನ ಮತ್ತು ಶ್ರೀಮತಿ ಜಲಜಾ ಶೇಖರ್ ಹಾಗೂ ಶ್ರೀ ಜೆ.ಸಿ.ಶೇಖರ್ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ, ಕಾಲೇಜಿನ ಆಂಗ್ಲ ಮಾಧ್ಯಮ ವಿಭಾಗದ ಮುಖ್ಯಸ್ಥೆ ಹಾಗೂ ಕೊಡಗಿನ ಗೌರಮ್ಮ ದತ್ತಿ ಪ್ರಶಸ್ತಿ ಪುರಸ್ಕೃತೆ ಪ್ರೊ.ನಯನ ಕಶ್ಯಪ್ ಅವರು, 'ಅಂತರಗಂಗೆ' ಅಂಕಣ ಬರಹಗಳ ಪುಸ್ತಕವನ್ನು ರಚಿಸಿರುವ ಪ್ರತಿಮಾ ಹರೀಶ್ ರೈ ಅವರಿಗೆ ಜಿಲ್ಲಾ ಕಸಾಪ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು.



ಮನೆ ಮನಗಳಲ್ಲಿ ಕನ್ನಡಕ್ಕಿರಲಿ ಆದ್ಯತೆ

ಕಾರ್ಯಕ್ರಮವನ್ನು ಉದ್ಘಾಟಿಸಿದ ಫೀ.ಮಾ.ಕೆ.ಎಂ. ಕಾರ್ಯಪ್ಪ ಕಾಲೇಜಿನ ಪ್ರಾಂಶುಪಾಲ ಪ್ರೊ.ಮೇಜರ್ ಡಾ. ರಾಘವ ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕನ್ನಡದೆಡೆಗೆ ಯುವ ಸಮೂಹದಿಂದ ಕಂಡು ಬರುತ್ತಿರುವ ನಿರ್ಲಕ್ಷ್ಯತೆಯ ಬಗ್ಗೆ ಕಳವಳ ವ್ಯಕ್ತಪಡಿಸಿ, ಪ್ರತಿಯೊಬ್ಬ ಪೋಷಕರು ತಮ್ಮ ಮನೆಗಳಲ್ಲಿ ಇಂಗ್ಲೀಷ್ ಭಾಷಾ ವ್ಯಾಮೋಹದಿಂದ ಹೊರ ಬಂದು ಕನ್ನಡದಲ್ಲೇ ತಮ್ಮ ಕುಟುಂಬದ ಸದಸ್ಯರೊಂದಿಗೆ ವ್ಯವಹರಿಸಿದಾಗ ಕನ್ನಡದ ಬೆಳವಣಿಗೆ ಸಾಧ್ಯವಾಗುತ್ತದೆಂದು ವಿಶ್ವಾಸ ವ್ಯಕ್ತಪಡಿಸಿದರಲ್ಲದೆ, ಮನೆ ಮನಗಳಲ್ಲಿ ಕನ್ನಡದತ್ತ ಒಲವು ಮೂಡಿ ಬರಲಿ ಎಂದು ಕರೆ ನೀಡಿದರು.

ವಚನಗಳ ಕಲಿಕೆಯಿಂದ ಮನುಜರಾಗಿ

ಶ್ರೀಮತಿ ಜಲಜಾ ಶೇಖರ್ ಹಾಗೂ ಶ್ರೀ ಜೆ.ಸಿ.ಶೇಖರ್ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ, ವಚನ ಸಾಹಿತ್ಯದ ಹಿರಿಮೆಯ ಕುರಿತು ಮಾತನಾಡಿದ ಜಿಲ್ಲಾ ಕಸಾಪ ನಿರ್ದೇಶಕ ಹಾಗೂ ಶಿಕ್ಷಕ ಮೇ.ನಾ. ವೆಂಕಟನಾಯಕ್, ನವ ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸಿದ 12ನೇ ಶತಮಾನದ ಶರಣರ ವಚನಗಳನ್ನು ಪ್ರಸ್ತುತ ದಿನಮಾನಗಳಲ್ಲಿ ದಿನಕ್ಕೊಂದು ಕಲಿತರೆ ನಾವೆಲ್ಲರೂ 'ಮನುಷ್ಯ'ರಾಗಬಹುದು, ಉತ್ತಮ ಸಮಾಜ ನಿರ್ಮಾಣವಾಗಬಲ್ಲುದೆಂದು ದೃಢವಾಗಿ ನುಡಿದರು.

ಹನ್ನೊಂದನೇ ಶತಮಾನದ ಕೊನೆಯ ಭಾಗ ಮತ್ತು 12ನೇ ಶತಮಾನದಲ್ಲಿದ್ದ ಬಸವಾದಿ ಶರಣರು ತಮ್ಮ ವಚನಗಳ ಮೂಲಕ ನಮ್ಮ ಸುತ್ತಮುತ್ತಲ ಸಮಾಜದ ಡಾಂಬಿಕತವನ್ನು ಬಯಲಿಗೆಳೆಯುವ ಮೂಲಕ ನವ ಸಮಾಜದ ನಿರ್ಮಾಣಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ವಚನಕಾರ ದೇವರದಾಸಿಮಯ್ಯ ಸಮಾಜದ ಡಾಂಬಿಕತನವನ್ನು ತಮ್ಮ ವಚನಗಳಲ್ಲಿ ವಿಡಂಬನೆ ಮಾಡಿರುವುದನ್ನು ಉಲ್ಲೇಖಿಸಿ, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯರ ವಚನಗಳನ್ನು ಉಲ್ಲೇಖಿಸಿ, ಇವರೆಲ್ಲರು ಮಾನವ ಜನ್ಮ ಅತ್ಯಂತ ಶ್ರೇಷ್ಠವಾದದ್ದು ಅದನ್ನು ವ್ಯರ್ಥಮಾಡದೆ, ಸಮಾನತೆಯ ಪರಿಕಲ್ಪನೆಯೊಂದಿಗೆ, ಕಾಯಕ ತತ್ವ ಮೂಲಕ ಅದನ್ನು ಸಾರ್ಥಕಗೊಳಿಸುವಂತೆ ಕರೆ ನೀಡಿದ್ದರು. ಅವರೆಲ್ಲರ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿದೆಯೆಂದು ನುಡಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ಎಂ.ಪಿ. ಕೇಶವ ಕಾಮತ್ ಮಾತನಾಡಿ, ನಾಲ್ವಡಿ ಕೃಷ್ಣ ರಾಜ ಒಡೆಯರ್‌ರಿಂದ ಸ್ಥಾಪಿಸಲ್ಪಟ್ಟ ಕನ್ನಡ ಸಾಹಿತ್ಯ ಪರಿಷತ್ತು 110 ವರ್ಷಗಳನ್ನು ಪೂರೈಸಿದೆ. ಪ್ರಸ್ತುತ ರಾಜ್ಯದಾದ್ಯಂತ ಪರಿಷತ್ತು 3 ಸಾವಿರಕ್ಕೂ ಹೆಚ್ಚಿನ ದತ್ತಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಕೊಡಗು ಜಿಲ್ಲೆಯಲ್ಲಿ 40 ದತ್ತಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ವಿಜಯ ವಿಷ್ಣು ಭಟ್ ಅವರು ಜಿಲ್ಲೆಯಲ್ಲಿ ಸುದೀರ್ಘಾವಧಿ ಶಿಕ್ಷಕರಾಗಿ ಸೇವೆ ಸಲ್ಲಿಸಿದವರಾಗಿದ್ದು, ಅವರ ಅಪೇಕ್ಷೆಯಂತೆ ದತ್ತಿ ಪ್ರಶಸ್ತಿಯನ್ನು ನೀಡಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ದತ್ತಿ ದಾನಿ ಜಲಜಾ ಶೇಖರ್ ಮತ್ತು ಜೆ.ಸಿ.ಶೇಖರ್, ಮೈಸೂರಿನ ಹಿರಿಯ ಸಿವಿಲ್ ನ್ಯಾಯಾಧೀಶೆ ಪ್ರತಿಭಾ ಡಿ.ಎಸ್., ಕೊಡಗು ಜಿಲ್ಲಾ ಮಹಿಳಾ ಬರಹಗಾರರ ಸಂಘದ ಅಧ್ಯಕ್ಷೆ ಪುದಿಯನೆರವನ ರೇವತಿ ರಮೇಶ್ ಉಪಸ್ಥಿತರಿದ್ದರು. ಕಾಲೇಜು ವಿದ್ಯಾರ್ಥಿನಿಯರಾದ ಸ್ವಪ್ನಾ, ಚೋಂದಮ್ಮ ನಾಡಗೀತೆ ಹಾಡಿದರು. ವಿದ್ಯಾರ್ಥಿನಿ ಶಿಲ್ಪಾ ಸ್ವಾಗತಿಸಿದರು.

ಕಂಟಿಕ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಕಲರವ

ಕಲಾಸಕ್ತಿ ಮೂಡಿಸಲು ಶಿಬಿರ ಸಹಕಾರಿ: ಪದ್ಮಾವತಿ

ಬಂಟ್ವಾಳ: ತಾಲೂಕಿನ ಬಾಳ್ತಿಲ ಗ್ರಾಮದ ಕಂಟಿಕ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಸಾಂಸ್ಕೃತಿಕ ಕಲರವ 2026 ಹಾಗೂ ಯಕ್ಷಗಾನ ಕಾರ್ಯಕ್ರಮ ಶನಿವಾರ ಸಂಜೆ ಜರಗಿತು.



ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷೆ ಸೌಮ್ಯಶ್ರೀ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಲ್ಲಡ್ಕ ಕೇಟಿ ಹೋಟೆಲ್ ಲಕ್ಷ್ಮಿ ಗಣೇಶ್ ಮಾಲಕಿ ಪದ್ಮಾವತಿ ಭಟ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಮ್ಮ ಆಚರಣೆ ಸಂಸ್ಕೃತಿ ಕಲೆಗಳು ಮಾಯವಾಗುತ್ತಿರುವ ಈ ಸಂದರ್ಭದಲ್ಲಿ ಇಂತಹ ಶಿಬಿರ ಮಾದರಿದಾಯಕ. ಕಿರಿಯ ಪ್ರಾಥಮಿಕ ಮಕ್ಕಳಿಗೆ ತರಬೇತಿ ನೀಡಿ ಯಕ್ಷಗಾನದಂತಹ ಕಲೆಯನ್ನು ಪ್ರದರ್ಶಿಸಿದ ಶಾಲಾ ಮುಖ್ಯ ಶಿಕ್ಷಕಿ ಚೇತನ ಕುಮಾರಿಯವರ ಕಲಾ ಆಸಕ್ತಿ ಅಭಿನಂದನೀಯವಾಗಿದೆ ಎಂದರು.

ಶಿಕ್ಷಕರ ಸಂಘದ ಪದಾಧಿಕಾರಿ ಸಂದೇಶ್ ಎಂ.ಎಸ್.ದಿಕ್ಕೂಚಿ ಭಾಷಣಗೈದರು. ಇದಕ್ಕೂ ಕಸಂಪ್ರಬೈಲು ಮೊದಲು ಶ್ರೀ ಉಲ್ಲಾಳ್ತಿ ಭಜನಾ ಮಂಡಳಿಯಿಂದ ಭಜನಾ ಸಂಕೀರ್ತನೆ ಜರಗಿತು.

ಬಹುಮಾನ ವಿತರಣೆ

ಈ ಸಂದರ್ಭದಲ್ಲಿ ಶಾಲಾ ಮಕ್ಕಳಿಗೆ ಯಕ್ಷಗಾನ ತರಬೇತಿ ನೀಡಿದ ಅಲೆತ್ತೂರು ನರಸಿಂಹ ಮಯ್ಯರವರನ್ನು ಸನ್ಮಾನಿಸಲಾಯಿತು. ಕಲಿಕಾ ಹಾಗೂ ಆಟೋಟ ಸ್ಪರ್ಧೆಗಳಲ್ಲಿ ವಿಜೇತ ಮಕ್ಕಳು, ಮಕ್ಕಳ ಪೋಷಕರು, ಶಾಲಾ ಹಿರಿಯ ವಿದ್ಯಾರ್ಥಿಗಳಿಗೆ ನಡೆಸಿದ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಶಾಲೆಗೆ ಸಹಕರಿಸಿದವರನ್ನು ಗುರುತಿಸಿ ಸ್ಮರಣಿಕೆಯನ್ನಿತ್ತು ಗೌರವಿಸಲಾಯಿತು. ನರಿಕೊಂಬು ವಿವೇಕ ಜಾಗೃತ ಬಳಗ ಅಧ್ಯಕ್ಷ ಜಯಲಕ್ಷ್ಮಿ, ಗ್ರಾಮದ ಹಿರಿಯರಾದ ಮೋಹನ ಸಫಲ್ಯ, ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಮಾಧವ, ಶಾಲಾಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಮಾದವ, ಮೊದಲಾದವರು ಉಪಸ್ಥಿತರಿದ್ದರು .

- ಶಾಲಾ ಮಕ್ಕಳಿಗೆ ಯಕ್ಷಗಾನ ತರಬೇತಿ ನೀಡಿದ ಅಲೆತ್ತೂರು ನರಸಿಂಹ ಮಯ್ಯರಿಗೆ ಸನ್ಮಾನ
- ಮಕ್ಕಳಿಂದ 'ಶ್ರೀದೇವಿ ವೈಷ್ಣವಿ ಮಹಾತ್ಮೆ' ಯಕ್ಷಗಾನ ಬಯಲಾಟ ಪ್ರದರ್ಶನ

ನಿರೀಕ್ಷಾ ಅಮೃತ ಪಾವನಿ ಪ್ರಾರ್ಥಿಸಿ, ಶಾಲಾ ಮುಖ್ಯ ಶಿಕ್ಷಕಿ ಚೇತನ ಕುಮಾರಿ ಸ್ವಾಗತಿಸಿ, ಶಿಕ್ಷಕಿ ಮೋನಿಷ ವಂದಿಸಿದರು. ಶಿಕ್ಷಕಿ ಜಯಂತಿ ಕಾರ್ಯಕ್ರಮ ನಿರೂಪಿಸಿದರು. , ಮಾಜಿ ಅಧ್ಯಕ್ಷ ರಾಜೇಶ್, ಮಾಜಿ ಪಂಚಾಯತ್ ಸದಸ್ಯ ರಾಜೇಶ್. ಶಾಲಾಭಿವೃದ್ಧಿ ಸಮಿತಿ ಸದಸ್ಯರುಗಳು, ಹಳೆ ವಿದ್ಯಾರ್ಥಿ ಸಂಘದ ಸದಸ್ಯರುಗಳು ಸಹಕರಿಸಿದರು.

ನಂತರ ಮಕ್ಕಳಿಂದ 'ಶ್ರೀದೇವಿ ವೈಷ್ಣವಿ ಮಹಾತ್ಮೆ' ಯಕ್ಷಗಾನ ಹಾಗೂ ಸ್ಥಳೀಯ ಅಂಗನವಾಡಿ ಪುಟಾಣಿಗಳಿಂದ, ಶಾಲಾ ಮಕ್ಕಳಿಂದ, ಹಿರಿಯ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರದರ್ಶನಗೊಂಡಿತು.

ವಿಟ್ಲ ಗ್ರಾಮೀಣ ಸಹಕಾರಿ ಬ್ಯಾಂಕ್ | 1090 ಕೋ.ರೂ.ಗಳ ವ್ಯವಹಾರ

ಒಟ್ಟು 4.05 ಕೋಟಿ ರೂ. ನಿವ್ವಳ ಲಾಭ ಸಾಧನೆ

ವಿಟ್ಲ: ವಿಟ್ಲ ಗ್ರಾಮೀಣ ಸಹಕಾರಿ ಬ್ಯಾಂಕ್ ನಿಯಮಿತ 2025-26ನೇ ಸಾಲಿನಲ್ಲಿ 1090 ಕೋಟಿ ರೂ.ಗಳ ವ್ಯವಹಾರ ನಡೆಸಿ, 4.05 ಕೋಟಿ ರೂ. ನಿವ್ವಳ ಲಾಭ ಗಳಿಸುವ ಮೂಲಕ ಹೊಸ ಇತಿಹಾಸವನ್ನು ನಿರ್ಮಿಸಿದೆ. ಕಳೆದ ಸಾಲಿಗಿಂತ 226ಕೋಟಿ ಹೆಚ್ಚಿನ ವ್ಯವಹಾರ ನಡೆಸುವ ಮೂಲಕ ಸಾರ್ವಕಾಲಿಕ ದಾಖಲೆ ಮಾಡಿದೆ ಎಂದು ಬ್ಯಾಂಕಿನ ಅಧ್ಯಕ್ಷ ಎಚ್. ಜಗನ್ನಾಥ ಸಾಲಿಯಾನ್ ಹೇಳಿದರು.

149.84 ಕೋ.ರೂ. ಠೇವಣಿ

ಬ್ಯಾಂಕ್ ನಲ್ಲಿ 9189 ಮಂದಿ ಸದಸ್ಯರಿದ್ದು, 3.04 ಕೋಟಿ ರೂ. ಪಾಲು ಬಂಡವಾಳ ಹೊಂದಿದೆ. ಠೇವಣಿ ಸಂಗ್ರಹದಲ್ಲಿ ಹಲವು ಸವಾಲುಗಳ ನಡುವೆಯೂ 149.84 ಕೋಟಿ ರೂ. ಠೇವಣಿ ಸಂಗ್ರಹಿಸಿದ್ದು, ಕಳೆದ ವರ್ಷಕ್ಕಿಂತ ಶೇ. 11.22 ಹೆಚ್ಚಳವಾಗಿದೆ. 125.63 ಕೋಟಿ ರೂ ಹೊರ ಬಾಕಿ ಸಾಲವಿದ್ದು, ಶೇ. 95.11 ಸಾಲ ವಸೂಲಾತಿ ಯಾಗಿದೆ. 9.96 ಕೋಟಿ ರೂ ಮೀಸಲು ನಿಧಿ ಹಾಗೂ 13.65 ಕೋಟಿ ರೂ ಇತರ ನಿಧಿಯನ್ನು ಹೊಂದಿದೆ. 180.55 ಕೋಟಿ ರೂ. ದುಡಿಯುವ ಬಂಡವಾಳವಿದ್ದು, 4.43 ಕೋಟಿ ರೂ. ಗಳ ಚರ, ಸ್ಥಿರ ಆಸ್ತಿಯನ್ನು ಹೊಂದಿದೆ. ವಿಟ್ಲ ಪ್ರಧಾನ ಶಾಖೆಯಲ್ಲಿ ಬ್ಯಾಂಕ್ ವ್ಯವಹಾರ ಹಾಗೂ ಲಾಭದ ವಿವರಗಳ ಅವಲೋಕನದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಿವಿಧೆಡೆ ಹೊಸ ಶಾಖೆ ಆರಂಭಕ್ಕೆ ಯೋಜನೆ

ಉಪ್ಪಿನಂಗಡಿಯಲ್ಲಿ 5ನೇ ಶಾಖೆಯ ತೆರೆಯುವ ಕಾರ್ಯ ಬಿರುಸಿನಿಂದ ನಡೆಯುತ್ತಿದೆ. ಕೇಂದ್ರ ಸಹಕಾರಿಯಿಂದ ಸತತವಾಗಿ 4 ಬಾರಿ ಸಾಧನಾ ಪ್ರಶಸ್ತಿಯನ್ನು ಪಡೆದುಕೊಂಡಿದೆ. ವಿಟ್ಲ ಪೇಟೆ ಅಗಲೀಕರಣ ಆಗುವ ಸಂದರ್ಭ ಕಟ್ಟಡ ತುಂಡಾಗುವ ಸಾಧ್ಯತೆ ಗಮನದಲ್ಲಿಟ್ಟುಕೊಂಡು 30ರಿಂದ 40 ಸೆಂಟ್ಸ್ ಜಾಗ ಖರೀದಿಸುವ ಪ್ರಸ್ತಾವನೆಯಿದೆ. ಉಜಿರೆಯಲ್ಲಿ ಹೊಸ ಶಾಖೆಯನ್ನು ಮಾಡುವ ನಿಟ್ಟಿನಲ್ಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಸಂಘಕ್ಕೆ 75 ವರ್ಷ ತುಂಬುವ ಸಂದರ್ಭ ಹೊಸ ಕಟ್ಟಡದ ಜತೆಗೆ ವಿಟ್ಲ ಪ್ರಧಾನ ಕಚೇರಿಯಲ್ಲಿ ಪ್ರತ್ಯೇಕಾ ಆಡಳಿತ ಕಚೇರಿಯನ್ನು ಹೊಂದು ಗುರಿಯನ್ನು ಇಟ್ಟುಕೊಳ್ಳಲಾಗಿದೆ ಎಂದು ಎಂದು ಬ್ಯಾಂಕಿನ ಅಧ್ಯಕ್ಷ ಎಚ್. ಜಗನ್ನಾಥ ಸಾಲಿಯಾನ್ ತಿಳಿಸಿದರು.

ಬ್ಯಾಂಕ್ ಹಿಂದಿನ ಹಲವಾರು ವರ್ಷದಿಂದ ಆಡಿಟ್ ವರ್ಗೀಕರಣದಲ್ಲಿ 'ಎ' ತರಗತಿಯಲ್ಲಿದ್ದು, ಮುಂದೆಯೂ ಇದನ್ನು ಕಾಯ್ದಿರಿಸಿಕೊಳ್ಳಲಿದೆ.

ಶೇ.96 ಸಾಲ ವಸೂಲಾತಿ

2026-27 ನೇ ಸಾಲಿನಲ್ಲಿ ಬ್ಯಾಂಕು 1150 ಕೋಟಿಗೂ ಮಿಕ್ಕಿದ ವ್ಯವಹಾರ ನಡೆಸಿ, 4.45 ಕೋಟಿ ರೂಗೂ ಮೀರಿದ ಲಾಭ ದಾಖಲಿಸುವ ಗುರಿಹೊಂದಿದೆ. ಅಲ್ಲದೇ 160 ಕೋಟಿ ರೂ ಠೇವಣಿ ಸಂಗ್ರಹಿಸುವ ಹಾಗೂ ಶೇ.96 ಸಾಲ ವಸೂಲಾತಿ ಮಾಡುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಬ್ಯಾಂಕಿನ 32 ನುರಿತ ಸಿಬ್ಬಂದಿಗಳ ಪೂರ್ಣಸಹಕಾರದೊಂದಿಗೆ ಇದನ್ನು ಸಾಧಿಸಲಾಗುವುದು. ಕಳೆದ ಸಾಲಿನಲ್ಲಿ ಶೇ.22 ಡಿವಿಡೆಂಡ್ ವಿತರಣೆ ಮಾಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಮನೋರಂಜನ್ ಕೆ.ಆರ್. ನಿರ್ದೇಶಕರಾದ ಜಯಂತಿ ಎಚ್. ರಾವ್, ಶುಭಲಕ್ಷ್ಮಿ, ದಯಾನಂದ ಆಳ್ವ ಕೆ. ಪೂವಪ್ಪ ಎಸ್., ದಿವಾಕರ ವಿ., ಕೇಶವ ಎ., ಗೋವರ್ಧನ ಕುಮಾರ್ ಐ., ಭಾಸ್ಕರ್ ಶೆಟ್ಟಿ ರಾಮದಾಸ ಶೆಣೈ, ಮೋಹನ್ ಕೆ. ಎಸ್., ವಿಶ್ವನಾಥ ಎಂ., ತಿರುಮಲೇಶ್ವರ ಭಟ್, ಸತೀಶ್ ಪಿ., ಮುಖ್ಯ ಕಾರ್ಯನಿರ್ವಾಹಣಾಧಿ ಕಾರಿ ಕೃಷ್ಣ ಮುರಳಿ ಶ್ಯಾಮ್ ಕೆ. ಸಹಿತ ಮೊದಲಾದವರು ಈ ಸಂದರ್ಭ ಉಪಸ್ಥಿತರಿದ್ದರು.

ಫೆವಾರ್ಡ್ ಕನ್ನಡ ಜಿಲ್ಲಾ ತಿಂಗಳ ಸಭೆ



ಮಂಗಳೂರು: ಕರ್ನಾಟಕ ನಗರ ಮತ್ತು ಗ್ರಾಮಾಭ್ಯುದಯ ಸ್ವಯಂಸೇವಾ ಸಂಸ್ಥೆಗಳ ಒಕ್ಕೂಟ (ಫೆವಾರ್ಡ್) ಕರ್ನಾಟಕ ಇದರ ಕನ್ನಡ ಜಿಲ್ಲಾ ತಿಂಗಳ ಸಭೆ ಮಂಗಳೂರಿನ ಪಡಿ ಸಂಸ್ಥೆಯಲ್ಲಿ ನಡೆಯಿತು.

ಸದಸ್ಯತ್ವದ ನೋಂದಣಿ, ನವೀಕರಣ, ವಾರ್ಷಿಕ ಕ್ರಿಯಾ ಯೋಜನೆ ತಯಾರಿ, 5 ಸಂಸ್ಥೆಗಳನ್ನು ಆಯ್ಕೆ ಮತ್ತು ಜಾಹೀರಾತು ಕುರಿತು ಫೆವಾರ್ಡ್ ಕರ್ನಾಟಕ ಕಾರ್ಯಕ್ರಮ ವ್ಯವಸ್ಥಾಪಕ ಕೃಷ್ಣಮೂರ್ತಿ ಮಾಹಿತಿ ನೀಡಿದರು. ಡಿಜಿಪ್ಲಿಕ್ ಕಂಪನಿ ನಿರ್ದೇಶಕ ಪಿ.ಸುಬ್ರಹ್ಮಣ್ಯ ಅವರು ಸಭೆಯಲ್ಲಿ ಭಾಗವಹಿಸಿ ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆಯ ಬಗ್ಗೆ ಒಕ್ಕೂಟದ ಸದಸ್ಯರಿಗೆ ಮಾಹಿತಿ ನೀಡಿದರು. ಫೆವಾರ್ಡ್ ಕರ್ನಾಟಕ ದಕ್ಷಿಣ ಕನ್ನಡ ಜಿಲ್ಲಾ ಒಕ್ಕೂಟದ ಅಧ್ಯಕ್ಷ ಹರೀಶ್ ಎ., ಕಾರ್ಯದರ್ಶಿ ಲಿಡಿಯಾ ಲೋಬೊ, ಖಜಾಂಚಿ ರೆನ್ನಿ ಡಿಸೋಜ, ಜಿ.ಸಿ ಸದಸ್ಯರು ಮತ್ತು ಸದಸ್ಯ ಸಂಸ್ಥೆಯ ಪ್ರತಿನಿಧಿಗಳು ಭಾಗವಹಿಸಿದ್ದರು. 18 ಸಂಸ್ಥೆಗಳು ಸಭೆಯಲ್ಲಿ ಪಾಲ್ಗೊಂಡಿದ್ದವು.

ಆರೋಪ: ಕಾನೂನು ಹೋರಾಟದ ಎಚ್ಚರಿಕೆ

ಕಡಬ: ಪಟ್ಟಣ ಪಂಚಾಯತ್‌ನಿಂದ ಏಲಂನಲ್ಲಿ ವ್ಯಾಪಾರದ ಹಕ್ಕು ಪಡೆದು ಹಸಿಮೀನು ವ್ಯಾಪಾರ ಮಾಡುತ್ತಿರುವ ವ್ಯಾಪಾರಸ್ಥರಿಗೆ ಸಾರ್ವಜನಿಕರ ದೂರಿನ ಹಿನ್ನೆಲೆಯಲ್ಲಿ ನೋಟಿಸ್ ನೀಡಿರುವುದಕ್ಕೆ ಆಕ್ರೋಶಗೊಂಡಿರುವ ಹಸಿಮೀನು ವ್ಯಾಪಾರಸ್ಥರು ಕಡಬ ಪಟ್ಟಣ ಪಂಚಾಯತ್ ವಿರುದ್ಧ ಕಾನೂನು ಹೋರಾಟ ನಡೆಸಲು ನಿರ್ಧರಿಸಿದ್ದಾರೆ. ಈ ಕುರಿತು ಶನಿವಾರ ಕಡಬದಲ್ಲಿ ಸುದ್ದಿಗೋಷ್ಠಿ ನಡೆಸಿರುವ ಹಸಿಮೀನು ವ್ಯಾಪಾರಸ್ಥ ಮ್ಯಾಥ್ಯೂ ಕೆ.ಎಂ. (ರಾಜು) ಹಾಗೂ ಆದಂ ಸಾಹೇಬ್ ಕಡಬ ಅವರು, ಪ.ಪಂ. ಯಾವುದೇ ಆಧಾರ ಗಳಿಲ್ಲದೆ ನಾವು ಅವಧಿ ಮೀರಿದ ಮೀನು ಗಳನ್ನು ಮಾರಾಟ ಮಾಡುತ್ತಿದ್ದೇವೆ ಎಂದು ಆರೋಪಿಸಿರುವುದು ಸರಿಯಲ್ಲ ಎಂದರು.

ಕೊಡಗಿನ ವಿಧಾನಸಭಾ ಕ್ಷೇತ್ರಗಳು 5ಕ್ಕೆ ಏರಿಕೆಯಾಗಲಿ: ಭೋಜಣ್ಣ ಸೋಮಯ್ಯ

ಮಡಿಕೇರಿ: ಮಹಿಳಾ ಸಬಲೀಕರಣದ ಉದ್ದೇಶ ನೈಜವಾಗಿದ್ದರೆ ಲೋಕಸಭೆ ಕ್ಷೇತ್ರ ಹೆಚ್ಚಳ ಮಾಡದೇ ಈಗ ಇರುವ ಚೌಕಟ್ಟಿನೊಳಗೆ ಮಹಿಳಾ ಮೀಸಲಾತಿ ನೀಡಬೇಕು ಮತ್ತು ಕೊಡಗಿನ ವಿಧಾನಸಭಾ ಕ್ಷೇತ್ರಗಳನ್ನು 5ಕ್ಕೆ ಏರಿಕೆ ಮಾಡಬೇಕು ಎಂದು ಆಮ್ ಆದ್ಮಿ ಪಾರ್ಟಿಯ ರಾಜ್ಯ ಕಾರ್ಯದರ್ಶಿ ಭೋಜಣ್ಣ ಸೋಮಯ್ಯ ಒತ್ತಾಯಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲು ಕಲ್ಪಿಸುವ ಉದ್ದೇಶ ಒಳ್ಳೆಯದು. ಆದರೆ ಮಹಿಳಾ ಮೀಸಲು ವಿಧೇಯಕ ಕೇವಲ ಸುಧಾರಣೆಯಲ್ಲ, ಆಡಳಿತ ವ್ಯವಸ್ಥೆಯ ಪುನರ್ ರಚನೆಯ ದಾರಿಯಾಗಬೇಕು. 2023ರಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರ ಸಂಸತ್ ನಲ್ಲಿ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರ ಪಡೆಯಿತು. ಈಗ ಇರುವ 543 ಕ್ಷೇತ್ರವನ್ನು ಶೇಕಡಾ 50ರಷ್ಟು ಹೆಚ್ಚು ಮಾಡಿ 816ಕ್ಕೆ ಏರಿಸಿ ಅದರಲ್ಲಿ ಶೇ.33 ಮಹಿಳಾ ಮೀಸಲಾತಿ ನೀಡಲು ಕಾನೂನು ತಿದ್ದುಪಡಿ ತರುತ್ತಿರುವ ಕೇಂದ್ರ ಸರಕಾರದ ನಡೆ ಗೊಂದಲಕ್ಕೆ ಕಾರಣವಾಗಿದೆ ಎಂದು ಟೀಕಿಸಿದ್ದಾರೆ.

1971ರ ಅಥವಾ 2027ರ ಜನಸಂಖ್ಯೆ ಆಧಾರದಲ್ಲಿ ಕಾನೂನು ಜಾರಿಗೆ ತರುವ ಕುರಿತು ಸರಕಾರ ಜನತೆಗೆ ಬಹಿರಂಗ ಪಡಿಸಬೇಕು. ಅಧಿವೇಶನ ಬಳಿಕ ವಿಶೇಷ ಸಂಸತ್ ಅಧಿವೇಶನ ಕರೆದು ಈ ನಿರ್ಧಾರದ ಬಗ್ಗೆ ಪ್ರಸ್ತಾಪಿಸಿರುವುದು ಸಂಶಯಕ್ಕೆ ಕಾರಣವಾಗಿದೆ ಎಂದು ಆರೋಪಿಸಿದ್ದಾರೆ.



> **ಕೊಡಗಿಗೆ ನ್ಯಾಯ**
>
> ಕ್ಷೇತ್ರ ಪುನರ್ ವಿಂಗಡಣೆ ಪಾರದರ್ಶಕವಾಗಿ ನಡೆಯಬೇಕು. ಪುಟ್ಟ ಜಿಲ್ಲೆ ಕೊಡಗು ಜನಸಂಖ್ಯೆ ಸ್ಫೋಟ ವಾಗದಂತೆ ಸಾಮಾಜಿಕ ಕಳಕಳಿ ಮೆರೆದು ಪ್ರಾಮಾಣಿಕವಾಗಿ ನಡೆದುಕೊಂಡಿದೆ. ಈ ಪ್ರದೇಶಕ್ಕೆ ಅನ್ಯಾಯವಾಗದಂತೆ ಪುನರ್ ವಿಂಗಡಣೆ ಸಂದರ್ಭ ಎಚ್ಚರ ವಹಿಸಬೇಕು. ಕೊಡಗು ಜಿಲ್ಲೆ ಕಳೆದ ಅನೇಕ ವರ್ಷಗಳಿಂದ ಸಂಸತ್ ಸದಸ್ಯತ್ವದಿಂದ ವಂಚಿತವಾಗಿದೆ. ಈಗ ಇರುವ ವಿಧಾನಸಭೆ ಕ್ಷೇತ್ರವನ್ನು ಎರಡರಿಂದ ಐದಕ್ಕೆ ಏರಿಕೆ ಮಾಡಬೇಕು.
>
> ● ಭೋಜಣ್ಣ ಸೋಮಯ್ಯ

ಕಟ್ಟಡ ನಿರ್ಮಾಣಕ್ಕೆ ನೆರವು ಹಸ್ತಾಂತರ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಮುದಾಯ ಅಭಿವೃದ್ಧಿ ವಿಭಾಗದಿಂದ ಬಂಟ್ವಾಳ ತಾಲೂಕು ತುಂಬೆ ವಲಯದ ಪರಂಗಿಪೇಟೆ ಕಡೆಗೋಳಿ ಮಹಿಳಾ ಹಾಲು ಉತ್ಪಾದಕರ ಸಂಘದ ನೂತನ ಕಟ್ಟಡ ನಿರ್ಮಾಣಕ್ಕೆ ಮಂಜೂರಾದ 2, ಲಕ್ಷ ರೂ.ವಿನ ಮಂಜೂರಾತಿ ಪತ್ರವನ್ನು ಸಂಘದ ಪದಾಧಿಕಾರಿಗಳಿಗೆ ಹಸ್ತಾಂತರಿಸಲಾಯಿತು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಂಟ್ವಾಳ ತಾಲೂಕು ಯೋಜನಾಧಿಕಾರಿ ಜಯಾನಂದ ಪಿ. ಸಂಘದ ಅಧ್ಯಕ್ಷರು ಹಾಗೂ ಸದಸ್ಯರಿಗೆ ಮಂಜೂರಾತಿ ಪತ್ರ ಹಸ್ತಾಂತರಿಸಿದರು. ತಾಲೂಕು ಜನಜಾಗೃತಿ ವೇ. ಸದಸ್ಯ ಭಾಸ್ಕರ ಚೌಟ, ತಾರಾನಾಥ ಕೊಟ್ಟಾರಿ, ಪದ್ಮನಾಭ ಗೋವಿನ ತೋಟ, ತುಂಬೆ ವಲಯದ ಮೇಲ್ವಿಚಾರಕಿ ಮಮತಾ, ಪರಂಗಿಪೇಟೆ ಕಾರ್ಯಕ್ಷೇತ್ರದ ಸೇವಾ ಪ್ರತಿನಿಧಿ ಅಮಿತಾ ಮತ್ತಿತರರು ಉಪಸ್ಥಿತರಿದ್ದರು.

ಜ್ಞಾನಶ್ರೀಗೆ ರಾಜ್ಯದಲ್ಲಿ 4ನೇ ರ್‍ಯಾಂಕ್



ಬಂಟ್ವಾಳ: ಆಳ್ವಾಸ್ ವಿದ್ಯಾಸಂಸ್ಥೆ ಮೂಡಬಿದ್ರೆ ಇಲ್ಲಿನ ವಿದ್ಯಾರ್ಥಿ ಜ್ಞಾನಶ್ರೀ ಡಿ. ಅರಳ ಅವರು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ (ಪಿಸಿಎಂಬಿ) ವಿಷಯದಲ್ಲಿ 600ರಲ್ಲಿ 596 ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿ ರಾಜ್ಯದಲ್ಲಿ 4ನೇ ರ್‍ಯಾಂಕ್ ಗಳಿಸಿದ್ದಾರೆ. ಈಕೆ ದ.ಕ. ಇವರು ಜಿಲ್ಲಾ ಬಿಜೆಪಿ ವಕ್ತಾರ ಡೊಂಬಯ್ಯ ಅರಳ ಮತ್ತು ಉಷಾ ದಂಪತಿ ಪುತ್ರಿ.

ಏಕ ಬಳಕೆಯ ಪ್ಲಾಸ್ಟಿಕ್ ವಿರುದ್ಧ ಕಠಿಣ ಕ್ರಮ | ಪರಿಸರ ರಕ್ಷಣೆಗೆ ಮಂಗಳೂರು ಮಹಾನಗರ ಪಾಲಿಕೆಯಿಂದ ಮಹತ್ವದ ಹೆಜ್ಜೆ

ನಗರ ವ್ಯಾಪ್ತಿಯ ಸಂತೆ, ಮಾರುಕಟ್ಟೆಗಳಲ್ಲಿ 'ಬಯೋ ಪ್ಲಾಸ್ಟಿಕ್' ಕಡ್ಡಾಯ

ಸುರತ್ಕಲ್: ನಗರದ ವಾರಂತ್ಯ ಸಂತೆಯಲ್ಲಿ ಏಕ ಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ತಡೆಯುವ ನಿಟ್ಟಿನಲ್ಲಿ ಮಹಾನಗರ ಪಾಲಿಕೆ ಮಹತ್ವದ ಕ್ರಮ ಕೈಗೊಂಡಿದೆ.

ಮುಂದಿನ ಬುಧವಾರ ನಡೆಯಲಿರುವ ಸಂತೆಯಲ್ಲಿ ವ್ಯಾಪಾರಸ್ಥರು ಕಡ್ಡಾಯವಾಗಿ ಬಯೋ ಪ್ಲಾಸ್ಟಿಕ್ ಅಥವಾ ಪರಿಸರ ಸ್ನೇಹಿ ವಸ್ತುಗಳನ್ನು ಬಳಸಬೇಕು ಎಂದು ಸೂಚಿಸಲಾಗಿದೆ. ಈ ಸಂಬಂಧ ಮಾರುಕಟ್ಟೆ ಯೂನಿಯನ್ ಅಧ್ಯಕ್ಷರನ್ನು ಖುದ್ದಾಗಿ ಭೇಟಿ ಮಾಡಿದ ಅಧಿಕಾರಿಗಳು, ನಿಯಮಗಳ ಬಗ್ಗೆ ಅರಿವು ಮೂಡಿಸಲಾಗಿದೆ. ಅಧ್ಯಕ್ಷರು ಸಹ ಎಲ್ಲ ವ್ಯಾಪಾರಸ್ಥರಿಗೆ ಈ ಮಾಹಿತಿ ತಲುಪಿಸುವ ಜವಾಬ್ದಾರಿ ಹೊತ್ತುಕೊಂಡಿದ್ದು, ಪರಿಸರ ಸಂರಕ್ಷಣೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದ್ದಾರೆ.

ಏಕ ಬಳಕೆಯ ಪ್ಲಾಸ್ಟಿಕ್‌ನ ಅನಾಹುತಗಳು

ಏಕ ಬಳಕೆಯ ಪ್ಲಾಸ್ಟಿಕ್ ಪರಿಸರಕ್ಕೆ ದೊಡ್ಡ ಅಪಾಯವಾಗಿ ಪರಿಣಮಿಸಿದೆ. ಪರಿಸರ ಮಾಲಿನ್ಯಕ್ಕೆ ಮುಖ್ಯ ಕಾರಣವಾಗಲಿದೆ. ಪ್ಲಾಸ್ಟಿಕ್ ವಿಲೀನವಾಗಲು ನೂರಾರು ವರ್ಷಗಳ ಕಾಲ ಬೇಕಾಗುತ್ತದೆ. ಇದರಿಂದ ಭೂಮಿಯೂ, ನೀರೂ ದೀರ್ಘಕಾಲ ಮಾಲಿನ್ಯಗೊಳ್ಳುತ್ತವೆ., ಕಾಲುವೆಗಳು, ನದಿಗಳು ಪ್ಲಾಸ್ಟಿಕ್ ತ್ಯಾಜ್ಯದಿಂದ ಮುಚ್ಚಿ ಹೋಗಿ ಪ್ರವಾಹ ಪರಿಸ್ಥಿತಿಗೂ ಕಾರಣವಾಗುತ್ತವೆ. ಪ್ರಾಣಿಗಳು ಮತ್ತು ಪಕ್ಷಿಗಳು ಪ್ಲಾಸ್ಟಿಕ್ ತಿನ್ನುವುದರಿಂದ ಅವುಗಳ ಜೀವಕ್ಕೆ ಅಪಾಯ ಉಂಟಾಗುತ್ತದೆ. ಸಮುದ್ರ ಜೀವಿಗಳು ವಿಶೇಷವಾಗಿ ಇದರಿಂದ ಹೆಚ್ಚು ಬಾತರಾಗುತ್ತಿವೆ ಪ್ಲಾಸ್ಟಿಕ್‌ನಿಂದ ಹೊರಹೊಮ್ಮುವ ವಿಷಕಾರಿ ರಾಸಾಯನಿಕಗಳು ಆಹಾರ ಸರಪಳಿಗೆ ಸೇರಿ ಮಾನವ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ. ಪ್ಲಾಸ್ಟಿಕ್ ತ್ಯಾಜ್ಯ ಮಣ್ಣಿನ ಗುಣಮಟ್ಟವನ್ನು ಹಾಳುಮಾಡಿ ಕೃಷಿಗೆ ಹಾನಿ ಉಂಟುಮಾಡುತ್ತದೆ. ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಎಚ್ಚರಿಕೆ ವಹಿಸಲು ಪಾಲಿಕೆ ತೀರ್ಮಾನಿಸಿದೆ. ಮಹಾನಗರ ಪಾಲಿಕೆಯ ನಿಯಮಗಳನ್ನು ಪಾಲಿಸದೇ ಇದ್ದಲ್ಲಿ ದಂಡ ವಿಸಲು ಪಾಲಿಕೆ ಮುಂದಾಗಿದೆ.



ಗ್ರಾಹಕರು, ವ್ಯಾಪಾರಸ್ಥರ ಸಹಕಾರ

ಸ್ವಚ್ಛ ನಗರ ನಿರ್ಮಾಣದ ಕನಸನ್ನು ನನಸಾಗಿಸಲು ನಾಗರಿಕರು ಮತ್ತು ವ್ಯಾಪಾರಸ್ಥರ ಸಹಕಾರ ಅಗತ್ಯವಾಗಿದೆ. ಏಕ ಬಳಕೆಯ ಪ್ಲಾಸ್ಟಿಕ್ ತ್ಯಜಿಸಿ ಪರಿಸರ ಸ್ನೇಹಿ ಪರ್ಯಾಯಗಳನ್ನು ಅಳವಡಿಸಿಕೊಳ್ಳುವುದು ಕಾಲದ ಅಗತ್ಯವಾಗಿದೆ. ಈ ಕ್ರಮಗಳು ಯಶಸ್ವಿಯಾಗುವುದರಿಂದ ನಗರವು ಸ್ವಚ್ಛ, ಆರೋಗ್ಯಕರ ಹಾಗೂ ಪರಿಸರ ಸ್ನೇಹಿ ದಿಕ್ಕಿನಲ್ಲಿ ಸಾಗಲಿದೆ ಎಂಬ ವಿಶ್ವಾಸ ವ್ಯಕ್ತವಾಗಿದೆ.

ತ್ಯಾಜ್ಯ ನಿರ್ವಹಣೆ ಮಾಡದೇ ಇರುವ ವ್ಯಾಪಾರಸ್ಥರಿಗೆ ಸಂತೆಯಲ್ಲಿ ವ್ಯಾಪಾರ ನಡೆಸಲು ಅವಕಾಶ ನೀಡದಿರುವ ಎಚ್ಚರಿಕೆ ನೀಡಲಾಗಿದೆ.

ಜಾಗೃತಿ ಅಭಿಯಾನ

ಮೇಲ್ವಿಚಾರಕರಾದ ಪ್ರವೀಣ್, ಸುಭಾಷ್, ಶ್ರವಣ್ ಹಾಗೂ ಸಮುದಾಯ ಸಂಘಟಕರಾದ ಭಾಗ್ಯವತಿ, ಜಾನೆಟ್, ನಯನ ಮತ್ತು ಗೀತಾ ವ್ಯಾಪಾರಸ್ಥರನ್ನು ಭೇಟಿ ಮಾಡಿ ಪರಿಸರ ಸಂರಕ್ಷಣೆಯ ಅಗತ್ಯತೆಯನ್ನು ಮನವರಿಕೆ ಮಾಡಿದರು. ಬಯೋ ಪ್ಲಾಸ್ಟಿಕ್, ಕಾಗದದ ಚೀಲಗಳು, ಬಟ್ಟೆಯ ಚೀಲಗಳ ಬಳಕೆಯನ್ನು ಉತ್ತೇಜಿಸುವಂತೆ ಮನವಿ ಮಾಡಿದರು.

ತ್ಯಾಜ್ಯ ಎಸೆದವರಿಗೆ ದಂಡ

ಬೆಳ್ತಂಗಡಿ: ರಾಷ್ಟ್ರೀಯ ಹೆದ್ದಾರಿ ಬದಿ ರಾಶಿ ರಾಶಿ ಕಸವನ್ನು ತಂದು ಬಿಸಾಕಿ ಹೋದವರ ವಿಳಾಸ ಪತ್ತೆ ಹಚ್ಚಿ ಅವರಿಗೆ ದಂಡ ವಿಧಿಸಿದ ಘಟನೆ ಲಾಯಿಲ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಡೆದಿದೆ.

ಸ್ಥಳಕ್ಕೆ ಅಧಿಕಾರಿಗಳ ಭೇಟಿ

ಮಂಗಳೂರು ವಿಲ್ಲುಪುರಂ ರಾಷ್ಟ್ರೀಯ ಹೆದ್ದಾರಿಯ ಟಿ.ಬಿ. ಕ್ರಾಸ್ ಬಳಿ ರಸ್ತೆ ಬದಿಯಲ್ಲಿ ಕಸ ಸೇರಿದಂತೆ ಇನ್ನಿತರ ಮನೆ ತ್ಯಾಜ್ಯಗಳನ್ನು ತಂದು ಬಿಸಾಕಿದ್ದು ಈ ಬಗ್ಗೆ ಸಾರ್ವ ಜನಿಕರು ಪಂಚಾಯತ್‌ಗೆ ಮಾಹಿತಿ ನೀಡಿದಾಗ ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿ ತಾರನಾಥ್ ನಾಯ್ಕ, ಲೆಕ್ಕ ಸಹಾಯಕಿ ಸುಪ್ರಿತಾ ಶೆಟ್ಟಿ ಹಾಗೂ ಸ್ವಚ್ಚತಾ ಸಿಬ್ಬಂದಿಗಳು ತೆರಳಿ ಪರಿಶೀಲಿಸಿ ಕಸ ಬಿಸಾಕಿದವರ ವಿಳಾಸ ಪತ್ತೆ ಹಚ್ಚಿ ಸ್ಥಳಕ್ಕೆ ಅವರನ್ನು ಬರ ಹೇಳಿದರಲ್ಲದೇ ರೂ 2,000 ದಂಡ ವಿಧಿಸಿ ರಸ್ತೆ ಬದಿ ಕಸ ಬಿಸಾಡದಂತೆ ಎಚ್ಚರಿಕೆ ನೀಡಿದ್ದಾರೆ. ತಕ್ಷಣ ಸ್ಪಂದಿಸಿ ಕಸ ಬಿಸಾಕಿದವರನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಂಡ ಲಾಯಿಲ ಪಂ.ನ ಅಧಿಕಾರಿಗಳ ನಡೆ ಎಲ್ಲರ ಮೆಚ್ಚುಗೆ ಪಾತ್ರವಾಗಿದೆ.

ಸುತ್ತಮುತ್ತ

ಕಡಬ ಕಾಲೇಜು: ಶೇ. 99.39 ತೇರ್ಗಡೆ



ಕಡಬ: ಇಲ್ಲಿನ ಸರಕಾರಿ ಪದವಿ ಪೂರ್ವ ಕಾಲೇಜಿನ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದಿಂದ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾದ 109 ವಿದ್ಯಾರ್ಥಿಗಳ ಪೈಕಿ 108 ಮಂದಿ ಉತ್ತೀರ್ಣರಾಗಿ ಶೇ. 99.39 ತೇರ್ಗಡೆ ಫಲಿತಾಂಶ ದಾಖಲಾಗಿದೆ.

26 ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 70 ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಾಣಿಜ್ಯ ವಿಭಾಗದ ಆಯಿಷತುಲ್ ಇಲ್ಮಾ ಮಾಷ (571), ಹಾಗೂ ಫಾತಿಮತ್ ಝೂಯಿದಾ (571) ಅಂಕ ಗಳಿಸಿದ್ದಾರೆ.

ಕಡಬ ಸೈಂಟ್ ಜೋಕಿಮ್ಸ್ ಕಾಲೇಜಿಗೆ ಶೇ. 96.34 ಫಲಿತಾಂಶ



ಕಡಬ: ಇಲ್ಲಿನ ಸೈಂಟ್ ಜೋಕಿಮ್ಸ್ ಪದವಿ ಪೂರ್ವ ಕಾಲೇಜಿನ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದಿಂದ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾದ 82 ವಿದ್ಯಾರ್ಥಿಗಳ ಪೈಕಿ 79ಮಂದಿ ಉತ್ತೀರ್ಣರಾಗಿ ಶೇ. 96.34 ತೇರ್ಗಡೆ ಫಲಿತಾಂಶ ದಾಖಲಾಗಿದೆ ಎಂದು ಸಂಸ್ಥೆಯ ಸಂಚಾಲಕ ಪ್ರಕಾಶ್ ಪೌಲ್ ಡಿಸೋಜ ಹಾಗೂ ಪ್ರಾಂಶುಪಾಲ ಕಿರಣ್‌ಕುಮಾರ್ ಅವರು ತಿಳಿಸಿದ್ದಾರೆ. 12 ಮಂದಿ ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 55ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಿಜ್ಞಾನ ವಿಭಾಗದ ಖದೀಜತ್ ಶಮ್ಮಾ (571) ಅಂಕ ಗಳಿಸಿದ್ದಾರೆ.

ಬಂಟ್ವಾಳದ ಬಿ.ಮೂಡ ಪಿಯು ಕಾಲೇಜಿಗೆ ಶೇ. 92.05 ಫಲಿತಾಂಶ



ಬಂಟ್ವಾಳ: ಪ್ರಸ್ತುತ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಬಂಟ್ವಾಳ ಬಿ. ಮೂಡ ಸರಕಾರಿ ಪದವಿಪೂರ್ವ ಕಾಲೇಜು 92.05 ಫಲಿತಾಂಶ ದಾಖಲಿಸಿದೆ.

ಕಾಲೇಜಿನ 264 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 243 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 54 ಮಂದಿ ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದಾರೆ. ಕಲಾ ವಿಭಾಗದಲ್ಲಿ 72 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 60 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ 142 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 134 ಮಂದಿ ಉತ್ತೀರ್ಣರಾಗಿರುತ್ತಾರೆ. ವಿಜ್ಞಾನ ವಿಭಾಗದಲ್ಲಿ 50 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 49 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಕಲಾ ವಿಭಾಗದಲ್ಲಿ ಹೇಮಶ್ರೀ 562 ಅಂಕಗಳು, ವಾಣಿಜ್ಯ ವಿಭಾಗದಲ್ಲಿ ಭವಿತ್ 579 ಅಂಕಗಳು ಮತ್ತು ವಿಜ್ಞಾನ ವಿಭಾಗದಲ್ಲಿ ಪ್ರೇಕ್ಷಾ 576 ಅಂಕಗಳನ್ನು ಪಡೆದು ಉತ್ತಮ ಸಾಧನೆ ಮಾಡಿರುತ್ತಾರೆ ಎಂದು ಕಾಲೇಜಿನ ಪ್ರಾಂಶುಪಾಲ ಯೂಸುಫ್ ವಿಟ್ಲ ಅವರು ತಿಳಿಸಿದ್ದಾರೆ.

ತಪಸ್ಯಾಗೆ ಡಿಸ್ಟಿಂಕ್ಷನ್



ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತದ ಶ್ರೀ ಸುಬ್ರಹ್ಮಣ್ಯೇಶ್ವರ ಪದವಿ ಪೂರ್ವ ಕಾಲೇಜಿನ ದ್ವಿತೀಯ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ತಪಸ್ಯಾ ಎಸ್. ನಾಯಕ್ ಡಿಸ್ಟಿಂಕ್ಷನ್ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ 539 ಅಂಕ ಗಳಿಸಿ ಶೈಕ್ಷಣಿಕ ಸಾಧಕಿಯಾಗಿಯೂ ಹೆಮ್ಮೆ ತಂದಿದ್ದಾರೆ. ತಪಸ್ಯಾ ರಾಷ್ಟ್ರ ಮಟ್ಟದ 69ನೇ ನೆಟ್ ಬಾಲ್ ಪಂದ್ಯಾಟದ ಬಾಲಕಿಯರ ವಿಭಾಗದಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿ ರಾಷ್ಟ್ರ ಮಟ್ಟದ ಪಂದ್ಯಾಟದಲ್ಲಿ ಪ್ರಥಮ ಸ್ಥಾನ ಗಳಿಸಿ ಚಿನ್ನದ ಪದಕ ತನ್ನದಾಗಿಸಿಕೊಂಡಿದ್ದರು.

ಈ ಮೂಲಕ ಕುಕ್ಕೆಗೆ ಪ್ರಥಮ ಬಾರಿಗೆ ರಾಷ್ಟ್ರಮಟ್ಟದಲ್ಲಿ ಚಿನ್ನದ ಪದಕ ತಂದು ಕೊಟ್ಟಿದ್ದರು. ಅವರು ಸುಬ್ರಹ್ಮಣ್ಯದ ಎಸ್‌ಎಸ್‌ಪಿಯು ಕಾಲೇಜಿನ ಪ್ರಾಚಾರ್ಯ ಸೋಮಶೇಖರ ನಾಯಕ್ ಮತ್ತು ಉಪನ್ಯಾಸಕಿ ರೇಖಾರಾಣಿ ಸೋಮಶೇಖರ್ ಅವರ ಸುಪುತ್ರಿ.

ಉತ್ತಮ ಫಲಿತಾಂಶ ದಾಖಲಿಸಿದ ಪುತ್ತೂರು ನೆಲ್ಲಿಕಟ್ಟೆ ಅಂಬಿಕಾ ವಿದ್ಯಾಲಯ

ಪಿಯುಸಿ ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನೆ



ಪುತ್ತೂರು: ನಗರದ ನಟ್ಟೋಜ ಫೌಂಡೇಶನ್ ಪ್ರವರ್ತಿತ ನೆಲ್ಲಿಕಟ್ಟೆ ಹಾಗೂ ಬಪ್ಪಳಿಗೆಯ ಅಂಬಿಕಾ ಪದವಿ ಪೂರ್ವ ವಿದ್ಯಾಲಯಗಳಿಂದ ಪರೀಕ್ಷೆಗೆ ಹಾಜರಾದ ಒಟ್ಟು 484 ವಿದ್ಯಾರ್ಥಿಗಳಲ್ಲಿ 363 ಮಂದಿ ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗುವ ಮೂಲಕ ಶೇ.75 ಮಂದಿ ವಿಶಿಷ್ಟ ಶ್ರೇಣಿಯಲ್ಲೇ ಉತ್ತೀರ್ಣ ಹೊಂದಿದ ದಾಖಲೆ ಮೂಡಿ ಬಂದಿದೆ. ಪಿಯು ಫಲಿತಾಂಶದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಅತ್ಯುತ್ತಮ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರನ್ನು ಸನ್ಮಾನಿಸಲಾಯಿತು.

ವಿಜ್ಞಾನ ವಿಭಾಗದಲ್ಲಿ 600ರಲ್ಲಿ 597 ಅಂಕವನ್ನು ಪಡೆಯುವ ಮೂಲಕ ರಾಜ್ಯಕ್ಕೆ ತೃತೀಯ ಸ್ಥಾನ ಗಳಿಸಿದ ನಿವಾಸಿ ಶಾರ್ವರೀ ಆರ್.ಎಸ್. ಹಾಗೂ ಅವರ ತಾಯಿ ಸುಗುಣ ಎ., 594 ಅಂಕವನ್ನು ಪಡೆದು 6ನೇ ಸ್ಥಾನ ಪಡೆದ ತ್ರಿಶೂಲ್ ಎನ್.ಡಿ. ಹಾಗೂ ಅವರ ತಂದೆ ದಾಮೋದರ ಎನ್., 594 ಅಂಕವನ್ನು ಪಡೆದು 6ನೇ ಸ್ಥಾನ ಪಡೆದ ಗಗನ್ ಕೆ.ಆರ್. ಹಾಗೂ ತಂದೆ ರಾಜಶೇಖರ್, ವಾಣಿಜ್ಯ ವಿಭಾಗದಲ್ಲಿ 594 ಅಂಕ ಪಡೆದು ರಾಜ್ಯಕ್ಕೆ 7ನೇ ಸ್ಥಾನ ಪಡೆದ ಪ್ರತೀಕ್ಷಾ ಶೆಣೈ ಹಾಗೂ ಪೋಷಕರಾದ ಎಂ. ನರಸಿಂಹ ಶೆಣೈ ಹಾಗೂ ಶ್ರೀಲಕ್ಷ್ಮೀ ಶೆಣೈ ಮತ್ತು 593 ಅಂಕ ಪಡೆದ ಅನನ್ಯಾ ವಿ. ಹಾಗೂ ಅವರ ತಾಯಿ ಹೇಮಲತಾ ವಿ. ಅವರನ್ನು ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ವತಿಯಿಂದ ಸಂಸ್ಥೆಯ ಅಧ್ಯಕ್ಷರಾದ ಸುಬ್ರಹ್ಮಣ್ಯ ನಟ್ಟೋಜ ಹಾಗೂ ಕಾರ್ಯದರ್ಶಿ ರಾಜಶ್ರೀ ಎಸ್. ನಟ್ಟೋಜ ಗೌರವಿಸಿದರು.

ಈ ಸಂದರ್ಭ ನೆಲ್ಲಿಕಟ್ಟೆ ಅಂಬಿಕಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸತ್ಯಜಿತ್ ಉಪಾಧ್ಯಾಯ, ಉಪಪ್ರಾಂಶುಪಾಲೆ ಶೈನಿ, ಉಪನ್ಯಾಸಕರಾದ ಕಿಶೋರ್ ಸಿ., ರಾಮ ಪ್ರಸಾದ್, ಸತೀಶ್ ಇರ್ದೆ, ಸಚಿನ್ ಮೊದಲಾದವರು ಉಪಸ್ಥಿತರಿದ್ದರು.

ಡಾ. ಎನ್.ಎಸ್.ಎ.ಎಂ. ಪಿಯು ಕಾಲೇಜಿಗೆ ರಾಜ್ಯಮಟ್ಟದಲ್ಲಿ 4 ರ‍್ಯಾಂಕ್

ಕಾರ್ಕಳ: ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಡಾ. ಎನ್.ಎಸ್.ಎ.ಎಂ. ಪದವಿಪೂರ್ವ ಕಾಲೇಜು ನಿಟ್ಟೆಗೆ ರಾಜ್ಯ ಮಟ್ಟದಲ್ಲಿ 4 ರ‍್ಯಾಂಕ್‌ಗಳು ಲಭಿಸಿವೆ.



ದ್ವಿತೀಯ ಪಿಯು ವಾಣಿಜ್ಯ ವಿಭಾಗ ದಲ್ಲಿ ಅಮೃತಾ ಕಾಮತ್ 600ರಲ್ಲಿ 596 ಅಂಕಗಳೊಂದಿಗೆ ರಾಜ್ಯ ಮಟ್ಟಕ್ಕೆ 5ನೇ ರ‍್ಯಾಂಕ್ ಹಾಗೂ ದ್ವಿತೀಯ ಪಿಯು ವಿಜ್ಞಾನ ವಿಭಾಗದ ಆಡ್ಲಿನ್ ವಿಯಾನಾ ಮಥಾಯಸ್ 600ರಲ್ಲಿ 593 ಅಂಕಗಳೊಂದಿಗೆ ರಾಜ್ಯ ಮಟ್ಟಕ್ಕೆ 7ನೇ ರ‍್ಯಾಂಕ್, ನಿಧಿ ದೀಪಕ್ ಮೆಂಡನ್ 600ರಲ್ಲಿ 591 ಅಂಕಗಳೊಂದಿಗೆ 9ನೇ ರ‍್ಯಾಂಕ್ ಮತ್ತು ವರ್ಷಾ ಎಸ್. ಭಂಡಾರಿ 600ರಲ್ಲಿ 590 ಅಂಕಗಳೊಂದಿಗೆ 10ನೇ ರ‍್ಯಾಂಕ್ ಅನ್ನು ಗಳಿಸಿದ್ದಾರೆ. ಇದರೊಂದಿಗೆ ವಾಣಿಜ್ಯ ವಿಭಾಗದ ಪ್ರತಿಷ್ಠಾ ಪ್ರಭು 600ರಲ್ಲಿ 589 ಮತ್ತು ನಂದಿನಿ ಎ. ಶೆಟ್ಟಿ 600ರಲ್ಲಿ 585 ಅಂಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಪರೀಕ್ಷೆಗೆ ಹಾಜರಾದ 278 ವಿದ್ಯಾರ್ಥಿಗಳಲ್ಲಿ 146 ವಿದ್ಯಾರ್ಥಿ ಗಳು ವಿಶಿಷ್ಟ ಶ್ರೇಣಿಯಲ್ಲಿ ಮತ್ತು 120 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಗೊಂಡಿದ್ದು, ಕಾಲೇಜಿನ ವಿಜ್ಞಾನ ವಿಭಾಗದಲ್ಲಿ 99.4% ಮತ್ತು ವಾಣಿಜ್ಯ ವಿಭಾಗದಲ್ಲಿ 100% ಫಲಿತಾಂಶ ದಾಖಲಾಗಿದೆ.

ಬಂಟ್ವಾಳ ಎಸ್‌ವಿಎಸ್ ಪದವಿಪೂರ್ವ ಕಾಲೇಜ್: ವಾಣಿಜ್ಯ ವಿಭಾಗದಲ್ಲಿ ಸಾಧನೆ



ಬಂಟ್ವಾಳ: ಪ್ರಸ್ತುತ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಬಂಟ್ವಾಳ ಶ್ರೀ ವೆಂಕಟರಮಣ ಸ್ವಾಮೀ ಪದವಿ ಪೂರ್ವ ಕಾಲೇಜಿನ ವಾಣಿಜ್ಯ ವಿಭಾಗದಲ್ಲಿ ಪ್ರೀತಿ ಆಚಾರ್ಯ– 566 (94.33%), ಸ್ಪಂದನಾ 563 (93.83%) ಸುಜಿತ್ 563(93.83%) ಮತ್ತು ವಿಜ್ಞಾನ ವಿಭಾಗದಲ್ಲಿ ಕ್ರಮವಾಗಿ ಭೂಮಿಕ–551 (91.83%), ಬಿ. ಎಚ್ ನೀಕ್ಷಿತಾ ಶೆಟ್ಟಿ 544 (90.66%) ಅಂಕಗಳನ್ನು ಪಡೆದಿರುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಅವರಿಗೆ ಕಾಲೇಜು ಆಡಳಿತಮಂಡಳಿಯ ಅಧ್ಯಕ್ಷ ಕೂಡಿಗೆ ಪಾಂಡುರಂಗ ಶೆಣೈ, ಜತೆ ಕಾಯದರ್ಶಿ ಕೂಡಿಗೆ ಪ್ರಕಾಶ್ ಶೆಣೈ ಮತ್ತು ಅನಿರುದ್ಧ ಕಾಮತ್ ಮತ್ತು ಎಸ್.ವಿ.ಎಸ್. ಸಮೂಹ ಸಂಸ್ಥೆಗಳ ಸಂಚಾಲಕಿ ಕೆ. ರೇಖಾ ಶೆಣೈ ಪ್ರಾಂಶುಪಾಲರು, ಉಪನ್ಯಾಸಕ–ಉಪನ್ಯಾಸಕೇತರು ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಕಟಪಾಡಿಯ ಎಸ್.ವಿ.ಎಸ್. ಪಿಯು ಕಾಲೇಜಿಗೆ ಒಟ್ಟು ಶೇ.92.30 ಫಲಿತಾಂಶ



ಶಿರ್ವ: ಕಟಪಾಡಿಯ ಎಸ್.ವಿ.ಎಸ್.ಪದವಿ ಪೂರ್ವ ಕಾಲೇಜು ವಾಣಿಜ್ಯ ವಿಭಾಗದ ಪರೀಕ್ಷೆಗೆ ಹಾಜರಾದ 52 ವಿದ್ಯಾರ್ಥಿಗಳಲ್ಲಿ 48 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು 5 ಅತ್ಯುನ್ನತ ಶ್ರೇಣಿ, 24 ಪ್ರಥಮ ಶ್ರೇಣಿ, 15 ದ್ವಿತೀಯ ಶ್ರೇಣಿ, 4 ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಕಾಲೇಜಿನ ಒಟ್ಟು ಫಲಿತಾಂಶ ಶೇ. 92.30 ದಾಖಲಾಗಿದೆ. ಆಯಿಷತ್ ಉಲ್ ರಿಝಾ 579, ವೈಷ್ಣವಿ ಆರ್ ಸಾಮಗ 576, ಸುಮಯ್ಯ ಬಾನು 558, ಕವಿತಾ 538, ರಚನಾ ಆಚಾರ್ಯ 528 ಅಂಕಗಳೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.




ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಜಾತ್ರಾ ಮಹೋತ್ಸವದ ಪ್ರಯುಕ್ತ ಶ್ರೀ ದೇವರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಅವಭೃತ ಸವಾರಿ ಚಂದ್ರ ಸೇನಾ ಕುದ್ರುವಿಗೆ ದೋಣಿಯಲ್ಲಿ ನಡೆಯಿತು. ಚಂದ್ರ ಸೇನಾ ಕುದ್ರುವಿನ ಜಳಕದ ಕಟ್ಟೆಯಲ್ಲಿ ಶ್ರೀ ದೇವರ ಅವಭೃತ ಸ್ನಾನ ನಡೆದು ಮತ್ತೆ ಪುನಃ ದೇವರು ಆಗಮಿಸಿದಾಗ ಬಡಗಹಿತ್ಲು ಬಳಿ ಕಟ್ಟೆ ಪೂಜೆ, ತೂಟೆದಾರ ನಡೆಯಿತು.



ನಾಪೋಕ್ಲು ಇಲ್ಲಿಗೆ ಸಮೀಪದ ದೊಡ್ಡಪುಲಿಕೊಟು ಗ್ರಾಮದ ಶ್ರೀ ಕೋಟೆ ಭಗವತಿ ದೇವಸ್ಥಾನ ವಾರ್ಷಿ ಉತ್ಸವ ಗುರುವಾರ ಶ್ರದ್ಧಾ ಭಕ್ತಿಯಿಂದ ಸಂಪನ್ನಗೊಂಡಿತ್ತು.

ಪಿಯುಸಿ ಪರೀಕ್ಷೆ: ಕ್ರೈಸ್ಟ್ ಕಿಂಗ್ ಪದವಿ ಪೂರ್ವ ಕಾಲೇಜಿಗೆ ಹಲವು ರ‍್ಯಾಂಕ್



ಕಾಲೇಜಿನ ಇಬ್ಬರಿಗೆ ರಾಜ್ಯ ಮಟ್ಟದಲ್ಲಿ ರ‍್ಯಾಂಕ್

ಕಾರ್ಕಳ: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಇಲ್ಲಿನ ಕ್ರೈಸ್ಟ್ ಕಿಂಗ್ ಪದವಿ ಪೂರ್ವ ಕಾಲೇಜು ಕಾರ್ಕಳ ವಾಣಿಜ್ಯ ವಿಭಾಗದ ಇಬ್ಬರು ವಿದ್ಯಾರ್ಥಿಗಳಿಗೆ 596 ಅಂಕಗಳೊಂದಿಗೆ ರಾಜ್ಯದಲ್ಲಿ ನಾಲ್ಕನೇ ರ‍್ಯಾಂಕ್ ಉಡುಪಿ ಜಿಲ್ಲೆಗೆ ಮೂರನೇ ರ‍್ಯಾಂಕ್ ಗಳಿಸಿದ್ದಾರೆ.

ಕಾಲೇಜಿನ ವಿದ್ಯಾರ್ಥಿಗಳಾದ ಶ್ರೀಮಾ ದೇವಾಡಿಗ ಹಾಗೂ ಪ್ರಜ್ವಲ್ ಶೆಟ್ಟಿ ಇಬ್ಬರಿಗೂ 596 ಅಂಕಗಳು ಶ್ರಮಾ ದೇವಾಡಿಗ ವಾಣಿಜ್ಯ ವಿಭಾಗದಲ್ಲಿ 596 ಅಂಕಗಳೊಂದಿಗೆ ರಾಜ್ಯಕ್ಕೆ 5ನೇ ಹಾಗೂ ಉಡುಪಿ ಜಿಲ್ಲೆಗೆ ಮೂರನೇ ರ‍್ಯಾಂಕ್. ತೆಳ್ಳಾರು 12ನೇ ಅಡ್ಡರಸ್ತೆ ನಿವಾಸಿ ಸಂತೋಷ ದೇವಾಡಿಗ ಮತ್ತು ಸುಮಂಗಲಾ ದೇವಾಡಿಗ ಇವರ ಪುತ್ರಿ.

ಪಿಯು ಪರೀಕ್ಷೆ: ರ‍್ಯಾಂಕ್ ವಿಜೇತರಿಗೆ ಸನ್ಮಾನ



ಕುಂದಾಪುರ: 2025–26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ 9ನೇ ರ‍್ಯಾಂಕ್ ಪಡೆದ ಸಿಂಧು ಖಾರ್ವಿ ಮತ್ತು ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ 9ನೇ ರ‍್ಯಾಂಕ್ ಪಡೆದ ಪ್ರತೀಕ್ ಕೊಠಾರಿ ಅವರನ್ನು ಜಿ.ಎಸ್.ವಿ.ಎಸ್.ಅಸೋಸಿಯೇಶನ್ ಗಂಗೊಳ್ಳಿ ಮತ್ತು ಗಂಗೊಳ್ಳಿಯ ಸರಸ್ವತಿ ವಿದ್ಯಾಲಯ ಪದವಿ ಪೂರ್ವ ಕಾಲೇಜು ವತಿಯಿಂದ ಅವರ ಸ್ವಗೃಹದಲ್ಲಿ ಶನಿವಾರ ಸನ್ಮಾನಿಸಿ ಗೌರವಿಸಲಾಯಿತು. ಜಿ.ಎಸ್.ವಿ.ಎಸ್. ಅಸೋಸಿಯೇಶನ್ ಅಧ್ಯಕ್ಷ ಡಾ.ಕಾಶೀನಾಥ ಪೈ, ಕಾರ್ಯದರ್ಶಿ ಎಚ್.ಗಣೇಶ ಕಾಮತ್, ಖಜಾಂಚಿ ಎನ್.ಅಶ್ವಿನ್ ನಾಯಕ್, ಕಾಲೇಜಿನ ಸಂಚಾಲಕ ಎನ್.ಸದಾಶಿವ ನಾಯಕ್ , ಕಾಲೇಜಿನ ಪ್ರಾಂಶುಪಾಲೆ ಕವಿತಾ ಎಂ.ಸಿ. ಅವರು ವಿದ್ಯಾರ್ಥಿಗಳನ್ನು ಗೌರವಿಸಿ ಅಭಿನಂದಿಸಿದರು.

ವಿಟ್ಲ: ವಿಠಲ ಪದವಿಪೂರ್ವ ಕಾಲೇಜಿಗೆ ಒಟ್ಟು ಶೇ.92 ಫಲಿತಾಂಶ



ವಿಟ್ಲ: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಟ್ಲದ ವಿಠಲ ಪದವಿಪೂರ್ವ ಕಾಲೇಜಿನ ಒಟ್ಟು 270 ವಿದ್ಯಾರ್ಥಿಗಳು ಹಾಜರಾಗಿ 248 ವಿದ್ಯಾರ್ಥಿಗಳು ತೇರ್ಗಡೆಗೊಂಡು ಶೇ 92.00 ಫಲಿತಾಂಶ ದಾಖಲಿಸಿದ್ದಾರೆ.



44 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ವಿಜ್ಞಾನ ವಿಭಾಗದಲ್ಲಿ ಸಾನ್ವಿ ಬಿ ಎಸ್ (580), ವಾಣಿಜ್ಯ ವಿಭಾಗದಲ್ಲಿ ಪಲ್ಲವಿ ಪಾದೆಕಲ್ಲು (577) ಹಾಗೂ ಕಲಾ ವಿಭಾಗದಲ್ಲಿ ವೀಣಾ ಶಂಕರಿ (569) ಕ್ರಮವಾಗಿ ಪ್ರಥಮ ಸ್ಥಾನಗಳನ್ನು ಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ ಮೆಚ್ಚುಗೆ ವ್ಯಕ್ತಪಡಿಸಿದೆ.

ಎಸ್‌ವಿಟಿ: ದೀಕ್ಷಾಗೆ ಶೇ. 97.16 ಅಂಕ



ಕಾರ್ಕಳ: ಎಸ್‌ವಿಟಿ ವನಿತಾ ಪದವಿ ಪೂರ್ವ ಕಾಲೇಜಿನ ಗಣಕ ವಿಜ್ಞಾನ ವಿಭಾಗದ ವಿದ್ಯಾರ್ಥಿ ದೀಕ್ಷಾ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದ ಗಣಕ ವಿಜ್ಞಾನ ವಿಭಾಗದಲ್ಲಿ 583 ಅಂಕಗಳನ್ನು ಪಡೆದು 97.16% ಫಲಿತಾಂಶವನ್ನು ಪಡೆದು ಕಾಲೇಜಿಗೆ ಅಗ್ರಸ್ಥಾನವನ್ನು ಪಡೆದಿರುತ್ತಾರೆ. ಇವರು ಕಾರ್ಕಳ ಕಾಬೆಟ್ಟಿನ ಜಯಪ್ಪ ಶೆಟ್ಟಿಗಾರ್ ಮತ್ತು ರತಿ ಶೆಟ್ಟಿಗಾರ್ ಅವರ ಪುತ್ರಿಯಾಗಿದ್ದಾರೆ.

ಕುಂದಾಪುರ ಐ.ಎಂ.ಜೆ ಶಿಕ್ಷಣ ಸಂಸ್ಥೆಯ ಸ್ಥಾಪನಾ ದಿನಾಚರಣೆ



ಕುಂದಾಪುರ: ಒಂದು ಸಂಸ್ಥೆಯನ್ನು ಕಟ್ಟುವುದು ಸುಲಭದ ಮಾತಲ್ಲ, ಜಯರಾಮ ಶೆಟ್ಟಿಯವರು ಈ ಗ್ರಾಮೀಣ ಪ್ರದೇಶದಲ್ಲಿ ಇಂತಹ ಒಂದು ಅತ್ಯುನ್ನತ ಶಿಕ್ಷಣ ಸಂಸ್ಥೆ ಯನ್ನು ಸ್ಥಾಪಿಸುವ ಮೂಲಕ ಈ ಭಾಗದ ಶೈಕ್ಷಣಿಕ ಚಿತ್ರಣವನ್ನೇ ಬದಲಿಸಿದ್ದಾರೆ ಎಂದು ಮಾಜಿ ಸಚಿವ ಹಾಗೂ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಹೇಳಿದರು.

ಕುಂದಾಪುರದ ಮೂಡ್ಲಕಟ್ಟೆಯ ಪ್ರತಿಷ್ಠಿತ ಐ.ಎಂ.ಜೆ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಶುಕ್ರವಾರ ಐಎಂಜೆ ಶಿಕ್ಷಣ ಸಂಸ್ಥೆಗಳ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ, ಇಂದು ಈ ಸಂಸ್ಥೆ ಕೇವಲ ಇಂಜಿನಿಯರಿಂಗ್‌ಗೆ ಸೀಮಿತವಾಗದೆ, ವಿಜ್ಞಾನ, ವಾಣಿಜ್ಯ ಹಾಗೂ ನರ್ಸಿಂಗ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಪಸರಿಸಿರುವುದು ಶ್ಲಾಘನೀಯ, ವಿದ್ಯಾರ್ಥಿಗಳು ಜಯರಾಮ ಶೆಟ್ಟಿ ಅವರ ಜೀವನವನ್ನು ಆದರ್ಶ ವಾಗಿರಿಸಿಕೊಡು ಯಶಸ್ಸಿನತ್ತ ಸದಾ ಪ್ರಯತ್ನಿಸಬೇಕು ಹಾಗೂ ಪರಿಸರ ಸಂರಕ್ಷಣೆಗೆ ಮೊದಲ ಆದ್ಯತೆ ನೀಡಬೇಕು, ಸಮಾಜಮುಖಿ ಕಾರ್ಯಗಳಿಗೆ ಹೆಚ್ಚು ಒತ್ತು ಕೊಡಬೇಕು ಎಂದು ಅವರು ಹೇಳಿದರು.

ಐ.ಎಂ.ಜೆ ಸಂಸ್ಥೆಗಳ ಅಧ್ಯಕ್ಷ ಸಿದ್ದಾರ್ಥ ಜೆ. ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರಿನ ಯುನಿವರ್ಸಲ್ ಗ್ರೂಪ್ ಆಫ್ ಇನ್ಸ್ಟಿಟ್ಯೂಶನ್ಸ್‌ನ ಸಂಸ್ಥಾಪಕ ಅಧ್ಯಕ್ಷ ಆರ್. ಉಪೇಂದ್ರ ಶೆಟ್ಟಿ, ಎಂ.ಎನ್.ಬಿ.ಎಸ್ ಟ್ರಸ್ಟ್‌ನ ಟ್ರಸ್ಟಿ ರಾಮ್ ರತನ್ ಜೆ. ಶೆಟ್ಟಿ, ಸುಧಾಕರ ಹೆಗ್ಡೆ ಸಂಸ್ಥೆಯ ಅಕಾಡೆಮಿಕ್ ನಿರ್ದೇಶಕ ಡಾ. ಎಸ್. ಎನ್. ಭಟ್, ಐಎಂಜೆ ಇನ್ಸಿಟ್ಯೂಟ್ ಆಫ್ ರಿಸರ್ಚ್ ನಿರ್ದೇಶಕ ಕೆ.ಟಿ. ಸತ್ಯಜಿತ್, ಡಾ. ಪದ್ಮಚರಣ್ ಸ್ವಾಯ್ನ, ಪ್ರೊ. ಹೇಮಲತಾ ಇದ್ದರು. ಐಎಂಜೆಐಎಸ್‌ಸಿ ಪ್ರಾಂಶುಪಾಲೆ ಡಾ. ಪ್ರತಿಭಾ ಪಟೇಲ್ ಸ್ವಾಗತಿಸಿದರು. ಐಎಸ್ ವಿಭಾಗದ ಮುಖ್ಯಸ್ಥ ಡಾ.ಜೆ ಪ್ರಕಾಶ ಹಾಗೂ ನರ್ಸಿಂಗ್ ಕಾಲೇಜಿನ ಉಪಪ್ರಾಂಶುಪಾಲೆ ಪ್ರೊ. ರೂಪಶ್ರೀ ಅತಿಥಿಗಳನ್ನು ಪರಿಚಯಿಸಿದರು. ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲೆ ಪ್ರೊ ಜೆನ್ನಿಫರ್ ಮೆನೇಜಸ್ ವಂದಿಸಿದರು. ಪ್ರಾಧ್ಯಾಪಕಿ ರಾಜೇಶ್ವರಿ ಶೆಟ್ಟಿ ನಿರೂಪಿಸಿದರು.

ಉಡುಪಿಯ ವೈಕುಂಠ ಬಾಳಿಗಾ ಕಾನೂನು ಮಹಾವಿದ್ಯಾಲಯದಲ್ಲಿ ವಕೀಲ ದಿ.ಪಿ. ಶಿವಾಜಿ ಶೆಟ್ಟಿ ಸ್ಮಾರಕ ರಾಷ್ಟ್ರೀಯಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆ

ಎಐ ಯುಗದಲ್ಲಿ ವಕೀಲ ವೃತ್ತಿಗೂ ತಂತ್ರಜ್ಞಾನದಿಂದ ಸವಾಲು ಎದುರಾಗಿವೆ: ನ್ಯಾ. ವಿಶ್ವಜಿತ್ ಶೆಟ್ಟಿ

ಉಡುಪಿ: ಎಐ ಯುಗದಲ್ಲಿ ವಕೀಲ ವೃತ್ತಿಗೂ ತಂತ್ರಜ್ಞಾನದಿಂದ ಸವಾಲುಗಳು ಎದುರಾಗುತ್ತಿವೆ. ವಿದ್ಯಾರ್ಥಿಗಳು ಇದನ್ನು ಸಮರ್ಥವಾಗಿ ನಿಭಾಯಿಸಲು ಈಗಲೇ ತಂತ್ರಜ್ಞಾನಕ್ಕೆ ಒಗ್ಗಿಕೊಳ್ಳಬೇಕು. ಸಾಧನೆ ಮಾಡಲು ನಿರಂತರ ಪರಿಶ್ರಮ ಬೇಕು. ನೀವು ಸಾಧಿಸುವ ಹಾದಿಯಲ್ಲಿ ನಾನಾ ಕ್ಲಿಷ್ಟಕರ ದಾರಿಗಳು ಬಂದು ವಿಫಲಗೊಳ್ಳಬಹುದು. ಆದರೆ, ನಿರಂತರ ಪರಿಶ್ರಮ, ನಿಮ್ಮನ್ನು ಸಾಧನೆಯ ಶಿಖರಕ್ಕೆ ಏರಿಸುತ್ತದೆ ಎಂದು ಹೈಕೋರ್ಟಿನ ನ್ಯಾ. ಎಸ್. ವಿಶ್ವಜಿತ್ ಶೆಟ್ಟಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.



ಏ.10ರಿಂದ 12ರವರೆಗೆ ವೈಕುಂಠ ಬಾಳಿಗಾ ಕಾನೂನು ಮಹಾವಿದ್ಯಾಲಯದಲ್ಲಿ ಉಡುಪಿಯ ಪ್ರತಿಷ್ಠಿತ ವಕೀಲ ದಿ.ಪಿ. ಶಿವಾಜಿ ಶೆಟ್ಟಿ ಸ್ಮಾರಕ 10ನೇ ರಾಷ್ಟ್ರೀಯ ಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆಯ ಅಂಗವಾಗಿ ಭಾನುವಾರ ನಡೆದ ಅಂತಿಮ ಸುತ್ತಿನಲ್ಲಿ ತೀರ್ಪುಗಾರರಾಗಿ ಭಾಗವಹಿಸಿ ಮಾತನಾಡಿದರು.

ಹಿಂದೆ ವಕೀಲ ವೃತ್ತಿಗೆ ಹೆಚ್ಚು ಅವಕಾಶ ಇರಲಿಲ್ಲ, ಈಗ ವಿಪುಲವಾದ ಅವಕಾಶವಿದೆ. ಪ್ರತಿದಿನ ಬದಲಾವಣೆ ಆಗುತ್ತಿರುವ ನೂತನ ಕಾಯ್ದೆ ಕಾನೂನುಗಳ ಬಗ್ಗೆ ಗಮನವಿಟ್ಟು, ಅದರ ಬಗ್ಗೆ ಅಧ್ಯಯನ ನಡೆಸಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಮಾನವಿಕಶಾಸ್ತ್ರ ವಿಭಾಗದ ಮುಖ್ಯಸ್ಥ ರೋಹಿತ್ ಅಮೀನ್ ಅಧ್ಯಕ್ಷತೆ ವಹಿಸಿದ್ದರು. ವಕೀಲ ದಿ.ಪಿ.ಶಿವಾಜಿ ಶೆಟ್ಟಿಯವರ ಧರ್ಮಪತ್ನಿ ಜಯಂತಿ.ಪಿ ಶೆಟ್ಟಿ, ದೆಹಲಿಯ ಆದಾಯ ತೆರಿಗೆ ನ್ಯಾಯ ಮಂಡಳಿಯ ನ್ಯಾಯಿಕ ಸದಸ್ಯ ಯೋಗೇಶ್ ಕುಮಾರ್ ಯು.ಎಸ್, ಬೆಂಗಳೂರಿನ ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯ ನಿರ್ದೇಶಕ ಪ್ರೊ.(ಡಾ.) ಚಿದಾನಂದ ರೆಡ್ಡಿ ಎಸ್. ಪಾಟೀಲ್, ಕಾಲೇಜಿನ ಪ್ರಾಂಶುಪಾಲೆ ಪ್ರೊ.ಸುರೇಖಾ ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರಾದ ಮೇಧಾ ಪ್ರಾರ್ಥಿಸಿ, ಅಪರ್ಣಾಲಕ್ಷ್ಮೀ ಸ್ವಾಗತಿಸಿದರು. ಉಪಪ್ರಾಂಶುಪಾಲೆ ಡಾ.ಪ್ರೀತಿ ಹರೀಶ್‌ರಾಜ್ ವಂದಿಸಿದರು. ವಿದ್ಯಾರ್ಥಿ ವಸುದೇವ್ ತಿಲಕ್ ನಿರೂಪಿಸಿದರು. ಸ್ಪರ್ಧೆಯಲ್ಲಿ ಹೊರರಾಜ್ಯದ ಪುಣೆ, ಕೇರಳ, ತೆಲಂಗಾಣ ಸೇರಿದಂತೆ ಒಟ್ಟು 28 ತಂಡಗಳು ಭಾಗವಹಿಸಿದ್ದವು.

ವಿವಿಧ ಸ್ಪರ್ಧೆಗಳ ವಿಜೇತರ ಘೋಷಣೆ: ವಿವಿಧ ಕಾಲೇಜುಗಳ ತಂಡಕ್ಕೆ ಪ್ರಶಸ್ತಿ

ಬೆಂಗಳೂರಿನ ಬಿಎಮ್‌ಎಸ್ ಲಾ ಕಾಲೇಜಿನ ಅಮಲೆಂದು.ಕೆ, ವಂಶಿಕಾ ಅರೋರಾ, ಲಿಶಾ ಮಂಜುನಾಥ್ ತಂಡವು ಪ್ರಥಮ, ಬೆಂಗಳೂರಿನ ಕೆಎಲ್‌ಇ ಲಾ ಕಾಲೇಜಿನ ಪೂರ್ಣಚಂದ್ರ ತೇಜಸ್ವಿ, ಲಾಂಚನ ಎಂ. ನಾಯಕ, ಅಭಿಲಾಶ್.ಎಂ ತಂಡವು ದ್ವಿತೀಯ ಸ್ಥಾನ ಪಡೆದಿದ್ದಾರೆ. ಉತ್ತಮ ವಕೀಲನಾಗಿ ಬೆಂಗಳೂರಿನ ಕೆಎಲ್‌ಇ ಲಾ ಕಾಲೇಜಿನ ವಿದ್ಯಾರ್ಥಿ ಪೂರ್ಣಚಂದ್ರ ತೇಜಸ್ವಿ, ಉತ್ತಮ ವಕೀಲೆಯಾಗಿ ಬೆಂಗಳೂರಿನ ಎಮ್‌ಕೆಪಿಎಂ ಆರ್‌ವಿ ಇನ್ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್‌ನ ಶ್ರಿಯಾ ಶಿವರೆಡ್ಡಿ ಹೊರಹೊಮ್ಮಿದ್ದಾರೆ. ಅತ್ಯುತ್ತಮ ಮೆಮೊರಿಯಲ್ ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜಿನ ರಿಶಾಲ್ ಶ್ಲೈನಿ ಪೆರೇರಾ, ಡಯೇಲ್ ಪಿಂಟೊ, ನಿಕ್ಕಿ ಅಶೋಕನ್ ಅವರ ತಂಡಕ್ಕೆ ಲಭಿಸಿತು. ಉತ್ತಮ ತೀರ್ಪು ಬರವಣಿಗೆ ಸ್ಪರ್ಧೆಯಲ್ಲಿ ಮೈಸೂರಿನ ವಿದ್ಯಾವರ್ಧಕ ಲಾ ಕಾಲೇಜಿನ ವಿಭಾಲಿ ಎಸ್.ರಾಜ್ ಪ್ರಥಮ, ಪುತ್ತೂರಿನ ವಿವೇಕಾನಂದ ಲಾ ಕಾಲೇಜಿನ ಕೀರ್ತಿ.ಕೆಆರ್ ದ್ವಿತೀಯ ಸ್ಥಾನ ಪಡೆದಿದ್ದಾರೆ. ಕಾನೂನು ರಸಪ್ರಶ್ನೆ ಸ್ಪರ್ಧೆಯಲ್ಲಿ ಮೈಸೂರಿನ ಜೆಎಸ್‌ಎಸ್ ಲಾ ಕಾಲೇಜಿನ ಅಬಿನಾ.ಜಿ, ಗೋಪಿಕಾ ಡಿಜೆ ಅವರ ತಂಡ ಪ್ರಥಮ , ಬೆಂಗಳೂರಿನ ಪಿಇಎಸ್ ವಿಶ್ವವಿದ್ಯಾಲಯದ ಮಾನ್ಸ ಕುಮಾರನ್, ಅರ್ಪಿತಾ ಜೋಶಿ ತಂಡ ದ್ವಿತೀಯ ಸ್ಥಾನ ಗಳಿಸಿತು.


ಯುದ್ಧದ ಹಿನ್ನೆಲೆಯಲ್ಲಿ ಮೇಣದ ದರ ಭಾರೀ ಹೆಚ್ಚಳ | ಉದ್ದಿಮೆ ಕೈಬಿಡುವ ಉತ್ಪಾದಕರ ಚಿಂತನೆ

ಸವಾಲಿನ ಸುಳಿಯಲ್ಲಿ ಸಿಲುಕಿದ ಮೇಣದ ಬತ್ತಿಯ ಉದ್ಯಮ

ಕಾಸರಗೋಡು: ಅಮೇರಿಕಾ, ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದ ಹಿನ್ನೆಲೆಯಲ್ಲಿ ಮೇಣದ ಬೆಲೆ ದಿಢೀರನೆ ಹೆಚ್ಚಳಗೊಂಡಿರುವುದರಿಂದ ಮೇಣದ ಬತ್ತಿ (ಕ್ಯಾಂಡಲ್) ನಿರ್ಮಾಣ ವಲಯವು ಅಪಾರ ಸಮಸ್ಯೆ ಎದುರಿಸುವಂತಾಗಿದೆ.

ಮೇಣದ ದರ ಏರಿಕೆಯಾಗಿರುವುದರಿಂದ ಮೇಣದ ಬತ್ತಿ ಬೆಲೆಯಲ್ಲಿ ಗಣನೀಯವಾಗಿ ಹೆಚ್ಚಳ ತಲೆದೋರಿದ್ದರೂ ಮೇಣದ ಬತ್ತಿ ಉದ್ಯಮವನ್ನು ಉಳಿಸುವುದು ಕಷ್ಟಸಾಧ್ಯವಾಗಲಿದೆ ಎಂದು ಉತ್ಪಾದಕರು ಹೇಳಿದ್ದಾರೆ. ಮೇಣದ ಬತ್ತಿಯ ಬೆಲೆ ಹೆಚ್ಚಿಸಿದರೆ ಇದರಿಂದಾಗಿ ವ್ಯಾಪಾರಕ್ಕೆ ತೀವ್ರತರದ ಬಾಧಕವಾಗಲಿದೆ ಎಂಬ ಆತಂಕವೂ ಎದುರಾಗಿದೆ.

ಕೇರಳದಲ್ಲಿ ವಿವಿಧ ಜಿಲ್ಲೆಗಳು ಹಾಗೂ ಕಾಸರಗೋಡು ಜಿಲ್ಲೆಯ ಸಹಿತ 640 ಮೇಣದ ಬತ್ತಿ ನಿರ್ಮಾಣ ಘಟಕಗಳು ಕಾರ್ಯಾಚರಿಸುತ್ತಿವೆ ಎಂದು ಅಂಕಿ ಅಂಶಗಳು ಸೂಚಿಸುತ್ತಿವೆ. ಯುದ್ಧ ಕಾರಣದಿಂದಾಗಿ ಇಂಧನ ಬೆಲೆಯು ಹೆಚ್ಚಿದ್ದರಿಂದ ಚೆನ್ನೈ ರಿಫೈನರಿ ಸಂಸ್ಥೆಯು ಮೇಣದ ಬೆಲೆಯನ್ನು ಏರಿಸಿದೆ.





ಜನವರಿಯಿಂದ ಏಪ್ರಿಲ್ ತಿಂಗಳಾಂತ್ಯದ ವರೆಗಿನ ಕಾಲಾವಧಿ ತನಕ ಒಂದು ಕಿಲೋ ಗ್ರಾಂ ಮೇಣಕ್ಕೆ 50 ರೂ. ಹೆಚ್ಚಿಸಿರುವುದಾಗಿ ಉತ್ಪಾದಕರು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಪ್ರತೀ ಕಿಲೋ ಮೇಣದ ಬೆಲೆಯು 200 ರೂಪಾಯಿಗೆ ತಲುಪಿದೆ. ಇತರ ನಿರ್ಮಾಣ ಸಾಮಗ್ರಿಗಳ ಬೆಲೆ ಹೆಚ್ಚಳ, ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಕೊರತೆಯೂ ಎದುರಿಸುತ್ತಿರುವ ಸಂದರ್ಭದಲ್ಲಿ ಮೇಣದ ಬತ್ತಿ ನಿರ್ಮಾಣ ರಂಗಕ್ಕೆ ಇಮ್ಮಡಿ ಏಟು ಬಿದ್ದಿದ್ದು, ಜೊತೆಗೆ ಮೇಣದ ಬೆಲೆಯಲ್ಲಿಯೂ ಅಪಾರ ಪ್ರಮಾಣದಲ್ಲಿ ಏರಿಕೆ ಉಂಟಾಗಿರುವುದು ಭಾರೀ ಸಮಸ್ಯೆಗೆ ಕಾರಣವಾಗಿದೆ.

ರಿಫೈನರಿಗಳು ಪದೇ ಪದೇ ಮೇಣದ ಬೆಲೆಯಲ್ಲಿ ಬದಲಾವಣೆ ತರುವುದು ಸಾಮಾನ್ಯವಾಗಿದೆ. ಯುದ್ಧ ಕೊನೆಯಾದರೂ ಭಾರೀ ಬೆಲೆ ನೀಡಿ ರಿಫೈನರಿ ಈಗಾಗಲೇ ಖರೀದಿಸಿದ ಅಸಾಂಸ್ಕಾರಿಕ ಎಣ್ಣೆಯ ಖರ್ಚು ಭರಿಸಲು ಮೇಣದ ಬೆಲೆಯನ್ನು ಇನ್ನೂ ಹೆಚ್ಚಿಸುವ ಸಾಧ್ಯತೆಯಿದೆ. ಈ ಮೂಲಕ ಬೇಡಿಕೆದಾರರ ಪ್ರಮಾಣದಲ್ಲಿ ಇಳಿಮುಖಗೊಳ್ಳಬಹುದು. ಮಾತ್ರವಲ್ಲದೆ ಕಾಸರಗೋಡು ಜಿಲ್ಲೆಯಲ್ಲಿ ಈ ಉದ್ಯಮಕ್ಕೆ ಈಗಾಗಲೇ ಭಾರೀ ಸಂಕಷ್ಟ ಕಂಡುಬಂದಿದೆ. ಈ ಉದ್ಯಮವನ್ನು ಅನೇಕ ಮಂದಿ ಕೈಬಿಡುವ ಲಕ್ಷಣಗಳು ಗೋಚರಿಸುತ್ತಿವೆ.

ಉದ್ಯಮಕ್ಕೆ ಶಕ್ತಿ ತುಂಬಬೇಕಿದೆ

ಕಾಸರಗೋಡು ಜಿಲ್ಲೆಯಲ್ಲಿರುವ ಮೇಣದ ಬತ್ತಿ (ಕ್ಯಾಂಡಲ್) ಉತ್ಪಾದನಾ ಉದ್ಯಮಕ್ಕೆ ಶಕ್ತಿ ತುಂಬುವ ಕೆಲಸವಾಗಬೇಕು. ಈ ನಿಟ್ಟಿನಲ್ಲಿ ಕೇರಳ ಸರಕಾರವು ವಿಶೇಷ ಮುತುವರ್ಜಿ ವಹಿಸಬೇಕು. ಸಮಸ್ಯೆಗಳ ಕುರಿತು ರಾಜ್ಯ ಸರಕಾರವು ಕೇಂದ್ರ ಸರಕಾರಕ್ಕೆ ಸಮಗ್ರ ಮಾಹಿತಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ಕಾಸರಗೋಡಿನ ಕ್ಯಾಂಡಲ್ ತಯಾರಿ ಸಂಸ್ಥೆಯು ಮುಚ್ಚುವ ಸಾಧ್ಯತೆಯಿದೆ. ಈ ಸಂಸ್ಥೆಯಲ್ಲಿರುವ ಕಾರ್ಮಿಕರು ಕೆಲಸವಿಲ್ಲದೆ ಅತಂತ್ರ ಸ್ಥಿತಿಗೆ ತಲುಪಬಹುದು. ಜಿಲ್ಲಾಡಳಿತವು ಈ ವಿಚಾರದಲ್ಲಿ ವಿಶೇಷ ಕಾಳಜಿ ವಹಿಸಿ ಸೂಕ್ತ ಯೋಜನೆಗಳನ್ನು ಕಾರ್ಯಗತಗೊಳಿಸಬೇಕಿದೆ.

ಸದ್ಯಕ್ಕೆ ಬೆಲೆ ಇಳಿಕೆಯಾಗದು

ಮಧ್ಯ ಪ್ರಾಚ್ಯದಲ್ಲಿ ಯುದ್ಧ ಶಾಂತವಾಗುತ್ತಿದ್ದರೂ ಮೇಣದ ಬೆಲೆಯಲ್ಲಿ ಇಳಿಕೆಯಾಗುವ ಸಾಧ್ಯತೆ ಸದ್ಯಕ್ಕೆ ಇಲ್ಲವೆಂದು ಕೇರಳ ಕ್ಯಾಂಡಲ್ ಉತ್ಪಾದಕರ ಅಸೋಸಿಯೇಶನ್ ಅಧ್ಯಕ್ಷ ಸಿ.ಆರ್.ಸಲೀಂಕುಮಾರ್ ತಿಳಿಸಿದ್ದಾರೆ. ಪ್ರಸ್ತುತ ನಷ್ಟ ಭರಿಸಲು ಮೇಣದ ಬತ್ತಿ ಬೆಲೆಯನ್ನು ಹೆಚ್ಚಿಸಬೇಕೇ ಹೊರತು ಬೇರೆ ಯಾವುದೇ ದಾರಿಯಿಲ್ಲ, ಹೆಚ್ಚಿಸಿದ ಮೇಣದ ಬೆಲೆಯನ್ನು ಕಡಿಮೆಗೊಳಿಸಲು ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಕೇಂದ್ರ ಪೆಟ್ರೋಲಿಯಂ ಸಚಿವಾಲಯದ ರಾಜ್ಯ ಸಚಿವ ಸುರೇಶ್ ಗೋಪಿ ಅವರಲ್ಲಿ ಆಗ್ರಹಿಸಿರುವುದಾಗಿ ಸಿ.ಆರ್.ಸಲೀಂ ಕುಮಾರ್ ಹೇಳಿದ್ದಾರೆ. ಮಾತ್ರವಲ್ಲದೆ ಈ ವಿಚಾರದಲ್ಲಿ ಸಂಘಟಿತ ಪ್ರಯತ್ನಗಳನ್ನು ನಡೆಸಲು ಅಸೋಸಿಯೇಶನ್‌ನ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ.

ಸುತ್ತಮುತ್ತ

ದಸ್ತಾವೇಜು ಬರಹಗಾರರ ಸಂಘಟನೆಯ ಮಹಾಸಭೆ

ಕಾಸರಗೋಡು: ಹಳೆಯದಾಗಿ ಜೀರ್ಣಾವಸ್ಥೆಯಲ್ಲಿರುವ ಹೊಸದುರ್ಗ ಸಬ್ ರಿಜಿಸ್ಟ್ರಾರ್ ಕಚೇರಿಗೆ ನೂತನ ಕಟ್ಟಡ ನಿರ್ಮಿಸಬೇಕೆಂದು ದಸ್ತಾವೇಜು ಬರಹಗಾರರ ಸಂಘಟನೆ ಜಿಲ್ಲಾ ವಾರ್ಷಿಕ ಮಹಾಸಭೆ ಒತ್ತಾಯಿಸಿದೆ. ಮೇ 1 ಮತ್ತು 2ರಂದು ಉದುಮ ಕಳನಾಡಿನಲ್ಲಿ ನಡೆಯಲಿರುವ ರಾಜ್ಯ ವಾರ್ಷಿಕ ಮಹಾಸಭೆ ಹಾಗೂ ರಾಜ್ಯ ಮಹಿಳಾ ಸಮಿತಿ ಮಹಾಸಭೆಯನ್ನು ಯಶಸ್ವಿಗೊಳಿಸಲು ಎಲ್ಲಾ ಸದಸ್ಯರು ಸಹಕರಿಸಲು ಸಭೆ ಆಗ್ರಹಿಸಿತು.

ಕಾಞಂಗಾಡಿನಲ್ಲಿ ನಡೆದ ಮಹಾಸಭೆಯನ್ನು ನಗರಸಭಾಧ್ಯಕ್ಷ ವಿ.ವಿ.ರಮೇಶನ್ ಉದ್ಘಾಟಿಸಿದರು. ಸಂಘಟನೆಯ ಜಿಲ್ಲಾಧ್ಯಕ್ಷ ಪಿ.ಪಿ.ಕುಂಞಿಕೃಷ್ಣನ್ ನಾಯರ್ ಅಧ್ಯಕ್ಷತೆ ವಹಿಸಿದ್ದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಎ.ಅನ್ಸಾರ್, ಪದಾಧಿಕಾರಿಗಳಾದ ಸಿ.ಪಿ.ಅಶೋಕನ್, ಬಿ.ಮೋಹನ್ ಕುಮಾರ್, ಎ.ಲಕ್ಷ್ಮೀ, ಸುನೀಲ್‌ಕುಮಾರ್ ಕೊಟ್ಟಾರ, ಎ.ವಿ.ವಿನೋದ್, ಕೆ.ಬಲರಾಮನ್ ನಾಯರ್, ಕೆ.ಬೇಬಿ, ಲತಾ, ಎ.ವಿ.ಸೀಮಾ ಮಾತನಾಡಿದರು.

ಕಡಪ್ಪುರ ಶ್ರೀ ಚೀರುಂಬಾ ಭಗವತಿ ಭಜನಾ ಮಂದಿರ ಮಹೋತ್ಸವ ಏ.25ರಿಂದ

ಕಾಸರಗೋಡು: ಕಡಪ್ಪುರ ಶ್ರೀ ಚೀರುಂಬಾ ಭಗವತಿ ಭಜನಾ ಮಂದಿರದ 56ನೇ ವಾರ್ಷಿಕ ಮಹೋತ್ಸವ ಏ.25ರಿಂದ 27ರ ವರೆಗೆ ಜರಗಲಿದೆ. ಏ.25ರಂದು ಬೆಳಗ್ಗೆ 5.30ಕ್ಕೆ ಗಣಪತಿಹೋಮ, 8.30ಕ್ಕೆ ಉಷಃಪೂಜೆ, 9ಕ್ಕೆ ಕಲಶಾಭಿಷೇಕ, 10 ಗಂಟೆಗೆ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಮಧ್ಯಾಹ್ನ 12 ಗಂಟೆಗೆ ಪೂಜೆ, ಸಂಜೆ 6ಕ್ಕೆ ದೀಪಾರಾಧನೆ, 6.30ಕ್ಕೆ ಭಜನೆ, ರಾತ್ರಿ 8 ಗಂಟೆಗೆ ಪೂಜೆ, 9ಕ್ಕೆ ಮಕ್ಕಳ ವಿವಿಧ ಕಾರ್ಯಕ್ರಮ ಜರಗಲಿದೆ. ಏ.26ರಂದು ಬೆಳಗ್ಗೆ 8 ಗಂಟೆಗೆ ಉಷಃಪೂಜೆ, 9ಕ್ಕೆ ಪೊಂಗಾಲ, ಮಧ್ಯಾಹ್ನ 12 ಗಂಟೆಗೆ ಪೂಜೆ, ಸಂಜೆ 6ಕ್ಕೆ ದೀಪಾರಾಧನೆ, 6.30ಕ್ಕೆ ಭಜನೆ, ರಾತ್ರಿ 8ಕ್ಕೆ ಪೂಜೆ, 9ಕ್ಕೆ ಕುಮಾರ್ ಪೋಕ್ ಬ್ಯಾಂಡ್ ಕೊಟ್ಟೋಡಿ ಪ್ರದರ್ಶನ, ಜಾನಪದ ಹಾಡುಗಳು ನೆರವೇರಲಿದೆ. ಏ.27ರಂದು ಬೆಳಗ್ಗೆ 8ಕ್ಕೆ ಉಷಃಪೂಜೆ, 9ಕ್ಕೆ ಪಂಚಾಮೃತಾಭಿಷೇಕ, ಮಧ್ಯಾಹ್ನ 12ಕ್ಕೆ ಪೂಜೆ, ಸಂಜೆ 6ಕ್ಕೆ ದೀಪಾರಾಧನೆ, ಭಜನೆ, ರಾತ್ರಿ 10ಕ್ಕೆ ಶ್ರೀ ಚೀರುಂಬಾ ಭಗವತಿ ಮಹಿಳಾ ಸಂಘದ ವತಿಯಿಂದ ಹುಲ್ಪೆ ಸಮರ್ಪಣೆ, 11 ಗಂಟೆಗೆ ಮಹಾಪೂಜೆ ನಡೆಯಲಿದೆ. ಏ.27ರಂದು ಪ್ರತಿಷ್ಠಾ ದಿನ ಮಹೋತ್ಸವ ಪ್ರಯುಕ್ತ ಬೆಳಗ್ಗೆ 8.27ರಿಂದ ವಿವಿಧ ವೈದಿಕ ಕಾರ್ಯಕ್ರಮಗಳು ಜರಗಲಿದೆ.

ಐಲ ದೇಗುಲ: ಕಲಾಕುಂಚದಿಂದ ಗಾನಸುಧೆ

ಮಂಜೇಶ್ವರ: ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಕೇರಳ ಗಡಿನಾಡ ಘಟಕದ ವತಿಯಿಂದ ಐಲ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಿಂಬ ಪ್ರತಿಷ್ಠಾ ದಿನದ ಪುಣ್ಯ ಸಂದರ್ಭದಲ್ಲಿ ವಿಶೇಷ ಸಂಗೀತ ಸೇವೆ ಕಾರ್ಯಕ್ರಮವು ಜರಗಿತು. ಈ ಸಂಗೀತ ಕಾರ್ಯಕ್ರಮವನ್ನು ವಿದುಷಿ ಡಾ.ಸುಚಿತ್ರಾ ಹೊಳ್ಳ ಅವರ ಶಿಷ್ಯೆಯರು ತಮ್ಮ ಸುಮಧುರ ಗಾಯನದ ಮೂಲಕ ಭಕ್ತಾದಿಗಳನ್ನು ಮಂತ್ರಮುಗ್ಧಗೊಳಿಸಿದರು. ಗಾಯನದಲ್ಲಿ ಮಂಗಲ್ಪಾಡಿಯ ದಿವ್ಯಾ ಕಾರಂತ, ಪುತ್ತೂರಿನ ಸುಮನಾ ರಾವ್, ಮೀಯಪದವಿನ ರಾಧಾಮಣಿ ರಾವ್ ಭಾಗವಹಿಸಿ ಭಕ್ತಿ ಪ್ರಧಾನ ಕೃತಿಗಳನ್ನು ಪ್ರಸ್ತುತಪಡಿಸಿದರು. ಪುತ್ತೂರಿನ ಸುಪ್ರಜಾ ರಾವ್ ವಯಲಿನ್‌ನಲ್ಲಿ ಹಾಗೂ ಪುತ್ತೂರಿನ ವಿದ್ವಾನ್ ಬಾಲಕೃಷ್ಣ ಹೊಸಮನೆ ಮೃದಂಗದಲ್ಲಿ ಸಾಥ್ ನೀಡಿ ಕಾರ್ಯಕ್ರಮಕ್ಕೆ ಕಳೆ ಬರುವಂತೆ ಮಾಡಿದರು. ಈ ಸಂದರ್ಭ ಕಲಾಕುಂಚ ಸಂಸ್ಥೆಯ ಪದಾಽಕಾರಿಗಳು, ದೇವಾಲಯದ ಸಮಿತಿ ಪದಾಧಿಕಾರಿಗಳು ಇದ್ದರು.



ಬದಿಯಡ್ಕ ಸಮೀಪದ ಕುಂಟಿಕಾನ ಮಿಂಚಿನಡ್ಕ ತರವಾಡಿನಲ್ಲಿ ಶ್ರೀ ರಕ್ತೇಶ್ವರಿ ದೈವದ ಕೋಲವು ವಿವಿಧ ಕಾರ್ಯಕ್ರಮಗಳೊಂದಿಗೆ ಭಕ್ತಿ ಸಡಗರಗಳಿಂದ ಜರಗಿತು.

ಆರೋಗ್ಯದ ಬಗ್ಗೆ ನಾವು ಹೆಚ್ಚಿನ ಗಮನಹರಿಸಬೇಕು: ಡಾ.ವೃಂದಾ



ಕಾಸರಗೋಡು: ಆರೋಗ್ಯವೇ ಭಾಗ್ಯ ಎಂಬ ಮಾತಿನಂತೆ ಇಂದಿನ ಕಾಲಘಟ್ಟದಲ್ಲಿ ಮಾನವನಿಗೆ ಆರೋಗ್ಯ ಮುಖ್ಯವಾಗಿದೆ. ಆರೋಗ್ಯವಿಲ್ಲದಿದ್ದರೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಬ್ರಹ್ಮಕಲಶೋತ್ಸವದಂತಹ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಆರೋಗ್ಯ ಪ್ರಾಮುಖ್ಯವಾಗಿದೆ. ಆದ್ದರಿಂದ ನಾವು ನಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಗಮನಹರಿಸಬೇಕು ಎಂದು ಪ್ರಸಾದ್ ನೇತ್ರಾಲಯದ ಡಾ.ವೃಂದಾ ವಿಶ್ವನಾಥ ಹೇಳಿದ್ದಾರೆ.

ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮೀ ಕ್ಷೇತ್ರದಲ್ಲಿ ನಡೆಯುವ ಬ್ರಹ್ಮಕಲಶೋತ್ಸವದ ಅಂಗವಾಗಿ ಭಾನುವಾರ ಜರಗಿದ ಉಚಿತ ಆರೋಗ್ಯ ವೈದ್ಯಕೀಯ ಶಿಬಿರವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಅವರು ಮಾತನಾಡಿದರು.

ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಬಾಲಕೃಷ್ಣನ್ ಚೆನ್ನಿಕೆರೆ ಅಧ್ಯಕ್ಷತೆ ವಹಿಸಿದ್ದರು.

ಕಣ್ಣಿನ ತಜ್ಞೆ ಆಶ್ರಿತಾ, ಮೆನೇಜರ್ ಅಬ್ದುಲ್ ಖಲೀಲ್, ಡಾ.ಸಚಿನ್, ಉಪಸ್ಥಿತರಿದ್ದರು. ಲೋಕೇಶ್ ಅಣಂಗೂರು, ದಿನೇಶ್ ಅಣಂಗೂರು ಶಿಬಿರದ ನೇತೃತ್ವ ವಹಿಸಿದ್ದರು.

ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಕೃಷ್ಣಪ್ರಸಾದ್ ಕೋಟೆಕಣಿ ಸ್ವಾಗತಿಸಿ, ರಾಘವೇಂದ್ರ ಕೆ.ವಿ. ವಂದಿಸಿದರು. ವರಪ್ರಸಾದ್ ಕೋಟೆಕಣಿ ಹಾಗೂ ಉಪೇಂದ್ರ ಕೋಟೆಕಣಿ ಕಾರ್ಯಕ್ರಮ ನಿರೂಪಿಸಿದರು.

ಚೌಕಿ-ಉಳಿಯತ್ತಡ್ಕ ರಸ್ತೆ ಬದಿ ತ್ಯಾಜ್ಯರಾಶಿ, ಪರಿಸರದಲ್ಲಿ ದುರ್ನಾತ





ಕಾಸರಗೋಡು: ಚೌಕಿ - ಉಳಿಯತ್ತಡ್ಕ ರಸೆಯ ಇಕ್ಕೆಲಗಳಲ್ಲಿ ತ್ಯಾಜ್ಯ ಎಸೆತಕ್ಕೆ ಕೊನೆಯಿಲ್ಲದಂತಾಗಿದೆ. ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಸಂಗ್ರಹಿಸಲು ಹಸಿರು ಕ್ರಿಯಾ ಸೇನೆ, ಇತರ ತ್ಯಾಜ್ಯಗಳನ್ನು ಸಂಸ್ಕರಿಸಲು ವಿವಿಧ ರೀತಿಯ ವ್ಯವಸ್ಥೆಗಳು ಅಸ್ತಿತ್ವದಲ್ಲಿರುವಾಗ ಪ್ರಧಾನ ರಸ್ತೆಯ ಇಕ್ಕೆಲಗಳಲ್ಲಿ ಅಪಾರ ಪ್ರಮಾಣದಲ್ಲಿ ತ್ಯಾಜ್ಯ ಎಸೆಯಲಾಗುತ್ತಿದೆ.

ಚೌಕಿ ಆಜಾದ್‌ನಗರ ಸಮೀಪ ಹಾಗೂ ಉಳಿಯತ್ತಡ್ಕ ನ್ಯಾಶನಲ್ ನಗರದಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ತ್ಯಾಜ್ಯ ಎಸೆಯಲಾಗುತ್ತಿದೆ. ಆಹಾರದ ಅವಶೇಷಗಳನ್ನು ಪ್ಲಾಸ್ಟಿಕ್ ಗೋಣಿಗಳಲ್ಲಿ ತುಂಬಿಸಿ ಎಸೆಯಲಾಗುತ್ತಿದೆ. ಈ ಪ್ರದೇಶಗಳಲ್ಲಿ ಹಲವಾರು ಮನೆಗಳು ಅಲ್ಲದೆ ವಿವಿಧ ಸಂಸ್ಥೆಗಳು ಕಾರ್ಯಾಚರಿಸುತ್ತಿದ್ದು ಪರಿಸರ ದುರ್ನಾತದಿಂದ ಕೂಡಿದೆ.

ಹೀಗಿದ್ದರೂ ಇದನ್ನೆಲ್ಲಾ ಲೆಕ್ಕಿಸದೆ ರಾತ್ರಿ ವೇಳೆಗಳಲ್ಲಿ ವಾಹನಗಳಲ್ಲಿ ತ್ಯಾಜ್ಯಗಳನ್ನು ತಂದು ಎಸೆಯಲಾಗುತ್ತಿದೆ. ಇದರಿಂದಾಗಿ ಬೀದಿನಾಯಿಗಳ ಉಪಟಳ ಈ ಪ್ರದೇಶಗಳಲ್ಲಿ ತೀವ್ರಗೊಂಡಿದೆ. ಈ ನಾಯಿಗಳು ವಾಹನಗಳು ಹಾದು ಹೋಗುವಾಗ ರಸ್ತೆಯ ಒಂದು ಬದಿಯಿಂದ ಇನ್ನೊಂದು ಬದಿಗೆ ಓಡುತ್ತಿರುವುದರಿಂದ ವಾಹನ ಚಾಲಕರು ಆತಂಕಕ್ಕೊಳಗಾಗುತ್ತಿದ್ದಾರೆ.

ಸಿಸಿ ಕ್ಯಾಮರಾ ಅಳವಡಿಕೆಗೆ ಆಗ್ರಹ

ವಾಹನಗಳಲ್ಲಿ ತಂದು ರಸ್ತೆ ಬದಿಗಳಲ್ಲಿ ಮಾತ್ರವಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿಯೂ ತ್ಯಾಜ್ಯ ಸುರಿಯಲಾಗುತ್ತಿದೆ. ತ್ಯಾಜ್ಯ ಸುರಿಸುವವರನ್ನು ಪತ್ತೆಹಚ್ಚಲು ಸಿಸಿಟಿವಿ ಕ್ಯಾಮರಾ ಅಳವಡಿಸಬೇಕೆಂದೂ, ತ್ಯಾಜ್ಯ ಸಂಸ್ಕರಣಾ ವ್ಯವಸ್ಥೆಗಳು ಅಸ್ತಿತ್ವದಲ್ಲಿರುವಾಗ ಅದನ್ನೆಲ್ಲಾ ಲೆಕ್ಕಿಸದೆ ತ್ಯಾಜ್ಯ ಸುರಿಯುತ್ತಿರುವುದನ್ನು ಕೂಡಲೇ ಪತ್ತೆಹಚ್ಚಿ ತಕ್ಕ ಶಿಕ್ಷೆ ನೀಡಬೇಕಾಗಿದೆ ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಕಾಸರಗೋಡು ಜಿಲ್ಲಾ ಎ ಡಿವಿಷನ್ ಲೀಗ್ ಕ್ರಿಕೆಟ್ ಪಂದ್ಯಾಟ ಉದ್ಘಾಟನೆ



ಕಾಸರಗೋಡು: ಕಾಸರಗೋಡು ಜಿಲ್ಲಾ ಕ್ರಿಕೆಟ್ ಅಸೋಸಿಯೇಷನ್ ನೇತೃತ್ವದಲ್ಲಿ ಆಯೋಜಿಸಲಾದ 2024-25ನೇ ಜಿಲ್ಲಾ ಎ ಡಿವಿಷನ್ ಲೀಗ್ ಕ್ರಿಕೆಟ್ ಟೂರ್ನ್‌ಮೆಂಟ್ ಕಾಸರಗೋಡಿನಲ್ಲಿ ಜರಗಿತು. ಕೆಸಿಎ ಸದಸ್ಯ ಮೊಹಮ್ಮದ್ ಜನೀಶ್ ಟಿ.ಎ. ಪಂದ್ಯಾವಳಿಯನ್ನು ಉದ್ಘಾಟಿಸಿ, ಕ್ರಿಕೆಟ್ ಆಟವು ದೈಹಿಕವಾಗಿ ಸಶಕ್ತಗೊಳ್ಳಲು ಕಾರಣವಾಗುತ್ತಿದೆ. ಈ ಕ್ರೀಡೆಯನ್ನು ಇನ್ನಷ್ಟು ಪ್ರೋತ್ಸಾಹಿಸಬೇಕು ಎಂದರು.

ಕೆಸಿಎ ಅಪೆಕ್ಸ್ ಕೌನ್ಸಿಲರ್ ತಳಂಗರೆ ನೌಫಲ್, ಟೂರ್ನ್‌ಮೆಂಟ್ ಸಮಿತಿಯ ಸಂಚಾಲಕ ಶಾಹಿದ್ ಸಿ.ಎಲ್., ಜಿಲ್ಲಾ ಕ್ರಿಕೆಟ್ ಅಸೋಸಿಯೇಷನ್ ಕೋಶಾಧಿಕಾರಿ ಸಲಾಂ ಚೆರ್ಕಳ, ಕಾರ್ಯನಿರ್ವಾಹಕ ಸದಸ್ಯ ಅಲಿ ಪ್ಲಾಜಾ, ಕ್ಯುರೇಟರ್ ಲತೀಫ್ ಪೆರ್ವಾಡ್ ಮತ್ತು ಮೊಹಮ್ಮದ್ ಇಜಾಜ್ ಮುಂತಾದವರು ಉಪಸ್ಥಿತರಿದ್ದರು.

ಉದ್ಘಾಟನಾ ಪಂದ್ಯದಲ್ಲಿ ಅಟ್ಲಾಸ್ ಸ್ಟಾರ್ ಆಲಂಪಾಡಿ ತಂಡವು ಆಲಂಪಾಡಿ ಆರ್ಟ್ಸ್ ಆ್ಯಂಡ್ ಸ್ಪೋರ್ಟ್ಸ್ ಕ್ಲಬ್ ತಂಡವನ್ನು 16 ರನ್‌ಗಳಿಂದ ಸೋಲಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಅಟ್ಲಾಸ್ ಸ್ಟಾರ್ 20 ಓವರ್‌ಗಳಲ್ಲಿ 4 ವಿಕೆಟ್‌ಗಳ ನಷ್ಟಕ್ಕೆ 168 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ ಎಎಸ್‌ಕೆ ಆಲಂಪಾಡಿ 20 ಓವರ್‌ಗಳಲ್ಲಿ 7 ವಿಕೆಟ್‌ಗಳ ನಷ್ಟಕ್ಕೆ 152 ರನ್‌ಗಳನ್ನು ಮಾತ್ರ ಗಳಿಸಲು ಸಾಧ್ಯವಾಯಿತು.

ಇಂದು ಕುರುಮುಜ್ಜಿಕಟ್ಟೆ ಮಂದಿರದಲ್ಲಿ ಶ್ರೀಕೃಷ್ಣಾವತಾರ ಕಥಾಭಾಗದಲ್ಲಿ ಪ್ರವಚನ



ಬದಿಯಡ್ಕ: ಕುರುಮುಜ್ಜಿಕಟ್ಟೆ ಶ್ರೀ ಧರ್ಮಶಾಸ್ತಾ ಭಜನಾ ಮಂದಿರದಲ್ಲಿ ಜರಗುತ್ತಿರುವ ಶ್ರೀಮದ್ ಭಾಗವತ ಸಪ್ತಾಹದ ತೃತೀಯ ದಿನವಾದ ಭಾನುವಾರ ಪ್ರಾತಃಕಾಲ ಗಣಪತಿ ಹೋಮ ಶ್ರದ್ಧಾಭಕ್ತಿಯಿಂದ ನಡೆಯಿತು. ಅಗಲ್ಪಾಡಿ ಶಾಲೆಯ ನಿವೃತ್ತ ಅಧ್ಯಾಪಿಕೆ ಗೀತಾಮಾಲಿನಿ ನಾರಂಪಾಡಿ ಅವರು ಭಾಗವತ ಸಪ್ತಾಹ ವೇದಿಕೆಯಲ್ಲಿ ದೀಪಪ್ರಜ್ವಲನಗೈದರು.

ಸಾಮೂಹಿಕ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣದಲ್ಲಿ ಭಗವದ್ಭಕ್ತರು ಶ್ರದ್ಧಾಭಕ್ತಿಯಿಂದ ಜೊತೆಗೂಡಿದರು. ಯಜ್ಞಾಚಾರ್ಯ ಬ್ರಹ್ಮಶ್ರೀ ಶಂಕರನ್ ನಂಬೂದಿರಿ ಚೇದಮಂಗಲಂ ಪಯ್ಯನ್ನೂರು ಹಾಗೂ ತಂಡದವರ ನೇತೃತ್ವದಲ್ಲಿ ಶ್ರೀಮದ್ ಭಾಗವತ ಪಾರಾಯಣ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.

ಭರತ ಚರಿತ್ರೆ, ಭೂಗೋಳವರ್ಣನೆ, ಅಜಾಮಿಳ ಮೋಕ್ಷ, ವೃತ್ರಾಸುರ ಚರಿತೆ, ಚಿತ್ರಕೇತು ಉಪಖ್ಯಾನ, ಪ್ರಹ್ಲಾದ ಚರಿತೆ, ನರಸಿಂಹಾವತಾರಮೊದಲಾದ ಕಥಾಭಾಗದಲ್ಲಿ ಪ್ರವಚನ ಭಕ್ತಿಶ್ರದ್ಧೆಯ ನೆರವೇರಿತು.

ಕಾರ್ಯಕ್ರಮದ ಚತುರ್ಥ ದಿನವಾದ ಏ.13 ರಂದು ಗಜೇಂದ್ರ ಮೋಕ್ಷ, ಕ್ಷೀರಸಾಗರ ಮಥನ (ಸಮುದ್ರಮಥನ), ವಾಮನಾವತಾರ, ಕೂರ್ಮಾವತಾರ, ಮತ್ಸ್ಯಾವತಾರ, ಅಂಬರೀಶ ಚರಿತೆ, ಶ್ರೀರಾಮಾವತಾರ, ಬಲರಾಮಾವತಾರ, ಶ್ರೀಕೃಷ್ಣಾವತಾರ ಮುಂತಾದ ವಿಷಯದ ಕಥಾಭಾಗದಲ್ಲಿ ಪಾರಾಯಣ, ಪ್ರವಚನ ನಡೆಯಲಿದೆ.

ರಂಗ ಚೇತನ ಕಾಸರಗೋಡು ನೇತೃತ್ವದಲ್ಲಿ ಚೇವಾರು ಶಾಲೆಯಲ್ಲಿ ಚಿತ್ತಾರ ಸನಿವಾಸ ಶಿಬಿರ

ಮಂಜೇಶ್ವರ: ರಂಗಾಸಕ್ತ ಅಧ್ಯಾಪಕರ ಒಕ್ಕೂಟ ರಂಗ ಚೇತನ ಕಾಸರಗೋಡು ನೇತೃತ್ವದಲ್ಲಿ ಚಿತ್ತಾರ - 2026 ತ್ರಿದಿನ ಸನಿವಾಸ ಶಿಬಿರವನ್ನು ಚೇವಾರು ಶ್ರೀ ಶಾರದಾ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಗಿತ್ತು.

ಅಭಿನಯ, ರಂಗ ಸಂಗೀತ, ನೃತ್ಯ ಸೇರಿದಂತೆ ಹಲವಾರು ವಿಷಯಗಳಲ್ಲಿ ನುರಿತ ಸಂಪನ್ಮೂಲ ವ್ಯಕ್ತಿಗಳು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಮಂಜೇಶ್ವರ ಉಪಜಿಲ್ಲಾ ಶಿಕ್ಷಣಾಧಿಕಾರಿ ಜಾರ್ಜ್ ಕ್ರಾಸ್ತಾ ಸಿ.ಎಚ್. ಶಿಬಿರವನ್ನು ಉದ್ಘಾಟಿಸಿದರು. ರಂಗ ಚೇತನ ಕಾಸರಗೋಡು ಇದರ ಅಧ್ಯಕ್ಷ ಡಾ.ಯತೀಶ್‌ಕುಮಾರ್ ರೈ ಅಧ್ಯಕ್ಷತೆ ವಹಿಸಿದ್ದರು. ಕೇರಳ ರಾಜ್ಯ ಕನ್ನಡ ಮಾಧ್ಯಮ ಅಧ್ಯಾಪಕರ ಸಂಘದ ಪ್ರಧಾನ ಕಾರ್ಯದರ್ಶಿ ಪ್ರದೀಪ್‌ಕುಮಾರ್ ಶೆಟ್ಟಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಶಾಲಾ ಮುಖ್ಯ ಶಿಕ್ಷಕ ಶ್ಯಾಮ ಭಟ್ ಯು. ಶುಭಹಾರೈಸಿದರು. ವಿವಿಧ ಶಾಲೆಗಳ ಸುಮಾರು 60ಕ್ಕೂ ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿದ್ದರು.

ಏ.23ರಿಂದ ಶ್ರೀ ಅನ್ನಪೂರ್ಣೇಶ್ವರಿ ಮತ್ತು ಪರಿವಾರ ದೇವರಿಗೆ ಚೈತನ್ಯ ಕಲಶಾಭಿಷೇಕ

ಮುಳ್ಳೇರಿಯ: ಆರ್ಯ ಮರಾಠ ಸಮಾಜದ ಆದೂರು ಬಳಿಯ ನಾಂಗಾಲಿನಲ್ಲಿರುವ ಪಾಟೀಲ್ ಮನೆತನದ ಶ್ರೀ ಅನ್ನಪೂರ್ಣೇಶ್ವರಿ ದೇವರ ಮನೆಯಲ್ಲಿ ಶ್ರೀ ಅನ್ನಪೂರ್ಣೇಶ್ವರಿ ಮತ್ತು ಪರಿವಾರ ದೇವರುಗಳಿಗೆ ಚೈತನ್ಯ ಕಲಶಾಭಿಷೇಕ ಕಾರ್ಯಕ್ರಮವು ಏ.23 ಮತ್ತು 24 ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ.

ಏ.23ರಂದು ರಾತ್ರಿ 7ರಿಂದ ವಿವಿಧ ವೈದಿಕ ಕಾರ್ಯಕ್ರಮಗಳು, 9ಗಂಟೆಗೆ ಅನ್ನ ಸಂತರ್ಪಣೆ, 9.30ಕ್ಕೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಏ.24ರಂದು ಬೆಳಗ್ಗೆ 8ರಿಂದ ಗಣಪತಿ ಹೋಮ, ಭಜನೆ, ಕಲಶಪೂಜೆ, ಚೈತನ್ಯ ಕಲಶಾಭಿಷೇಕ, 10.30ಕ್ಕೆ ಪಾನಕಪೂಜೆ, ಮಧ್ಯಾಹ್ನ 12ಗಂಟೆಗೆ ಮಹಾಪೂಜೆ, 12.30ಕ್ಕೆ ಪ್ರಸಾದ ವಿತರಣೆ, ಗುಳಿಗನ ಕೋಲ, 1ರಿಂದ ಅನ್ನ ಸಂತರ್ಪಣೆ ನೆರವೇರಲಿದೆ.

ದಿವ್ಯಾಂಗ ವಲಯದ ಮಕ್ಕಳ ಕಲಾಮೇಳ 'ಸ್ಪರ್ಶಂ' ಸಮಾಪ್ತಿ

ಮಂಜೇಶ್ವರ: ಹಾಸಿಗೆಯಲ್ಲೇ ಇರುವ ದಿವ್ಯಾಂಗ ವಲಯದ ಮಕ್ಕಳ ಸಾಮಾಜಿಕ ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ಉದ್ದೇಶದೊಂದಿಗೆ ಸಮಗ್ರ ಶಿಕ್ಷಣ ಕಾಸರಗೋಡು ಮತ್ತು ಜಿಲ್ಲಾ ಪಂಚಾಯತ್ ಇವುಗಳ ಜಂಟಿ ಆಶ್ರಯದಲ್ಲಿ ಸ್ಪರ್ಶಂ ಎಂಬ ಹೆಸರಿನಲ್ಲಿ ದಿವ್ಯಾಂಗ ಮಕ್ಕಳ ಕಲಾಮೇಳವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಸಮಗ್ರ ಶಿಕ್ಷಣ ಕಾಸರಗೋಡು ಇದರ ಡಿಪಿಒ ಪ್ರಕಾಶನ್ ಟಿ. ಉದ್ಘಾಟಿಸಿ, ಇಂತಹ ಸಮಾರಂಭಗಳ ಮೂಲಕ ದಿವ್ಯಾಂಗ ವಿಭಾಗದವರ ಸಾಮಾಜಿಕ ಅಭಿವೃದ್ಧಿ ಸಾಧ್ಯವಿದೆ ಎಂದರು.

ಶಿಕ್ಷಣಾಧಿಕಾರಿ ಇಬ್ರಾಹಿಂ ಬಿ., ಎಎಸ್‌ಎಸ್‌ಕೆ ಇದರ ಡಿಪಿಒ ಆಗಸ್ಟಿನ್ ಬರ್ನಾರ್ಡ್ ಮೊಂತೆರೋ, ಮಂಜೇಶ್ವರ ಎಇಒ ಜಾರ್ಜ್ ಕ್ರಾಸ್ತಾ ಸಿ.ಎಚ್. ಮುಂತಾದವರು ಭಾಗವಹಿಸಿದ್ದರು.

ಪ್ರಸಿದ್ಧ ಜಾನಪದ ಗಾಯಕ ಹಾಗೂ ಯುವ ಪ್ರತಿಭಾ ಪ್ರಶಸ್ತಿ ಪುರಸ್ಕೃತ ಶೈಜು ಬೆರಿಕ್ಕುಳಂ ಮತ್ತು ಕಲಾಭವನ ಮಣಿ ಽಂಡೇಶನ್‌ನ ಓಡಪ್ಪಳಂ ಪ್ರಶಸ್ತಿ ಪುರಸ್ಕೃತ ಪ್ರವೀಣ್ ಪೂಂಗೋಡ್ ಅವರನ್ನು ಸನ್ಮಾನಿಸಲಾಯಿತು.

ನಂತರ ಜರಗಿದ ಜನಪದ ಕಲಾಮೇಳ ಮತ್ತು ಮಕ್ಕಳ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಗಮನ ಸೆಳೆಯುವಲ್ಲಿ ಯಶಸ್ವಿಯಾದವು. ಕಾರ್ಯಕ್ರಮದಲ್ಲಿ ಮಂಜೇಶ್ವರ ಎಇಒ ಜಾರ್ಜ್ ಕ್ರಾಸ್ತಾ ಸಿ.ಎಚ್. ಅಧ್ಯಕ್ಷತೆ ವಹಿಸಿದ್ದರು. ಮಂಜೇಶ್ವರ ಬಿಆರ್‌ಸಿಯ ಬಿಪಿಸಿ ರಾಜಗೋಪಾಲನ್ ಪಿ. ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಿದರು. ಸ್ಪೆಷಲ್ ಎಜುಕೇಟರ್‌ಗಳು, ತಜ್ಞ ಶಿಕ್ಷಕರು ಮತ್ತು ಕ್ಲಸ್ಟರ್ ಸಂಯೋಜಕರು ಸಹಕರಿಸಿದರು. ಸಿಆರ್‌ಸಿ ಸಂಯೋಜಕ ನಾರಾಯಣರಾಜ್ ಸ್ವಾಗತಿಸಿ, ವಂದಿಸಿದರು.



ಭೂಮಿಕಾ ಪ್ರತಿಷ್ಠಾನ ಉಡುಪುಮೂಲೆ ವತಿಯಿಂದ ಎಡನೀರು ಮಠದಲ್ಲಿ ಹಮ್ಮಿಕೊಳ್ಳಲಾದ ಕನ್ನಡ ಸಂಸ್ಕೃತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಭಾಗವಹಿಸಿ ಆಶೀರ್ವಚನ ನೀಡಿದರು.

ಹೃದಯಸ್ಪರ್ಶಿಯಾದ ವಿನೂತನ ಕಾರ್ಯಕ್ರಮಕ್ಕೆ ಸಾಕ್ಷಿಯಾದ ಕಾಸರಗೋಡು ಕಲೆಕ್ಟರೇಟ್ | ಕಂದಮ್ಮಗಳೊಂದಿಗೆ ಸಮಯ ಕಳೆದ ಅರ್ಜುನ್ ಪಾಂಡ್ಯನ್

ಕಣ್ಣಂಕೋಲ್ ಉನ್ನತಿಯ ಮಕ್ಕಳ ಬೇಡಿಕೆಗಳನು ಈಡೇರಿಸಿದ ಕಾಸರಗೋಡು ಜಿಲ್ಲಾಧಿಕಾರಿ

ಕಾಸರಗೋಡು: ದಿನನಿತ್ಯದ ಆಡಳಿತಾತ್ಮಕ ಕರ್ತವ್ಯಗಳ ಹಾಗೂ ಜಂಜಾಟಗಳ ನಡುವೆಯೂ ಕಾಸರಗೋಡು ಕಲೆಕ್ಟರೇಟ್ ಹೃದಯಸ್ಪರ್ಶಿ ಕಾರ್ಯಕ್ರಮವೊಂದಕ್ಕೆ ಸಾಕ್ಷಿಯಾಯಿತು. ಆದರಂತೆ ದೇಲಂಪಾಡಿ ಪಂಚಾಯತ್ ವ್ಯಾಪ್ತಿಯ ಕಣ್ಣಂಕೋಲ್ ಪರಿಶಿಷ್ಟ ಜಾತಿ ಉನ್ನತಿ (ಕಾಲನಿ)ಯ ಮಕ್ಕಳ ತಂಡ ತಮ್ಮ ಪ್ರೀತಿಯ ಜಿಲ್ಲಾಧಿಕಾರಿ ಅವರನ್ನು ಭೇಟಿಯಾಗಲು ಕಲೆಕ್ಟರೇಟ್‌ಗೆ ಆಗಮಿಸಿತ್ತು.

ಕೆಲವು ದಿನಗಳ ಹಿಂದೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಕಣ್ಣಂಕೋಲ್ ಪರಿಶಿಷ್ಟ ಜಾತಿ ಉನ್ನತಿಗೆ ಭೇಟಿ ನೀಡಿದಾಗ ಈ ಸ್ನೇಹ ಪ್ರಾರಂಭವಾಯಿತು. ಭೇಟಿಯ ಸಂದರ್ಭದಲ್ಲಿ ಮಯ್ಯಾಳ ಎಸ್‌ಜಿ ಎಎಲ್‌ಪಿ ಶಾಲೆಯ ವಿದ್ಯಾರ್ಥಿಗಳಾದ ನಾಲ್ಕನೇ ತರಗತಿಯ ಶರತ್ ಮತ್ತು



ಮೂರನೇ ತರಗತಿಯ ಆದಿಕೃಷ್ಣ ಅವರು ಜಿಲ್ಲಾಧಿಕಾರಿಯವರಲ್ಲಿ ಬೇಡಿಕೆಯೊಂದನ್ನು ಮುಂದಿರಿಸಿ, 'ಸರ್ ನೀವು ನಮ್ಮ ಶಾಲೆಯನ್ನು ನೋಡಬೇಕು' ಎಂದು ಕೇಳಿಕೊಂಡಿದ್ದರು. ಆಗ ಜಿಲ್ಲಾಧಿಕಾರಿಗಳು ಅವರನ್ನು ತಮ್ಮ ಅಧಿಕೃತ ವಾಹನದಲ್ಲೇ ಕರೆದುಕೊಂಡು ಶಾಲೆಗೆ ಸಂದರ್ಶನ ನೀಡಿದ್ದರು. ಆ ದಿನ ಮಕ್ಕಳು ಆಟವಾಡಲು ಫುಟ್ಬಾಲ್ ಬೇಕು ಎಂಬ ಇನ್ನೊಂದು ಆಸೆಯನ್ನು ವ್ಯಕ್ತಪಡಿಸಿದ್ದರು. ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿಯವರು ಅವರ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ್ದರು.

ಸಾರ್ವಜನಿಕರ ಮೆಚ್ಚುಗೆಗೆ

ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಉನ್ನತಿಯ ಮಕ್ಕಳಿಗೆ ಆಡಳಿತ ವ್ಯವಸ್ಥೆಯ ಕುರಿತು ಮತ್ತು ಪುಟ್ಟ ಕಂದಮ್ಮಗಳೊಂದಿಗೆ ಸಮಯ ಕಳೆದ ರೀತಿಯು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು. ಜಿಲ್ಲಾಧಿಕಾರಿ ಹುದ್ದೆಯ ಯಾವುದೇ ಅಹಂಭಾವ ವಿಲ್ಲದೆ ಉನ್ನತಿಯ ಮಕ್ಕಳೊಂದಿಗೆ ಗಂಟೆಗಳ ಕಾಲ ಮಾತುಕತೆ ನಡೆಸಿ ಅವರೊಂದಿಗೆ ಬೇಕಲ್ ಬೀಚ್‌ಗೆ ಪ್ರವಾಸ ಕೈಗೊಂಡಿರುವುದು ಕೂಡಾ ಸಾಮಾಜಿಕ ಜಾಲತಾಣಗಳಲ್ಲಿ ಮುಕ್ತ ಪ್ರಶಂಸೆಗೆ ಕಾರಣವಾಗಿದೆ. ಈ ಮೂಲಕ ಜಿಲ್ಲಾಧಿಕಾರಿಗಳು ನೂತನ ವ್ಯವಸ್ಥೆಯೊಂದನ್ನು ಹುಟ್ಟುಹಾಕಿದರು.

ಇದರೊಂದಿಗೆ ಶರತ್, ಆದಿಕೃಷ್ಣ ಮತ್ತು ಸ್ನೇಹಿತರು ಆ ಪ್ರವಾಸ ಹಾಗೂ ಸ್ನೇಹದ ನೆನಪುಗಳೊಂದಿಗೆ ಕಲೆಕ್ಟರ್ ಅವರನ್ನು ಭೇಟಿ ಮಾಡಲು ಕಲೆಕ್ಟರೇಟ್‌ಗೆ ಆಗಮಿಸಿದ್ದರು. ತಮ್ಮ ಜೀವನದಲ್ಲಿ ಮೊದಲ ಬಾರಿಗೆ ಕಲೆಕ್ಟರೇಟ್ ಮತ್ತು ಕಲೆಕ್ಟರ್ ಕಚೇರಿಯನ್ನು ವೈಯಕ್ತಿಕವಾಗಿ ನೋಡುವ ಕುತೂಹಲ ಮತ್ತು ಉತ್ಸಾಹ ಆ ಪುಟ್ಟ ಕಂದಮ್ಮಗಳ ಮುಖಗಳಲ್ಲಿ ತುಂಬಿತ್ತು. ತಮ್ಮನ್ನು ಭೇಟಿಯಾಗಲು ಬಂದಿದ್ದ ಪುಟ್ಟ ಸ್ನೇಹಿತರನ್ನು ಜಿಲ್ಲಾಧಿಕಾರಿಗಳು ತಬ್ಬಿಕೊಂಡೇ ಬರಮಾಡಿಕೊಂಡರು.

ಫುಟ್ಬಾಲ್ ಉಡುಗೊರೆ

ಈ ಮಧ್ಯೆ ಆ ಮಕ್ಕಳು ಬಹಳ ದಿನಗಳಿಂದ ಬಯಸುತ್ತಿದ್ದ ಫುಟ್ಬಾಲ್‌ನ್ನು ಉಡುಗೊರೆಯಾಗಿ ನೀಡಿದಾಗ ಮಕ್ಕಳ ಸಂತೋಷಕ್ಕೆ ಮಿತಿಯೇ ಇರಲಿಲ್ಲ. ಅವರು ತಮ್ಮ ಅಧಿಕೃತ ಕರ್ತವ್ಯಗಳನ್ನು ಬದಿಗಿಟ್ಟು ಮಕ್ಕಳೊಂದಿಗೆ ಸಾಕಷ್ಟು ಸಮಯ ಕಳೆದರು. ಜಿಲ್ಲಾಧಿಕಾರಿಯವರು ಶಾಲೆಯ ವಿವರಗಳು ಮತ್ತು ರಜೆಯ ಯೋಜನೆಗಳ ಬಗ್ಗೆ ಕೇಳಿದರು. ಮಕ್ಕಳೊಂದಿಗೆ ಕುಳಿತು ಮಧ್ಯಾಹ್ನ ಊಟ ಸವಿದರು. ಅಲ್ಲದೆ ಮಕ್ಕಳ ಆಸೆಯಂತೆ ಬೇಕಲ್ ಬೀಚ್‌ಗೆ ಜಿಲ್ಲಾಧಿಕಾರಿಗಳು ಅವರನ್ನು ಕರೆದೊಯ್ದು ಸಂಭ್ರಮ ಸಡಗರ ವ್ಯಕ್ತಪಡಿಸಿದರು. ಜೊತೆಯಾಗಿ ಹಾಡಿ, ಕುಣಿದು, ಮಾತುಕತೆ ನಡೆಸಿ, ಊಟ ಮಾಡಿ, ಪ್ರವಾಸ ಕೈಗೊಂಡ ನಂತರ ಜಿಲ್ಲಾಧಿಕಾರಿ ಮಕ್ಕಳನ್ನು ಹೃದಯಸ್ಪರ್ಶಿಯಾಗಿ ಬೀಳ್ಕೊಟ್ಟರು.

ಕಾಸರಗೋಡು ಪರಿಶಿಷ್ಟ ಪಂಗಡ ಇಲಾಖೆ ಅಭಿವೃದ್ಧಿ ಅಧಿಕಾರಿ ಪಿ.ರಾಘವನ್, ಜಿಲ್ಲಾ ಮಾಹಿತಿ ಅಧಿಕಾರಿ ಎಂ. ಮಧುಸೂದನನ್, ಬುಡಕಟ್ಟು ವಿಸ್ತರಣಾಧಿಕಾರಿ ದೀಪಾ, ಕಿರಿಯ ಅಧೀಕ್ಷಕ ಕೆ.ಧನೇಶ್, ಪಂಗಡದ ಕಾರ್ಯಕರ್ತರಾದ ಚಂದ್ರಶೇಖರ್, ಆರ್.ಶರಣ್ಯ ಮತ್ತಿತರರು ಉಪಸ್ಥಿತರಿದ್ದರು.

ಸುತ್ತಮುತ್ತ

ಸಮರ್ಪಕ ನೀರು ಪೂರೈಕೆಗೆ ಸನ್ನದ್ಧರಾಗಿರಿ: ಶಾಸಕ ಯಶ್‌ಪಾಲ್

ಉಡುಪಿ: ಬಿಸಿಲಿನ ತಾಪಮಾನ ಹೆಚ್ಚಳದಿಂದಾಗಿ ಕುಡಿಯುವ ನೀರಿನ ಲಭ್ಯತೆ ಕಡಿಮೆಯಾಗುತ್ತಿದ್ದು, ಗ್ರಾಮಗಳಲ್ಲಿ ಗ್ರಾಮ ಪಂಚಾಯತ್ ವತಿಯಿಂದ ಅಗತ್ಯ ಪ್ರಮಾಣದ ನಿರಂತರ ನೀರು ಪೂರೈಕೆಗೆ ಸೂಕ್ತ ತಯಾರಿ ನಡೆಸಿ ಸನ್ನದ್ಧರಾಗಿರುವಂತೆ ಶಾಸಕರು ಸೂಚಿಸಿದರು. ಬ್ರಹ್ಮಾವರ ತಾಲೂಕು ಉಡುಪಿ ವಿಧಾನಸಭಾ ಕ್ಷೇತ್ರದ 13 ಗ್ರಾಮ ಪಂಚಾಯತ್‌ಗಳ ಆಡಳಿತಾಧಿಕಾರಿ ಹಾಗೂ ಪಿಡಿಒಗಳ ಸಭೆ ನಡೆಸಿ ಕುಡಿಯುವ ನೀರಿನ ಪೂರೈಕೆಗೆ ಸಂಬಂಧಿಸಿದಂತೆ ಪ್ರಸ್ತುತ ಸ್ಥಿತಿಗತಿಗಳ ಬಗ್ಗೆ ಉಡುಪಿ ಶಾಸಕರು ಮಾಹಿತಿ ಪಡೆದರು. ಹೊಸ ಪೈಪ್‌ಲೈನ್‌ಗಳು, ದುರಸ್ತಿ ಕಾಮಗಾರಿಗಳು, ಬಾವಿ ಆಳಗೊಳಿಸು ವುದು,



ಬೋರ್‌ವೆಲ್ ಫ್ಲಷಿಂಗ್, ಹೆಚ್ಚುವರಿ ಪಂಪುಗಳ ಖರೀದಿ ಮತ್ತಿತರ ಪೂರ್ವ ತಯಾರಿಗಳ ಬಗ್ಗೆ ತುರ್ತಾಗಿ ಗಮನ ಹರಿಸುವಂತೆ ಮತ್ತು ಈ ಹಿಂದೆ ನೀರಿನ ಸಮಸ್ಯೆ ಕಂಡು ಬಂದ ಪ್ರದೇಶಗಳಲ್ಲಿ ವಿಶೇಷ ಗಮನ ಹರಿಸುವಂತೆ ತಿಳಿಸಿದರು.
ಅನಿವಾರ್ಯವಾದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜಿಗೂ ತಯಾರಿರುವಂತೆ ತಿಳಿಸಿದರು.
ಮಳೆಗಾಲದ ಪೂರ್ವ ತಯಾರಿ ಬಗ್ಗೆ ಗಮನ ಹರಿಸಿ, ಕೃತಕ ನೆರೆಗೆ ಕಾರಣವಾಗುವ ತೋಡು ಮೋರಿಗಳ ಹೂಳೆತ್ತಿಯುವುದು, ಕಟ್ಟಡ ಮತ್ತಿತರ ಕಾಮಗಾರಿ ಸ್ಥಳಗಳಲ್ಲಿ ಜಾಗೃತೆ ವಹಿಸುವುದು, ಅಪಾಯಕಾರಿ ವಿದ್ಯುತ್ ಕಂಬ ಹಾಗೂ ಮರಗಳ ಕುರಿತು ಕ್ರಮ ವಹಿಸುವಂತೆ ಸೂಚಿಸಿದರು. ಸಭೆಯಲ್ಲಿ ಬ್ರಹ್ಮಾವರ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾದ ಹೆಚ್. ಇಬ್ರಾಹಿಂಪುರ್, ತಹಶೀಲ್ದಾರ್ ಶ್ರೀಕಾಂತ್ ಹೆಗ್ಡೆ ಹಾಗೂ ಸಂಬಂಧಿಸಿದ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಸಕರಾಮ್ ಶೆಟ್ಟಿ ನಿಧನಕ್ಕೆ ಗಣ್ಯರ ಸಂತಾಪ

ಉಡುಪಿ: ಜಿಲ್ಲೆಯ ಖ್ಯಾತ ಉದ್ಯಮಿ, ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಕೊಡುಗೈ ಧಾನಿ ಉಡುಪಿ ದೆಂದೂರುಕಟ್ಟೆ ನಿವಾಸಿ ಸಕರಾಮ್ ಶೆಟ್ಟಿ ಅವರ ನಿಧನಕ್ಕೆ ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ, ನಿಕಟಪೂರ್ವ ಮಂಗಳೂರು ವಿಭಾಗ ಪ್ರಭಾರಿ ಕೆ.ಉದಯ ಕುಮಾರ್ ಶೆಟ್ಟಿ, ಮಾಜಿ ಜಿಲ್ಲಾಧ್ಯಕ್ಷರಾದ ಮಟ್ಟಾರ್ ರತ್ನಾಕರ ಹೆಗ್ಡೆ, ಕುಯಿಲಾಡಿ ಸುರೇಶ್ ನಾಯಕ್ ಹಾಗೂ ಉಡುಪಿ-ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ, ಯಶ್ಪಾಲ್ ಎ. ಸುವರ್ಣ, ವಿ.ಸುನೀಲ್ ಕುಮಾರ್, ಕಿರಣ್ ಕುಮಾರ್ ಕೊಡ್ಗಿ, ಗುರುರಾಜ್ ಗಂಟಿಹೊಳೆ ಸಹಿತ ಪಕ್ಷದ ಮುಖಂಡರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಅಗಲಿದ ಅವರ ದಿವ್ಯಾತ್ಮಕ್ಕೆ ಭಗವಂತನು ಚಿರ ಶಾಂತಿಯನ್ನು ಕರುಣಿಸಲಿ ಹಾಗೂ ಕುಟುಂಬಕ್ಕೆ ಅವರ ಅಗಲುವಿಕೆಯ ದುಃಖವನ್ನು ಸಹಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುವುದಾಗಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೊದಲನೇ ಪುಟದಿಂದ

ಸ್ಮಾರ್ಟ್ ಮೀಟರ್

ಇಲಾಖೆಯ ಈ ಎಡವಟ್ಟಿನಿಂದಾಗಿ ಜನಸಾಮಾನ್ಯರು ಯಾವುದನ್ನು ನಂಬಬೇಕು ಎಂಬ ಗೊಂದಲದಲ್ಲಿದ್ದಾರೆ.
ನಿಗದಿತ ಸಮಯದೊಳಗೆ ಹಣ ಪಾವತಿಸದಿದ್ದರೆ ದಂಡ ವಿಧಿಸಲಾಗುತ್ತದೆ ಅಥವಾ ವಿದ್ಯುತ್ ಸಂಪರ್ಕ ಕಡಿತಗೊಳ್ಳಬಹುದು ಎಂಬ ಭೀತಿ ಜನರಲ್ಲಿ ಮನೆಮಾಡಿದೆ. ಮೆಸ್ಕಾಂ ಈ ಕೂಡಲೇ ಎಚ್ಚೆತ್ತುಕೊಂಡು ಬಿಲ್‌ನಲ್ಲಿ ಹೊಸ ಅಕೌಂಟ್ ಐಡಿ ನಮೂದಿಸುವಂತೆ ಕ್ರಮ ಕೈಗೊಳ್ಳಬೇಕಿದೆ ಹಾಗೂ ಪೇಮೆಂಟ್ ಗೇಟ್‌ವೇಗಳಲ್ಲಿ ಉಂಟಾಗಿರುವ ತಾಂತ್ರಿಕ ದೋಷಗಳನ್ನು ಸರಿಪಡಿಸಬೇಕಿದೆ.
ಇಲಾಖೆಯ ಆಮೆಗತಿಯ ಕೆಲಸದಿಂದಾಗಿ ಸಾರ್ವಜನಿಕರು ಅನುಭವಿಸುತ್ತಿರುವ ಈ ಕಿರಿಕಿರಿಗೆ ಶೀಘ್ರವೇ ಪರಿಹಾರ ಸಿಗಬೇಕಿದೆ ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

ಸಾರಿಗೆ ನಿಯಮ ಉಲ್ಲಂಘನೆ

ಆದರೂ ಆರೋಪಿಗಳನ್ನು ಪತ್ತೆಹಚ್ಚುವುದಾಗಲಿ ಅಥವಾ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವುದಾಗಲಿ ಅಧಿಕಾರಿಗಳು ತಯಾರಾಗುತ್ತಿಲ್ಲ ಎಂಬ ದೂರುಗಳು ವ್ಯಾಪಕಗೊಂಡಿವೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಇನ್ನಾದರೂ ಕೂಡಲೇ ಶಾಶ್ವತ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂಬ ಆಗ್ರಹಗಳು ನಾಗರಿಕ ವಲಯದಿಂದ ಕೇಳಿಬರುತ್ತಿವೆ.

ಕಟಪಾಡಿ ಪೇಟೆಯಿಂದ ಕಲ್ಯಾಣ ಮಂಟಪದವರೆಗೆ ವಿಜೃಂಭಣೆಯಿಂದ ಶ್ರೀದೇವರ ಶೋಭಾಯಾತ್ರೆ

ಕಟಪಾಡಿಯಲ್ಲಿ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ ಸಂಪನ್ನ

ಶಿರ್ವ: ತಿರುಪತಿ ತಿರುಮಲ ದೇವಸ್ಥಾನದ ಸಮಿತಿಯ ವತಿಯಿಂದ ಕೆ.ಕೃಷ್ಣಮೋಹನ್ ಪೈ ಯುಎಸ್‌ಎ ಅವರ ಸಂಕಲ್ಪದಂತೆ ಕಟಪಾಡಿ ವಿಜಯಾ ಪೈ, ಪುರುಷೋತ್ತಮ ಪೈ ಹಾಗೂ ಕುಟುಂಬಸ್ಥರ ವತಿಯಿಂದ ಕಟಪಾಡಿಯಲ್ಲಿ ಶನಿವಾರ ಎಸ್‌ವಿಎಸ್ ಪದವಿ ಪೂರ್ವ ಕಾಲೇಜಿನ ಕ್ರೀಡಾಂಗಣದಲ್ಲಿ ವೈಭವದ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ ಸಂಪನ್ನಗೊಂಡಿತು.
ಅಪರಾಹ್ನ ಕಟಪಾಡಿ ಪೇಟೆಯಿಂದ ಕಲ್ಯಾಣ ಮಂಟಪದವರೆಗೆ ಸಾವಿರಾರು ಭಕ್ತಾದಿಗಳ ಪಾಲ್ಗೊಳ್ಳುವಿಕೆಯಲ್ಲಿ ಶೋಭಾಯಾತ್ರೆಯಲ್ಲಿ ಬಂದ ದೇವರನ್ನು ತಿರುಪತಿಯಿಂದಲೇ ಬಂದ ವೈದಿಕ ವೃಂದವರ ನೇತೃತ್ವದಲ್ಲಿ ಕಲ್ಯಾಣ ಮಂಟಪದಲ್ಲಿ ಸರ್ವಾಲಂಕಾರ ಪೂರ್ವಕ ಸ್ಥಾಪಿಸಿ ಬಳಿಕ ಕಲ್ಯಾಣೋತ್ಸವಕ್ಕೆ ಚಾಲನೆ ನೀಡಲಾಯಿತು.
ಬಳಿಕ ವಿವಾಹ ಮಂಟಪಕ್ಕೆ ಶ್ರೀ ಪದ್ಮಾವತಿ ದೇವಿಯ ಆಗಮನ, ಸ್ವರ್ಣ ಮಣಿ ಬಂಧನ, ಮುಹೂರ್ತ ನಿರೀಕ್ಷಣೆ, ಮಾಲಧಾರಣೆ ನಡೆದು ಗೋದೋಳಿ ಲಗ್ನ ಸುಮೂರ್ತದಲ್ಲಿ ಶ್ರೀನಿವಾಸ ದೇವರಿಗೆ ಪದ್ಮಾವತಿ



ದೇವಿಯ ಕನ್ಯಾದಾನ ಮಾಡುವ ಮೂಲಕ ಕಲ್ಯಾಣೋತ್ಸವನ್ನು ಕಂಕಣ, ಮಂಗಳಸೂತ್ರ ಸಮರ್ಪಣೆ, ವಿವಾಹ ಹೋಮ, ಮಂಗಳಾಚರಣೆ, ಮಹಾ ಪ್ರಸನ್ನ ಪೂಜೆ ಹಾಗೂ ಅಷ್ಟಾವಧಾನ ಸೇವೆಯೊಂದಿಗೆ ವಿವಾಹ ಸಂಪನ್ನಗೊಂಡಿತು. ಬಳಿಕ ಪ್ರಸಾದ ವಿತರಣೆ ಸಾರ್ವಜನಿಕ ಮಹಾ ಅನ್ನಸಂತರ್ಪಣೆ ಸಂಪನ್ನಗೊಂಡಿತು.
ಕೃಷ್ಣಾಪುರ ಮಠಾಧೀಶ ವಿದ್ಯಾಸಾಗರತೀರ್ಥ ಶ್ರೀಪಾದರು ದಿವ್ಯ ಉಪಸ್ಥಿತರಿದ್ದರು. ಕಲ್ಯಾಣೋತ್ಸವ ಸೇವಾದಾರರಾದ ಕಟಪಾಡಿ ವಿಜಯಾ ಪೈ, ಪುರುಷೋತ್ತಮ ಪೈ ಕೆ.ಕೃಷ್ಣಮೋಹನ್ ಪೈ, ಕೆ. ಸತ್ಯೇಂದ್ರ ಪೈ ಹಾಗೂ ಕುಟುಂಬಸ್ಥರು ಉಪಸ್ಥಿತರಿದ್ದರು. ಪುತ್ತಿಗೆ ಮಠದ ಗೋಪಾಲ ಆಚಾರ್ಯ ತೆಲುಗಿನಿಂದ ಕನ್ನಡಕ್ಕೆ ಭಾಷಾಂತರ ಮಾಡಿದರು.
ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ, ಕಿರಣ್ ಕೊಡ್ಗಿ, ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಮಟ್ಟಾರು ದಿನೇಶ್ ಕಿಣಿ, ಚಿತ್ರ ನಟ ರಮೇಶ್, ಭಟ್, ಟಿ. ಸಚಿನ್ ಪೈ ಮಣಿಪಾಲ, ಜಯಕರ ಶೆಟ್ಟಿ ಇಂದ್ರಾಳಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಮಿತಿಯ ಯೋಜನಾಧಿಕಾರಿ ಮಮತಾ ಶೆಟ್ಟಿ, ಗೀತಾಂಜಲಿ ಸುವರ್ಣ ಸುಧೀರ್ ನಾಯಕ್, ಡಾ.ಯ.ಕೆ. ಶೆಟ್ಟಿ, ವಿದ್ಯಾವರ್ಧಕ ಸಂಘದ ಸದಸ್ಯರು ವಿವಿಧ ದೇವಸ್ಥಾನಗಳು ದೈವಸ್ಥಾನಗಳು, ಭಜನಾ ಮಂದಿರಗಳ ಅರ್ಚಕರು ಪದಾಧಿಕಾರಿಗಳು ಸದಸ್ಯರು ಊರ ಪರವೂರ ಭಕ್ತಾದಿಗಳು ಉಪಸ್ಥಿತರಿದ್ದರು.

ಹರಿದು ಬಂದ ಭಕ್ತ ಸಾಗರ
ಈ ಭಾಗದಲ್ಲಿ ಸಂಚಲನ ಮೂಡಿಸಿದ ಕಲ್ಯಾಣೋತ್ಸವದಲ್ಲಿ ಸುಮಾರು 15 ಸಾವಿರಕ್ಕೂ ಅಧಿಕ ಭಕ್ತಾಭಿಮಾನಿಗಳು ಸುಮಾರು ಮೂರು ಗಂಟೆಗೂ ಹೆಚ್ಚು ಕಾಲ ಶಿಸ್ತುಬದ್ಧವಾಗಿ ಕುಳಿತು ತಿರುಪತಿ ಶ್ರೀ ವೆಂಕಟೇಶ್ವರ ಕಲ್ಯಾಣೋತ್ಸವನ್ನು ಕಣ್ಣು ತುಂಬಿ ಕೊಂಡರು.

ವೈಭವದ ಶೋಭಾಯಾತ್ರೆ
ಅಪರಾಹ್ನ ಕಟಪಾಡಿ ಪೇಟೆಯಿಂದ ಕಲ್ಯಾಣ ಮಂಟಪದವರೆಗೆ ವಿಜೃಂಭಣೆಯಿಂದ ಶ್ರೀದೇವರ ಶೋಭಾಯಾತ್ರೆ ಜರಗಿತು. ಕಟಪಾಡಿ ಶ್ರೀವೆಂಕಟರಮಣ ದೇವಸ್ಥಾನದಲ್ಲಿ ಮೊಕ್ಕಾಂ ಇದ್ದ ದೇವರ ರಥದಲ್ಲಿದ್ದ ಪದ್ಮಾವತಿ ಸಹಿತ ಶ್ರೀ ಮಂಟಪಕ್ಕೆ ಭಕ್ತರ ಸಮ್ಮುಖ ಆರತಿ ಬೆಳಗಿದ ಬಳಿಕ ಮೆರವಣಿಗೆ ತಿರುಪತಿಯಿಂದಲೇ ಬಂದ ವೈದಿಕರು ಮತ್ತು ಮಂಗಳವಾದ್ಯ ತಂಡದೊಂದಿಗೆ ಸಾಗಿ ಬಂತು. ಮೆರವಣಿಗೆಯಲ್ಲಿ ಶ್ರೀ ಪದ್ಮಾವತಿ ದೇವರ ದಿಬ್ಬಣದಲ್ಲಿ ಸೇವಾದಾರ ಪೈ ಕುಟುಂಬದ ಮಹಿಳೆಯರು, ಶ್ರೀ ಶ್ರೀನಿವಾಸ ದೇವರ ದಿಬ್ಬಣದಲ್ಲಿ ಪೈ ಕುಟುಂಬದ ಪುರುಷರು ಸಾಗಿದರು.
ತಿರುಪತಿ ತಂಡದ ಮಂಗಲವಾದ್ಯ ಸಹಿತ ವಿವಿಧ ಬಿರುದಾವಳಿಗಳೊಂದಿಗೆ ಕಳಶ ಹಿಡಿದ, ಮಹಿಳೆಯರು, ಕುಣಿತ ಭಜನೆ, ತಟ್ಟೀರಾಯ, ಡೋಲು, ತಾಲೀಮು, ನಾಸಿಕ್ ಬ್ಯಾಂಡ್ ಸೆಟ್, ಗೊಂಬೆ, ಕೊಂಬು ವಾದ್ಯಗಳೊಂದಿಗೆ ವೈಭವದ ಶೋಭಾಯಾತ್ರೆ ಸಂಪನ್ನಗೊಂಡಿತು.

ಆಳ್ವೆಗದ್ದೆ ದೇಗುಲ ಪುನರ್ ಪ್ರತಿಷ್ಠೆಯ ಧಾರ್ಮಿಕ ಸಭೆಯಲ್ಲಿ ಬಾಳೆಕುದ್ರು ಶ್ರೀ

ಭಗವಂತನ ನಾಮಸ್ಮರಣೆಯಿಂದ ಆತ್ಮೋನ್ನತಿ

ಬೈಂದೂರು: ಸತ್ಯಯುಗದಲ್ಲಿ ಧ್ಯಾನ, ತ್ರೇತಾಯುಗದಲ್ಲಿ ಯಜ್ಞ ಯಾಗಗಳು, ದ್ವಾಪರದಲ್ಲಿ ಪ್ರತಿಮಾ ಪೂಜೆ ಹಾಗೆಯೇ ಕಲಿಯುಗದಲ್ಲಿ ಭಗವಂತನ ನಾಮಸ್ಮರಣೆ ಮಾಡಬೇಕು ಎಂಬ ವ್ಯಾಖ್ಯಾನವಿದೆ. ಧ್ಯಾನ, ಯಜ್ಞ, ಪ್ರತಿಮಾ ಪೂಜೆಗಳು ಅಷ್ಟೊಂದು ಸುಲಭವಾಗಿರಲಿಲ್ಲ, ಆದರೆ ಭಗವಂತನ ನಾಮಸ್ಮರಣೆ ಮಾತ್ರ ಅತ್ಯಂತ ಸುಲಭದ ಆಚರಣೆಯ ಮಾರ್ಗವಾಗಿದ್ದು, ಇದರಿಂದ ನಮ್ಮ ಎಲ್ಲಾ ಪಾಪಕರ್ಮಗಳನ್ನು ಕಳೆದುಕೊಳ್ಳುವ ಮೂಲಕ ಆತ್ಮೋನ್ನತಿಯನ್ನು ಪಡೆಯಬಹುದು ಎಂದು ಬಾಳೆಕುದ್ರು ಹಂಗಾರಕಟ್ಟೆ ಶ್ರೀ ವಾಸುದೇವ ಸದಾಶಿವಾಶ್ರಮ ಶ್ರೀಪಾದಂಗಳವರು ಹೇಳಿದರು.
ಭಾನುವಾರ ಶಿರೂರು ಆಳ್ವೆಗದ್ದೆ ಶ್ರೀ ಮಹಾಗಣಪತಿ ದೇವರ ಪುನರ್ ಪ್ರತಿಷ್ಠೆ ನೆರವೇರಿಸಿ ಆಶೀರ್ವಚನ ನೀಡಿದರು. ಹಿಂದು ಧರ್ಮದಲ್ಲಿ ಭಜನೆಗೆ ಹೆಚ್ಚಿನ ಮಹತ್ವವಿದೆ. ಅನೇಕ ದಾಸವರೇಣ್ಯರು ಕೂಡ ಭಜನೆ ಮೂಲಕ ಸದ್ಗತಿ ಪಡೆದುಕೊಂಡಿದ್ದಾರೆ. ಪ್ರತಿನಿತ್ಯ ವಿವಿಧ ರೀತಿಯಲ್ಲಿ ದೇವರ ಸ್ಮರಣೆ ಮಾಡುತ್ತಿರಬೇಕು. ದೇವರ ಸೇವೆ, ಭಜನೆಯನ್ನು ಭಕ್ತಿಯಿಂದ ಮಾಡಿದರೆ ಫಲ ಪ್ರಾಪ್ತಿಯಾಗುತ್ತದೆ. ನಮ್ಮ ಗುರು-ಹಿರಿಯರಿಂದ



ಪರಂಪರಾನುಗತವಾಗಿ ಬಂದಿರುವ ಸಂಸ್ಕಾರವನ್ನು ನಾವು ನಮ್ಮ ಮುಂದಿನ ಪೀಳಿಗೆಗೆ ಹಸ್ತಾಂತರಿಸಬೇಕು. ಅನ್ಯಾಯ, ಅಧರ್ಮಗಳೇ ಹೆಚ್ಚಾಗಿರುವ ಇಂದಿನ ಕಲಿಯುಗದಲ್ಲಿ ಸಂಘಟನೆಯ ಮೂಲಕ ಸಾತ್ವಿಕ ಮಾರ್ಗದಲ್ಲಿ ಹೋಗುವ ಮೂಲಕ ಪವಿತ್ರ ಭಾರತ ದೇಶ ಹಾಗೂ ಸನಾತನ ಹಿಂದು ಧರ್ಮವನ್ನು ಶ್ರೇಷ್ಠತೆಗೊಳಿಸುವ ಜತೆಗೆ ಅನ್ಯ ಮತಗಳ ಬಗ್ಗೆಯೂ ಗೌರವಹೊಂದಬೇಕು ಎಂದು ಸ್ವಾಮೀಜಿಯವರು, ಸತ್ಕರ್ಮಗಳು, ಧರ್ಮ ಪರವಾದಂತಹ ಹಾಗೂ ಧರ್ಮ ಜಾಗೃತಿ ಮಾಡುವಂತಹ ಆಚರಣೆಗಳು ಜತೆಗೆ ಪ್ರಕೃತಿಯ ಸೇವೆ ನಿರ್ವಘ್ನವಾಗಿ ಈ ಕ್ಷೇತ್ರದಲ್ಲಿ ನಡೆಯಲಿ ಎಂದು ಆಶೀರ್ವದಿಸಿದರು.
ಮಂಗಳೂರು ಬೋಳೂರಿನ ಶ್ರೀಮಾತಾ ಅಮೃತಾನಂದಮಯಿ ಆಶ್ರಮದ ಸಂಪೂಜ್ಯ ಸ್ವಾಮಿನಿ ಮಂಗಳಾಮೃತ ಪ್ರಾಣ ಆಶೀರ್ವಚನ ನೀಡಿದರು.
ಶಾಸಕ ಗುರುರಾಜ ಗಂಟಿಹೊಳೆ, ಮಾಜಿ ಸಚಿವ ಕೆ. ಜಯಪ್ರಕಾಶ ಹೆಗ್ಡೆ, ದೇವಳದ ಜೀರ್ಣೋದ್ದಾರ ಸಮಿತಿ ಅಧ್ಯಕ್ಷ ರಾಮ ಎನ್. ಆಳ್ವೆಗದ್ದೆ, ಗೌರವಾಧ್ಯಕ್ಷನಾರಾಯಣ ಟಿ. ಆಳ್ವೆಗದ್ದೆ, ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಗಣಪತಿ ಎಸ್. ಮೊಗವೀರ, ಪೂರ್ವಾಧ್ಯಕ್ಷ ನಾರಾಯಣ ಮಾಸ್ತಿ ಅಕ್ಷಯ ಶ್ರೀನಿವಾಸ, ಸಹಾಯಕ ಉಪವಲಯ ಅರಣ್ಯ ಸಂರಕ್ಷಣಾಧಿಕಾರಿ ಶ್ರೀಧರ ಪಿ., ದಾಸನಾಡಿ ವೆಂಕಟರಮಣ ದೇವಳದ ಆಡಳಿತ ಧರ್ಮದರ್ಶಿ ಎಸ್. ನಾಗಯ್ಯ ಶೆಟ್ಟಿ ಹೊಸ್ಮನೆ, ಮಾರಣಕಟ್ಟೆ ದೇವಳದ ಆಡಳಿತ ಧರ್ಮದರ್ಶಿ ಸದಾಶಿವ ಶೆಟ್ಟಿ, ಸುಭಾಶ್ಚಂದ್ರ, ತಿಮ್ಮಪ್ಪ ಹೊನ್ನಿಮನೆ ಭಟ್ಕಳ, ಅಣ್ಣಪ್ಪ ಮೊಗೇರ ಭಟ್ಕಳ, ಸತೀಶ ಅಮೀನ್ ಬಾರ್ಕೂರು, ಸೋಮಶೇಖರ ಪಡುವರಿ, ರಘುರಾಮ ಕೆ. ಪೂಜಾರಿ ಶಿರೂರು, ಪಿಡಿಒ ರಾಜೇಶ ಶೆಟ್ಟಿ ಸೇರಿದಂತೆ ಅನೇಕ ಗಣ್ಯರು ಇದ್ದರು. ಶ್ರದ್ಧಾ ಮೊಗೇರ್ ಸ್ವಾಗತಿಸಿ, ಸುಬ್ರಹ್ಮಣ್ಯ ಜಿ. ಉಪ್ಪುಂದ ನಿರೂಪಿಸಿದರು. ಪಾಂಡುರಂಗ ಮೊಗೇರ್ ವಂದಿಸಿದರು.

ಜ್ಞಾನಸುಧಾ ಶಿಕ್ಷಣ ಸಂಸ್ಥೆ ಆವರಣದಲ್ಲಿರುವ ಶಿಲಾಮಯ ದೇವಸ್ಥಾನ

ಶ್ರೀ ಮಹಾಗಣಪತಿ ದೇವರ ಪ್ರತಿಷ್ಠೆ, ಬ್ರಹ್ಮಕಲಶ

ಕಾರ್ಕಳ: ತಾಲೂಕಿನ ಅಜೆಕಾರು ಜ್ಞಾನಸುಧಾ ಆಂಗ್ಲಮಾಧ್ಯಮ ಪ್ರೌಢಶಾಲೆ ಹಾಗೂ ಪಿಯು ಕಾಲೇಜಿನ ಆವರಣದಲ್ಲಿ ನಿರ್ಮಾಣಗೊಂಡ ಶಿಲಾಮಯ ದೇವಸ್ಥಾನದಲ್ಲಿ ಶ್ರೀ ಮಹಾಗಣಪತಿ ದೇವರ ಪ್ರತಿಷ್ಠೆ ಮತ್ತು ಬ್ರಹ್ಮಕಲಶೋತ್ಸವದ ಅಂಗವಾಗಿ ಭಕ್ತಿಭಾವಪೂರ್ಣ ಧಾರ್ಮಿಕ ಸಭೆ ಭಾನುವಾರ ವಿಜೃಂಭಣೆಯಿಂದ ನಡೆಯಿತು.
ಭಕ್ತರ ಸಂಖ್ಯೆಯ ಉಪಸ್ಥಿತಿಯಲ್ಲಿ ಹಲವು ಧಾರ್ಮಿಕ ಕಾರ್ಯಕ್ರಮಗಳು ಸಡಗರದ ನಡುವೆ ನೆರವೇರಿತು. ವೇದಘೋಷ, ಪೂಜಾ ವಿಧಿವಿಧಾನಗಳು ಹಾಗೂ ಹೋಮ-ಹವನಗಳೊಂದಿಗೆ ದೇವರ ಪ್ರತಿಷ್ಠೆ ನೆರವೇರಿದ ನಂತರ ಧಾರ್ಮಿಕ ಸಭೆ ನಡೆಯಿತು.
ಸಭೆಯಲ್ಲಿ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ಸ್ವಾಮೀಜಿ ಆಶೀರ್ವಚನ ನೀಡಿ ಮಾತನಾಡಿ, ಜೀವನದಲ್ಲಿ ಆತ್ಮಸಂತೃಪ್ತಿ ಮತ್ತು ಸಮಾಜಸೇವೆ ಎರಡೂ ಸಮಾನವಾಗಿ ಮುಖ್ಯವಾಗಿವೆ ಎಂದರು.
ನಾವು ಬದುಕುವುದಷ್ಟೇ ಅಲ್ಲ, ಇತರರಿಗೂ ಬದುಕಲು ಅವಕಾಶ ನೀಡುವುದು ನಿಜವಾದ ಮಾನವೀಯತೆ. ಸಹಕಾರ, ಸಹಾನುಭೂತಿ ಮತ್ತು ಧರ್ಮಾಚರಣೆ ನಮ್ಮ ಜೀವನದ ಮೂಲ ಮೌಲ್ಯಗಳಾಗಬೇಕು ಎಂದು ಅವರು ಅಭಿಪ್ರಾಯಪಟ್ಟರು.



■ **ವೇದಘೋಷ, ಪೂಜಾ ವಿಧಿವಿಧಾನಗಳು ಹಾಗೂ ಹೋಮ-ಹವನಗಳೊಂದಿಗೆ ದೇವರ ಪ್ರತಿಷ್ಠೆ**

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶಾಸಕ ಸುನೀಲ್ ಕುಮಾರ್ ಮಾತನಾಡಿ, ಜ್ಞಾನಸುಧಾ ಶಿಕ್ಷಣ ಸಂಸ್ಥೆ ಗ್ರಾಮೀಣ ಪ್ರದೇಶದಲ್ಲಿ ಉತ್ತಮ ಶಿಕ್ಷಣ ನೀಡುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟು ಮಾಡಿದೆ ಎಂದು ಶ್ಲಾಘಿಸಿದರು. ಇಂತಹ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ ಎಂದರು.
ಫಲಪುಷ್ಪ ಸಮರ್ಪಣೆಯನ್ನು ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಮೋಹನ್ ಆಳ್ವ ನೆರವೇರಿಸಿದರು. ಈ ವೇಳೆ ವಿವಿಧ ಗಣ್ಯರು ದೇವರಿಗೆ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವ ಅಭಯಚಂದ್ರ ಜೈನ್, ಉದ್ಯಮಿ ಶಿವರಾಮ್ ಶೆಟ್ಟಿ, ಬಳ್ಳಾರಿ ಮರ್ಚಂಟ್ ಟ್ರಸ್ಟ್ ಅಧ್ಯಕ್ಷ ಎಂ.ಜಿ. ಗೌಡ್, ಉದ್ಯಮಿ ಮಹೇಶ್ ಶೆಟ್ಟಿ ಕುಡುಪುಲಾಜೆ, ಶಶಿಧರ್ ಶೆಟ್ಟಿ, ಜಗದೀಶ್ ಕಾರಂತ, ಕಮಲಾಕ್ಷ ನಾಯಕ್ ಹಾಗೂ ಡಾ. ಸಂತೋಷ್ ಕುಮಾರ್ ಶೆಟ್ಟಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಡಾ. ಸುಧಾಕರ ಶೆಟ್ಟಿ ಸ್ವಾಗತಿಸಿ ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣ ಮಾಡಿದರು. ದಾಮೋದರ ಶರ್ಮ ಕಾರ್ಯಕ್ರಮವನ್ನು ಸಮರ್ಪಕವಾಗಿ ನಿರೂಪಿಸಿದರು. ಧಾರ್ಮಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಬಿಂಬಿಸುವ ಈ ಕಾರ್ಯಕ್ರಮವು ಭಕ್ತರಲ್ಲಿ ಭಕ್ತಿ ಮತ್ತು ಆತ್ಮೀಯತೆಯನ್ನು ಹೆಚ್ಚಿಸಿತು.

ಅದಮಾರು ಹಿಂದೂ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ವಾರ್ಷಿಕೋತ್ಸವ



ಪಡುಬಿದ್ರಿ: ಅದಮಾರು ಹಿಂದೂ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ಅದಮಾರು ಇದರ 101ನೆಯ ವರ್ಷದ ವಾರ್ಷಿಕೋತ್ಸವನ್ನು ಬೆಂಗಳೂರಿನ ಅಂತಾರಾಷ್ಟ್ರೀಯ ವಾಣಿಜ್ಯ ಮತ್ತು ಹಣಕಾಸು ಸಂಸ್ಥೆ ತಂತ್ರಜ್ಞಾನ ವಿಭಾಗದ ಉಪಾಧ್ಯಕ್ಷ ಸುರೇಶ್ ಸಿ. ಮುಂಡ್ಕೂರು ಉದ್ಘಾಟಿಸಿದರು.
ನಿವೃತ್ತ ಜೀವ ವಿಮಾ ನಿಗಮದ ಅಭಿವೃದ್ಧಿ ಅಧಿಕಾರಿ ಎ ನಾರಾಯಣ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಮಣಿಪಾಲದ ಉಡುಪಿ ಸಮೂಹ ಶಿಕ್ಷಣ ಸಂಸ್ಥೆ ಉಪ ಪ್ರಾಂಶುಪಾಲ ಪ್ರೊ. ಶರತ್ ಆಳ್ವ ಪುಚ್ಚೊಟ್ಟು ಬೀಡು ಎರ್ಮಾಳುಬಹುಮಾನವನ್ನುವಿತರಿಸಿದರು. ಭಾರತೀಯ ಭೂಸೇನೆ ನಿವೃತ್ತ ಯೋಧ ಬಾಲಕೃಷ್ಣ ಟಿ. ಭಂಡಾರಿ, ಸಿಆರ್‌ಪಿ ಬಬಿತಾ ನಾಗರಾಜ್, ಸಂತೂರ್ ಕೊಪ್ಲ, ಸದಾಶಿವ ಎ ಶೆಟ್ಟಿ ನ್ಯಾಯವಾದಿಗಳು ಮುಂಬೈ ಹೈಕೋರ್ಟ್, ವಾಮನ ಕುಂಡಂತಾಯ ನಿವೃತ್ತ ಸಿಂಡಿಕೇಟ್ ಬ್ಯಾಂಕ್ ಮ್ಯಾನೇಜರ್, ಶ್ರೀ ದುರ್ಗಾ ಆಟೋಮೊಬೈಲ್ಸ್ ಮಾಲಕ ಸತೀಶ ಕುಂಡಂತಾಯ ಕುಂಜೂರು, ನ್ಯಾಯವಾದಿ ವೈ. ಶಶಿಧರ ಶೆಟ್ಟಿ ಕುಂಜೂರು ಶ್ರೀ ದುರ್ಗಾ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ಸಂತೋಷ್ ಬಿ. ಶೆಟ್ಟಿ ಆದರ್ಶ ಯುವಕ ಸಂಘದ ಅಧ್ಯಕ್ಷ, ಸಂತೋಷ್ ಜೆ ಶೆಟ್ಟಿ ಅದಮಾರು ಮಹಿಳಾ ಮಂಡಳಿ ಅಧ್ಯಕ್ಷೆ ಸುಜಾತ ಆರ್ ಶೆಟ್ಟಿ ಇದ್ದರು. ವಿದ್ಯಾವರ್ಧಕ ಶಾಲೆ ಮುಂಡ್ಕೂರು ನಿವೃತ್ತ ಪ್ರಾಂಶುಪಾಲ ಸುದರ್ಶನ್ ವೈ. ಎಸ್. ಹಾಗೂ ಶಾಲಾ ಸಂಚಾಲಕ ಎ. ಜಯ ಶೆಟ್ಟಿ ಶುಭ ಹಾರೈಸಿದರು. ನಾಗರತ್ನ, ಶ್ಯಾಮಲ ಪ್ರಾರ್ಥಿಸಿದರು. ಶರ್ಮಿಳಾ ಶೆಟ್ಟಿ ಸ್ವಾಗತಿಸಿದರು. ಮುಖ್ಯಶಿಕ್ಷಕಿ ದೇವಿಕಾ ವಂದಿಸಿದರು. ಗಣೇಶ್ ಎಸ್ ಸಾಲಿಯಾನ್ ಕಾರ್ಯಕ್ರಮ ನಿರೂಪಿಸಿದರು.

ಆನೆಗುಡ್ಡೆಯಲ್ಲಿ ನೇತ್ರ ತಪಾಸಣೆ, ಶ್ರವಣ ತಪಾಸಣೆ ಶಿಬಿರ ಉದ್ಘಾಟನೆ



ಕುಂದಾಪುರ: ಬದಲಾದ ಕಾಲಮಾನದಲ್ಲಿ ಹೆಚ್ಚುತ್ತಿರುವ ಟಿವಿ ಹಾಗೂ ಮೊಬೈಲ್‌ಗಳ ಬಳಕೆಯಿಂದಾಗಿ ಕಣ್ಣು ಮತ್ತು ಕಿವಿಯ ಮೇಲೆ ತೀವ್ರ ತೆರನಾದ ಪರಿಣಾಮ ಬೀರುತ್ತಿದೆ. ಈ ನಿಟ್ಟಿನಲ್ಲಿ ನುರಿತ ತಜ್ಞ ವೈದ್ಯರಿಂದ ತಪಾಸಣೆ ಮಾಡಿಕೊಳ್ಳುವ ಮೂಲಕ ಅತ್ಯಮೂಲ್ಯವಾಗಿರುವ ಕಣ್ಣು ಮತ್ತು ಕಿವಿಗಳ ಆರೈಕೆ ಬಗ್ಗೆ ಹೆಚ್ಚಿನ ಕಾಳಜಿ ಅಗತ್ಯವಿದೆ ಎಂದು ಆನೆಗುಡ್ಡೆ ಕುಂಭಾಶಿ ಶ್ರೀ ವಿನಾಯಕ ದೇವಸ್ಥಾನದ ಆಡಳಿತ ಧರ್ಮದರ್ಶಿ ಕೆ. ಶ್ರೀರಮಣ ಉಪಾಧ್ಯಾಯ ಹೇಳಿದರು.
ಆನೆಗುಡ್ಡೆ ಶ್ರೀ ವಿನಾಯಕ ದೇವಸ್ಥಾನ, ಕುಂಭಾಶಿ ಇವರ ನೇತೃತ್ವದಲ್ಲಿ ಕುಂದಾಪುರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ, ನೇತ್ರಜ್ಯೋತಿ ಚಾರಿಟೆಬಲ್ ಟ್ರಸ್ಟ್, ಪ್ರಸಾದ್ ನೇತ್ರಾಲಯ ಹಾಗೂ ಟೀಮ್ ಈಶ್ವರ್ ಮಲ್ಪೆ ಸಹಯೋಗದೊಂದಿಗೆ ಆನೆಗುಡ್ಡೆ ಪ್ರಸನ್ನ ಮಂಟಪದಲ್ಲಿ ಶನಿವಾರ ನಡೆದ ಉಚಿತ ನೇತ್ರ ತಪಾಸಣೆ, ಉಚಿತ ಕಿವಿಯ ಶ್ರವಣ ತಪಾಸಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.
ಈ ಸಂದರ್ಭದಲ್ಲಿ ಆನೆಗುಡ್ಡೆ ಶ್ರೀ ವಿನಾಯಕ ದೇವಸ್ಥಾನದ ಧರ್ಮದರ್ಶಿ ಕೆ.ಪದ್ಮನಾಭ ಉಪಾಧ್ಯಾಯ, ಪ್ರಸಾದ್ ನೇತ್ರಾಲಯದ ನೇತ್ರ ತಜ್ಞ ಡಾ. ನಿರಂಜನ್, ಡಾ.ಅಂಕಿತ ಕಲ್ಮಾಡಿ, ಟೀಮ್ ಈಶ್ವರ್ ಮಲ್ಪೆ ಸಂಚಾಲಕ ಲವ ಬಂಗೇರ, ಪ್ರಸಾದ್ ನೇತ್ರಾಲಯದ ಸಾರ್ವಜನಿಕ ಸಂಪರ್ಕ ಅಧಿಕಾರಿ ಹರ್ಷ, ಸ್ವಾತಿ, ಸಿಂಚನಾ, ಸಾತ್ವಿ, ಸುಶ್ಮಿತಾ ಮತ್ತಿತರರು ಉಪಸ್ಥಿತರಿದ್ದರು.
ಕಾರ್ಯಕ್ರಮದಲ್ಲಿ ಕೆ. ರಾಜಾರಾಮ ಉಪಾಧ್ಯಾಯ ಸ್ವಾಗತಿಸಿ, ವಂದಿಸಿದರು.

ಬಗ್ವಾಡಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಮುದಾಯದತ್ತ ಶಾಲೆ



ಕುಂದಾಪುರ: ನೂಜಾಡಿಯ ಬಗ್ವಾಡಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಮುದಾಯದತ್ತ ಶಾಲಾ ಕಾರ್ಯಕ್ರಮ, ಪೋಷಕರ ಸಭೆ ಹಾಗೂ ಯುಕೆಜಿ ಮಕ್ಕಳ ಪದವಿ ಪ್ರದಾನ ಸಮಾರಂಭ ಕಾರ್ಯಕ್ರಮ ಶುಕ್ರವಾರ ನಡೆಯಿತು.
ಸಮಾರಂಭದ ಅಧ್ಯಕ್ಷತೆಯನ್ನು ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ರಾಧಾಕೃಷ್ಣ ಗಾಣಿಗ ವಹಿಸಿದ್ದರು. ಕಾರ್ಯಕ್ರಮವನ್ನು ಹಳೆ ವಿದ್ಯಾರ್ಥಿ ಸಂಘದ ಗೌರವಾಧ್ಯಕ್ಷ ರಾಜೀವ ಶೆಟ್ಟಿ ಉದ್ಘಾಟಿಸಿದರು. ಡಯಟ್‌ನ ಉಪನ್ಯಾಸಕ ಡಾ. ಕಿಶೋರ್ ಕುಮಾರ್ ಶೆಟ್ಟಿ ಅವರು ಯುಕೆಜಿ ಮಕ್ಕಳಿಗೆ ಪದವಿ ಪ್ರದಾನ ಮಾಡಿ ಪೋಷಕರಿಗೆ ಸರಕಾರಿ ಶಾಲೆಯ ಮಹತ್ವದ ಬಗ್ಗೆ ತಿಳಿಸಿದರು. ದಾನಿಗಳಾದ ತಾರಾನಾಥ್ ಶೆಟ್ಟಿ ಮೆತ್ತಿನಮನೆ ಅವರನ್ನು ಗೌರವಿಸಲಾಯಿತು. ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಪ್ರಕಾಶ್ ಆಚಾರ್ಯ, ಎಸ್‌ಡಿಎಂಸಿ ಉಪಾಧ್ಯಕ್ಷೆ ಯಶೋಧ, ಎಸ್‌ಡಿಎಂಸಿ ಸದಸ್ಯರು, ಪೋಷಕರು, ಶಿಕ್ಷಕರು ಉಪಸ್ಥಿತರಿದ್ದರು.
ಮುಖ್ಯೋಪಾಧ್ಯಾಯನಿ ಶೈಲಜಾ ಶೆಟ್ಟಿ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಅತಿಥಿ ಶಿಕ್ಷಕರಾದ ರೇಷ್ಮಾ ಮೆಂಡೋನ್ಸ, ಚೈತ್ರ, ಶ್ವೇತ, ಹರ್ಷಿತ ಸಹಕರಿಸಿದರು. ಸಹ ಶಿಕ್ಷಕಿ ಸತ್ಯವತಿ ವಂದಿಸಿದರು. ಸಹ ಶಿಕ್ಷಕಿ ಪೂರ್ಣಿಮಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ನಂತರ ಮಕ್ಕಳಿಂದ ಕುಣಿತ ಭಜನೆ ನಡೆಯಿತು.

ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ಅನುದಾನಿತ ಹಿರಿಯ ಪ್ರಾಥಮಿಕ ಶಾಲಾ ವಾರ್ಷಿಕೋತ್ಸವ | ಗೋಪಾಲಕೃಷ್ಣ ಸಾಮಗ ಬೆಳ್ಳೆ ಅಭಿಪ್ರಾಯ

ನೂರು ವರ್ಷದ ಹಿಂದೆ ಬಡತನವನ್ನು ಮೆಟ್ಟಿನಿಂತು ಶಾಲೆ ಸ್ಥಾಪಿಸಿದವರು ಪ್ರಾತಃ ಸ್ಮರಣೀಯರು

ಶಿರ್ವ: ಯಾವುದೇ ಮೂಲಭೂತ ಸೌಕರ್ಯಗಳಿಲ್ಲದ ತೀರಾ ಕುಗ್ರಾಮವಾಗಿದ್ದ ಈ ಭಾಗದಲ್ಲಿ ಬಡತನವನ್ನೂ ಲೆಕ್ಕಿಸದೆ ತಮ್ಮ ಭವಿಷ್ಯದ ಪೀಳಿಗೆಗೆ ಅಕ್ಷರ ಜ್ಞಾನವನ್ನು ನೀಡುವ ಮೂಲಕ ಸಂಸ್ಕಾರವಂತರನ್ನಾಗಿ ರೂಪಿಸುವ ಕಾರ್ಯಕ್ಕೆ ಮುನ್ನುಡಿ ಬರೆದ ಮಹನೀಯರ ಚಿಂತನೆಗಳಿಗೆ ನಮೋ ಎನ್ನಲೇ ಬೇಕು. ಬಡತನವನ್ನು ಸವಾಲಾಗಿ ಸ್ವೀಕರಿಸಿ ನೂರು ವರ್ಷಗಳ ಹಿಂದೆ ಈ ಭಾಗದಲ್ಲಿ ಶಾಲೆ ಆರಂಭಿಸಿದವರು ಸದಾ ಪ್ರಾತಃ ಸ್ಮರಣೀಯರು ಎಂದು ಮಂಗಳೂರಿನ ಕರ್ನಾಟಕ ಬ್ಯಾಂಕ್ ಪ್ರಧಾನ ಕಚೇರಿಯ ಉಪ ಮಹಾಪ್ರಬಂಧಕ ಗೋಪಾಲಕೃಷ್ಣ ಸಾಮಗ ಬೆಳ್ಳೆ ಹೇಳಿದರು.
ಅವರು ಶತಮಾನೋತ್ಸವದ ಸಂಭ್ರಮದಲ್ಲಿರುವ ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ದೇಗುಲ ಆಡಳಿತಕ್ಕೆ ಒಳಪಟ್ಟ ಬಂಟಕಲ್ಲು ಶ್ರೀ



ದುರ್ಗಾಪರಮೇಶ್ವರೀ ಅನುದಾನಿತ ಹಿರಿಯ ಪ್ರಾಥಮಿಕ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಗುವಿನ ಜೀವನದ ನೀಲನಕ್ಷೆ ತಯಾರುವುದೇ ಪ್ರಾಥಮಿಕ ಶಾಲೆಗಳಲ್ಲಿ. ಸರಕಾರದ ನೀತಿ ಧೋರಣೆಗಳಿಂದ ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸಿ ಬೆಳೆಸುವುದೇ ಸವಾಲಾಗಿದೆ. ಉಳಿಸಿ ಬೆಳೆಸಲು ಹೆಚ್ಚಿನವರ ತ್ಯಾಗ, ಸೇವೆಯ ಅಗತ್ಯ ಇದೆ. ಕರ್ನಾಟಕ ಬ್ಯಾಂಕ್ ಕೂಡ ಕೈಜೋಡುತ್ತದೆ ಎಂದರು.
ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಮಾತನಾಡಿ, ಶಾಲೆಯ ಸಂಸ್ಥಾಪಕರ ಸಾತ್ವಿಕ ತಪಸ್ಸಿನ ಫಲದಿಂದ ನೂರು ವರ್ಷಗಳಿಂದ ಈ ಶಾಲೆ ಸಮಾಜಕ್ಕೆ ನೀಡಿದ ಕೊಡುಗೆ ಅವಿಸ್ಮರಣೀಯ. ನಾವು ಅವರ ಋಣದಲ್ಲಿದ್ದೇವೆ. ಋಣಮುಕ್ತರಾಗಲು ಎಲ್ಲರೂ ಸೇರಿ ಈ ಶಾಲೆಯನ್ನು ಬೆಳೆಸಬೇಕು ಎಂದರು.

ಶಾಸಕರಿಗೆ ಸನ್ಮಾನ
ಈ ಸಂದರ್ಭದಲ್ಲಿ ರಾಜ್ಯ ಹೆದ್ದಾರಿಯಿಂದ ಶಾಲೆಗೆ ಸಂಪರ್ಕ ಕಲ್ಪಿಸುವ ಕಾಂಕ್ರೀಟ್ ರಸ್ತೆಯನ್ನು ನಿರ್ಮಿಸಿ ಕೊಟ್ಟ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರನ್ನು ಶಾಲಾ ಶತಮಾನೋತ್ಸವ ಸಮಿತಿ, ಶೀದೇವಳದ ಆಡಳಿತ ಮಂಡಳಿಯಿಂದ ಸನ್ಮಾನಿಸಲಾಯಿತು.

ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಮಾತನಾಡಿ, ಶಾಲೆಗೆ ಹಿರಿಯರ ಈ ಕೊಡುಗೆ ಶ್ಲಾಘನೀಯವಾಗಿದ್ದು, ಸಂಸ್ಥೆಯ ಅಭಿವೃದ್ಧಿ ಯಲ್ಲಿ ತಾನೂ ಕೈಜೋಡಿಸುವುದಾಗಿ ತಿಳಿಸಿದರು.
ಕ್ಷೇತ್ರ ಶಿಕ್ಷಣಾಧಿಕಾರಿ ಡಾ. ಎಲ್ಲಮ್ಮ ಮಾತನಾಡಿದರು.

ಸನ್ಮಾನ
ಈ ವೇಳೆ ಸಿಆರ್‌ಪಿಯಾಗಿ ಸೇವೆ ನೀಡಿದ ಸರಿತಾರಾಣಿ, ಶಾಲಾ ಸಂಚಾಲಕರಾಗಿ ಸೇವೆ ನೀಡಿದ ಜಯರಾಮ ಪ್ರಭು, ರಾಮದಾಸ ಪ್ರಭು, ಪ್ರತಿಭಾನ್ವಿತೆ ಶ್ರೇಯಾ ಆಚಾರ್ಯ ಅವರನ್ನು ಸನ್ಮಾನಿಸಲಾಯಿತು. ಉಡುಪಿ ಜಿಲ್ಲಾ ಮುಂಡಾಳ ಸಮಾಜದ ಅಧ್ಯಕ್ಷ, ಶಾಲಾ ಹಳೆವಿದ್ಯಾರ್ಥಿ ಶಂಕರ ಪದಕಣ್ಣಾಯ ಶುಭ ಹಾರೈಸಿದರು. ಶಾಲಾ ಮುಖ್ಯ ಶಿಕ್ಷಕಿ ಸಂಗೀತಾ ಆರ್. ಪಾಟ್ಕರ್ ವರದಿ ಓದಿದರು. ವಿವಿಧ ಸ್ಪರ್ಧಾ ವಿಜೇತರಿಗೆ ಬಹುಮಾನ ನೀಡಿ ಅಭಿನಂದಿಸಲಾಯಿತು.
ವೇದಿಕೆಯಲ್ಲಿ ಶತಮಾನೋತ್ಸವ ಸಮಿತಿ ಅಧ್ಯಕ್ಷ ಮಾಧವ ಕಾಮತ್, ಶ್ರೀದೇವಳದ ಆಡಳಿತ ಮಂಡಳಿ ಅಧ್ಯಕ್ಷ ಉಮೇಶ ಪ್ರಭು ಪಾಲಮೆ, ಶಾಲಾ ಆಡಳಿತ ಸಮಿತಿ ಅಧ್ಯಕ್ಷ ಶಶಿಧರ ವಾಗ್ಲೆ, ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ರವೀಂದ್ರ ಪಾಟ್ಕರ್, ಶಿಕ್ಷಕ ರಕ್ಷಕ ಸಂಘದ ಅಧ್ಯಕ್ಷ ನವೀನ್ ಸನಿಲ್, ಶಾಲಾ ವಿದ್ಯಾರ್ಥಿ ನಾಯಕ ರಿತಿಕ್ ಇದ್ದರು. ಶಾಲಾ ಶತಮಾನೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ಕೆ.ಆರ್.ಪಾಟ್ಕರ್ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದರು. ದೇವದಾಸ್ ಪಾಟ್ಕರ್, ಅರುಂಧತಿ ಪ್ರಭು ನಿರೂಪಿಸಿದರು. ಶಿಕ್ಷಕಿ ಶ್ವೇತಾ ನಾಯಕ್ ವಂದಿಸಿದರು. ಶಿಕ್ಷಕಿಯರಾದ ವಿನುತಾ ಆಚಾರ್ಯ, ಶಾಲಿನಿ, ರೇಶ್ಮಾ, ಸುಮತಿ ಸಹಕರಿಸಿದರು.